ಜ್ಯೋತಿರ್ಲಿಂಗದ ದರ್ಶನ, ಪೂಜನದಿಂದ ಮಹಾಸುಖವು ಪ್ರಾಪ್ತವಾಗುತ್ತದೆ. ಕೊನೆಗೆ ಮುಕ್ತಿಯೂ ದೊರೆಯುತ್ತದೆ ಇದರಲ್ಲಿ ಕೊಂಚವೂ ಸಂಶಯವಿಲ್ಲ. ಅಯ್ಯಾ! ಶಂಕರನ ಮಹಾಕಾಲವೆಂಬ ಮೂರನೆಯ ಅವತಾರವು ಉಜ್ಜಯಿನೀ ನಗರದಲ್ಲಿ ಆಗಿದೆ. ಅದು ತನ್ನ ಭಕ್ತರನ್ನು ರಕ್ಷಿಸುವುದಾಗಿದೆ. ಒಮ್ಮೆ ರತ್ನಮಾಲಾ ನಿವಾಸಿ ದೂಷಣನೆಂಬ ಅಸುರನು ವೈದಿಕ ಧರ್ಮದ ವಿನಾಶಕನೂ, ವಿಪ್ರದ್ರೋಹಿಯೂ, ಎಲ್ಲವನ್ನೂ ನಾಶಮಾಡುವವನೂ, ಆದ ಅವನು ಉಜ್ಜಯಿನಿಗೆ ಬಂದನು. ಆಗ ವೇದವೆಂಬ ಬ್ರಾಹ್ಮಣಪುತ್ರನು ಶಿವನನ್ನು ಧ್ಯಾನಿಸಿದನು. ಆಗ ಶಂಕರನು ಕೂಡಲೇ ಪ್ರಕಟನಾಗಿ ಹುಂಕಾರದಿಂದ ಆ ಅಸುರನನ್ನು ಭಸ್ಮಮಾಡಿಬಿಟ್ಟನು. ಅನಂತರ ತನ್ನ ಭಕ್ತರನ್ನು ಸರ್ವಥಾ ಪಾಲಿಸುವ ಶಿವನು ದೇವತೆಗಳು ಪ್ರಾರ್ಥಿಸಿದಾಗ ಮಹಾಕಾಲ ಎಂಬ ಹೆಸರಿನಿಂದ ಜ್ಯೋತಿರ್ಲಿಂಗದ ಸ್ವರೂಪದಲ್ಲಿ ಅಲ್ಲೇ ನೆಲೆಸಿದನು. ಈ ಮಹಾಕಾಲವೆಂಬ ಲಿಂಗದ ದರ್ಶನ, ಪೂಜನ ಪ್ರಯತ್ನಪೂರ್ವಕ ಮಾಡುವುದರಿಂದ ಮನುಷ್ಯನ ಎಲ್ಲ ಕಾಮನೆಗಳು ಪೂರ್ಣವಾಗುವವು ಮತ್ತು ಅಂತ್ಯದಲ್ಲಿ ಅವನಿಗೆ ಪರಮಗತಿಯು ಪ್ರಾಪ್ತವಾಗುತ್ತದೆ. ಪರಮ ಅತ್ಕಬಲದಿಂದ ಸಂಪನ್ನ ಪರಮೇಶ್ವರ ಶಂಭುವು ಭಕ್ತರಿಗೆ ಅಭೀಷ್ಟ ಫಲವನ್ನು ನೀಡಲು ಓಂಕಾರವೆಂಬ ನಾಲ್ಕನೆಯ ಅವತಾರವನ್ನು ಎತ್ತಿದನು. ಮುನಿಯೇ! ವಿಂಧ್ಯಗಿರಿಯು ಭಕ್ತಿಪೂರ್ವಕ ವಿಧಿವತ್ತಾಗಿ ಶಿವನ ಪಾರ್ಥಿವ ಲಿಂಗವನ್ನು ಸ್ಥಾಪಿಸಿದನು. ಅದೇ ಲಿಂಗದಿಂದ ವಿಂಧ್ಯನ ಮನೋರಥವನ್ನು ಪೂರ್ಣಗೊಳಿಸಲು ಮಹಾದೇವನು ಪ್ರಕಟನಾದನು. ಆಗ ದೇವತೆಗಳು ಪ್ರಾರ್ಥಿಸಿದಾಗ ಭಕ್ತಿ-ಮುಕ್ತಿಯನ್ನು ಕೊಡುವ ಭಕ್ತವತ್ಸಲ ಲಿಂಗರೂಪೀ ಶಂಕರನು ಅಲ್ಲಿ ಎರಡು ರೂಪಗಳಲ್ಲಿ ವಿಭಕ್ತನಾದನು. ಮುನೀಶ್ವರರೇ! ಅದರಲ್ಲಿ ಒಂದು ಭಾಗವು ಓಂಕಾರದಲ್ಲಿ ಓಂಕಾರೇಶ್ವರ ಹೆಸರಿನಿಂದ ಉತ್ತಮ ಲಿಂಗರೂಪದಿಂದ ಪ್ರತಿಷ್ಠಿತನಾದನು ಮತ್ತು ಇನ್ನೊಂದು ಪಾರ್ಥಿವಲಿಂಗವು ಪರಮೇಶ್ವರ ಹೆಸರಿನಿಂದ ಪ್ರಸಿದ್ಧವಾಯಿತು. ಮುನಿಯೇ! ಇವೆರಡರಲ್ಲಿ ಯಾವುದನ್ನೇ ದರ್ಶನ, ಪೂಜನ ಮಾಡುವುದರಿಂದ ಭಕ್ತರ ಅಭಿಲಾಷೆಯು ಪೂರ್ಣವಾಗುವವು ಎಂದು ತಿಳಿಯಬೇಕು. ಮಹಾ ಮುನಿಯೇ! ಹೀಗೆ ನಾನು ನಿನಗೆ ಇವೆರಡು ಮಹಾದಿವ್ಯ ಜೋತಿರ್ಲಿಂಗಗಳನ್ನು ವರ್ಣಿಸಿದೆ. ಪರಮಾತ್ಮಾ ಶಿವನ ಐದನೆಯ ಅವತಾರದ ಹೆಸರು ಕೇದಾರೇಶ. ಅದು ಕೇದಾರದಲ್ಲಿ ಜ್ಯೋತಿರ್ಲಿಂಗದ ರೂಪದಲ್ಲಿ ಸ್ಥಿತವಾಗಿದೆ. ಮುನಿಯೇ! ಅಲ್ಲಿ ಶ್ರೀಹರಿಯ ನರ-ನಾರಾಯಣನೆಂಬ ಅವತಾರವು ಶಿವನನ್ನು ಪ್ರಾರ್ಥಿಸಿದಾಗ ಅವನು ಹಿಮಗಿರಿಯ ಕೇದಾರ ಶಿಖರದಲ್ಲಿ ಸ್ಥಿತನಾದನು. ಅವರಿಬ್ಬರೂ ಪ್ರತಿದಿನವೂ ಆ ಕೇದಾರೇಶ್ವರ ಲಿಂಗವನ್ನು ಪೂಜಿಸುವರು. ಅಲ್ಲಿ ದರ್ಶನ, ಪೂಜೆ ಮಾಡುವ ಭಕ್ತರಿಗೆ ಶಂಭುವು ಅಭೀಷ್ಟವನ್ನು ಕರುಣಿಸುವನು. ಅಯ್ಯಾ! ಸರ್ವೇಶ್ವರನಾಗಿದ್ದರೂ ಶಿವನು ಈ ಖಂಡದ ವಿಶೇಷವಾಗಿ ಒಡೆಯನಾಗಿರುವನು ಶಿವನ ಈ ಅವತಾರವು ಸಮಸ್ತ ಅಭೀಷ್ಟಗಳನ್ನು ಕರುಣಿಸುವುದಾಗಿದೆ. ಮಹಾಪ್ರಭು ಶಂಭುವಿನ ಆರನೆಯ ಅವತಾರದ ಹೆಸರು ಭೀಮಾಶಂಕರವಾಗಿದೆ. ಈ ಅವತಾರದಲ್ಲಿ ಅವನು ದೊಡ್ಡ-ದೊಡ್ಡ ಲೀಲೆಗಳನ್ನು ಮಾಡಿ, ಭೀಮಾಸುರನನ್ನು ವಿನಾಶಗೊಳಿಸಿರುವನು. ಕಾಮರೂಪ ದೇಶದ ಅಧಿಪತಿ ಸುದಕ್ಷಿಣರಾಜನು ಶಿವನ ಭಕ್ತನಾಗಿದ್ದನು. ಭೀಮಾಸುರನು ಅವನನ್ನು ಪೀಡಿಸುತ್ತಿದ್ದನು. ಆಗ ಶಂಕರನು ತನ್ನ ಭಕ್ತನಿಗೆ ದುಃಖಿಕೊಡುವ ಆ ಅದ್ಭುತ ಅಸುರನನ್ನು ವಧಿಸಿ ಅವನನ್ನು ರಕ್ಷಿಸಿದನು. ಮತ್ತೆ ಸುದಕ್ಷಿಣ ರಾಜನು ಪ್ರಾರ್ಥಿಸಿದಾಗ ಸಾಕ್ಷಾತ್ ಶಂಕರನು ಡಾಕಿನಿಯಲ್ಲಿ ಭೀಮಶಂಕರವೆಂಬ ಜ್ಯೋತಿರ್ಲಿಂಗಸ್ವರೂಪದಿಂದ ಸ್ಥಿತನಾದನು. ಮುನಿಯೇ! ಸಮಸ್ತ ಭೋಗ, ಮೋಕ್ಷಗಳನ್ನು ಕರುಣಿಸುವ ಬ್ರಹ್ಮಾಂಡಸ್ವರೂಪೀ ವಿಶ್ವೇಶ್ವರನೆಂಬ ಏಳನೆಯ ಅವತಾರವು ಕಾಶಿಯಲ್ಲಾಯಿತು. ಮುಕ್ತಿದಾತಾ ಸಿದ್ಧಸ್ವರೂಪೀ ಸಾಕ್ಷಾತ್ ಭಗವಾನ್ ಶಂಕರನು ತನ್ನ ಪುರೀ ಕಾಶಿಯಲ್ಲಿ ಜ್ಯೋತಿರ್ಲಿಂಗರೂಪದಿಂದ ನೆಲೆಸಿರುವನು. ವಿಷ್ಣುವೇ ಮೊದಲಾದ ಎಲ್ಲ ದೇವತೆಗಳು, ಕೈಲಾಸಪತಿ ಶಿವನು ಮತ್ತು ಭೈರವನು ನಿತ್ಯವು ಅವನನ್ನು ಪೂಜಿಸುತ್ತಾರೆ. ಕಾಶೀ ವಿಶ್ವನಾಥನ ಭಕ್ತನಾಗಿದ್ದು, ನಿತ್ಯವೂ ಅವನ ನಾಮಗಳನ್ನು ಜಪಿಸುವವರು ಕರ್ಮಗಳಿಂದ ನಿರ್ಲಿಪ್ತರಾಗಿ ಕೈವಲ್ಯಪದಕ್ಕೆ ಭಾಗಿಯಾಗುತ್ತಾರೆ. ಚಂದ್ರಶೇಖರ ಶಿವನ ತ್ರ್ಯಂಬಕೇಶ್ವರ ಎಂಬ ಎಂಟನೆಯ ಅವತಾರವು ಗೌತಮ ಋಷಿಯ ಪ್ರಾರ್ಥನೆಯಂತೆ ಗೌತಮೀ ನದಿಯ ತೀರದಲ್ಲಿ ಪ್ರಕಟವಾಯಿತು. ಗೌತಮರ ಪ್ರಾರ್ಥನೆಯಂತೆ ಆ ಮುನಿಯನ್ನು ಸಂತೋಷಪಡಿಸಲಿಕ್ಕಾಗಿ ಶಂಕರನು ಪ್ರೇಮಪೂರ್ವಕ ಜ್ಯೋತಿರ್ಲಿಂಗ ಸ್ವರೂಪದಿಂದ ಅಲ್ಲಿ ಅಚಲನಾಗಿ ಸ್ಥಿತನಾದನು. ಆಹಾ! ಆ ಮಹೇಶ್ವರನ ದರ್ಶನ, ಪೂಜೆಯಿಂದ ಎಲ್ಲ ಕಾಮನೆಗಳು ಸಿದ್ಧವಾಗುತ್ತವೆ. ಕೊನೆಗೆ ಮುಕ್ತಿಯೂ ಸಿಗುವುದು. ಶಿವನ ಅನುಗ್ರಹದಿಂದ ಶಂಕರಪ್ರಿಯೆ ಪರಮ ಪಾವನೀ ಗಂಗೆಯು ಗೌತಮರ ಸ್ನೇಹಕ್ಕೆ ವಶಳಾಗಿ ಅಲ್ಲಿ ಗೋದಾವರೀ ಹೆಸರಿನಿಂದ ಹರಿದಳು. ಒಂಭತ್ತನೆಯ ಅವತಾರವು ವೈದ್ಯನಾಥ ಹೆಸರಿನಿಂದ

ಪ್ರಸಿದ್ಧವಾಗಿದೆ. ಈ ಅವತಾರದಲ್ಲಿ ಅನೇಕ ವಿಚಿತ್ರ ಲೀಲೆಗಳನ್ನು ನಡೆಸುವ ಭಗವಾನ್ ಶಂಕರನು ರಾವಣನಿಗಾಗಿ ಆವಿರ್ಭವಿಸಿದ್ದನು. ಆಗ ರಾವಣನು ತನ್ನನ್ನು ತಂದಿರುವುದೆಂದು ತಿಳಿದು ಮಹೇಶ್ವರನು ಜ್ಯೋತಿರ್ಲಿಂಗ ಸ್ವರೂಪದಿಂದ ಚಿತಾ-ಭೂಮಿಯಲ್ಲಿ ಪ್ರತಿಷ್ಠಿತನಾದನು. ಅಂದಿನಿಂದ ಮೂರು ಲೋಕಗಳಲ್ಲಿ ವೈದ್ಯನಾಥೇಶ್ವರ ಹೆಸರಿನಿಂದ ವಿಖ್ಯಾತನಾದನು. ಅವನು ಭಕ್ತಿಯಿಂದ ದರ್ಶನ, ಪೂಜೆ ಮಾಡುವವರಿಗೆ ಭೋಗ-ಮೋಕ್ಷಗಳನ್ನು ಕರುಣಿಸುವನು. ಮುನಿಯೇ! ಈ ವೈದ್ಯನಾಥೇಶ್ವರ ಶಿವನ ಮಾಹಾತ್ಮ್ಯವನ್ನು ಓದುವವರಿಗೆ, ಹೇಳುವವರಿಗೆ ಅವನು ಭಕ್ತಿ-ಮುಕ್ತಿಯ ಭಾಗಿಯಾಗಿಸುವನು. ಹತ್ತನೆಯ ಅವತಾರ ನಾಗೇಶ್ವರನೆಂದು ಹೇಳುತ್ತಾರೆ. ಅವನು ತನ್ನ ಭಕ್ತರ ರಕ್ಷಣೆಗಾಗಿ ಪ್ರಾದುರ್ಭವಿಸಿದ್ದನು. ಸದಾ ದುಷ್ಟರನ್ನು ದಂಡಿಸುತ್ತಾನೆ. ಈ ಅವತಾರದಲ್ಲಿ ಶಿವನು ಧರ್ಮಘಾತಿಯಾದ ದಾರುಕನೆಂಬ ರಾಕ್ಷಸನನ್ನು ಕೊಂದು ವೈಶ್ಯರ ಒಡೆಯನಾದ ಸುಪ್ರಿಯನೆಂಬ ಭಕ್ತನನ್ನು ರಕ್ಷಿಸಿದ್ದನು. ಅನಂತರ ಅನೇಕ ಲೀಲೆಗಳನ್ನು ಮಾಡುವ ಆ ಪರಾತ್ಪರ ಪ್ರಭು ಶಂಭುವು ಜನರಿಗೆ ಉಪಕಾರ ಮಾಡಲಿಕ್ಕಾಗಿ ಅಂಬಿಕಾಸಹಿತ ಜ್ಯೋತಿರ್ಲಿಂಗಸ್ವರೂಪದಿಂದ ದಾರುಕಾ ವನದಲ್ಲಿ ಸ್ಥಿತನಾದನು. ಮುನಿಯೇ! ನಾಗೇಶ್ವರವೆಂಬ ಆ ಶಿವಲಿಂಗದ ದರ್ಶನ, ಅರ್ಚನೆ ಮಾಡುವುದರಿಂದ ರಾಶಿ-ರಾಶಿ ಮಹಾಪಾಪಗಳು ಕೂಡಲೇ ನಾಶವಾಗಿ ಹೋಗುತ್ತವೆ. ಮುನಿಯೇ! ಶಿವನ ಹನ್ನೊಂದನೆಯ ಅವತಾರವು ರಾಮೇಶ್ವರಾವತಾರವೆಂದು ಹೇಳುತ್ತಾರೆ. ಅದು ಶ್ರೀರಾಮಚಂದ್ರನಿಗೆ ಪ್ರಿಯವನ್ನುಂಟು ಮಾಡುವುದಾಗಿದೆ. ಅದನ್ನು ಶ್ರೀರಾಮನೇ ಸ್ಥಾಪಿಸಿದ್ದನು. ಭಕ್ತವತ್ಸಲ ಶಂಕರನು ಪರಮ ಪ್ರಸನ್ನನಾಗಿ ಶ್ರೀರಾಮನಿಗೆ ಪ್ರೇಮದಿಂದ ವಿಜಯದ ವರಪ್ರದಾನ ಮಾಡಿದವನೇ ಲಿಂಗರೂಪದಲ್ಲಿ ಆವಿರ್ಭವಿಸಿರುವನು. ಮುನಿಯೇ! ಶ್ರೀರಾಮನು ಅತ್ಯಂತ ಭಕ್ತಿಯಿಂದ ಪ್ರಾರ್ಥನೆ ಮಾಡಿದಾಗ ಅವನು ಸೇತುಬಂಧದಲ್ಲಿ ಜ್ಯೋತಿರ್ಲಿಂಗ ರೂಪದಿಂದ ಸ್ಥಿತನಾದನು. ಆಗ ಶ್ರೀರಾಮನು ಅವನನ್ನು ಚೆನ್ನಾಗಿ ಸೇವೆ-ಪೂಜೆ ಮಾಡಿದನು. ರಾಮೇಶ್ವರನ ಅದ್ಭುತ ಮಹಿಮೆಯು ಭೂತಳದಲ್ಲಿ ಯಾವುದಕ್ಕೂ ತುಲನೆ ಮಾಡಲಾಗುವುದಿಲ್ಲ. ಅದು ಸರ್ವದಾ ಭುಕ್ತಿ-ಮುಕ್ತಿಯ ಪ್ರದಾಯಕವಾಗಿದೆ ಹಾಗೂ ಭಕ್ತರ ಕಾಮನೆಗಳನ್ನು ಪೂರ್ಣಗೊಳಿಸುವುದಾಗಿದೆ. ಸದ್ಭಕ್ತಿಯಿಂದ ರಾಮೇಶ್ವರ ಲಿಂಗಕ್ಕೆ ಗಂಗಾಜಲದಿಂದ ಅಭಿಷೇಕ ಮಾಡುವವನು ಜೀವನ್ಮುಕ್ತನಾಗುವನು. ಈ ಲೋಕದಲ್ಲಿ ದೇವತೆಗಳಿಗೂ ದುರ್ಲಭವಾದ ಸಂಪೂರ್ಣ ಭೋಗಗಳನ್ನು ಅನುಭವಿಸಿದ ಬಳಿಕ ಅವನು ಪರಮ ಜ್ಞಾನವನ್ನು ಪಡೆಯುವನು. ಮತ್ತೆ ಅವನಿಗೆ ಕೈವಲ್ಯ ಮೋಕ್ಷವು ದೊರೆಯುವುದು. ಘುಶ್ಮೇಶ್ವರಾವತಾರವು ಶಿವನ ಹನ್ನೆರಡನೆಯ ಅವತಾರವಾಗಿದೆ. ಅವನು ನಾನಾ ರೀತಿಯ ಲೀಲೆಗಳ ಕರ್ತೃನೂ, ಭಕ್ತವತ್ಸಲನೂ, ಘುಶ್ಮೆಗೆ ಆನಂದವನ್ನು ಕೊಡುವುದೂ ಆಗಿದೆ. ಮುನಿಯೇ! ಘುಶ್ಮಾಳಿಗೆ ಪ್ರಿಯವನ್ನುಂಟುಮಾಡಲು ಭಗವಾನ್ ಶಂಕರನು ದಕ್ಷಿಣ ದಿಕ್ಕಿನಲ್ಲಿರುವ ದೇವಶೈಲದ ಹತ್ತಿರ ಒಂದು ಸರೋವರದಲ್ಲಿ ಪ್ರಕಟನಾದನು. ಮುನಿಯೇ! ಘುಶ್ಮಾಳ ಪುತ್ರನನ್ನು ಸುದೇಹ್ಯನು ಕೊಂದು ಹಾಕಿದ್ದನು. ಅವನನ್ನು ಬದುಕಿಸಲಿಕ್ಕಾಗಿ ಘುಶ್ಮಾಳು ಶಿವನನ್ನು ಆರಾಧಿಸಿದ್ದಳು. ಆಗ ಅಕೆಯ ಭಕ್ತಿಯಿಂದ ಸಂತುಷ್ಟನಾದ ಭಕ್ತವತ್ಸಲ ಶಂಭುವು ಅವಳ ಪುತ್ರನನ್ನು ಬದುಕಿಸಿದ್ದನು. ಅನಂತರ ಕಾಮನೆಗಳನ್ನು ಈಡೇರಿಸುವ ಶಂಭುವು ಘುಶ್ಮಾಳ ಪ್ರಾರ್ಥನೆಯಂತೆ ಆ ಕೆರೆಯಲ್ಲಿ ಜ್ಯೋತಿರ್ಲಿಂಗರೂಪದಿಂದ ಸ್ಥಿತನಾದನು. ಆಗ ಅವನ ಹೆಸರು ಘುಶ್ಮೇಶ್ವರ ಎಂದಾಯಿತು. ಆ ಶಿವಲಿಂಗವನ್ನು ಭಕ್ತಿಯಿಂದ ದರ್ಶನ, ಪೂಜೆ ಮಾಡುವವನು ಈ ಲೋಕದಲ್ಲಿ ಸಂಪೂರ್ಣ ಸುಖಿಗಳನ್ನು ಅನುಭವಿಸಿ ಅಂತ್ಯದಲ್ಲಿ ಮುಕ್ತಿಯನ್ನು ಪಡೆಯುವನು. ಸನತ್ಕುಮಾರರೇ! ಹೀಗೆ ನಿಮಗೆ ನಾನು ಈ ಹನ್ನೆರಡು ದಿವ್ಯ ಜ್ಯೋತಿರ್ಲಿಂಗಗಳನ್ನು ವರ್ಣಿಸಿದೆ. ಇವೆಲ್ಲವೂ ಭೋಗ-ಮೋಕ್ಷಗಳನ್ನು ಕರುಣಿಸುವುದಾಗಿವೆ. ಜ್ಯೋತಿರ್ಲಿಂಗಗಳ ಈ ಕಥೆಯನ್ನು ಓದುವವ, ಕೇಳುವ, ಹೇಳುವ ಮನುಷ್ಯನು ಸಂಪೂರ್ಣ ಪಾಪಗಳಿಂದ ಮುಕ್ತನಾಗಿ, ಭೋಗ-ಮೋಕ್ಷಗಳನ್ನು ಪಡೆದುಕೊಳ್ಳುವನು. ಹೀಗೆ ನಾನು ಈ ಶತರುದ್ರವೆಂಬ ಸಂಹಿತೆಯನ್ನು ವರ್ಣಿಸಿರುವೆನು. ಇದು ಶಿವನ ನೂರು ಅವತಾರಗಳ ಉತ್ತಮ ಕೀರ್ತಿಯಿಂದ ಸಂಪನ್ನವಾಗಿದೆ ಹಾಗೂ ಸಂಪೂರ್ಣ ಅಭೀಷ್ಟ ಫಲಗಳನ್ನು ಕೊಡುವುದಾಗಿದೆ. ಇದನ್ನು ನಿತ್ಯವೂ ಶಾಂತಚಿತ್ತದಿಂದ ಓದುವವನ, ಕೇಳುವವನ ಎಲ್ಲ ಅಭಿಲಾಷೆಗಳೂ ಪೂರ್ಣವಾಗಿ ಅಂತ್ಯದಲ್ಲಿ ನಿಶ್ಚಯವಾಗಿಯೂ ಮುಕ್ತಿಯು ದೊರೆಯುವುದು.

(ಅಧ್ಯಾಯ ೪೨)

॥ ಶತರುದ್ರ ಸಂಹಿತೆಯು ಸಂಪೂರ್ಣವಾಯಿತು ॥

❐ ❐ ❐

ಕೋಟಿರುದ್ರ ಸಂಹಿತೆ

ದ್ವಾದಶ ಜ್ಯೋತಿರ್ಲಿಂಗಗಳ ಹಾಗೂ ಅವುಗಳ ಉಪಲಿಂಗಗಳ ವರ್ಣನೆ, ಅವುಗಳ ದರ್ಶನ-ಪೂಜೆಯ ಮಹಿಮೆ

ಯೋ ಧತ್ತೇ ನಿಜಮಾಯಯೈವ ಭುವನಾಕಾರಂ ವಿಕಾರೋಜ್ಝಿತೋ
ಯಸ್ಯಾಹುಃ ಕರುಣಾಕಟಾಕ್ಷವಿಭವೌ ಸ್ವರ್ಗಾಪವರ್ಗಾಭಿಧೌ ।
ಪ್ರತ್ಯಗ್ಬೋಧಸುಖಾದ್ವಯಂ ಹೃದಿ ಸದಾ ಪಶ್ಯಂತಿ ಯಂ ಯೋಗಿನ -
ಸ್ತಸ್ಮೈ ಶೈಲಸುತಾಂಚಿತಾರ್ದ್ಧವಪುಷೇ ಶಶ್ವನ್ನಮಸ್ತೇಜಸೇ ॥೧॥

ಯಾರು ನಿರ್ವಿಕಾರನಾಗಿದ್ದರೂ ತನ್ನ ಮಾಯೆಯಿಂದಲೇ ವಿರಾಟ್ ವಿಶ್ವದ ಆಕಾರವನ್ನು ಧರಿಸುವನೋ, ಸ್ವರ್ಗ ಮತ್ತು ಅಪವರ್ಗ (ಮೋಕ್ಷ) ಗಳು ಯಾರ ಕೃಪಾಕಟಾಕ್ಷದ ವೈಭವವೆಂದು ಹೇಳಲಾಗಿದೆಯೋ, ಯೋಗಿಗಳು ಯಾರನ್ನು ಸದಾ ತಮ್ಮ ಹೃದಯದಲ್ಲಿ ಅದ್ವಿತೀಯ ಆತ್ಮಜ್ಞಾನಾನಂದ ಸ್ವರೂಪವನ್ನೇ ನೋಡುವರೋ, ಅರ್ಧಶರೀರವು ಶೈಲರಾಜಕುಮಾರೀ ಪಾರ್ವತಿಯಿಂದ ಸುಶೋಭಿತವಾಗಿದೆಯೋ ಆ ತೇಜೋಮಯ ಭಗವಾನ್ ಶಂಕರನಿಗೆ ನಿರಂತರ ನನ್ನ ನಮಸ್ಕಾರವು ॥೧॥

ಕೃಪಾಲಲಿತ ವೀಕ್ಷಣಂ ಸ್ಮಿತಮನೋಜ್ಞವಕ್ತ್ರಾಂಬುಜಂ
ಶಶಾಂಕಕಲಯೋಜ್ವಲಂ ಶಮಿತಘೋರತಾಪತ್ರಯಮ್ ।
ಕರೋತು ಕಿಮಪಿ ಸ್ಫುರತ್ತರಮ ಸೌಖ್ಯಸಚ್ಚಿದ್ವಪು -
ರ್ಧರಾಧರಸುತಾಭುಜೋದ್ವಲಯಿತಂ ಮಹೋ ಮಂಗಲಮ್ ॥೨॥

ಯಾರ ನೋಟವು ಬಹಳ ಸುಂದರವಾಗಿದೆಯೋ, ಯಾರ ಮುಖಾರವಿಂದವು ಮಂದ ಮುಗುಳ್ನಗೆಯಿಂದ ಅತ್ಯಂತ ಮನೋಹರವಾಗಿ ಕಂಡು ಬರುತ್ತದೋ, ಯಾರು ಚಂದ್ರನ ಕಲೆಯಿಂದ ಪರಮ ಉಜ್ವಲನಾಗಿರುವನೋ, ಆಧ್ಯಾತ್ಮಿಕ ಮೊದಲಾದ ಮೂರು ತಾಪಗಳನ್ನು ಶಾಂತ ಗೊಳಿಸಲು ಸಮರ್ಥನೋ, ಯಾರ ಸ್ವರೂಪವು ಸಚ್ಚಿನ್ಮಯ ಹಾಗೂ ಪರಮಾನಂದ ರೂಪದಿಂದ ಪ್ರಕಾಶಿತವಾಗಿದೆಯೋ, ಯಾರು ಗಿರಿರಾಜನಂದಿನೀ ಪಾರ್ವತಿಯ ಭುಜಗಳಿಂದ ಆವೇಷ್ಟಿತನಾಗಿರುವನೋ ಆ ಅನಿರ್ವಚನೀಯ ತೇಜಃಪುಂಜ ಶಿವನು ಎಲ್ಲರ ಮಂಗಳವನ್ನು ಮಾಡಲಿ. ॥೨॥

ಋಷಿಗಳು ಕೇಳುತ್ತಾರೆ - ಸೂತಪುರಾಣಿಕರೇ! ತಾವು ಸಮಸ್ತ ಜನರ ಹಿತದ ಕಾಮನೆಯಿಂದ ಹೇಳಿದ ನಾನಾ ಪ್ರಕಾರದ ಆಖ್ಯಾನಗಳಿಂದ ಕೂಡಿದ ಶಿವಾವತಾರದ ಮಾಹಾತ್ಮವು ಬಹಳ ಉತ್ತಮವಾಗಿದೆ. ಅಯ್ಯಾ! ನೀವು ಪುನಃ ಶಿವನ ಪರಮೋತ್ತಮ ಮಾಹಾತ್ಮ್ಯವನ್ನು ಹಾಗೂ ಶಿವಲಿಂಗದ ಮಹಿಮೆಯನ್ನು ಸಂತೋಷವಾಗಿ ವರ್ಣಿಸಿರಿ. ತಾವು ಶಿವಭಕ್ತರಲ್ಲಿ ಶ್ರೇಷ್ಠರಾಗಿರುವಿರಿ. ಆದ್ದರಿಂದ ಧನ್ಯರಾಗಿದ್ದೀರಿ. ಪ್ರಭೋ! ನಿಮ್ಮ ಮುಖಾರವಿಂದದಿಂದ ಹೊರಟಿರುವ ಭಗವಾನ್ ಶಿವನ ಸುರಮ್ಯ ಯಶರೂಪೀ ಅಮೃತವನ್ನು ನಾವು ಕರ್ಣಪುಟಗಳಿಂದ ಪಾನಮಾಡಿ ನಮಗೆ ತೃಪ್ತಿಯಾಗಲಿಲ್ಲ. ಆದ್ದರಿಂದ ಪುನಃ ಅದನ್ನೇ ವರ್ಣಿಸಿರಿ. ವ್ಯಾಸಶಿಷ್ಯರೇ! ಭೂಮಂಡಲದಲ್ಲಿ, ತೀರ್ಥ-ತೀರ್ಥಗಳಲ್ಲಿ ಇರುವ ಶುಭಲಿಂಗಗಳನ್ನು ಅಥವಾ ಇತರ ಸ್ಥಳಗಳಲ್ಲಿಯೂ ಇರುವ ಪ್ರಸಿದ್ಧ ಶಿವಲಿಂಗಗಳನ್ನು, ಪರಮೇಶ್ವರ ಶಿವನ ಆ ಎಲ್ಲ ದಿವ್ಯ ಲಿಂಗಗಳನ್ನು ಸಮಸ್ತ ಜನರ ಹಿತದ ಇಚ್ಛೆಯಿಂದ ತಾವು ವರ್ಣಿಸಿರಿ.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ! ಸಮಸ್ತ ತೀರ್ಥಗಳು ಲಿಂಗಮಯವಾಗಿವೆ. ಎಲ್ಲವೂ ಲಿಂಗದಲ್ಲೇ ಪ್ರತಿಷ್ಠಿತವಾಗಿದೆ. ಆ ಶಿವಲಿಂಗಗಳನ್ನು ಯಾರೂ ಎಣಿಸಲಾರರು. ಆದರೂ ನಾನು ಅವುಗಳಲ್ಲಿ ಕೆಲವನ್ನು ವರ್ಣಿಸುವೆನು. ಕಂಡು ಬರುವ ದೃಶ್ಯವೆಲ್ಲವೂ, ವರ್ಣಿಸುವ, ಸ್ಮರಿಸುವ ಎಲ್ಲವೂ ಭಗವಾನ್ ಶಿವನ ರೂಪವೇ ಆಗಿದೆ. ಯಾವುದೇ ವಸ್ತು ಶಿವನ ಸ್ವರೂಪದಿಂದ ಭಿನ್ನವಾಗಿಲ್ಲ. ಸಾಧುಶಿರೋಮಣಿಗಳೇ! ಭಗವಾನ್ ಶಂಭುವು ಎಲ್ಲ ಜನರ ಮೇಲೆ ಅನುಗ್ರಹವನ್ನು ಮಾಡಲಿಕ್ಕಾಗಿ ದೇವತೆಗಳು, ಅಸುರರು, ಮನುಷ್ಯರು ಸಹಿತ ಮೂರು ಲೋಕಗಳನ್ನೂ ಲಿಂಗರೂಪದಿಂದ ವ್ಯಾಪಿಸಿರುವನು. ಸಮಸ್ತ ಜನರ ಮೇಲೆ ಕೃಪೆಯನ್ನು ಮಾಡುವ ಉದ್ದೇಶದಿಂದಲೇ ಭಗವಾನ್ ಮಹೇಶ್ವರನು ಎಲ್ಲ ತೀರ್ಥಗಳಲ್ಲಿ ಮತ್ತು ಇತರ ಬೇರೆ ಸ್ಥಳಗಳಲ್ಲಿಯೂ ನಾನಾ ಪ್ರಕಾರದ ಲಿಂಗಗಳನ್ನು ಧರಿಸುತ್ತಾನೆ. ಭಕ್ತರು ಭಕ್ತಿಯಿಂದ ಭಗವಾನ್ ಶಂಭುವನ್ನು ಸ್ಮರಿಸಿದಾಗಲೆಲ್ಲ ಅಲ್ಲಲ್ಲಿ ಅವತರಿಸಿ ಸ್ಥಿತನಾಗಿರುವನು. ಜನರಿಗೆ ಉಪಕಾರ ಮಾಡಲಿಕ್ಕಾಗಿಯೇ ಅವನು ಸ್ವಯಂ ತನ್ನ ಸ್ವರೂಪಭೂತ ಲಿಂಗವನ್ನು ಕಲ್ಪಿಸಿದನು. ಆ ಲಿಂಗದ ಪೂಜೆ ಮಾಡಿ ಶಿವಭಕ್ತರು ಅವಶ್ಯವಾಗಿ ಸಿದ್ಧಿಯನ್ನು ಪಡೆಯುವರು. ಬ್ರಾಹ್ಮಣರೇ! ಭೂಮಂಡಲದಲ್ಲಿರುವ ಲಿಂಗಗಳನ್ನು ಎಣಿಸಲಾಗದು,

ಆದರೂ ನಾನು ಮುಖ್ಯ-ಮುಖ್ಯ ಶಿವಲಿಂಗಗಳನ್ನು ಪರಿಚಯಿಸುವೆನು. ಮುನಿಶ್ರೇಷ್ಠ ಶೌನಕರೇ! ಈ ಭೂತಲದಲ್ಲಿ ಇರುವ ಪ್ರಧಾನವಾದ ಜ್ಯೋತಿರ್ಲಿಂಗಗಳನ್ನು ಇಂದು ವರ್ಣಿಸುವೆನು. ಅವುಗಳ ನಾಮಗಳನ್ನು ಕೇಳುವುದರಿಂದಲೇ ಪಾಪವು ದೂರವಾಗುತ್ತದೆ. ಸೌರಾಷ್ಟ್ರದಲ್ಲಿ ಸೋಮನಾಥ[೧], ಮಲ್ಲಿಕಾರ್ಜುನ[೨], ಉಜ್ಜಯಿನಿಯಲ್ಲಿ ಮಹಾಕಾಲ[೩], ಓಂಕಾರ ತೀರ್ಥದಲ್ಲಿ ಪರಮೇಶ್ವರ[೪], ಹಿಮಾಲಯದ ಶಿಖರದಲ್ಲಿ ಕೇದಾರ[೫], ಡಾಕಿನಿಯಲ್ಲಿ ಭೀಮಾಶಂಕರ[೬], ವಾರಾಣಸಿಯಲ್ಲಿ ವಿಶ್ವನಾಥ[೭], ಗೋದಾವರೀ ತೀರದಲ್ಲಿ ತ್ರ್ಯಂಬಕ[೮], ಚಿತಾಭೂಮಿಯಲ್ಲಿ ವೈದ್ಯನಾಥ[೯], ದಾರುಕಾವನದಲ್ಲಿ ನಾಗೇಶ[೧೦], ಸೇತುಬಂಧದಲ್ಲಿ ರಾಮೇಶ್ವರ[೧೧], ಶಿವಾಲಯದಲ್ಲಿ ಘುಶ್ಮೇಶ್ವರ[೧೨], ಇವರನ್ನು ಸ್ಮರಿಸಿರಿ. ಪ್ರತಿದಿನವೂ ಪ್ರಾತಃ ಕಾಲದಲ್ಲಿ ಎದ್ದು ಈ

---

೧. ಶ್ರೀಸೋಮನಾಥನನ್ನು ದರ್ಶಿಸಲು ಕಾಠಿಯಾವಾಡ (ಗುಜರಾತ) ಪ್ರದೇಶದ ಅಂತರ್ಗತ ಪ್ರಭಾಸ ಕ್ಷೇತ್ರಕ್ಕೆ ಹೋಗಬೇಕು. ೨. ಮಲ್ಲಿಕಾರ್ಜುನ ಎಂಬ ಜ್ಯೋತಿರ್ಲಿಂಗವು ಶ್ರೀಶೈಲ ಪರ್ವತದಲ್ಲಿ ವಿರಾಜಮಾನವಾಗಿದೆ. ಈ ಸ್ಥಾನವು ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಕೃಷ್ಣಾನದಿಯ ತೀರದಲ್ಲಿದೆ. ಇದನ್ನು ದಕ್ಷಿಣದ ಕೈಲಾಸವೆಂದೂ ಹೇಳುತ್ತಾರೆ. ೩. ಮಹಾಕಾಲ ಅಥವಾ ಮಹಾಕಾಲೇಶ್ವರನು ಮಧ್ಯಪ್ರದೇಶದ ಕ್ಷಿಪ್ರಾನದಿಯ ತೀರದ ಉಜ್ಜೈನ ನಗರದಲ್ಲಿ ವಿರಾಜಿಸುತ್ತಿರುವನು. ಉಜ್ಜೈನವನ್ನು ಅವಂತಿಕಾಪುರೀ ಎಂದೂ ಹೇಳುತ್ತಾರೆ. ೪. ಈ ಶಿವಲಿಂಗವನ್ನು ಓಂಕಾರೇಶ್ವರನೆಂದೂ ಹೇಳುತ್ತಾರೆ. ಓಂಕಾರೇಶ್ವರನ ಸ್ಥಾನವು ಮಧ್ಯಪ್ರದೇಶದ ನರ್ಮದಾ ನದಿಯ ತಟದಲ್ಲಿದೆ. ಉಜ್ಜೈನಿನಿಂದ ಖಂಡವಾ ಹೋಗುವ ರೈಲ್ವೆ ಮಾರ್ಗದಲ್ಲಿ ಮೋರಟಕ್ಕಾ ಎಂಬ ಸ್ಟೇಶನವಿದೆ. ಅಲ್ಲಿಂದ ಈ ಸ್ಥಾನವು ೭ ಮೈಲಿ ದೂರದಲ್ಲಿದೆ. ಇಲ್ಲಿ ಓಂಕಾರೇಶ್ವರ ಮತ್ತು ಅಮಲೇಶ್ವರವೆಂಬ ಎರಡು ಬೇರೆ-ಬೇರೆ ಶಿವಲಿಂಗಗಳಿವೆ. ಆದರೆ ಎರಡನ್ನೂ ಒಂದೇ ಜ್ಯೋತಿರ್ಲಿಂಗದ ಎರಡು ಸ್ವರೂಪಗಳೆಂದು ತಿಳಿಯಲಾಗಿದೆ. ೫. ಕೇದಾರನಾಥ ಅಥವಾ ಕೇದಾರೇಶ್ವರನು ಹಿಮಾಲಯದ ಕೇದಾರವೆಂಬ ಶಿಖರದಲ್ಲಿ ಸ್ಥಿತನಾಗಿರುವನು. ಶಿಖರದ ಪೂರ್ವಕ್ಕೆ ಅಲಕನಂದೆಯ ತೀರದಲ್ಲಿ ಶ್ರೀಬದರೀನಾಥನು ನೆಲೆಸಿರುವನು ಮತ್ತು ಪಶ್ಚಿಮದ ಮಂದಾಕಿನಿಯ ತೀರದಲ್ಲಿ ಶ್ರೀಕೇದಾರನಾಥನು ವಿರಾಜಿಸುತ್ತಿರುವನು. ಈ ಸ್ಥಾನವು ಹರಿದ್ವಾರದಿಂದ ೧೫೦ ಮೈಲು ಮತ್ತು ಹೃಷಿಕೇಶದಿಂದ ೧೩೨ ಮೈಲು ದೂರದಲ್ಲಿದೆ. ೬. ಶ್ರೀಭೀಮಶಂಕರನ ಸ್ಥಾನವು ಮುಂಬಯಿಯಿಂದ ಪೂರ್ವಕ್ಕೆ ಮತ್ತು ಪುಣೆಯಿಂದ ಉತ್ತರಕ್ಕೆ ಭೀಮನದಿಯ ಉದ್ಗಮಸ್ಥಾನವಾದ ಸಹ್ಯಾದ್ರಿ ಪರ್ವತದಲ್ಲಿದೆ. ಈ ಸ್ಥಾನವು ನಾಸಿಕದಿಂದ ೧೨೦ ಮೈಲು ದೂರದಲ್ಲಿದೆ. ಈ ಜ್ಯೋತಿರ್ಲಿಂಗದ ಪ್ರಾಚೀನ ಮಂದಿರವಿರುವ ಸಹ್ಯ ಪರ್ವತದ ಆ ಶಿಖರವನ್ನು ಡಾಕಿನೀ ಎಂದು ಹೇಳುತ್ತಾರೆ. ಇದರಿಂದ ಎಂದೋ ಇಲ್ಲಿ ಡಾಕಿನೀ ಮತ್ತು ಭೂತಗಳ ನಿವಾಸವಿತ್ತು ಎಂದು ಅನುಮಾನವಾಗುತ್ತದೆ. ಶಿವಪುರಾಣದ ಒಂದು ಕಥೆಯ ಆಧಾರದಿಂದ ಭೀಮಶಂಕರ ಜ್ಯೋತಿರ್ಲಿಂಗವು ಆಸ್ಸಾಮಿನ ಕಾಮರೂಪಜಿಲ್ಲೆಯಲ್ಲಿ ಗೋಹಾಟಿಯ ಹತ್ತಿರ ಬ್ರಹ್ಮಪುರ ಪರ್ವತದಲ್ಲಿ ಸ್ಥಿತನೆಂದು ಹೇಳುತ್ತಾರೆ. ಕೆಲವರು ನೈನೀತಾಲ ಜಿಲ್ಲೆಯ ಉಜ್ಜನಕ ಎಂಬ ಸ್ಥಾನದಲ್ಲಿ ಒಂದು ವಿಶಾಲವಾದ ಶಿವಮಂದಿರವಿದೆ. ಅದೇ ಭೀಮಶಂಕರನ ಸ್ಥಾನವಾಗಿದೆ ಎಂದು ಹೇಳುತ್ತಾರೆ. ೭ ಕಾಶಿಯ ವಿಶ್ವನಾಥನಾದರೋ ಪ್ರಸಿದ್ಧನಾಗಿದ್ದಾನೆ. ೮. ಈ ಜ್ಯೋತಿರ್ಲಿಂಗವು ತ್ರ್ಯಂಬಕ ಅಥವಾ ತ್ರ್ಯಂಬಕೇಶ್ವರವೆಂದು ಪ್ರಸಿದ್ಧವಾಗಿದೆ. ಮುಂಬಯಿ ಪ್ರಾಂತದ ನಾಸಿಕ ಜಿಲ್ಲೆಯ ನಾಸಿಕ ಪಂಚವಟಿಯಿಂದ ೧೮ ಮೈಲು ದೂರ ಗೋದಾವರಿಯ ಉದ್ಗಮಸ್ಥಾನವಾದ ಬ್ರಹ್ಮಗಿರಿಯ ಹತ್ತಿರ ಗೋದಾವರೀ ತೀರದಲ್ಲಿ ಇದು ಸ್ಥಾಪಿತವಾಗಿದೆ. ೯. ಈ ಸ್ಥಾನವು ಜಸೀಡೀಹ ಸ್ಟೇಶನದ ಹತ್ತಿರ ವೈದ್ಯನಾಥಧಾಮವೆಂದು ಪ್ರಸಿದ್ಧವಾಗಿದೆ. ಪುರಾಣಗಳನುಸಾರ ಇದೇ ಚಿತಾಭೂಮಿಯಾಗಿದೆ. ಕೆಲವೆಡೆ ಪರಲ್ಯಾಂ ವೈದ್ಯನಾಥಂ ಚ ಹೀಗೆ ಪಾಠವೂ ಸಿಗುತ್ತದೆ. ಇದಕ್ಕನುಸಾರ ಪರಳಿಯಲ್ಲಿ ವೈದ್ಯನಾಥನ ಸ್ಥಿತಿ ಇದೆ. ಪರಭಣಿ ಎಂಬ ಜಂಕ್ಷನ್‌ನಿಂದ ಪರಳಿವರೆಗೆ ಒಂದು ರೈಲ್ವೆ ಲೈನ್ ಇದೆ. ಈ ಪರಳಿ ಸ್ಟೇಶನಿನಿಂದ ಸ್ವಲ್ಪ ದೂರದಲ್ಲಿ ಪರಳಿ ಊರಿನ ಹತ್ತಿರ ಶ್ರೀವೈದ್ಯನಾಥ ಎಂಬ ಜ್ಯೋತಿರ್ಲಿಂಗವಿದೆ. ೧೦. ನಾಗೇಶ ಎಂಬ ಜ್ಯೋತಿರ್ಲಿಂಗದ ಸ್ಥಾನ ಗುಜರಾತದ ರಾಜ್ಯದ ಅಂತರ್ಗತ ಗೋಮತೀದ್ವಾರಕೆಯ ಈಶಾನ ಕೋಣದಲ್ಲಿ ಹನ್ನೆರಡು-ಹದಿಮೂರು ಮೈಲು ದೂರದಲ್ಲಿದೆ. ದಾರುಕಾವನ ಇದರದ್ದೇ ಹೆಸರಾಗಿದೆ. ಕೆಲ-ಕೆಲವರು ದುರುಕಾವನದ ಸ್ಥಾನದಲ್ಲಿ 'ದ್ವಾರಕಾವನ' ಪಾಠವೆಂದು ಒಪ್ಪಿರುವರು. ಈ ಪಾಠಕ್ಕನುಸಾರವಾಗಿಯೂ ಇದೇ ಸ್ಥಾನವೆಂದು ಸಿದ್ಧವಾಗುತ್ತದೆ. ಏಕೆಂದರೆ, ಅದು ದ್ವಾರಕೆಗೆ ಹತ್ತಿರ ಮತ್ತು ಆ ಕ್ಷೇತ್ರದ ಅಂತರ್ಗತವಾಗಿದೆ. ಕೆಲವರು ದಕ್ಷಿಣ ಹೈದಾರಾಬಾದ ಅಂತರ್ಗತ ಔಂಢಾ ಎಂಬ ಗ್ರಾಮದಲ್ಲಿ ಸ್ಥಿತ ಶಿವಲಿಂಗವನ್ನೇ ನಾಗೇಶ್ವರ ಜ್ಯೋತಿರ್ಲಿಂಗವೆಂದು ತಿಳಿಯುತ್ತಾರೆ. ಕೆಲವು ಜನರ ಮತದಂತೆ ಅಲ್ಮೋಡಾದಿಂದ ೧೭ ಮೈಲು ಉತ್ತರ -ಪೂರ್ವದಲ್ಲಿ ಸ್ಥಿತ ಯಾಗೇಶ (ಜಾಗೇಶ್ವರ) ಶಿವಲಿಂಗವೇ ನಾಗೇಶ್ವರ ಜ್ಯೋತಿರ್ಲಿಂಗವಾಗಿದೆ. ೧೧. ಶ್ರೀರಾಮೇಶ್ವರ ತೀರ್ಥವನ್ನೇ ಸೇತುಬಂಧ ತೀರ್ಥವೆಂದೂ ಹೇಳುತ್ತಾರೆ. ಈ ಸ್ಥಾನವು ಮದ್ರಾಸ ಪ್ರಾಂತ್ಯದ ರಾಮನಾಥಪುರ ಅಥವಾ ರಾಮನದ ಜಿಲ್ಲೆಯಲ್ಲಿದೆ. ಇಲ್ಲಿ ಸಮುದ್ರ ತೀರದಲ್ಲಿ ರಾಮೇಶ್ವರನ ವಿಶಾಲ ಮಂದಿರವಿದೆ. ೧೨. ಶ್ರೀಘುಶ್ಮೇಶ್ವರನನ್ನು ಘುಸೃಣೇಶ್ವರ ಅಥವಾ ಘೃಷ್ಣೇಶ್ವರವೆಂದೂ ಹೇಳುತ್ತಾರೆ. ಇದರ ಸ್ಥಾನ ಮಹಾರಾಷ್ಟ್ರದ ದೌಲತಾಬಾದ ಸ್ಟೇಶನ್‌ನಿಂದ ೧೨ ಮೈಲಿದೂರ ವೇರುಲ ಊರಿನ ಹತ್ತಿರವಿದೆ. ಇದೇ ಸ್ಥಾನವನ್ನು ಶಿವಾಲಯವೆಂದು ಹೇಳುತ್ತಾರೆ.

ಹನ್ನೆರಡು ನಾಮಗಳನ್ನು ಉಚ್ಚರಿಸುವವನು ಎಲ್ಲ ಪಾಪಗಳಿಂದ ಮುಕ್ತನಾಗಿ ಸಂಪೂರ್ಣ ಸಿದ್ಧಿಗಳನ್ನು ಪಡೆದುಕೊಳ್ಳುವನು.*

ಮುನೀಶ್ವರರೇ ! ಯಾವ-ಯಾವ ಮನೋರಥಗಳನ್ನು ಪಡೆಯುವ ಇಚ್ಛೆಯಿಂದ ಶ್ರೇಷ್ಠ ಮನುಷ್ಯರು ಈ ಹನ್ನೆರಡು ನಾಮಗಳನ್ನು ಹೇಳುವರೋ ಅವರು ಈ ಲೋಕ ಮತ್ತು ಪರಲೋಕದಲ್ಲಿ ಆ ಮನೋರಥಗಳನ್ನು ಅವಶ್ಯವಾಗಿ ಪಡೆಯುವರು. ಶುದ್ಧ ಅಂತಃಕರಣವುಳ್ಳವರು ನಿಷ್ಕಾಮಭಾವದಿಂದ ಈ ನಾಮಗಳನ್ನು ಪಠಿಸುವವರಿಗೆ ಎಂದೂ ಗರ್ಭವಾಸವು ದೊರೆಯಲಾರದು. ಇವೆಲ್ಲದರ ಪೂಜಾಮಾತ್ರದಿಂದಲೇ ಇಹಲೋಕದಲ್ಲಿ ಸಮಸ್ತ ವರ್ಣಗಳ ಜನರ ದುಃಖಿಗಳು ನಾಶವಾಗುತ್ತವೆ ಮತ್ತು ಪರಲೋಕದಲ್ಲಿ ಅವರಿಗೆ ಅವಶ್ಯವಾಗಿ ಮೋಕ್ಷವು ಪ್ರಾಪ್ತವಾಗುತ್ತದೆ. ಈ ದ್ವಾದಶ ಜ್ಯೋತಿರ್ಲಿಂಗಗಳ ನೈವೇದ್ಯವನ್ನು ಪ್ರಯತ್ನಪೂರ್ವಕ ಸೇವಿಸಬೇಕು. ಹೀಗೆ ಮಾಡುವವರ ಎಲ್ಲ ಪಾಪಗಳು ತತ್‌ಕ್ಷಣ ಸುಟ್ಟು ಬೂದಿಯಾಗುತ್ತವೆ.ಸ

ಹೀಗೆ ನಾನು ಜ್ಯೋತಿರ್ಲಿಂಗಗಳ ದರ್ಶನ ಮತ್ತು ಪೂಜೆಯ ಫಲವನ್ನು ತಿಳಿಸಿರುವೆನು. ಇನ್ನು ಜ್ಯೋತಿರ್ಲಿಂಗಗಳ ಉಪಲಿಂಗಗಳನ್ನು ಹೇಳುವೆನು. ಮುನೀಶ್ವರರೇ ! ಗಮನವಿಟ್ಟು ಕೇಳಿರಿ. ಸೋಮನಾಥನ ಉಪಲಿಂಗದ ಹೆಸರು ಅಂತಕೇಶ್ವರವಾಗಿದೆ. ಆ ಉಪಲಿಂಗವು ಮಹೀನದೀ ಮತ್ತು ಸಮುದ್ರ ಸಂಗಮದಲ್ಲಿ ಸ್ಥಿತವಾಗಿದೆ. ಮಲ್ಲಿಕಾರ್ಜುನನಿಂದ ಪ್ರಕಟವಾದ ಉಪಲಿಂಗವು ರುದ್ರೇಶ್ವರನೆಂದು ಪ್ರಸಿದ್ಧವಾಗಿದೆ. ಅದು ಭೃಗುಕಕ್ಷದಲ್ಲಿ ಸ್ಥಿತವಾಗಿದೆ ಮತ್ತು ಉಪಾಸಕರಿಗೆ ಸುಖವನ್ನು ಕೊಡುವುದಾಗಿದೆ. ಮಹಾಕಾಲ ಸಂಬಂಧಿ ಉಪಲಿಂಗ ದುಗ್ಧೇಶ್ವರ ಅಥವಾ ದೂಧನಾಥ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅದು ನರ್ಮದೇಯ ತೀರದಲ್ಲಿದ್ದು, ಸಮಸ್ತ ಪಾಪಗಳನ್ನು ನಿವಾರಿಸುವುದಾಗಿದೆ. ಓಂಕಾರೇಶ್ವರ ಸಂಬಂಧೀ ಉಪಲಿಂಗವು ಕರ್ದಮೇಶ್ವರ ಹೆಸರಿನಿಂದ ಪ್ರಸಿದ್ಧವಾಗಿದೆ. ಅದು ಬಿಂದು ಸರೋವರದ ತೀರದಲ್ಲಿದ್ದು ಉಪಾಸಕರಿಗೆ ಸಂಪೂರ್ಣ ಮನೋವಾಂಛಿತ ಫಲವನ್ನು ನೀಡುವುದಾಗಿದೆ. ಕೇದಾರೇಶ್ವ ಸಂಬಂಧೀ ಉಪಲಿಂಗವು ಭೂತೇಶ್ವರ ಹೆಸರಿನಿಂದ ಪ್ರಸಿದ್ಧವಾಗಿದ್ದು, ಯಮುನಾ ತೀರದಲ್ಲಿ ಸ್ಥಿತವಾಗಿದೆ. ಅದರ ದರ್ಶನ, ಪೂಜೆ ಮಾಡುವವರ ಅತಿದೊಡ್ಡ ಪಾಪಗಳನ್ನೂ ನಿವಾರಿಸುವುದೆಂದು ಹೇಳಲಾಗಿದೆ. ಭೀಮಶಂಕರ ಸಂಬಂಧೀ ಉಪಲಿಂಗವು ಭೀಮೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅದೂ ಕೂಡ ಸಹ್ಯಾದ್ರಿಯಲ್ಲೇ ಸ್ಥಿತವಾಗಿದೆ. ಮತ್ತು ಮಹಾನ್ ಬಲವನ್ನು ವೃದ್ಧಿಪಡಿಸುವುದಾಗಿದೆ. ನಾಗೇಶ್ವರ ಸಂಬಂಧೀ ಉಪಲಿಂಗದ ಹೆಸರೂ ಕೂಡ ಭೂತೇಶ್ವರನೆಂದೇ ಆಗಿದೆ. ಅದು ಮಲ್ಲಿಕಾ ಸರಸ್ವತಿಯ ತೀರದಲ್ಲಿ ಸ್ಥಿತವಾಗಿದ್ದು, ದರ್ಶನ ಮಾತ್ರದಿಂದ ಎಲ್ಲ ಪಾಪಗಳನ್ನು ಕಳೆಯುವುದು. ರಾಮೇಶ್ವರನಿಂದ ಪ್ರಕಟವಾದ ಉಪಲಿಂಗವನ್ನು ಗುಪ್ತೇಶ್ವರ ಮತ್ತು ಘುಶ್ಮೇಶ್ವರನಿಂದ ಪ್ರಕಟವಾದ ಉಪಲಿಂಗವನ್ನು ವ್ಯಾಘ್ರೇಶ್ವರ ಎಂದು ಹೇಳಲಾಗಿದೆ. ಬ್ರಾಹ್ಮಣರೇ! ಹೀಗೆ ನಾನು ಇಲ್ಲಿ ಜ್ಯೋತಿರ್ಲಿಂಗಗಳ ಉಪಲಿಂಗಗಳನ್ನು ಪರಿಚಯಿಸಿದೆ. ಇವು ದರ್ಶನ ಮಾತ್ರದಿಂದಲೇ ಪಾಪಹಾರೀ ಮತ್ತು ಸಂಪೂರ್ಣ ಅಭೀಷ್ಟಗಳನ್ನು ಕೊಡುತ್ತವೆ. ಮುನಿವರ್ಯರೇ! ಇವು ಮುಖ್ಯತೆಯನ್ನು ಪಡೆದ ಪ್ರಧಾನ ಶಿವಲಿಂಗಗಳೆಂದು ಹೇಳಲಾಗಿದೆ. ಇನ್ನು ಇತರ ಶಿವಲಿಂಗಗಳ ವರ್ಣನೆಯನ್ನು ಕೇಳು.

(ಅಧ್ಯಾಯ ೧)

❐ ❐ ❐

---

* ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಮ್ । ಉಜ್ಜಯಿನ್ಯಾಂ ಮಹಾಕಾಲಮೊಂಕಾರೇ ಪರಮೇಶ್ವರಮ್ ॥ ಕೇದಾರಂ ಹಿಮವತ್ಪೃಷ್ಠೇ ಡಾಕಿನ್ಯಾಂ ಭೀಮಶಂಕರಮ್ । ವಾರಣಸ್ಯಾಂ ಚ ವಿಶ್ವೇಶಂ ತ್ರ್ಯಂಬಕಂ ಗೌತಮೀ ತಟೇ ॥ ವೈದ್ಯನಾಥಂ ಚಿತಾಭೂಮೌ ನಾಗೇಶಂ ದಾರುಕಾವನೇ। ಸೇತುಬಂಧೇ ಚ ರಾಮೇಶಂ ಘುಶ್ಮೇಶಂ ತು ಶಿವಾಲಯೇ ॥ದ್ವಾದಶೈತಾನಿ ನಾಮಾನಿ ಪ್ರಾತರುತ್ಥಾಯ ಯಃ ಪಠೇತ್ । ಸರ್ವಪಾಪೈರ್ವಿನಿರ್ಮುಕ್ತಃ ಸರ್ವಸಿದ್ಧಿ ಫಲಂ ಲಭೇತ್ ॥

(ಶಿ - ಪು - ಕೋಟಿ ರು - ಸಂ - ೧/೨೧-೨೪)

ಸ ಗ್ರಾಹ್ಯಮೇಷಾಂ ಚ ನೈವೇದ್ಯಂ ಭೋಜನೀಯಂ ಪ್ರಯತ್ನತಃ । ತತ್ಕರ್ತುಂ ಸರ್ವಪಾಪಾನಿ ಭಸ್ಮಸಾದ್ಯಾಂತಿ ವೈ ಕ್ಷಣಾತ್ ॥

(ಶಿ - ಪು - ಕೋಟಿ - ರು - ಸಂ - ೧/೨೮)

ಕಾಶಿಯೇ ಮುಂತಾದ ಬೇರೆ-ಬೇರೆ ಲಿಂಗಗಳ ವರ್ಣನೆ ಹಾಗೂ ಅತ್ರೀಶ್ವರನ ಉತ್ಪತ್ತಿಯ ಪ್ರಸಂಗದಲ್ಲಿ ಗಂಗೆ ಮತ್ತು ಶಿವನು ಅತ್ರಿಯ ತಪೋವನದಲ್ಲಿ ನಿತ್ಯ ವಾಸಿಸುವ ಕಥೆ

ಸೂತಪುರಾಣಿಕರು ಹೇಳುತ್ತಾರೆ - ಮುನೀಶ್ವರರೇ! ಗಂಗಾತೀರದಲ್ಲಿ ಮುಕ್ತಿದಾಯಿನೀ ಕಾಶೀಪುರಿಯು ಪ್ರಸಿದ್ಧವಾಗಿದೆ. ಅದು ಭಗವಾನ್ ಶಿವನ ನಿವಾಸಸ್ಥಳವೆಂದು ತಿಳಿಯಲಾಗಿದೆ. ಅದನ್ನು ಶಿವಲಿಂಗಮಯವೆಂದೇ ತಿಳಿಯಬೇಕು. ಇಷ್ಟು ಹೇಳಿ ಸೂತಪುರಾಣಿಕರು ಕಾಶಿಯ ಅವಿಮುಕ್ತ ಕೃತ್ತಿವಾಸೇಶ್ವರ, ತಿಲಭಾಂಡೇಶ್ವರ, ದಶಾಶ್ವಮೇಧ ಮೊದಲಾದವುಗಳನ್ನು ಮತ್ತು ಗಂಗಾಸಾಗರ ಆದಿ ಸಂಗಮೇಶ್ವರ, ಭೂತೇಶ್ವರ, ನಾರೀಶ್ವರ, ವಟುಕೇಶ್ವರ, ಪೂರೇಶ್ವರ, ಸಿದ್ಧನಾಥೇಶ್ವರ, ದೂರೇಶ್ವರ, ಶೃಂಗೇಶ್ವರ, ವೈದ್ಯನಾಥ, ಜಪ್ಯೇಶ್ವರ, ಗೋಪೇಶ್ವರ, ರಂಗೇಶ್ವರ, ವಾಮೇಶ್ವರ, ನಾಗೇಶ, ಕಾಮೇಶ, ವಿಮಲೇಶ್ವರ, ಪ್ರಯಾಗದ ಬ್ರಹ್ಮೇಶ್ವರ,ಸೋಮೇಶ್ವರ, ಭಾರದ್ವಾಜೇಶ್ವರ, ಶೂಲಟಂಕೇಶ್ವರ, ಮಾಧವೇಶ ಹಾಗೂ ಅಯೋಧ್ಯೆಯ ನಾಗೇಶ ಆದಿ ಅನೇಕ ಪ್ರಸಿದ್ಧ ಶಿವಲಿಂಗಗಳನ್ನು ವರ್ಣಿಸಿ ಅತ್ರೀಶ್ವರನ ಕಥೆಯ ಪ್ರಸಂಗದಲ್ಲಿ ಅತ್ರಿಪತ್ನೀ ಅನಸೂಯೆಯ ಮೇಲೆ ಕೃಪೆಮಾಡಿ ಗಂಗೆಯು ಅಲ್ಲಿ ಆಗಮಿಸಿದನ್ನೂ ತಿಳಿಸಿದರು. ಅನಸೂಯೆಯು ಗಂಗೆಯಲ್ಲಿ ಸದಾ ಅಲ್ಲಿ ವಾಸಿಸಲು ಪ್ರಾರ್ಥಿಸಿದಳು.

ಆಗ ಗಂಗೆಯು ಹೇಳಿದಳು - ಅನಸೂಯೇ! ನೀನು ಒಂದು ವರ್ಷ ಮಾಡಿದ ಶಂಕರನ ಪೂಜೆಯ ಮತ್ತು ಪತಿಸೇವೆಯ ಫಲವನ್ನು ನನಗೆ ಕೊಟ್ಟರೆ, ನಾನು ದೇವತೆಗಳ ಉಪಕಾರವನ್ನು ಮಾಡಲಿಕ್ಕಾಗಿ ಇಲ್ಲಿ ಸದಾ ಸ್ಥಿತಳಾಗುವೆ. ಪತಿವ್ರತೆಯ ದರ್ಶನದಿಂದ ನನ್ನ ಮನಸ್ಸಿಗಾದ ಪ್ರಸನ್ನತೆಯು ಬೇರೆ ಯಾವ ಉಪಾಯದಿಂದಲೂ ಆಗುವುದಿಲ್ಲ. ಸತೀ ಅನಸೂಯೇ! ಇದನ್ನು ನಾನು ನಿಜವಾಗಿ ನಿನಗೆ ಹೇಳುತ್ತಿದ್ದೇನೆ. ಪತಿವ್ರತಾ ಸ್ತ್ರೀಯಳ ದರ್ಶನ ಮಾಡುವುದರಿಂದ ನನ್ನ ಪಾಪಗಳು ನಾಶವಾಗುತ್ತವೆ ಹಾಗೂ ನಾನು ವಿಶೇಷವಾಗಿ ಶುದ್ಧಳಾಗುತ್ತೇನೆ. ಏಕೆಂದರೆ, ಪತಿವ್ರತಾ ನಾರಿಯು ಪಾರ್ವತಿಯಂತೆ ಪವಿತ್ರಳಾಗಿದ್ದಾಳೆ. ಆದ್ದರಿಂದ ನೀನು ಜಗತ್ತಿನ ಕಲ್ಯಾಣಮಾಡಲು ಬಯಸುವೆಯಾದರೆ ಮತ್ತು ಲೋಕಹಿತಕ್ಕಾಗಿ ನಾನು ಕೇಳಿದುದನ್ನು ನನಗೆ ಕೊಡುವೆಯಾದರೆ ನಾನು ಅವಶ್ಯವಾಗಿ ಇಲ್ಲಿ ಸ್ಥಿರವಾಗಿ ವಾಸಿಸುವೆನು.

ಸೂತಪುರಾಣಿಕರು ಹೇಳುತ್ತಾರೆ - ಮುನಿಗಳೇ! ಗಂಗೆಯ ಈ ಮಾತನ್ನು ಕೇಳಿ ಪತಿವ್ರತೆ ಅನಸೂಯೆಯು ಒಂದು ವರ್ಷದ ಪುಣ್ಯವೆಲ್ಲವನ್ನು ಆಕೆಗೆ ಕೊಟ್ಟುಬಿಟ್ಟಳು. ಅನಸೂಯೆಯ ಪತಿವ್ರತಾ ಸಂಬಂಧೀ ಆ ಮಹಾನ್ ಕರ್ಮವನ್ನು ನೋಡಿ ಭಗವಾನ್ ಮಹಾದೇವನು ಪ್ರಸನ್ನನಾಗಿ, ಪಾರ್ಥಿವಲಿಂಗದಿಂದ ಆಗಲೇ ಪ್ರಕಟನಾಗಿ ಸಾಕ್ಷಾತ್ ದರ್ಶನ ನೀಡಿದನು.

ಶಂಭುವು ಹೇಳಿದನು - ಸಾಧ್ವಿ ಅನಸೂಯೇ! ನಿನ್ನ ಈ ಕರ್ಮವನ್ನು ನೋಡಿ ನಾನು ಬಹಳ ಪ್ರಸನ್ನನಾಗಿರುವೆನು. ಪ್ರಿಯಪತಿವ್ರತೆಯೇ! ವರವನ್ನು ಕೇಳು. ಏಕೆಂದರೆ, ನೀನು ನನಗೆ ಅತ್ಯಂತ ಪ್ರಿಯಳಾಗಿರುವೆ.

ಆಗ ಆ ಪತಿ-ಪತ್ನಿಯರು ಅದ್ಭುತ ಸುಂದರ ಆಕೃತಿಯುಳ್ಳ ಪಂಚಮುಖದಿಂದ ಕೂಡಿದ ಭಗವಾನ್ ಶಿವನು ಅಲ್ಲಿ ಪ್ರಕಟವಾದುದನ್ನು ನೋಡಿ ತುಂಬಾ ವಿಸ್ಮಿತರಾದರು. ಕೈಜೋಡಿಸಿ ನಮಸ್ಕರಿಸಿ, ಸ್ತುತಿಸುತ್ತಾ ಬಹಳ ಆದರಭಾವದಿಂದ ಭಗವಾನ್ ಶಂಕರನನ್ನು ಪೂಜಿಸಿದರು. ಮತ್ತೆ ಆ ಲೋಕಕಲ್ಯಾಣಕಾರೀ ಶಿವನಲ್ಲಿ ಇಂತೆಂದರು -

ಬ್ರಾಹ್ಮಣದಂಪತಿ ಹೇಳಿದರು - ದೇವೇಶ್ವರನೇ! ನೀನು ಪ್ರಸನ್ನನಾಗಿದ್ದರೆ ಮತ್ತು ಜಗದಂಬೆ ಗಂಗೆಯೂ ಪ್ರಸನ್ನಳಾಗಿದ್ದರೆ ನೀವು ಈ ತಪೋವನದಲ್ಲಿ ವಾಸಿಸಿರಿ ಹಾಗೂ ಸಮಸ್ತ ಜನರಿಗಾಗಿ ಸುಖದಾಯಕರಾಗಿರಿ.

ಆಗ ಗಂಗೆ ಮತ್ತು ಶಿವ ಇಬ್ಬರೂ ಪ್ರಸನ್ನರಾಗಿ ಆ ಋಷಿಶ್ರೇಷ್ಠರ ಇರುವ ಸ್ಥಾನದಲ್ಲಿ ಪ್ರತಿಷ್ಠಿತರಾದರು. ಇದೇ ಶಿವನ ಹೆಸರು ಅಲ್ಲಿ ಅತ್ರೀಶ್ವರನೆಂದಾಯಿತು.

(ಅಧ್ಯಾಯ ೨-೪)

❐ ❐ ❐

ಋಷಿಕೆಯ ಮೇಲೆ ಭಗವಾನ್ ಶಿವನ ಕೃಪೆ, ಒಬ್ಬ ಅಸುರನಿಂದ ಆಕೆಯ ಧರ್ಮದ ರಕ್ಷಣೆ ಮಾಡಿ ಆಕೆಯ ಆಶ್ರಮದಲ್ಲಿ 'ನಂದೀಕೇಶ' ಹೆಸರಿನಿಂದ ವಾಸಿಸುವುದು ಮತ್ತು ವರ್ಷದಲ್ಲಿ ಒಂದು ದಿನ ಗಂಗೆಯು ಅಲ್ಲಿಗೆ ಬರುವುದು

ಸೂತಪುರಾಣಿಕರು ಅನೇಕ ಶಿವಲಿಂಗಗಳ ಕಥೆಗಳನ್ನು ತಿಳಿಸಿದಾಗ ಋಷಿಗಳು ಕೇಳಿದರು – ಮಹಾಮತಿಗಳಾದ ಸೂತರೇ ! ವೈಶಾಖ ಶುಕ್ಲಸಪ್ತಮಿಯ ದಿನ ಗಂಗೆಯು ನರ್ಮದೆಗೆ ಏಕೆ ಬಂದಳು ? ಇದನ್ನು ವಿಶೇಷವಾಗಿ ವರ್ಣಿಸಿರಿ. ಅಲ್ಲಿ ಮಹಾದೇವನ ಹೆಸರು ನಂದಿಕೇಶ್ವರ ಎಂದು ಹೇಗಾಯಿತು ? ಇದನ್ನೂ ಕೂಡ ಪ್ರಸನ್ನತೆಯಿಂದ ತಿಳಿಸಿರಿ.

ಸೂತಪುರಾಣಿಕರು ಹೇಳಿದರು – ಮಹರ್ಷಿಗಳೇ ! ಋಷಿಕಾ ಎಂಬ ಓರ್ವ ಬ್ರಾಹ್ಮಣಿಯಿದ್ದಳು. ಅವಳು ಯಾವುದೋ ಬ್ರಾಹ್ಮಣನ ಪುತ್ರಿಯಾಗಿದ್ದು ಒಬ್ಬ ಬ್ರಾಹ್ಮಣನನ್ನು ವಿಧಿವತ್ತಾಗಿ ವಿವಾಹವಾಗಿದ್ದಳು. ವಿಪ್ರರೇ ! ಆ ದ್ವಿಜಪತ್ನಿಯು ಉತ್ತಮ ವ್ರತವನ್ನು ಪಾಲಿಸುವವಳಾಗಿದ್ದರೂ ತನ್ನ ಹಿಂದಿನ ಜನ್ಮದ ಯಾವುದೇ ಅಶುಭ ಕರ್ಮದ ಪ್ರಭಾವದಿಂದ 'ಬಾಲವಿಧವೆ'ಯಾಗಿದ್ದಳು. ಆಗ ಆ ಬ್ರಾಹ್ಮಣ ಪತ್ನಿಯು ಬ್ರಹ್ಮಚರ್ಯ ಪಾಲನೆಯಲ್ಲಿ ತತ್ಪರಳಾಗಿ ಪಾರ್ಥಿವಪೂಜಾಪೂರ್ವಕ ಅತ್ಯಂತ ಕಠೋರ ತಪಸ್ಸನ್ನು ಮಾಡತೊಡಗಿದಳು. ಆಗ ಸಂದರ್ಭವನ್ನು ನೋಡಿ ಮೂಢನೆಂದು ಪ್ರಸಿದ್ಧನಾದ ಒಬ್ಬ ದುಷ್ಟನೂ, ಬಲಿಷ್ಠನೂ, ಮಾಯಾವಿಯೂ ಆದ ಅಸುರನು ಕಾಮಪೀಡಿತನಾಗಿ ಅಲ್ಲಿಗೆ ಬಂದನು. ಆ ಅತ್ಯಂತ ಸುಂದರ ಕಾಮಿನಿಯು ತಪಸ್ಸನ್ನು ಮಾಡುತ್ತಿರುವುದನ್ನು ನೋಡಿ ಆ ಅಸುರನು ಆಕೆಯನ್ನು ಅನೇಕ ವಿಧದ ಪ್ರಲೋಭನೆಗಳನ್ನು ತೋರಿಸುತ್ತಾ ಆಕೆಯೊಂದಿಗೆ ಸಂಭೋಗವನ್ನು ಯಾಚಿಸತೊಡಗಿದನು. ಮುನೀಶ್ವರರೇ ! ಆದರೆ ಉತ್ತಮ ವ್ರತವನ್ನು ಪಾಲಿಸುವ, ಶಿವನ ಧ್ಯಾನದಲ್ಲಿ ತತ್ಪರಳಾಗಿ ಇರುವ ಆ ಸಾಧ್ವಿನಾರಿಯು ಕಾಮಭಾವದಿಂದ ಅವನನ್ನು ನೋಡಲಿಲ್ಲ. ತಪಸ್ಸಿನಲ್ಲಿ ತೊಡಗಿರುವ ಆ ಬ್ರಾಹ್ಮಣಿಯು ಆ ಅಸುರನನ್ನು ಸಮ್ಮಾನಿಸಲಿಲ್ಲ. ಏಕೆಂದರೆ, ಅವಳು ಅತ್ಯಂತ ತಪೋನಿಷ್ಠ ಮತ್ತು ಶಿವಧ್ಯಾನ ಪರಾಯಣಳಾಗಿದ್ದಳು. ಆ ಕೃಶಾಂಗಿ ಯುವತಿಯಿಂದ ತಿರಸ್ಕೃತನಾದ ಆ ದೈತ್ಯರಾಜ ಮೂಢನು ಆಕೆಯ ಮೇಲೆ ಕ್ರೋಧವನ್ನು ಪ್ರಕಟಿಸುತ್ತಾ, ತನ್ನ ವಿಕಟರೂಪವನ್ನು ಆಕೆಗೆ ತೋರಿದನು. ಮತ್ತೆ ಆ ದುಷ್ಟಾತ್ಮನು ಭಯವುಂಟುಮಾಡುವ ದುರ್ವಚನಗಳನ್ನಾಡುತ್ತಾ ಆ ಬ್ರಾಹ್ಮಣಪತ್ನಿಗೆ ಪದೇ-ಪದೇ ತೊಂದರೆ ಕೊಡಲು ತೊಡಗಿದನು. ಆಗ ಆಕೆಯು ಅವನ ಭಯದಿಂದ ಗಡ-ಗಡನೆ ನಡುಗಿದಳು ಮತ್ತು ಅನೇಕ ಬಾರಿ ಭಕ್ತಿಯಿಂದ ಶಿವನೇ-ಶಿವನೇ ಎಂದು ಕರೆಯತೊಡಗಿದಳು. ಆ ತನ್ವಂಗಿ ದ್ವಿಜಪತ್ನಿಯು ಭಗವಾನ್ ಶಿವನನ್ನು ಪೂರ್ಣವಾಗಿ ಆಶ್ರಯಿಸಿದ್ದಳು. ಶಿವನಾಮವನ್ನು ಜಪಿಸುವ ಆ ನಾರಿಯು ಅತ್ಯಂತ ವಿಹ್ವಲಳಾಗಿ ತನ್ನ ಧರ್ಮದ ರಕ್ಷಣೆಗಾಗಿ ಭಗವಾನ್ ಶಿವನಿಗೆ ಶರಣಾದಳು.

ಆಗ ಶರಣಾಗತಳ ರಕ್ಷಣೆ, ಸದಾಚಾರದ ಪ್ರತಿಷ್ಠೆ ಹಾಗೂ ಆ ಬ್ರಾಹ್ಮಣಿಗೆ ಆನಂದವನ್ನು ಕರುಣಿಸಲಿಕ್ಕಾಗಿ ಭಗವಾನ್ ಶಿವನು ಅಲ್ಲಿ ಪ್ರಕಟನಾದನು. ಭಕ್ತವತ್ಸಲ ಪರಮೇಶ್ವರ ಶಂಕರನು ಆ ಕಾಮವಿಹ್ವಲ ದೈತ್ಯನಾದ ಮೂಢನನ್ನು ತತ್‌ಕ್ಷಣ ಭಸ್ಮಮಾಡಿಬಿಟ್ಟನು. ಬ್ರಾಹ್ಮಣಿಯ ಕಡೆಗೆ ಕೃಪಾದೃಷ್ಟಿಯನ್ನು ಬೀರಿ ಭಕ್ತಳ ರಕ್ಷಣೆಗಾಗಿ ದತ್ತಚಿತ್ತನಾಗಿ ಹೇಳಿದನು – 'ಬ್ರಾಹ್ಮಣಿಯೇ ! ವರವನ್ನು ಕೇಳು', ಮಹೇಶ್ವರನ ಈ ಮಾತನ್ನು ಕೇಳಿ ಆ ಸಾಧ್ವಿ ಬ್ರಾಹ್ಮಣಿ ಪತ್ನಿಯು ಶಿವನ ಆ ಆನಂದಜನಕ ಮಂಗಲಮಯ ಸ್ವರೂಪವನ್ನು ದರ್ಶಿಸಿದಳು. ಎಲ್ಲರಿಗೆ ಸುಖವನ್ನು ಕೊಡುವ ಪರಮೇಶ್ವರ ಶಂಭುವಿಗೆ ಪ್ರಣಾಮಮಾಡಿ ಶುದ್ಧ ಅಂತಃಕರಣವುಳ್ಳ ಆ ಸಾಧ್ವಿಯು ಕೈ ಮುಗಿದು, ತಲೆಯನ್ನು ತಗ್ಗಿಸಿ, ಸ್ತುತಿಸತೊಡಗಿದಳು.

ಋಷಿಕೆಯು ಹೇಳಿದಳು–ದೇವದೇವ ಮಹಾದೇವನೇ ! ಶರಣಾಗತ ವತ್ಸಲನೇ ! ನೀನು ದೀನ ಬಂಧುವಾಗಿರುವೆ. ಭಕ್ತರನ್ನು ಸದಾ ರಕ್ಷಿಸುವ ಈಶ್ವರನಾಗಿರುವೆ. ನೀನು ಮೂಢನೆಂಬ ಅಸುರನನ್ನು ಕೊಂದು ನನ್ನ ಧರ್ಮವನ್ನು ಕಾಪಾಡಿದೆ. ಹೀಗೆ ಮಾಡಿ ನೀನು ಸಮಸ್ತ ಜಗತ್ತನ್ನು ರಕ್ಷಿಸಿರುವೆ. ಈಗ ನೀನು ನನಗೆ ನಿನ್ನ ಚರಣಾಗಳಲ್ಲಿ ಪರಮೋತ್ತಮ ಅನನ್ಯ ಭಕ್ತಿಯನ್ನು ಕರುಣಿಸು, ಸ್ವಾಮಿ ! ಇದೇ ನನ್ನ ಪಾಲಿಗೆ ವರವಾಗಿದೆ. ಇದಕ್ಕಿಂತ ಹೆಚ್ಚಿನದು ಏನಿರಬಲ್ಲದು ? ಪ್ರಭೋ ! ಮಹೇಶ್ವರನೇ ! ನನ್ನ ಇನ್ನೊಂದು ಪ್ರಾರ್ಥನೆಯನ್ನೂ ಆಲಿಸು. ನೀನು ಜನರ ಉಪಕಾರಕ್ಕಾಗಿ ಇಲ್ಲಿ ಸದಾಕಾಲ ಸ್ಥಿತನಾಗು.

ಮಹಾದೇವನು ಹೇಳಿದನು – ಋಷಿಕೆಯೇ ! ನೀನು ಸದಾಚಾರಿಣಿಯಾಗಿದ್ದು ವಿಶೇಷವಾಗಿ ನನ್ನಲ್ಲಿ

ಭಕ್ತಿಯುಳ್ಳವಳಾಗಿರುವೆ. ನೀನು ನನ್ನಲ್ಲಿ ಕೇಳಿದ ಎಲ್ಲ ವರಗಳನ್ನು ಕೊಟ್ಟುಬಿಟ್ಟಿರುವೆನು.

ಬ್ರಾಹ್ಮಣರೇ! ಇಷ್ಟರಲ್ಲಿ ಅಲ್ಲಿ ಭಗವಾನ್ ಶಿವನು ಆವಿರ್ಭವಿಸಿದನ್ನು ತಿಳಿದು ಶ್ರೀವಿಷ್ಣು ಮತ್ತು ಬ್ರಹ್ಮಾದಿ ದೇವತೆಗಳು ಹರ್ಷತುಂಬಿ ಅಲ್ಲಿಗೆ ಬಂದು ಅತ್ಯಂತ ಪ್ರೇಮದಿಂದ ಶಿವನಿಗೆ ನಮಸ್ಕಾರ ಮಾಡಿ, ಅವರೆಲ್ಲರೂ ಶಿವನನ್ನು ಚೆನ್ನಾಗಿ ಪೂಜಿಸಿದರು. ಮತ್ತೆ ಶುದ್ಧ ಹೃದಯದಿಂದ ಕೈಮುಗಿದು, ನತಮಸ್ತಕರಾಗಿ ಅವನನ್ನು ಸ್ತುತಿಸಿದರು. ಆಗಲೇ ಸಾಧ್ವೀ ದೇವನದೀ ಗಂಗೆಯು ಆ ಋಷಿಕೆಯ ಭಾಗ್ಯವನ್ನು ಕೊಂಡಾಡುತ್ತಾ ಪ್ರಸನ್ನ ಚಿತ್ತದಿಂದ ಆಕೆಯಲ್ಲಿ ಇಂತೆಂದಳು.

ಗಂಗೆಯು ಹೇಳಿದಳು - ಋಷಿಕೆಯೇ! ವೈಶಾಖ ಮಾಸದಲ್ಲಿ ಒಂದು ದಿನ ನಾನು ಇಲ್ಲಿರಲು ನೀನು ನನಗೆ ವಚನವನ್ನು ಕೊಡಬೇಕು. ಆ ದಿನ ನಾನು ಈ ತೀರ್ಥದಲ್ಲಿ ವಾಸಿಸಲು ಬಯಸುತ್ತಿರುವೆನು.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ! ಗಂಗೆಯ ಮಾತನ್ನು ಕೇಳಿ ಉತ್ತಮ ವ್ರತವನ್ನು ಪಾಲಿಸುವ ಸತೀ ಸಾಧ್ವಿ ಋಷಿಕೆಯು ಜನರ ಹಿತಕ್ಕಾಗಿ ಸಂತೋಷದಿಂದ - 'ಬಹಳ ಒಳ್ಳೆಯದು, ಹಾಗೆಯೇ ಆಗಲಿ' ಎಂದು ಹೇಳಿದಳು. ಭಗವಾನ್ ಶಿವನು ಋಷಿಕೆಗೆ ಆನಂದವನ್ನು ಕರುಣಿಸಲು ಅತ್ಯಂತ ಪ್ರಸನ್ನನಾಗಿ ಆ ಪಾರ್ಥಿವ ಲಿಂಗದಲ್ಲಿ ತನ್ನ ಪೂರ್ಣ ಅಂಶದಿಂದ ವಿಲೀನನಾದನು. ಇದನ್ನು ನೋಡಿ ದೇವತೆಗಳೆಲ್ಲರೂ ಆನಂದಿತರಾಗಿ ಶಿವನ ಹಾಗೂ ಋಷಿಕೆಯನ್ನು ಪ್ರಶಂಸಿಸಿ, ತಮ್ಮ-ತಮ್ಮ ಧಾಮಗಳಿಗೆ ಹೊರಟುಹೋದರು. ಅಂದಿನಿಂದ ನರ್ಮದೆಯ ಆ ತೀರ್ಥವು ಪಾವನವಾಯಿತು. ಸಂಪೂರ್ಣ ಪಾಪಗಳನ್ನು ನಾಶಮಾಡುವ ಶಿವನು ಅಲ್ಲಿ ನಂದಿಕೇಶ ಎಂಬ ಹೆಸರಿನಿಂದ ವಿಖ್ಯಾತನಾದನು. ಗಂಗೆಯೂ ಕೂಡ ಪ್ರತಿವರ್ಷ ವೈಶಾಖಮಾಸದ ಶುಕ್ಲಸಪ್ತಮಿಯ ದಿನ ಶುಭದ ಇಚ್ಛೆಯಿಂದ ಮನುಷ್ಯರಿಂದ ಗ್ರಹಿಸಿದ ತನ್ನ ಪಾಪಗಳನ್ನು ತೊಳೆದುಕೊಳ್ಳಲು ಅಲ್ಲಿಗೆ ಹೋಗುತ್ತಾಳೆ.

(ಅಧ್ಯಾಯ ೫-೭)

❐ ❐ ❐

ಪ್ರಥಮ ಜ್ಯೋತಿರ್ಲಿಂಗ ಸೋಮನಾಥನ ಪ್ರಾದುರ್ಭಾವದ ಕಥೆ ಮತ್ತು ಅದರ ಮಹಿಮೆ

ಆನಂತರ ಕಪಿಲಾ ನಗರದ ಕಾಲೇಶ್ವರ, ರಾಮೇಶ್ವರ ಮುಂತಾದವುಗಳ ಮಹಿಮೆಯನ್ನು ತಿಳಿಸುತ್ತಾ ಸೂತ ಪುರಾಣಿಕರು ಸಮುದ್ರ ತೀರದಲ್ಲಿ ಸ್ಥಿತ ಗೋಕರ್ಣಕ್ಷೇತ್ರದ ಶಿವಲಿಂಗಗಳ ಮಹಿಮೆಗಳನ್ನು ವರ್ಣಿಸಿದರು. ಮತ್ತೆ ಮಹಾಬಲವೆಂಬ ಶಿವಲಿಂಗದ ಅದ್ಭುತ ಮಾಹಾತ್ಮ್ಯವನ್ನು ತಿಳಿಸಿ, ಇತರ ಅನೇಕ ಶಿವಲಿಂಗಗಳ ವಿಚಿತ್ರ ಮಾಹಾತ್ಮ್ಯ-ಕಥೆಗಳನ್ನು ವರ್ಣಿಸಿ, ಬಳಿಕ ಋಷಿಗಳು ಕೇಳಿದಾಗ ಅವರು ಜ್ಯೋತಿರ್ಲಿಂಗಗಳನ್ನು ವರ್ಣಿಸತೊಡಗಿದರು.

ಸೂತಪುರಾಣಿಕರು ಹೇಳಿದರು - ಬ್ರಾಹ್ಮಣರೇ! ನಾನು ಸದ್ಗುರುಗಳಿಂದ ಕೇಳಿದ ಜ್ಯೋತಿರ್ಲಿಂಗಗಳ ಮಾಹಾತ್ಮ್ಯವನ್ನು ಹಾಗೂ ಅವುಗಳ ಪ್ರಾಕಟ್ಯದ ಪ್ರಸಂಗವನ್ನು ನನ್ನ ಬುದ್ಧಿಗನುಸಾರವಾಗಿ ಸಂಕ್ಷೇಪವಾಗಿ ತಿಳಿಸುವೆನು. ನೀವೆಲ್ಲರೂ ಗಮನವಿಟ್ಟು ಕೇಳಿರಿ. ಮುನಿಗಳೇ! ಜ್ಯೋತಿರ್ಲಿಂಗಗಳಲ್ಲಿ ಮೊಟ್ಟಮೊದಲಿಗೆ ಸೋಮನಾಥನ ಹೆಸರು ಬರುತ್ತದೆ. ಆದ್ದರಿಂದ ಮೊದಲಿಗೆ ಅವನ ಮಾಹಾತ್ಮ್ಯವನ್ನು ದತ್ತಚಿತ್ತರಾಗಿ ಕೇಳಿರಿ. ಮುನೀಶ್ವರರೇ! ಮಹಾನುಭಾವನಾದ ದಕ್ಷಪ್ರಜಾಪತಿಯು ಅಶ್ವಿನಿಯೇ ಆದಿ ಇಪ್ಪತ್ತೇಳು ತನ್ನ ಕನ್ಯೆಯರನ್ನು ಚಂದ್ರನಿಗೆ ವಿವಾಹಮಾಡಿಕೊಟ್ಟಿದ್ದನು. ಚಂದ್ರನನ್ನು ಪತಿಯಾಗಿ ಪಡೆದ ಆ ದಕ್ಷಕನ್ಯೆಯರು ವಿಶೇಷವಾಗಿ ಶೋಭಿಸಿದರು. ಚಂದ್ರನೂ ಅವರನ್ನು ಪತ್ನಿಯರನ್ನಾಗಿ ಪಡೆದು ನಿರಂತರ ಆನಂದವಾಗಿದ್ದನು. ಆ ಎಲ್ಲ ಪತ್ನಿಯರಲ್ಲಿಯೂ ರೋಹಿಣಿ ಎಂಬ ಏಕಮಾತ್ರ ಪತ್ನಿಯೇ ಚಂದ್ರನಿಗೆ ಪ್ರಿಯಳಾಗಿರುವಂತೆ ಇತರರು ಪ್ರೀತಿಗೆ ಪಾತ್ರರಾಗಲಿಲ್ಲ. ಇದರಿಂದ ಇತರ ಪತ್ನಿಯರಿಗೆ ಭಾರೀ ದುಃಖವಾಯಿತು. ಅವರೆಲ್ಲರೂ ತಂದೆಯ ಬಳಿಗೆ ಹೋಗಿ ತಮ್ಮ ದುಃಖವನ್ನು ಅವನಲ್ಲಿ ನಿವೇದಿಸಿಕೊಂಡರು. ದ್ವಿಜರೇ! ಅದೆಲ್ಲವನ್ನು ಕೇಳಿ ದಕ್ಷನೂ ದುಃಖಿತನಾಗಿ ಚಂದ್ರನ ಬಳಿಗೆ ಹೋಗಿ ಶಾಂತಿಯಿಂದ ಇಂತೆಂದನು.

ದಕ್ಷನು ಹೇಳಿದನು - ಕಲಾನಿಧಿಯೇ! ನೀನು ನಿರ್ಮಲ ಕುಲದಲ್ಲಿ ಹುಟ್ಟಿರುವೆ. ನಿನ್ನ ಆಶ್ರಯದಲ್ಲಿರುವ ಎಲ್ಲ ಪತ್ನಿಯರಲ್ಲಿ ಹೆಚ್ಚು-ಕಡಿಮೆ ಭಾವ ನಿನ್ನ ಮನಸ್ಸಿನಲ್ಲೇಕೆ ಇದೆ? ನೀನು ಕೆಲವರನ್ನು ಹೆಚ್ಚು ಪ್ರೀತಿಸಿ ಕೆಲವರನ್ನು ಏಕೆ ಕಡೆಗಣಿಸಿರುವೆ. ಇಷ್ಟರವರೆಗಾದುದು ಆಗಿಹೋಯಿತು. ಇನ್ನು ಮುಂದೆ ಎಂದಿಗೂ ಇಂತಹ ವಿಷಮತೆಯಿಂದ ಕೂಡಿದ ವ್ಯವಹಾರ ನೀನು ಮಾಡಬಾರದು. ಏಕೆಂದರೆ, ಅದು ನರಕವನ್ನು ಕೊಡುವುದೆಂದು ತಿಳಿಸಲಾಗಿದೆ.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ!

ತನ್ನ ಅಳಿಯನಾದ ಚಂದ್ರನಿಗೆ ಹೀಗೆ ತಿಳಿಸಿ ಹೇಳಿ ದಕ್ಷ ಪ್ರಜಾಪತಿಯು ತನ್ನ ಮನೆಗೆ ತೆರಳಿದನು. ಇನ್ನು ಮುಂದೆ ಚಂದ್ರನು ಹೀಗೆ ಮಾಡಲಾರನೆಂಬ ನಿಶ್ಚಯ ಅವನಿಗಾಯಿತು. ಆದರೆ ಚಂದ್ರನು ಪ್ರಬಲ ಭಾವೀ ವಿಧಿಗೆ ವಶನಾಗಿ ಅವನ ಮಾತನ್ನು ನಡೆಸಲಿಲ್ಲ. ಅವನು ರೋಹಿಣಿಯಲ್ಲಿ ಇನ್ನು ಹೆಚ್ಚು ಆಸಕ್ತನಾಗಿ, ಇತರ ಯಾವ ಪತ್ನಿಯನ್ನು ಆದರಿಸುತ್ತಿರಲಿಲ್ಲ. ಇದನ್ನು ತಿಳಿದ ದಕ್ಷನಿಗೆ ದುಃಖಿವಾಗಿ ಮತ್ತೆ ಸ್ವತಃ ಬಂದು ಚಂದ್ರನಿಗೆ ಉತ್ತಮ ನೀತಿಯನ್ನು ತಿಳಿಸಿ, ನ್ಯಾಯೋಚಿತ ವರ್ತನೆಗಾಗಿ ಪ್ರಾರ್ಥಿಸತೊಡಗಿದನು.

ದಕ್ಷನು ಹೇಳಿದನು – ಚಂದ್ರನೇ ! ನಾನು ಮೊದಲು ಅನೇಕಬಾರಿ ನಿನ್ನಲ್ಲಿ ಪ್ರಾರ್ಥಿಸಿಕೊಂಡಿದ್ದೆ. ಹೀಗಿದ್ದರೂ ನೀನು ನನ್ನ ಮಾತನ್ನು ಮನ್ನಿಸಲಿಲ್ಲ. ಅದಕ್ಕಾಗಿ 'ನಿನಗೆ ಕ್ಷಯರೋಗ ಉಂಟಾಗಲಿ' ಎಂದು ಇಂದು ಶಾಪವನ್ನು ಕೊಡುತ್ತಿರುವೆನು.

ಸೂತಪುರಾಣಿಕರು ಹೇಳುತ್ತಾರೆ – ದಕ್ಷನು ಇಷ್ಟು ಹೇಳುತ್ತಲೇ ತತ್‌ಕ್ಷಣ ಚಂದ್ರನು ಕ್ಷಯರೋಗದಿಂದ ಗ್ರಸ್ತನಾದನು. ಅವನು ಕ್ಷೀಣನಾಗುತ್ತಲೇ ಆಗ ಎಲ್ಲೆಡೆ ಹಾಹಾಕಾರವೆದ್ದಿತು. ಎಲ್ಲ ದೇವತೆಗಳು ಮತ್ತು ಮಹರ್ಷಿಗಳು ಅಯ್ಯೋ ! ಶಿವ ಶಿವಾ ! ಈಗ ಚಂದ್ರನು ಆರೋಗ್ಯವಂತನು ಹೇಗಾಗಬಹುದು ? ಎಂದು ಹೇಳತೊಡಗಿದರು. ಮುನಿಗಳೇ ! ಹೀಗೆ ದುಃಖಿತರಾದ ಅವರೆಲ್ಲರೂ ವಿಹ್ವಲರಾದರು. ಚಂದ್ರನು ಇಂದ್ರನೇ ಆದಿ ಎಲ್ಲ ದೇವತೆಗಳಲ್ಲಿ ಹಾಗೂ ಋಷಿಗಳಲ್ಲಿ ತನ್ನ ಸ್ಥಿತಿಯನ್ನು ಸೂಚಿಸಿದನು. ಆಗ ಇಂದ್ರಾದಿದೇವತೆಗಳು ಹಾಗೂ ವಸಿಷ್ಠಾದಿ ಋಷಿಗಳು ಬ್ರಹ್ಮದೇವರಿಗೆ ಶರಣಾದರು.

ಅವರ ಮಾತನ್ನು ಕೇಳಿ ಬ್ರಹ್ಮದೇವರು ಹೇಳಿದರು – ದೇವತೆಗಳಿರಾ ! ಆದದ್ದಾಗಿಹೋಯಿತು. ಈಗ ಅದನ್ನು ಬದಲಿಸಲಾಗುವುದಿಲ್ಲ. ಆದ್ದರಿಂದ ಅದರ ನಿವಾರಣೆಗಾಗಿ ನಾನು ನಿಮಗೆ ಒಂದು ಉತ್ತಮ ಉಪಾಯವನ್ನು ತಿಳಿಸುತ್ತೇನೆ. ಅದರದಿಂದ ಕೇಳಿರಿ. ಚಂದ್ರನು ದೇವತೆಗಳೊಂದಿಗೆ ಪ್ರಭಾಸ ಎಂಬ ಶುಭ ಕ್ಷೇತ್ರಕ್ಕೆ ಹೋಗಿ, ಅಲ್ಲಿ ವಿಧಿವತ್ತಾಗಿ ಮೃತ್ಯುಂಜಯ ಮಂತ್ರದ ಅನುಷ್ಠಾನಮಾಡಲಿ. ತನ್ನೆದುರಿಗೆ ಶಿವಲಿಂಗವನ್ನು ಸ್ಥಾಪಿಸಿ ಚಂದ್ರನು ನಿತ್ಯ ತಪಸ್ಸು ಮಾಡಲಿ. ಇದರಿಂದ ಪ್ರಸನ್ನನಾಗಿ ಶಿವನು ಅವನ ಕ್ಷಯರೋಗವನ್ನು ಕಳೆಯುವನು.

ಆಗ ದೇವತೆಗಳೂ, ಋಷಿಗಳೂ ಹೇಳಿದಂತೆ, ಬ್ರಹ್ಮದೇವರ ಆಜ್ಞೆಯಂತೆ ಚಂದ್ರನು ಅಲ್ಲಿ ಆರು ತಿಂಗಳತನಕ ನಿರಂತರ ತಪಸ್ಸನ್ನು ಮಾಡಿದನು. ಮೃತ್ಯುಂಜಯ ಮಂತ್ರದಿಂದ ಭಗವಾನ್ ವೃಷಭ ಧ್ವಜನನ್ನು ಪೂಜಿಸಿದನು. ಹತ್ತುಕೋಟಿ ಮಂತ್ರದ ಜಪ ಮತ್ತು ಮೃತ್ಯುಂಜಯನನ್ನು ಧ್ಯಾನಿಸುತ್ತಾ ಚಂದ್ರನು ಅಲ್ಲಿ ಸ್ಥಿರಚಿತ್ತನಾಗಿ ನಿಂತೇ ಇದ್ದನು. ಅವನ ತಪಸ್ಸಿನಿಂದ ಭಗವಾನ್ ಶಂಕರನು ಪ್ರಸನ್ನನಾಗಿ ತನ್ನ ಭಕ್ತನಾದ ಚಂದ್ರನಲ್ಲಿ ಇಂತೆಂದನು.

ಶಂಕರನು ಹೇಳಿದನು – ಚಂದ್ರನೇ ! ನಿನ್ನ ಕಲ್ಯಾಣವಾಗಲೀ. ನಿನ್ನ ಮನಸ್ಸಿನಲ್ಲಿರುವ ಅಭೀಷ್ಟವರವನ್ನು ಕೇಳು. ನಾನು ಪ್ರಸನ್ನನಾಗಿರುವೆನು. ನಿನಗೆ ಎಲ್ಲ ಉತ್ತಮ ವರಗಳನ್ನು ಕೊಡುವೆನು.

ಚಂದ್ರನು ಹೇಳಿದನು – ದೇವೇಶ್ವರನೇ ! ನೀನು ಪ್ರಸನ್ನನಾಗಿದ್ದರೆ ನನಗೆ ಏನು ತಾನೆ ಅಸಾಧ್ಯವಾಗಬಲ್ಲದು ? ಆದರೂ ಪ್ರಭೋ ! ಶಂಕರನೇ ! ನೀನು ನನ್ನ ಶರೀರದ ಕ್ಷಯರೋಗವನ್ನು ನಿವಾರಿಸು. ನನ್ನಿಂದ ಆದ ಅಪರಾಧವನ್ನು ಕ್ಷಮಿಸಿಬಿಡು.

ಶಿವನು ಹೇಳಿದನು – ಚಂದ್ರನೇ ! ಒಂದು ಪಕ್ಷದಲ್ಲಿ ಪ್ರತಿದಿನವೂ ನಿನ್ನ ಕಲೆಯು ಕ್ಷೀಣಿಸುವುದು ಮತ್ತು ಇನ್ನೊಂದು ಪಕ್ಷದಲ್ಲಿ ಪುನಃ ಅದು ನಿರಂತರ ಬೆಳೆಯುತ್ತಿರುವುದು.

ಅನಂತರ ಚಂದ್ರನು ಭಕ್ತಿಭಾವದಿಂದ ಭಗವಾನ್ ಶಂಕರನನ್ನು ಸ್ತುತಿಸಿದನು. ಇದರಿಂದ ಮೊದಲು ನಿರಾಕಾರನಾಗಿದ್ದರೂ ಭಗವಾನ್ ಶಿವನು ಮತ್ತೆ ಸಾಕಾರನಾದನು. ದೇವತೆಗಳ ಮೇಲೆ ಪ್ರಸನ್ನನಾಗಿ ಆ ಕ್ಷೇತ್ರದ ಮಾಹಾತ್ಮ್ಯವನ್ನು ಹೆಚ್ಚಿಸಲು ಹಾಗೂ ಚಂದ್ರನ ಕೀರ್ತಿಯನ್ನು ವಿಸ್ತರಿಸಲಿಕ್ಕಾಗಿ ಭಗವಾನ್ ಶಂಕರನು ಅವನ ಹೆಸರಿನಂತೆ ಅಲ್ಲಿ ಸೋಮೇಶ್ವರ ಎಂಬ ಹೆಸರಿನಿಂದ ನೆಲೆಸಿದನು. ಹಾಗೂ ಸೋಮನಾಥನೆಂಬ ಹೆಸರಿನಿಂದ ಮೂರೂ ಲೋಕದಲ್ಲಿ ವಿಖ್ಯಾತನಾದನು. ಬ್ರಾಹ್ಮಣರೇ ! ಸೋಮನಾಥನನ್ನು ಪೂಜೆ ಮಾಡುವುದರಿಂದ ಅವನು ಉಪಾಸಕರ ಕ್ಷಯ ಮತ್ತು ತೊನ್ನು ಮೊದಲಾದ ರೋಗಗಳನ್ನು ನಾಶಮಾಡಿ ಬಿಡುತ್ತಾನೆ. ಈ ಚಂದ್ರನು ಧನ್ಯನಾಗಿದ್ದಾನೆ. ಕೃತಕೃತ್ಯನಾಗಿದ್ದಾನೆ. ಅವನ ಹೆಸರಿನಿಂದ ಮೂರು ಲೋಕಗಳ ಸ್ವಾಮಿ ಸಾಕ್ಷಾತ್ ಭಗವಾನ್ ಶಂಕರನು ಭೂತಲವನ್ನು ಪವಿತ್ರಗೊಳಿಸುತ್ತಾ ಪ್ರಭಾಸ ಕ್ಷೇತ್ರದಲ್ಲಿ ನೆಲೆಸಿರುವನು. ಅಲ್ಲೇ ಸಮಸ್ತ ದೇವತೆಗಳು ಸೋಮ ಕುಂಡವನ್ನೂ ಸ್ಥಾಪಿಸಿರುವರು. ಅದರಲ್ಲಿ ಶಿವನು ಮತ್ತು ಬ್ರಹ್ಮದೇವರು ಸದಾ ವಾಸಿಸುತ್ತಾರೆಂದು ಹೇಳಲಾಗಿದೆ. ಚಂದ್ರಕುಂಡವು ಈ ಭೂತಲದಲ್ಲಿ ಪಾಪನಾಶನ ತೀರ್ಥರೂಪದಲ್ಲಿ ಪ್ರಸಿದ್ಧವಾಗಿದೆ. ಅದರಲ್ಲಿ ಸ್ನಾನಮಾಡುವ ಮನುಷ್ಯನು ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ಕ್ಷಯವೇ ಮೊದಲಾದ

ಅಸಾಧ್ಯ ರೋಗಗಳೆಲ್ಲವೂ ಈ ಕುಂಡದಲ್ಲಿ ಅರು ತಿಂಗಳುತನಕ ಸ್ನಾನ ಮಾಡುವುದರಿಂದ ನಾಶವಾಗುತ್ತವೆ. ಈ ಉತ್ತಮ ತೀರ್ಥವನ್ನು ಸೇವಿಸುವ ಮನುಷ್ಯನು ಉದ್ದೇಶಿಸಿದ ಫಲವನ್ನು ಖಂಡಿತವಾಗಿ ಪಡೆದುಕೊಳ್ಳುವನು. ಚಂದ್ರನು ನಿರೋಗಿಯಾಗಿ ತನ್ನ ಹಿಂದಿನ ಕಾರ್ಯವನ್ನು ಮಹಿಸಿಕೊಂಡನು. ಹೀಗೆ ನಾನು ಸೋಮನಾಥನ ಉತ್ಪತ್ತಿಯ ಎಲ್ಲ ವೃತ್ತಾಂತವನ್ನು ಹೇಳಿದೆನು. ಮುನೀಶ್ವರರೇ! ಹೀಗೆ ಸೋಮೇಶ್ವರ ಲಿಂಗದ ಪ್ರಾದುರ್ಭಾವವಾಯಿತು. ಸೋಮನಾಥನ ಪ್ರಾದುರ್ಭಾವದ ಈ ಕಥೆಯನ್ನು ಕೇಳುವವನು, ಬೇರೆಯವರಿಗೆ ಹೇಳುವವನು ಸಂಪೂರ್ಣ ಅಭೀಷ್ಟಗಳನ್ನು ಪಡೆಯುವನು ಹಾಗೂ ಎಲ್ಲ ಪಾಪಗಳಿಂದ ಮುಕ್ತನಾಗಿ ಹೋಗುವನು.

(ಅಧ್ಯಾಯ ೮-೧೪)

❐ ❐ ❐

ಮಲ್ಲಿಕಾರ್ಜುನ ಮತ್ತು ಮಹಾಕಾಲವೆಂಬ ಜ್ಯೋತಿರ್ಲಿಂಗದ ಪ್ರಾದುರ್ಭಾವದ ಕಥೆ ಹಾಗೂ ಅವುಗಳ ಮಹಿಮೆ

ಸೂತಪುರಾಣಿಕರು ಹೇಳುತ್ತಾರೆ – ಮಹರ್ಷಿಗಳೇ! ಈಗ ನಾನು ಮಲ್ಲಿಕಾರ್ಜುನನ ಪ್ರಾದುರ್ಭಾವದ ಪ್ರಸಂಗವನ್ನು ತಿಳಿಸುವೆನು. ಇದನ್ನು ಕೇಳಿದ ಬುದ್ಧಿವಂತನು ಎಲ್ಲ ಪಾಪಗಳಿಂದ ಮುಕ್ತನಾಗಿ ಹೋಗುತ್ತಾನೆ.. ಮಹಾ ಬಲಶಾಲೀ ತಾರಕಕತ್ತು ಶಿವೆಯ ಪುತ್ರ ಕುಮಾರ ಕಾರ್ತಿಕೇಯನು ಇಡೀ ಪೃಥಿವಿಯನ್ನು ಪ್ರದಕ್ಷಿಣೆ ಮಾಡಿ ಪುನಃ ಕೈಲಾಸಕ್ಕೆ ಬಂದು ಗಣಪತಿಯ ವಿವಾಹದ ಮಾತನ್ನು ಕೇಳಿ ಕ್ರೌಂಚ ಪರ್ವತಕ್ಕೆ ಹೊರಟು ಹೋದನು. ಶಿವ-ಪಾರ್ವತಿಯರು ಅಲ್ಲಿಗೆ ಹೋಗಿ ಒತ್ತಾಯಿಸಿದರೂ ಮರಳದೆ ಅಲ್ಲಿಂದಲೂ ಹನ್ನೆರಡು ಗಾವುದ ದೂರಕ್ಕೆ ಹೋದಾಗ ಶಿವ-ಪಾರ್ವತಿಯರು ಜ್ಯೋತಿರ್ಮಯ ಸ್ವರೂಪದಿಂದ ಅಲ್ಲಿ ಪ್ರತಿಷ್ಠಿತರಾದರು. ಅವರಿಬ್ಬರೂ ಪುತ್ರಸ್ನೇಹದಿಂದ ಆತುರರಾಗಿ ಪರ್ವದಿನಗಳಲ್ಲಿ ತನ್ನ ಪುತ್ರ ಕುಮಾರನನ್ನು ನೋಡಲಿಕ್ಕಾಗಿ ಅವನ ಬಳಿಗೆ ಹೋಗುತ್ತಾ ಇರುತ್ತಾರೆ. ಅಮಾವಾಸ್ಯೆಯ ದಿನ ಸಾಕ್ಷಾತ್ ಭಗವಾನ್ ಶಂಕರನು ಅಲ್ಲಿಗೆ ಹೋಗುವನು. ಮತ್ತು ಪೌರ್ಣಮಿಯಂದು ಪಾರ್ವತಿಯು ನಿಶ್ಚಯವಾಗಿ ಅಲ್ಲಿಗೆ ಪದಾರ್ಪಣ ಮಾಡುವಳು. ಆಂದಿನಿಂದ ಭಗವಾನ್ ಶಿವನ ಮಲ್ಲಿಕಾರ್ಜುನವೆಂಬ ಒಂದು ಲಿಂಗವು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಯಿತು. (ಅದರಲ್ಲಿ ಪಾರ್ವತಿ ಮತ್ತು ಶಿವ ಇವರಿಬ್ಬರ ಜ್ಯೋತಿಗಳೂ ಪ್ರತಿಷ್ಠಿತವಾಗಿವೆ. 'ಮಲ್ಲಿಕಾ' ಇದರ ಅರ್ಥ ಪಾರ್ವತಿ ಹಾಗೂ ಅರ್ಜುನ ಶಬ್ದವು ಶಿವನ ವಾಚಕವಾಗಿದೆ). ಆ ಲಿಂಗವನ್ನು ದರ್ಶಿಸುವವನು ಸಮಸ್ತ ಪಾಪಗಳಿಂದ ಮುಕ್ತನಾಗುತ್ತಾನೆ ಹಾಗೂ ಎಲ್ಲ ಅಭೀಷ್ಟಗಳನ್ನು ಪಡೆದುಕೊಳ್ಳುವನು. ಇದರಲ್ಲಿ ಸಂಶಯವೇ ಇಲ್ಲ. ಈ ಪ್ರಕಾರ ಮಲ್ಲಿಕಾರ್ಜುನ ಎಂಬ ಎರಡನೆಯ ಜ್ಯೋತಿರ್ಲಿಂಗದ ವರ್ಣನೆ ಮಾಡಲಾಯಿತು. ಅದು ದರ್ಶನ ಮಾತ್ರದಿಂದಲೇ ಜನರಿಗೆ ಎಲ್ಲ ರೀತಿಯ ಸುಖಗಳನ್ನು ಕೊಡುವುದು ಎಂದು ಹೇಳಲಾಗಿದೆ.

ಋಷಿಗಳು ಕೇಳಿದರು – ಪ್ರಭೋ! ಈಗ ತಾವು ವಿಶೇಷ ಕೃಪೆಮಾಡಿ ಮೂರನೆಯ ಜ್ಯೋತಿರ್ಲಿಂಗವನ್ನು ವರ್ಣಿಸಿರಿ.

ಸೂತಪುರಾಣಿಕರು ಹೇಳುತ್ತಾರೆ-ಬ್ರಾಹ್ಮಣರೇ! ನಾನು ಧನ್ಯನಾಗಿದ್ದೇನೆ, ಕೃತಕೃತ್ಯನಾಗಿದ್ದೇನೆ, ಪುಣ್ಯಾತ್ಮರಾದ ನಿಮ್ಮ ಸಂಗವು ನನಗೆ ದೊರೆಯಿತು. ಸಾಧುಪುರುಷರ ಸಂಗವೇ ನಿಶ್ಚಯವಾಗಿ ಧನ್ಯವಾಗಿದೆ. ಅದ್ದರಿಂದ ನಾನು ನನ್ನ ಸೌಭಾಗ್ಯವೆಂದು ತಿಳಿದುಕೊಂಡು ಪಾಪನಾಶನವಾದ ಪರಮ ಪಾವನ ದಿವ್ಯ ಕಥೆಯನ್ನು ವರ್ಣಿಸುವೆನು; ನೀವು ಆದರದಿಂದ ಕೇಳಿರಿ. ಅವಂತಿ ಎಂಬ ಪ್ರಸಿದ್ಧ ಒಂದು ನಗರವಿತ್ತು. ಅದು ಸಮಸ್ತ ದೇಹಧಾರಿಗಳಿಗೆ ಮೋಕ್ಷವನ್ನು ಕರುಣಿಸುವಂತಹುದು. ಅದು ಭಗವಾನ್ ಶಿವನಿಗೆ ಬಹಳ ಪ್ರಿಯವಾಗಿದ್ದು, ಪರಮ ಪುಣ್ಯಮಯ ಮತ್ತು ಲೋಕಪಾವನವಾಗಿದೆ. ಆ ಅವಂತಿಯಲ್ಲಿ ಒಬ್ಬ ಶ್ರೇಷ್ಠ ಬ್ರಾಹ್ಮಣನಿದ್ದನು. ಅವನು ಶುಭಕರ್ಮ ಪರಾಯಣ, ವೇದಗಳ ಸ್ವಾಧ್ಯಾಯದಲ್ಲಿ ಮುಳುಗಿದ್ದು, ವೈದಿಕ ಕರ್ಮಗಳಲ್ಲಿ ಸದಾ ತತ್ಪರನಾಗಿದ್ದನು. ಅವನು ಮನೆಯಲ್ಲಿ ಪ್ರತಿದಿನವೂ ಅಗ್ನಿಹೋತ್ರವನ್ನು ಮಾಡುತ್ತಾ ಶಿವನ ಪೂಜೆಯಲ್ಲಿ ಸದಾ ತತ್ಪರನಾಗಿರುತ್ತಿದ್ದನು. ಆ ಬ್ರಾಹ್ಮಣನು ಪ್ರತಿದಿನವೂ ಪಾರ್ಥಿವ ಶಿವಲಿಂಗವನ್ನು ರಚಿಸಿ ಅದನ್ನು ಪೂಜಿಸುತ್ತಿದ್ದನು. ವೇದಪ್ರಿಯನೆಂಬ ಆ ಬ್ರಾಹ್ಮಣನು ಸಮ್ಯಕ್ ಜ್ಞಾನಾರ್ಜನೆಯಲ್ಲಿ ತೊಡಗಿದ್ದನು. ಅದರಿಂದ ಅವನು ಸಮಸ್ತ ಕರ್ಮಗಳ ಫಲವನ್ನು ಪಡೆದು ಸಂತರಿಗೆ ಸುಲಭವಾದ ಸದ್ಗತಿಯನ್ನು ಹೊಂದಿದ್ದನು. ಅವನಿಗೆ ಶಿವಪೂಜಾ ಪರಾಯಣ ನಾಲ್ವರು ತೇಜಸ್ವಿ ಪುತ್ರರಿದ್ದರು. ಅವರೆಲ್ಲರೂ ತಂದೆ-ತಾಯಿಯರಂತೆ ಸದ್ಗುಣಿಗಳಾಗಿದ್ದರು. ದೇವಪ್ರಿಯ,

ಪ್ರಿಯಮೇಧಾ, ಸುಕೃತ ಮತ್ತು ಸುವ್ರತ ಎಂದು ಅವರ ಹೆಸರುಗಳಾಗಿದ್ದವು. ಅವರ ಸುಖದಾಯಕ ಗುಣಗಳು ಸದಾ ಬೆಳೆಯುತ್ತಲೇ ಇತ್ತು. ಅವರಿಂದಾಗಿ ಅವಂತೀ ನಗರವು ಬ್ರಹ್ಮತೇಜದಿಂದ ಪರಿಪೂರ್ಣವಾಗಿತ್ತು.

ಅದೇ ಸಮಯದಲ್ಲಿ ರತ್ನಮಾಲಾ ಪರ್ವತದಲ್ಲಿ ದೂಷಣನೆಂಬ ಒಬ್ಬ ಧರ್ಮದ್ವೇಷಿ ಅಸುರನು ಬ್ರಹ್ಮನಿಂದ ವರವನ್ನು ಪಡೆದು ವೇದ, ಧರ್ಮ ಹಾಗೂ ಧರ್ಮಾತ್ಮರ ಮೇಲೆ ಆಕ್ರಮಣ ಮಾಡಿದನು. ಕೊನೆಗೆ ಅವನು ಸೈನ್ಯದೊಂದಿಗೆ ಅವಂತಿಯ ಬ್ರಾಹ್ಮಣರ ಮೇಲೆಯೂ ಆಕ್ರಮಣ ಮಾಡಿದನು. ಅವನ ಅಪ್ಪಣೆಯಂತೆ ನಾಲ್ವರು ಭಯಾನಕ ದೈತ್ಯರು ನಾಲ್ಕು ದಿಕ್ಕುಗಳಲ್ಲಿ ಪ್ರಳಯಾಗ್ನಿಯಂತೆ ಪ್ರಕಟರಾದರು. ಆದರೆ ಶಿವವಿಶ್ವಾಸಿ ಬ್ರಾಹ್ಮಣರು ಅದರಿಂದ ಹೆದರಲಿಲ್ಲ. ನಗರದ ಉಳಿದ ಬ್ರಾಹ್ಮಣರು ಬಹಳ ಗಾಬರಿಗೊಂಡಾಗ ಅವರು ಬ್ರಾಹ್ಮಣರಿಗೆ ಆಶ್ವಾಸನೆಯನ್ನು ಕೊಡುತ್ತಾ – 'ನೀವೆಲ್ಲರೂ ಭಕ್ತವತ್ಸಲ ಭಗವಾನ್ ಶಿವನ ಮೇಲೆ ಭರವಸೆಯನ್ನಿಡಿರಿ' ಎಂದು ಹೇಳುತ್ತಾ ಶಿವಲಿಂಗದ ಪೂಜೆಯನ್ನು ಮಾಡಿ, ಭಗವಾನ್ ಶಿವನನ್ನು ಧ್ಯಾನಿಸ ತೊಡಗಿದರು.

ಅಷ್ಟರಲ್ಲೇ ಸೈನ್ಯಸಹಿತ ದೂಷಣನು ಬಂದು ಆ ಬ್ರಾಹ್ಮಣರನ್ನು ನೋಡಿ-'ಇವರನ್ನು ಬಂಧಿಸಿರಿ, ಕೊಂದು ಬಿಡಿರಿ' ಎಂದು ಬೊಬ್ಬಿರಿದನು. ವೇದಪ್ರಿಯನ ಪುತ್ರರಿಗೆ ಆಗ ಆ ದೈತ್ಯನ ಮಾತು ಕೇಳಿಸಲೇ ಇಲ್ಲ, ಏಕೆಂದರೆ, ಅವರು ಭಗವಾನ್ ಶಂಭುವಿನ ಧ್ಯಾನಮಾರ್ಗದಲ್ಲಿ ಸ್ಥಿತರಾಗಿದ್ದರು. ಆ ದುಷ್ಟಾತ್ಮಾ ದೈತ್ಯನು ಆ ಬ್ರಾಹ್ಮಣರನ್ನು ಇನ್ನೇನು ಕೊಲ್ಲಬೇಕೆಂದು ಬಯಸಿದಾಗಲೇ, ಅವರಿಂದ ಪೂಜಿತವಾದ ಪಾರ್ಥಿವ ಶಿವಲಿಂಗದ ಸ್ಥಾನದಲ್ಲಿ ದೊಡ್ಡ ಶಬ್ದದೊಂದಿಗೆ ಒಂದು ಹೊಂಡ ಪ್ರಕಟವಾಯಿತು. ಆ ಹೊಂಡದಿಂದ ಆಗಲೇ ವಿಕಟರೂಪಧಾರೀ ಮಹಾಕಾಲನೆಂದು ಪ್ರಖ್ಯಾತ ನಾದ ಭಗವಾನ್ ಶಿವನು ಪ್ರಕಟನಾದನು. ಅವನು ದುಷ್ಟರ ವಿನಾಶಕ ಹಾಗೂ ಸತ್ಪುರುಷರ ಆಶ್ರಯದಾತನಾಗಿರುವನು. ಅವನು ಆ ದೈತ್ಯರಿಗೆ ಹೇಳಿದನು – 'ಎಲ್ಲೈ ಖಳರೇ! ನಾನು ನಿಮ್ಮಂತಹ ದುಷ್ಟರಿಗೆ ಮಹಾಕಾಲ ಪ್ರಕಟನಾಗಿರುವೆನು. ನೀವು ಈ ಬ್ರಾಹ್ಮಣರ ಬಳಿಯಿಂದ ದೂರ ಓಡಿಹೋಗಿ'.

ಹೀಗೆ ಹೇಳಿ ಮಹಾಕಾಲ ಶಂಕರನು ಸೈನ್ಯಸಹಿತ ದೂಷಣನನ್ನು ತನ್ನ ಹುಂಕಾರ ಮಾತ್ರದಿಂದ ಕೂಡಲೇ ಭಸ್ಮಮಾಡಿಬಿಟ್ಟನು. ಕೆಲವು ಸೇನೆಯನ್ನು ಅವನು ಕೊಂದು ಹಾಕಿದನು, ಕೆಲವು ಓಡಿ ಹೋಯಿತು. ಪರಮಾತ್ಮಾ ಶಿವನು ದೂಷಣನನ್ನು ವಧಿಸಿಬಿಟ್ಟನು. ಸೂರ್ಯನನ್ನು ನೋಡಿದ ಅಂಧಕಾರವೆಲ್ಲ ನಾಶವಾಗುವಂತೆಯೇ ಭಗವಾನ್ ಶಿವನನ್ನು ನೋಡಿ ಅವನ ಎಲ್ಲ ಸೈನ್ಯವು ಅದೃಶ್ಯವಾಯಿತು. ದೇವತೆಗಳ ದುಂದುಭಿಗಳು ಮೊಳಗಿದವು ಮತ್ತು ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಆ ಬ್ರಾಹ್ಮಣರಿಗೆ ಆಶ್ವಾಸನೆಯನ್ನು ಕೊಟ್ಟು ಸುಪ್ರಸನ್ನನಾದ ಸಾಕ್ಷಾತ್ ಮಹಾಕಾಲ ಮಹೇಶ್ವರ ಶಿವನು ಅವರಲ್ಲಿ – 'ನೀವು ವರವನ್ನು ಕೇಳಿರಿ' ಎಂದು ಹೇಳಿದನು. ಅವನ ಮಾತನ್ನು ಕೇಳಿ ಆ ಎಲ್ಲ ಬ್ರಾಹ್ಮಣರು ಕೈ ಮುಗಿದು ಭಕ್ತಿಭಾವದಿಂದ ನಮಸ್ಕರಿಸಿ ನತಮಸ್ತಕರಾಗಿ ವಿನಂತಿಸಿಕೊಂಡರು.

ಬ್ರಾಹ್ಮಣರು ಹೇಳಿದರು – ಮಹಾಕಾಲ ಮಹಾದೇವನೇ! ದುಷ್ಟರನ್ನು ದಂಡಿಸುವ ಪ್ರಭುವೇ! ಶಂಭೋ! ನೀನು ನಮ್ಮನ್ನು ಸಂಸಾರಸಾಗರದಿಂದ ಬಿಡುಗಡೆಗೊಳಿಸು. ಶಿವನೇ! ನೀನು ಸಾಧಾರಣ ಜನರ ರಕ್ಷಣೆಗಾಗಿ ಸದಾ ಇಲ್ಲೇ ನೆಲೆಸು. ಪ್ರಭೋ! ಶಂಭೋ! ನಿನ್ನನ್ನು ದರ್ಶಿಸುವ ಮನುಷ್ಯರನ್ನು ನೀನು ಸದಾಕಾಲ ಉದ್ಧಾರ ಮಾಡುತ್ತಿರು.

ಸೂತಪುರಾಣಿಕರು ಹೇಳುತ್ತಾರೆ – ಮಹರ್ಷಿಗಳೇ! ಅವರು ಹೀಗೆ ಹೇಳಿದಾಗ ಅವರಿಗೆ ಸದ್ಗತಿಯನ್ನು ಕೊಟ್ಟು ಭಗವಾನ್ ಶಿವನು ತನ್ನ ಭಕ್ತರ ರಕ್ಷಣೆಗಾಗಿ ಆ ಪರಮ ಸುಂದರ ಹೊಂಡದಲ್ಲಿ ಸ್ಥಿತನಾದನು. ಆ ಬ್ರಾಹ್ಮಣರು ಮೋಕ್ಷವನ್ನು ಪಡೆದರು ಮತ್ತು ಅಲ್ಲಿನ ನಾಲ್ಕು ಕಡೆ ಒಂದೊಂದು ಗಾವುದ ಭೂಮಿಯು ಲಿಂಗರೂಪೀ ಭಗವಾನ್ ಶಿವನ ಸ್ಥಳವಾಗಿ ಮಾರ್ಪಟ್ಟಿತು. ಆ ಶಿವನು ಭೂತಲದಲ್ಲಿ ಮಹಾಕಾಲೇಶ್ವರ ಎಂಬ ಹೆಸರಿನಿಂದ ವಿಖ್ಯಾತನಾದನು. ಬ್ರಾಹ್ಮಣರೇ! ಅವನನ್ನು ದರ್ಶನ ಮಾಡುವುದರಿಂದ ಸ್ವಪ್ನದಲ್ಲಿಯೂ ಯಾರೂ ದುಃಖಿತನಾಗುವುದಿಲ್ಲ. ಯಾವ-ಯಾವ ಕಾಮನೆಗಳಿಂದ ಆ ಲಿಂಗದ ಉಪಾಸನೆ ಮಾಡುವರೋ ಅವರಿಗೆ ತಮ್ಮ ಮನೋರಥಗಳು ಪ್ರಾಪ್ತವಾಗುತ್ತವೆ ಹಾಗೂ ಪರಲೋಕದಲ್ಲಿ ಮೋಕ್ಷವೂ ಸಿಗುವುದು.

(ಅಧ್ಯಾಯ ೧೫-೧೬)

❑ ❑ ❑

ಮಹಾಕಾಲನ ಮಾಹಾತ್ಮ್ಯದ ಪ್ರಸಂಗದಲ್ಲಿ ಶಿವಭಕ್ತ ಚಂದ್ರಸೇನ ರಾಜ ಹಾಗೂ ಗೋಪ ಬಾಲಕ ಶ್ರೀಕರನ ಕಥೆ

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರಿರಾ ! ಭಕ್ತರನ್ನು ರಕ್ಷಿಸುವ ಮಹಾಕಾಲನೆಂಬ ಜ್ಯೋತಿರ್ಲಿಂಗದ ಮಾಹಾತ್ಮ್ಯವು ಭಕ್ತಿಭಾವವನ್ನು ಹೆಚ್ಚಿಸುವುದಾಗಿದೆ. ಅದನ್ನು ಆದರದಿಂದ ಕೇಳಿರಿ. ಉಜ್ಜಯಿನಿಯಲ್ಲಿ ಚಂದ್ರಸೇನ ಎಂಬ ಓರ್ವ ಮಹಾರಾಜನಿದ್ದನು. ಅವನು ಸಂಪೂರ್ಣ ಶಾಸ್ತ್ರಗಳ ತತ್ತ್ವಜ್ಞನೂ, ಶಿವಭಕ್ತನೂ, ಜಿತೇಂದ್ರಿಯನೂ ಆಗಿದ್ದನು. ಶಿವನ ಪಾರ್ಷದರಲ್ಲಿ ಪ್ರಧಾನ ಹಾಗೂ ಸರ್ವಲೋಕವಂದಿತ ಮಣಿಭದ್ರನು ಚಂದ್ರಸೇನ ರಾಜನ ಸ್ನೇಹಿತನಾಗಿದ್ದನು. ಒಮ್ಮೆ ಅವನು ರಾಜನ ಮೇಲೆ ಪ್ರಸನ್ನನಾಗಿ ರಾಜನಿಗೆ ಚಿಂತಾಮಣಿ ಎಂಬ ಮಹಾಮಣಿಯನ್ನು ಕರುಣಿಸಿದನು. ಅದು ಕೌಸ್ತುಭಮಣಿ ಹಾಗೂ ಸೂರ್ಯನಂತೆ ದೇದೀಪ್ಯ ಮಾನವಾಗಿತ್ತು. ಅದನ್ನು ನೋಡುವುದರಿಂದ, ಕೇಳುವುದರಿಂದ, ಧ್ಯಾನ ಮಾಡುವುದರಿಂದ ಮನುಷ್ಯನಿಗೆ ನಿಶ್ಚಯವಾಗಿ ಮಂಗಲವು ಉಂಟಾಗುತ್ತಿತ್ತು. ಭಗವಾನ್ ಶಿವನ ಆಶ್ರಿತನಾದ ಚಂದ್ರಸೇನರಾಜನು ಆ ಚಿಂತಾಮಣಿಯನ್ನು ಕೊರಳಲ್ಲಿ ಧರಿಸಿ ಸಿಂಹಾಸನದಲ್ಲಿ ಕುಳಿತ್ತಿದ್ದಾಗ ದೇಮತೆಗಳಲ್ಲಿ ಸೂರ್ಯನಾರಾಯಣನಂತೆ ಶೋಭಿಸುತ್ತಿದ್ದನು. ನೃಪಶ್ರೇಷ್ಠ ಚಂದ್ರಸೇನನ ಕೊರಳಲ್ಲಿ ಚಿಂತಾಮಣಿಯು ಶೋಭಿಸುತ್ತಿದೆ ಎಂಬುದನ್ನು ಕೇಳಿದ ಸಮಸ್ತ ರಾಜರ ಮನಸ್ಸಿನಲ್ಲಿ ಆ ಮಣಿಯ ಕುರಿತು ಲೋಭವು ಉಂಟಾಗಿ ಕ್ಷುಬ್ಧರಾಗುತ್ತಿದ್ದರು. ಅನಂತರ ಆ ಎಲ್ಲ ರಾಜರು ಚತುರಂಗ ಸೈನ್ಯದೊಂದಿಗೆ ಬಂದು ಚಂದ್ರಸೇನನನ್ನು ಗೆಲ್ಲಲು ಮುಂದಾದರು. ಅವರೆಲ್ಲರೂ ಒಟ್ಟಿಗೆ ಸೇರಿದ್ದರು ಹಾಗೂ ಅವರೊಂದಿಗೆ ಬಹಳ ಸೈನಿಕರಿದ್ದರು. ಅವರು ಪರಸ್ಪರ ಸಂಕೇತ ಮತ್ತು ಸಲಹೆಯಂತೆ ಆಕ್ರಮಣಮಾಡಿ, ಉಜ್ಜಯಿನಿಯ ನಾಲ್ಕೂ ಬಾಗಿಲುಗಳನ್ನು ಮುತ್ತಿದರು. ತನ್ನ ಸಂಪೂರ್ಣ ಪುರವನ್ನು ರಾಜರು ಆಕ್ರಮಿಸಿರುವುದನ್ನು ನೋಡಿದ ಚಂದ್ರಸೇನರಾಜನು ಭಗವಾನ್ ಮಹಾಕಾಲೇಶ್ವರನಿಗೆ ಶರಣಾದನು ಮತ್ತು ಸಂದೇಹರಹಿತವಾದ ಮನಸ್ಸಿನಲ್ಲಿ ದೃಢನಿಶ್ಚಯಮಾಡಿ ಉಪವಾಸಪೂರ್ವಕ ಹಗಲು-ರಾತ್ರಿ ಅನನ್ಯ ಭಾವದಿಂದ ಮಹಾಕಾಲನ ಆರಾಧನೆಯನ್ನು ಮಾಡತೊಡಗಿದನು.

ಅದೇ ಸಮಯದಲ್ಲಿ ಆ ಶ್ರೇಷ್ಠ ನಗರದಲ್ಲಿ ಓರ್ವ ಗೊಲ್ಲತಿಯು ಇರುತ್ತಿದ್ದಳು. ಅಕೆಗೆ ಒಬ್ಬನೆ ಮಗನಿದ್ದು, ವಿಧವೆಯಾದ ಅವಳು ಉಜ್ಜಯಿನಿಯಲ್ಲಿ ಬಹಳ ದಿನಗಳಿಂದ ವಾಸಿಸುತ್ತಿದ್ದಳು. ಅವಳು ತನ್ನ ಐದು ವರ್ಷದ ಬಾಲಕನನ್ನು ಕರೆದುಕೊಂಡು ಮಹಾಕಾಲನ ಮಂದಿರಕ್ಕೆ ಹೋದಳು ಮತ್ತು ಚಂದ್ರಸೇನ ರಾಜನು ಮಾಡಿದ ಮಹಾಕಾಲನ ಪೂಜೆಯನ್ನು ಆದರದಿಂದ ನೋಡಿದಳು. ರಾಜನ ಶಿವಪೂಜೆಯ ಆ ಆಶ್ಚರ್ಯಮಯ ಉತ್ಸವವನ್ನು ನೋಡಿ ಅವಳು ಭಗವಂತನಿಗೆ ನಮಸ್ಕಾರಮಾಡಿ, ತನ್ನ ವಸತಿಗೆ ಮರಳಿದಳು. ಗೊಲ್ಲತಿಯ ಆ ಬಾಲಕನೂ ಕೂಡ ಆ ಎಲ್ಲ ಪೂಜೆಯನ್ನು ನೋಡಿದ್ದನು. ಆದ್ದರಿಂದ ಮನೆಗೆ ಬಂದು ಅವನು ಕುತೂಹಲದಿಂದ ಶಿವನ ಪೂಜೆಯನ್ನು ಮಾಡಲು ಯೋಚಿಸಿದನು. ಒಂದು ಸುಂದರವಾದ ಕಲ್ಲನ್ನು ತಂದು ಅದನ್ನು ತನ್ನ ಗುಡಿಸಲಿನ ಏಕಾಂತ ಸ್ಥಾನದಲ್ಲಿ ಇಟ್ಟು, ಅದನ್ನು ಶಿವಲಿಂಗವೆಂದು ತಿಳಿದನು. ಮತ್ತೆ ಅವನು ಭಕ್ತಿಯಿಂದ ನಕಲಿ ಗಂಧ, ಅಲಂಕಾರ, ಪುಷ್ಪ, ಧೂಪ, ದೀಪ, ಅಕ್ಷತೆ ಮೊದಲಾದ ದ್ರವ್ಯಗಳನ್ನು ಒಟ್ಟುಗೂಡಿಸಿ, ಅವುಗಳಿಂದ ಪೂಜೆಯನ್ನು ಮಾಡಿ ಮನಸ್ಸಿನಲ್ಲಿ ದಿವ್ಯ ನೈವೇದ್ಯವನ್ನು ಕಲ್ಪಿಸಿ ಅರ್ಪಿಸಿದನು. ಸುಂದರ-ಸುಂದರ ಎಲೆ, ಹೂವುಗಳಿಂದ ಪದೇ-ಪದೇ ಪೂಜೆ ಮಾಡುತ್ತಾ, ಬಗೆ-ಬಗೆಯ ನೃತ್ಯವನ್ನು ಮಾಡಿದನು ಹಾಗೂ ಪದೇ-ಪದೇ ಭಗವಂತನ ಚರಣಗಳಲ್ಲಿ ತಲೆ ಬಾಗಿದನು. ಆಗ ಗೊಲ್ಲತಿಯು ಭಗವಾನ್ ಶಿವನಲ್ಲಿ ಆಸಕ್ತಚಿತ್ತನಾದ ತನ್ನ ಮಗನನ್ನು ತುಂಬಾ ಪ್ರೇಮದಿಂದ ಊಟಕ್ಕಾಗಿ ಕರೆದಳು. ಆದರೆ ಅವನ ಮನಸ್ಸು ಭಗವಾನ್ ಶಿವನ ಪೂಜೆಯಲ್ಲಿ ತೊಡಗಿತ್ತು. ಆದ್ದರಿಂದ ಮತ್ತೆ-ಮತ್ತೆ ಕರೆದರೂ ಆ ಬಾಲಕನಿಗೆ ಊಟಮಾಡುವ ಇಚ್ಛೆಯುಂಟಾಗಲಿಲ್ಲ. ಆಗ ಅವನ ತಾಯಿಯು ಸ್ವತಃ ಅವನ ಬಳಿಗೆ ಬಂದು, ಶಿವನ ಮುಂದೆ ಕಂಗಳನ್ನು ಮುಚ್ಚಿ ಧ್ಯಾನಿಸುತ್ತಾ ಕುಳಿತಿರುವುದನ್ನು ನೋಡಿ ಅವನ ಕೈ ಹಿಡಿದು ಎಬ್ಬಿಸತೊಡಗಿದಳು. ಇಷ್ಟರಿಂದಲೂ ಅವನು ಏಳದಿದ್ದಾಗ ಆಕೆಯು ಸಿಟ್ಟಿನಿಂದ ಅವನನ್ನು ತುಂಬಾ ಹೊಡೆದಳು. ಹೊಡೆಯುತ್ತಾ, ಎಳೆಯುತ್ತಾ ಇರುವಾಗಲೂ ಆಕೆಯ ಪುತ್ರನು ಬಾರದಿದ್ದಾಗ ಅವಳು ಆ ಶಿವಲಿಂಗವನ್ನು ಎತ್ತಿ ದೂರಕ್ಕೆ ಎಸೆದುಬಿಟ್ಟಳು ಹಾಗೂ ಅವನಿಗೆ ಏರಿಸಿದ ಎಲ್ಲ ಪೂಜಾಸಾಮಗ್ರಿಯನ್ನು ನಾಶಪಡಿಸಿದಳು. ಇದನ್ನು ನೋಡಿದ ಬಾಲಕನು ಅಯ್ಯೋ ! ಅಯ್ಯೋ ! ಎನ್ನುತ್ತಾ ಅಳತೊಡಗಿದನು. ರೋಷಗೊಂಡ ಗೊಲ್ಲತಿಯು ತನ್ನ ಮಗನಿಗೆ ಗದರಿಸಿ-ಬೆದರಿಸಿ ಮನೆಯೊಳಗೆ

ಹೊರಟುಹೋದಳು. ಭಗವಾನ್ ಶಿವನ ಪೂಜೆಯನ್ನು ತಾಯಿಯು ನಾಶಮಾಡಿದುದನ್ನು ನೋಡಿದ ಬಾಲಕನು - ದೇವ-ದೇವಾ! ಮಹಾದೇವ! ಎಂದು ಕರೆಯುತ್ತಾ ಮೂರ್ಛಿತನಾಗಿ ನೆಲಕ್ಕುರುಳಿದನು. ಅವನ ಕಣ್ಣುಗಳಿಂದ ಕಣ್ಣೀರ ಧಾರೆ ಹರಿಯುತ್ತಿತ್ತು. ಎರಡು ಗಳಿಗೆ ಕಳೆದಾಗ ಅವನು ಎಚ್ಚರಗೊಂಡು ಕಣ್ತೆರೆದನು.

ಕಣ್ಣು ತೆರೆದಾಗ ಅವನು ಆ ಗುಡಿಸಲು ಭಗವಾನ್ ಶಿವನ ಅನುಗ್ರಹದಿಂದ ತತ್‌ಕಾಲದಲ್ಲೇ ಮಹಾಕಾಲನ ಸುಂದರ ಮಂದಿರವಾಗಿರುವುದನ್ನು ನೋಡಿದನು. ಹೊಳೆಯುವ ಮಣಿಮಯ ಕಂಭಗಳು ಅದರ ಶೋಭೆಯನ್ನು ಹೆಚ್ಚಿಸುತ್ತಿದ್ದವು. ಅಲ್ಲಿಯ ನೆಲ ಸ್ಫಟಿಕಮಣಿಗಳಿಂದ ನಿರ್ಮಾಣಗೊಂಡಿತ್ತು. ಪುಟವಿಟ್ಟ ಚಿನ್ನದ ಅನೇಕ ವಿಚಿತ್ರ ಕಲಶಗಳು ಆ ಶಿವಾಲಯವನ್ನು ಸುಶೋಭಿತಗೊಳಿಸಿದ್ದವು. ಅದರ ವಿಶಾಲವಾದ ದ್ವಾರಗಳು, ಕಿಟಕಿಗಳು, ಮಹಾದ್ವಾರವು ಸ್ವರ್ಣಮಯವಾಗಿ ಕಾಣುತ್ತಿತ್ತು. ಅಲ್ಲಿ ಬಹುಮೂಲ್ಯ ನೀಲಮಣಿ ಹಾಗೂ ವಜ್ರದಿಂದ ಮಾಡಿದ ಗೋಪುರಗಳು ಶೋಭಿಸುತ್ತಿದ್ದವು. ಆ ಶಿವಾಲಯದ ಮಧ್ಯಭಾಗದಲ್ಲಿ ದಯಾನಿಧಾನ ಶಂಕರನ ರತ್ನಮಯ ಲಿಂಗವು ಪ್ರತಿಷ್ಠಿತವಾಗಿತ್ತು. ಗೊಲ್ಲಬಾಲಕನು ನೋಡಿದನು. ಆ ಶಿವಲಿಂಗದ ಮೇಲೆ ತಾನು ಏರಿಸಿದ ಪೂಜಾಸಾಮಗ್ರಿಯು ಸುಸಜ್ಜಿತವಾಗಿತ್ತು. ಇದೆಲ್ಲವನ್ನು ನೋಡಿ ಅವನು ತಟ್ಟನೆ ಎದ್ದು ನಿಂತನು. ಅವನು ಮನಸ್ಸಿನಲ್ಲಿ ಬಹಳ ಆಶ್ಚರ್ಯಗೊಂಡು, ಪರಮಾನಂದ ಸಾಗರದಲ್ಲಿ ಮುಳುಗಿ ಹೋದನು. ಅನಂತರ ಭಗವಾನ್ ಶಿವನನ್ನು ಸ್ತುತಿಸುತ್ತಾ ಪದೇ-ಪದೇ ಅವನ ಚರಣಗಳಲ್ಲಿ ತಲೆ ಬಾಗಿದನು. ಸೂರ್ಯಾಸ್ತವಾದಬಳಿಕ ಆ ಗೋಪ ಬಾಲಕನು ಶಿವಾಲಯದಿಂದ ಹೊರಗೆಹೊರಟನು. ಹೊರಗೆ ಬಂದು ಅವನು ತನ್ನ ಗುಡಿಸಲನ್ನು ನೋಡಿದನು. ಅದು ಇಂದ್ರಭವನದಂತೆ ಶೋಭಿಸುತ್ತಿತ್ತು. ಅಲ್ಲಿ ಎಲ್ಲವೂ ಸುವರ್ಣಮಯವಾಗಿ ವಿಚಿತ್ರ ಹಾಗೂ ಪರಮ ಉಜ್ವಲ ವೈಭವದಿಂದ ಪ್ರಕಾಶಿತವಾಗಿತ್ತು. ಮತ್ತೆ ಅವನು ಆ ಭವನವನ್ನು ಹೊಕ್ಕನು. ಅದು ಎಲ್ಲ ಪ್ರಕಾರದ ಶೋಭೆಗಳಿಂದ ಸಂಪನ್ನವಾಗಿತ್ತು. ಆ ಭವನದಲ್ಲಿ ಎಲ್ಲೆಡೆ ಮಣಿ, ರತ್ನ ಸುವರ್ಣವೇ ತುಂಬಿಹೋಗಿತ್ತು. ಪ್ರದೋಷಕಾಲದಲ್ಲಿ ಆನಂದದಿಂದ ಒಳಗೆ ಪ್ರವೇಶಿಸಿ ಬಾಲಕನು ನೋಡಿದನು, ಅವನ ತಾಯಿಯು ದಿವ್ಯ ಲಕ್ಷಣಗಳಿಂದ ಕೂಡಿ ಒಂದು ಸುಂದರ ಮಂಚದಲ್ಲಿ ಮಲಗಿದ್ದಳು. ರತ್ನಮಯ ಆಲಂಕಾರಗಳಿಂದ ಆಕೆಯ ಇಡೀ ಶರೀರವು ಹೊಳೆಯುತ್ತಿತ್ತು. ಹಾಗೂ ಸಾಕ್ಷಾತ್ ದೇವಾಂಗನೆಯಂತೆ ಕಂಡು ಬರುತ್ತಿದ್ದಳು. ವಿಹ್ವಲನಾದ ಆ ಬಾಲಕನು ತನ್ನ ತಾಯಿಯನ್ನು ತ್ವರಿತವಾಗಿ ಎಬ್ಬಿಸಿದನು. ಆಕೆಯು ಭಗವಾನ್ ಶಿವನ ಕೃಪೆಗೆ ಪಾತ್ರಳಾಗಿದ್ದಳು. ಗೊಲ್ಲತಿಯು ಎದ್ದು ನೋಡುತ್ತಾಳೆ. ಎಲ್ಲವೂ ಅಪೂರ್ವದಂತೆ ಆಗಿಹೋಗಿತ್ತು. ಅವಳು ಮಹದಾನಂದದಲ್ಲಿ ಮುಳುಗಿ ತನ್ನ ಮಗನನ್ನು ಎದೆಗೊತ್ತಿಕೊಂಡಳು. ಗಿರಿಜಾಪತಿಯ ಕೃಪಾಪ್ರಸಾದದ ಆ ಎಲ್ಲ ವೃತ್ತಾಂತವನ್ನು ಮಗನ ಬಾಯಿಂದ ಕೇಳಿ ಆ ಗೊಲ್ಲತಿಯು ನಿರಂತರ ಭಗವಾನ್ ಶಿವನ ಭಜನೆಯಲ್ಲಿ ತೊಡಗಿದ್ದ ರಾಜನಿಗೆ ಇದನ್ನೂ ಸೂಚಿಸಿದಳು. ರಾಜನು ತನ್ನ ನಿಯಮವನ್ನು ಪೂರ್ಣಗೊಳಿಸಿ ರಾತ್ರೆಯಲ್ಲೇ ಅಲ್ಲಿಗೆ ಬಂದು ಶಂಕರನನ್ನು ಸಂತುಷ್ಟಗೊಳಿಸಿದ ಗೊಲ್ಲತಿಯ ಬಾಲಕನನ್ನು ನೋಡಿದನು. ಮಂತ್ರಿ, ಪುರೋಹಿತರೊಂದಿಗೆ ನೋಡಿದ ಚಂದ್ರಸೇನ ರಾಜನು ಪರಮಾನಂದದ ಸಮುದ್ರದಲ್ಲಿ ಮುಳುಗಿದನು. ಕಣ್ಣುಗಳಿಂದ ಪ್ರೇಮಾಶ್ರುಗಳನ್ನು ಸುರಿಸುತ್ತಾ ಸಂತೋಷವಾಗಿ ಶಿವನ ನಾಮಗಳನ್ನು ಕೀರ್ತಿಸುತ್ತಾ, ಆ ಬಾಲಕನನ್ನು ಅಪ್ಪಿಕೊಂಡನು. ಬ್ರಾಹ್ಮಣರೇ! ಆಗ ಅಲ್ಲಿ ಭಾರೀ ದೊಡ್ಡ ಉತ್ಸವ ನಡೆಯತೊಡಗಿತು. ಎಲ್ಲ ಜನರು ಆನಂದವಿಭೋರರಾಗಿ ಮಹೇಶ್ವರನ ನಾಮವನ್ನು ಮತ್ತು ಕೀರ್ತಿಯನ್ನು ಕೀರ್ತಿಸತೊಡಗಿದರು.. ಈ ಪ್ರಕಾರ ಶಿವನ ಈ ಅದ್ಭುತ ಮಾಹಾತ್ಮ್ಯವನ್ನು ನೋಡಿದ ಪುರವಾಸಿಗಳಿಗೆ ಬಹಳ ಹರ್ಷವಾಯಿತು. ಇದೇ ಚರ್ಚೆಯಲ್ಲಿ ಆ ಇಡೀ ರಾತ್ರೆಯು ಕ್ಷಣದಂತೆ ಕಳೆದು ಹೋಯಿತು.

ಯುದ್ಧಕ್ಕಾಗಿ ನಗರವನ್ನು ಸುತ್ತಲೂ ಆಕ್ರಮಿಸಿ ನಿಂತಿದ್ದ ರಾಜರೂ ಕೂಡ ಪ್ರಾತಃಕಾಲ ತಮ್ಮ ಗುಪ್ತಚರರಿಂದ ಆ ಎಲ್ಲ ಅದ್ಭುತ ಚರಿತ್ರವನ್ನು ಕೇಳಿದರು. ಅದನ್ನು ಕೇಳಿ ಎಲ್ಲರೂ ಆಶ್ಚರ್ಯಚಕಿತರಾದರು. ಅಲ್ಲಿಗೆ ಬಂದ ಎಲ್ಲ ನರಪತಿಗಳು ಒಟ್ಟಿಗೆ ಸೇರಿ ಪರಸ್ಪರ ಹೀಗೆ ಮಾತನಾಡಿಕೊಂಡರು. ಈ ಚಂದ್ರಸೇನ ರಾಜನು ದೊಡ್ಡ ಶಿವಭಕ್ತನಾಗಿರುವನು. ಆದ್ದರಿಂದ ಇವನನ್ನು ಜಯಿಸುವುದು ಕಠಿಣವಾಗಿದೆ. ಇವನು ಸರ್ವಥಾ ನಿರ್ಭಯನಾಗಿ ಮಹಾಕಾಲನ ನಗರಿ ಉಜ್ಜಯಿನಿಯನ್ನು ಪಾಲಿಸುತ್ತಿರುವನು. ಅವನ ಪುರದ ಬಾಲಕನೂ ಇಂತಹ ಶಿವಭಕ್ತನಾಗಿರುವನು. ಆ ಚಂದ್ರಸೇನ ರಾಜನಾದರೋ ಮಹಾಶಿವಭಕ್ತ ಆಗಿಯೇ ಇದ್ದಾನೆ. ಇವನೊಡನೆ ವಿರೋಧ ಕಟ್ಟಿಕೊಂಡರೆ ನಿಶ್ಚಯವಾಗಿಯೂ ಭಗವಾನ್ ಶಿವನು ಕ್ರೋಧಗೊಳ್ಳುವನು. ಅವನ ಕ್ರೋಧದಿಂದ ನಾವೆಲ್ಲರೂ ನಾಶವಾಗಿ ಹೋದೆವು. ಆದ್ದರಿಂದ ಈ ನೃಪತಿಯೊಡನೆ ಸಂಧಾನಮಾಡಿಕೊಳ್ಳಬೇಕು. ಹೀಗಾದಾಗ ಮಹೇಶ್ವರನು ನಮ್ಮ ಮೇಲೆ ಕೃಪೆದೋರುವನು.

ಸೂತಪುರಾಣಿಕರು ಹೇಳುತ್ತಾರೆ – ಬ್ರಾಹ್ಮಣರೇ ! ಹೀಗೆ ನಿಶ್ಚಯಿಸಿ ಶುದ್ಧ ಹೃದಯವುಳ್ಳ ಅವರೆಲ್ಲ ಭೂಪಾಲರು ಆಯುಧಗಳನ್ನು ತೊರೆದರು. ಅವರ ಮನಸ್ಸಿನಿಂದ ವೈರಭಾವವು ಹೊರಟುಹೋಯಿತು. ಆ ಎಲ್ಲ ರಾಜರು ಅತ್ಯಂತ ಪ್ರಸನ್ನರಾಗಿ ಚಂದ್ರಸೇನನ ಅಪ್ಪಣೆಯನ್ನು ಪಡೆದು ಮಹಾಕಾಲನ ಆ ರಮಣೀಯ ನಗರದೊಳಗೆ ಪ್ರವೇಶಿಸಿದರು. ಅಲ್ಲಿ ಅವರು ಮಹಾಕಾಲನನ್ನು ಪೂಜಿಸಿದರು. ಮತ್ತೆ ಅವರೆಲ್ಲರೂ ಆ ಗೊಲ್ಲತಿಯ ಮಹಾ ಅಭ್ಯುದಯಪೂರ್ಣ ದಿವ್ಯ ಸೌಭಾಗ್ಯವನ್ನು ಭೂರಿ ಭೂರಿಯಾಗಿ ಪ್ರಶಂಸಿಸುತ್ತಾ ಆಕೆಯ ಮನೆಗೆ ಹೋದರು. ಅಲ್ಲಿ ಚಂದ್ರಸೇನ ರಾಜನು ಮುಂದೆ ಬಂದು ಅವರ ಸ್ವಾಗತ-ಸತ್ಕಾರ ಮಾಡಿದನು. ಅವರು ಬಹುಮೂಲ್ಯ ಆಸನಗಳಲ್ಲಿ ಕುಳಿತು ಆಶ್ಚರ್ಯಚಕಿತರಾಗಿ ಆನಂದಿತರಾದರು. ಗೊಲ್ಲ ಬಾಲಕನ ಮೇಲೆ ಕೃಪೆಮಾಡಲಿಕ್ಕಾಗಿ ಸಾಕ್ಷಾತ್ ಪ್ರಕಟವಾದ ಶಿವಾಲಯವನ್ನು ಮತ್ತು ಶಿವಲಿಂಗವನ್ನು ದರ್ಶಿಸಿ ಎಲ್ಲ ರಾಜರು ತಮ್ಮ ಉತ್ತಮ ಬುದ್ಧಿಯನ್ನು ಭಗವಾನ್ ಶಿವನ ಚಿಂತನೆಯಲ್ಲಿ ತೊಡಗಿಸಿದರು. ಅನಂತರ ಆ ಎಲ್ಲ ನೃಪತಿಗಳು ಭಗವಾನ್ ಶಿವನ ಕೃಪೆಯನ್ನು ಪಡೆದು ಆ ಗೊಲ್ಲಬಾಲಕನಿಗೆ ಅನೇಕ ವಸ್ತುಗಳನ್ನು ಸಂತೋಷವಾಗಿ ಉಡುಗೊರೆಯಾಗಿ ಕೊಟ್ಟರು. ಆ ಎಲ್ಲ ರಾಜರು ತಮ್ಮ ರಾಜ್ಯಗಳಲ್ಲಿರುವ ಎಲ್ಲ ಗೊಲ್ಲರಿಗೆ ಈ ಬಾಲಕನನ್ನೇ ರಾಜನನ್ನಾಗಿಸಿದರು.

ಇದೇ ಸಮಯದಲ್ಲಿ ಸಮಸ್ತ ದೇವತೆಗಳಿಂದ ಪೂಜಿತ ಪರಮ ತೇಜಸ್ವೀ ವಾನರರಾಜ ಹನುಮಂತನು ಅಲ್ಲಿ ಪ್ರಕಟನಾದನು. ಅವನು ಬರುತ್ತಲೇ ಎಲ್ಲ ರಾಜರು ಲಗುಬಗೆಯಿಂದ ಎದ್ದುನಿಂತರು. ಅವರೆಲ್ಲರೂ ಭಕ್ತಿಭಾವದಿಂದ ವಿನಮ್ರರಾಗಿ ಅವನಿಗೆ ತಲೆ ಬಾಗಿದರು. ರಾಜರಿಂದ ಪೂಜಿತನಾದ ವಾನರರಾಜ ಆಂಜನೇಯನು ಅವರೆಲ್ಲರ ನಡುವೆ ಕುಳಿತು, ಆ ಗೊಲ್ಲ ಬಾಲಕನನ್ನು ಅಪ್ಪಿಕೊಂಡು ಆ ರಾಜರ ಕಡೆಗೆ ನೋಡುತ್ತಾ ಇಂತೆಂದನು – 'ರಾಜರುಗಳೇ ! ನೀವೆಲ್ಲರೂ ಹಾಗೂ ಇತರ ದೇಹಧಾರಿಗಳೆಲ್ಲರೂ ನನ್ನ ಮಾತನ್ನು ಕೇಳಿರಿ. ಇದರಿಂದ ನಿಮಗೆ ಒಳಿತಾಗುವುದು. ಭಗವಾನ್ ಶಿವನಲ್ಲದೆ ದೇಹಧಾರಿಗಳಿಗೆ ಬೇರೆ ಯಾವುದೇ ಗತಿಯಿಲ್ಲ. ಈ ಗೋಪಬಾಲಕನು ಶಿವನ ಪೂಜೆಯನ್ನು ದರ್ಶಿಸಿ, ಅದರಿಂದ ಪ್ರೇರಿತನಾಗಿ ಮಂತ್ರವಿಲ್ಲದೆಯೂ ಶಿವನನ್ನು ಪೂಜಿಸಿ ಅವನನ್ನು ಪಡೆದುಕೊಂಡನು. ಇದು ಸೌಭಾಗ್ಯದ ಮಾತಾಗಿದೆ. ಗೊಲ್ಲವಂಶದ ಕೀರ್ತಿಯನ್ನು ಬೆಳಸುವ ಈ ಬಾಲಕನು ಭಗವಾನ್ ಶಂಕರನ ಶ್ರೇಷ್ಠ ಭಕ್ತನಾಗಿರುವನು. ಈ ಲೋಕದಲ್ಲಿ ಸಮಸ್ತ ಭೋಗಗಳನ್ನೂ ಅನುಭವಿಸಿ, ಅಂತ್ಯದಲ್ಲಿ ಇವನು ಮೋಕ್ಷವನ್ನು ಪಡೆಯುವನು. ಇವನ ವಂಶಪರಂಪರೆಯ ಅಂತರ್ಗತ ಎಂಟನೆಯ ತಲೆಮಾರಿನಲ್ಲಿ ಮಹಾಯಶಸ್ವೀ ನಂದನು ಹುಟ್ಟುವನು. ಅವನಲ್ಲಿ ಸಾಕ್ಷಾತ್ ಭಗವಾನ್ ನಾರಾಯಣನು ಅವನಿಗೆ ಪುತ್ರರೂಪದಲ್ಲಿ ಪ್ರಕಟನಾಗಿ ಶ್ರೀಕೃಷ್ಣನಾಮದಿಂದ ಪ್ರಸಿದ್ಧನಾಗುವನು. ಇಂದಿನಿಂದ ಈ ಗೋಪ ಕುಮಾರನು ಈ ಜಗತ್ತಿನಲ್ಲಿ ಶ್ರೀಕರ ಎಂಬ ಹೆಸರಿನಿಂದ ವಿಶೇಷ ಖ್ಯಾತನಾಗುವನು.

ಸೂತಪುರಾಣಿಕರು ಹೇಳುತ್ತಾರೆ – ಬ್ರಾಹ್ಮಣರೇ ! ಹೀಗೆ ಹೇಳಿ ಅಂಜನೀನಂದನ ಶಿವಸ್ವರೂಪೀ ವಾನರರಾಜ ಹನುಮಂತನು ಸಮಸ್ತ ರಾಜರನ್ನು ಮತ್ತು ಚಂದ್ರಸೇನನನ್ನೂ ಕೃಪಾದೃಷ್ಟಿಯಿಂದ ನೋಡಿದನು. ಅನಂತರ ಅವನು ಆ ಬುದ್ಧಿವಂತ ಗೊಲ್ಲಬಾಲಕ ಶ್ರೀಕರನಿಗೆ ತುಂಬಾ ಸಂತೋಷದಿಂದ ಭಗವಾನ್ ಶಿವನಿಗೆ ಬಹಳ ಪ್ರಿಯವಾದ ಶಿವೋಪಾಸನೆಯ ಆಚಾರ-ವ್ಯವಹಾರಗಳನ್ನು ಉಪದೇಶಿಸಿದನು. ಇದಾದ ಬಳಿಕ ಪರಮ ಪ್ರಸನ್ನನಾದ ಹನುಮಂತನು ಚಂದ್ರಸೇನ ಮತ್ತು ಶ್ರೀಕರನಿಂದ ಬೀಳ್ಕೊಂಡು ಆ ಎಲ್ಲ ರಾಜರು ನೋಡು-ನೋಡುತ್ತಿರುವಂತೆ ಅಲ್ಲೇ ಅಂತರ್ಧಾನನಾದನು. ಆ ರಾಜರೆಲ್ಲರೂ ಹರ್ಷತುಂಬಿ ಸಮ್ಮಾನಿತರಾಗಿ ಚಂದ್ರಸೇನರಾಜನಿಂದ ಅಪ್ಪಣೆಯನ್ನು ಪಡೆದು ಬಂದ ಹಾಗೆ ಮರಳಿಹೋದರು. ಮಹಾತೇಜಸ್ವೀ ಶ್ರೀಕರನೂ ಕೂಡ ಆಂಜನೇಯನಿಂದ ಉಪದೇಶ ಪಡೆದು ಧರ್ಮಜ್ಞ ಬ್ರಾಹ್ಮಣರೊಂದಿಗೆ ಶಂಕರನ ಉಪಾಸನೆ ಮಾಡತೊಡಗಿದನು. ಚಂದ್ರಸೇನ ಮಹಾರಾಜ ಮತ್ತು ಗೋಪಬಾಲಕ ಶ್ರೀಕರ ಇಬ್ಬರೂ ಬಹಳ ಸಂತೋಷದೊಂದಿಗೆ ಮಹಾಕಾಲನ ಸೇವೆ ಮಾಡುತ್ತಿದ್ದರು. ಅವನನ್ನೇ ಆರಾಧಿಸಿ ಅವರಿಬ್ಬರೂ ಪರಮ ಪದವನ್ನು ಹೊಂದಿದರು. ಹೀಗೆ ಮಹಾಕಾಲ ಎಂಬ ಶಿವಲಿಂಗವು ಸತ್ಪುರುಷರ ಆಶ್ರಯವಾಗಿದೆ. ಭಕ್ತವತ್ಸಲ ಶಂಕರನು ದುಷ್ಟರನ್ನು ಸರ್ವಥಾ ನಾಶ ಮಾಡುವವನಾಗಿದ್ದಾನೆ. ಹೀಗೆ ಪರಮ ಪವಿತ್ರ ರಹಸ್ಯಮಯ ಆಖ್ಯಾನವನ್ನು ಹೇಳಲಾಯಿತು. ಇದು ಎಲ್ಲ ಪ್ರಕಾರದ ಸುಖವನ್ನು ಕೊಡುವುದಾಗಿದೆ. ಇದು ಶಿವಭಕ್ತಿಯನ್ನು ಹೆಚ್ಚಿಸಿ, ಸ್ವರ್ಗವನ್ನು ದೊರಕಿಸಿಕೊಡುತ್ತದೆ.

(ಅಧ್ಯಾಯ ೧೭)

❐ ❐ ❐

ವಿಂಧ್ಯನ ತಪಸ್ಸು, ಓಂಕಾರದಲ್ಲಿ ಪರಮೇಶ್ವರಲಿಂಗದ ಪ್ರಾದುರ್ಭಾವ ಮತ್ತು ಅದರ ಮಹಿಮೆಯ ವರ್ಣನೆ

ಋಷಿಗಳು ಕೇಳಿದರು-ಮಹಾನುಭಾವರಾದ ಸೂತರೇ! ತನ್ನ ಭಕ್ತನನ್ನು ರಕ್ಷಿಸಿದ ಮಹಾಕಾಲ ಎಂಬ ಶಿವಲಿಂಗದ ಅದ್ಭುತ ಕಥೆಯನ್ನು ತಿಳಿಸಿದಿರಿ. ಇನ್ನು ಕೃಪೆಮಾಡಿ ನಾಲ್ಕನೆಯ ಜ್ಯೋತಿರ್ಲಿಂಗದ ಪರಿಚಯ ಮಾಡಿಸಿರಿ. ಓಂಕಾರ ತೀರ್ಥದಲ್ಲಿ ಇರುವ ಸರ್ವಪಾತಕಹಾರಿ ಪರಮೇಶ್ವರನ ಜ್ಯೋತಿರ್ಲಿಂಗದ ಆವಿರ್ಭಾವದ ಕಥೆಯನ್ನು ಹೇಳಿರಿ.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ ! ಓಂಕಾರ ತೀರ್ಥದಲ್ಲಿ ಪರಮೇಶಸಂಜ್ಞಕ ಜ್ಯೋತಿರ್ಲಿಂಗವು ಹೇಗೆ ಪ್ರಕಟವಾಯಿತೆಂಬುದನ್ನು ತಿಳಿಸುತ್ತೇನೆ. ಭಕ್ತಿಯಿಂದ ಆಲಿಸಿರಿ. ಒಮ್ಮೆ ಭಗವಾನ್ ನಾರದ ಮುನಿಯು ಗೋಕರ್ಣಎಂಬ ಶಿವನ ಬಳಿಗೆ ಹೋಗಿ ಬಹಳ ಭಕ್ತಿಯಿಂದ ಅವನ ಸೇವೆಯನ್ನು ಮಾಡತೊಡಗಿದರು. ಸ್ವಲ್ಪ ಸಮಯದ ಬಳಿಕ ಆ ಮುನಿಶ್ರೇಷ್ಠರು ಅಲ್ಲಿಂದ ಗಿರಿರಾಜ ವಿಂಧ್ಯಕ್ಕೆ ಬಂದರು. ವಿಂಧ್ಯನು ಬಹಳ ಆದರದಿಂದ ಅವರನ್ನು ಪೂಜಿಸಿದನು. ನನ್ನಲ್ಲಿ ಎಲ್ಲವೂ ಇದೆ. ಎಂದಿಗೂ ಯಾವುದೇ ಕೊರತೆಯಾಗುವುದಿಲ್ಲ. ಈ ಭಾವವನ್ನು ಮನಸ್ಸಿನಲ್ಲಿಟ್ಟು ಕೊಂಡು ವಿಂಧ್ಯಾಚಲನು ನಾರದರ ಮುಂದೆ ನಿಂತು ಕೊಂಡನು. ಅವನ ಆ ಅಭಿಮಾನ ತುಂಬಿದ ಮಾತನ್ನು ಕೇಳಿ ಅಹಂಕಾರನಾಶಕ ನಾರದ ಮುನಿಗಳು ದೀರ್ಘವಾದ ನಿಟ್ಟುಸಿರುಬಿಟ್ಟು ಸುಮ್ಮನೆ ನಿಂತುಕೊಂಡರು. ಅದನ್ನು ನೋಡಿ ವಿಂಧ್ಯಪರ್ವತವು ಕೇಳಿತು - 'ನೀವು ನನ್ನಲ್ಲಿ ಯಾವ ಕೊರತೆಯನ್ನು ನೋಡಿರುವಿರಿ? ತಾವು ಹೀಗೆ ನಿಟ್ಟುಸಿರು ಬಿಡುವ ಕಾರಣವೇನು?'

ನಾರದರು ಹೇಳಿದರು - ಅಯ್ಯಾ ! ನಿನ್ನಲ್ಲಿ ಎಲ್ಲವೂ ಇದೆ. ಆದರೂ ಮೇರುಪರ್ವತವು ನಿನಗಿಂತ ಬಹಳ ಎತ್ತರವಾಗಿದೆ. ಅದರ ಶಿಖರಗಳ ವಿಭಾಗ ದೇವತೆಗಳ ಲೋಕದಲ್ಲಿಯೂ ತಲುಪಿವೆ. ಆದರೆ ನಿನ್ನ ಶಿಖರದ ಭಾಗವು ಎಂದಿಗೂ ಅಲ್ಲಿಗೆ ತಲುಪಲಿಲ್ಲ.

ಸೂತಪುರಾಣಿಕರು ಹೇಳುತ್ತಾರೆ - ಹೀಗೆ ಹೇಳಿ ನಾರದರು ಬಂದ ಹಾಗೆಯೇ ಹೊರಟು ಹೋದರು. ಆದರೆ ವಿಂಧ್ಯ ಪರ್ವತವು - 'ನನ್ನ ಜೀವನಕ್ಕೆ ಧಿಕ್ಕಾರವಿರಲಿ' ಎಂದು ಮನಸ್ಸಿನಲ್ಲೇ ಯೋಚಿಸುತ್ತಾ ಸಂತಪ್ತನಾದನು. ಇರಲಿ 'ಈಗ ನಾನು ವಿಶ್ವನಾಥ ಭಗವಾನ್ ಶಂಭುವನ್ನು ಆರಾಧನಾಪೂರ್ವಕ ತಪಸ್ಸನ್ನು ಮಾಡುವೆನು' ಎಂದು ಹಾರ್ದಿಕವಾಗಿ ನಿಶ್ಚಯಿಸಿ ಅವನು ಭಗವಾನ್ ಶಂಕರನಲ್ಲಿ ಶರಣಾದನು. ಅನಂತರ ಸಾಕ್ಷಾತ್ ಓಂಕಾರವು ಸ್ಥಿತವಿರುವಲ್ಲಿಗೆ ಹೋಗಿ ಅವನು ಸಂತೋಷದಿಂದ ಶಿವನ ಪಾರ್ಥಿವ ಮೂರ್ತಿಯನ್ನು ಮಾಡಿ ಆರು ತಿಂಗಳಕಾಲ ನಿರಂತರ ಶಂಭುವನ್ನು ಆರಾಧಿಸಿ, ಶಿವನ ಧ್ಯಾನದಲ್ಲಿ ತತ್ಪರನಾಗಿ ತನ್ನ ತಪಸ್ಸಿನ ಸ್ಥಾನದಿಂದ ಕದಲಲಿಲ್ಲ. ವಿಂಧ್ಯಾಚಲನ ಇಂತಹ ತಪಸ್ಸನ್ನು ನೋಡಿ ಪಾರ್ವತಿಪತಿಯು ಪ್ರಸನ್ನನಾದನು. ಅವನು ಯೋಗಿಗಳಿಗೂ ದುರ್ಲಭವಾದ ತನ್ನ ಸ್ವರೂಪವನ್ನು ವಿಂಧ್ಯಾಚಲನಿಗೆ ತೋರಿದನು. ಶಿವನು ಪ್ರಸನ್ನನಾಗಿ ಆಗ ಅವನಲ್ಲಿ ಹೇಳಿದನು - ವಿಂಧ್ಯನೇ ! ನೀನು ಮನೋವಾಂಛಿತ ವರವನ್ನು ಕೇಳು. ನಾನು ಭಕ್ತರಿಗೆ ಅಭೀಷ್ಟ ವರವನ್ನು ಕೊಡುವವನು ಹಾಗೂ ನಿನ್ನ ತಪಸ್ಸಿನಿಂದ ಪ್ರಸನ್ನನಾಗಿರುವೆನು.

ವಿಂಧ್ಯನು ಹೇಳಿದನು - ದೇವೇಶ್ವರ ಶಂಭೋ ! ನೀನು ಸದಾ ಭಕ್ತವತ್ಸಲನಾಗಿರುವೆ. ನೀನು ನನ್ನ ಮೇಲೆ ಪ್ರಸನ್ನನಾಗಿರುವೆಯಾದರೆ, ನಿನ್ನ ಕಾರ್ಯವನ್ನು ಸಿದ್ಧಗೊಳಿಸುವಂತಹ ಅಭೀಷ್ಟ ಬುದ್ಧಿಯನ್ನು ನನಗೆ ಕರುಣಿಸು.

ಭಗವಾನ್ ಶಂಭುವು ಅವನಿಗೆ ಆ ಉತ್ತಮ ವರವನ್ನು ಕೊಟ್ಟು ಹೇಳಿದನು - ಪರ್ವತರಾಜ ವಿಂಧ್ಯನೇ ! 'ನೀನು ಬಯಸಿದಂತೆ ಮಾಡು ! ಅಷ್ಟರಲ್ಲಿ ದೇವತೆಗಳು ಹಾಗೂ ನಿರ್ಮಲ ಅಂತಃಕರಣವುಳ್ಳ ಋಷಿಗಳು ಅಲ್ಲಿಗೆ ಬಂದರು ಮತ್ತು ಶಂಕರನನ್ನು ಪೂಜಿಸಿ - 'ಪ್ರಭೋ ! ನೀನು ಇಲ್ಲಿ ಸ್ಥಿರವಾಗಿ ನೆಲೆಸು' ಎಂದು ಬೇಡಿಕೊಂಡರು.

ದೇವತೆಗಳ ಈ ಮಾತನ್ನು ಕೇಳಿ ಪರಮೇಶ್ವರ ಶಿವನು ಪ್ರಸನ್ನನಾಗಿ ಜನರಿಗೆ ಸುಖವನ್ನು ಕೊಡುವುದಕ್ಕಾಗಿ ಹರ್ಷದಿಂದ ಹಾಗೆಯೇ ಮಾಡಿದನು. ಅಲ್ಲಿ ಇದ್ದ ಒಂದೇ ಓಂಕಾರಲಿಂಗವು ಎರಡು ಸ್ವರೂಪಗಳಲ್ಲಿ ವಿಭಕ್ತವಾಯಿತು. ಪ್ರಣವದಲ್ಲಿದ್ದ ಸದಾಶಿವನು ಓಂಕಾರ ಹೆಸರಿನಿಂದ ವಿಖ್ಯಾತನಾದನು ಮತ್ತು ಪಾರ್ಥಿವ ಮೂರ್ತಿಯಲ್ಲಿ ಪ್ರತಿಷ್ಠಿತವಾಗಿದ್ದ ಶಿವ-ಜ್ಯೋತಿಯ ಪರಮೇಶ್ವರ ಸಂಜ್ಞೆ ಉಂಟಾಯಿತು (ಪರಮೇಶ್ವರನನ್ನೇ ಅಮಲೇಶ್ವರವೆಂದೂ ಹೇಳುತ್ತಾರೆ). ಹೀಗೆ ಓಂಕಾರ ಮತ್ತು ಪರಮೇಶ್ವರ

ಇವೆರಡೂ ಶಿವಲಿಂಗಗಳು ಭಕ್ತರಿಗೆ ಅಭೀಷ್ಟ ಫಲವನ್ನು ಕರುಣಿಸುವಂತಹವುಗಳು. ಆಗ ದೇವತೆಗಳು ಮತ್ತು ಋಷಿಗಳು ಅವೆರಡೂ ಲಿಂಗಗಳನ್ನು ಪೂಜಿಸಿದರು ಹಾಗೂ ಭಗವಾನ್ ವೃಷಭಧ್ವಜನನ್ನು ಸಂತುಷ್ಟಗೊಳಿಸಿ ಅನೇಕ ವರಗಳನ್ನು ಪಡೆದುಕೊಂಡರು. ಅನಂತರ ದೇವತೆಗಳು ತಮ್ಮ-ತಮ್ಮ ಸ್ಥಾನಗಳಿಗೆ ಹೊರಟುಹೋದರು. ವಿಂಧ್ಯಾಚಲನೂ ಹೆಚ್ಚು ಸಂತೋಷವನ್ನು ಅನುಭವಿಸತೊಡಗಿದನು. ಅವನು ತನ್ನ ಅಭೀಷ್ಟ ಕಾರ್ಯವನ್ನು ಸಿದ್ಧಗೊಳಿಸಿಕೊಂಡು ಮಾನಸಿಕ ತಾಪವನ್ನು ತ್ಯಜಿಸಿದನು. ಈ ಪ್ರಕಾರ ಭಗವಾನ್ ಶಂಕರನನ್ನು ಪೂಜಿಸುವವನು ಮತ್ತೆ ಗರ್ಭವಾಸವನ್ನು ಅನುಭವಿಸುವುದಿಲ್ಲ. ತನ್ನ ಅಭೀಷ್ಟವನ್ನು ಪಡೆದುಕೊಳ್ಳುವನು ಇದರಲ್ಲಿ ಸಂಶಯವಿಲ್ಲ.

ಸೂತಪುರಾಣಿಕರು ಹೇಳಿದರು - ಮಹರ್ಷಿಗಳೇ ! ಓಂಕಾರದಲ್ಲಿ ಪ್ರಕಟವಾದ ಜ್ಯೋತಿರ್ಲಿಂಗ ಮತ್ತು ಅದರ ಆರಾಧನೆಯಿಂದ ದೊರೆಯುವ ಫಲವನ್ನು ನಿಮಗೆ ಈಗ ತಿಳಿಸಲಾಯಿತು. ಇನ್ನು ಮುಂದೆ ನಾನು ಉತ್ತಮ ಕೇದಾರ ಹೆಸರಿನ ಜ್ಯೋತಿರ್ಲಿಂಗವನ್ನು ವರ್ಣಿಸುವೆನು.

(ಅಧ್ಯಾಯ ೧೮)

❐ ❐ ❐

ಕೇದಾರೇಶ್ವರ ಹಾಗೂ ಭೀಮಶಂಕರ ಎಂಬ ಜ್ಯೋತಿರ್ಲಿಂಗಗಳ ಆವಿರ್ಭಾವದ ಕಥೆ ಮತ್ತು ಅವುಗಳ ಮಾಹಾತ್ಮ್ಯದ ವರ್ಣನೆ

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರಿರಾ ! ಭಗವಾನ್ ವಿಷ್ಣುವು ನರ-ನಾರಾಯಣ ಎಂಬ ಎರಡು ಅವತಾರಗಳನ್ನೆತ್ತಿ ಭಾರತ ವರ್ಷದ ಬದರಿಕಾಶ್ರಮ ತೀರ್ಥಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿರುವನು. ಆ ನರ-ನಾರಾಯಣರಿಬ್ಬರು ಪಾರ್ಥಿವ ಶಿವಲಿಂಗವನ್ನು ರಚಿಸಿ ಅದರಲ್ಲಿ ಸ್ಥಿತನಾಗಿ ಪೂಜೆಯನ್ನು ಸ್ವೀಕರಿಸಲು ಭಗವಾನ್ ಶಂಭುವಿನಲ್ಲಿ ಪ್ರಾರ್ಥಿಸಿದರು. ಶಿವನು ಭಕ್ತರ ಅಧೀನನಾದ್ದರಿಂದ ಪ್ರತಿದಿನವೂ ಅವರು ರಚಿಸಿದ ಪಾರ್ಥಿವ ಲಿಂಗದಲ್ಲಿ ಪೂಜಿತನಾಗಲು ಬರುತ್ತಿದ್ದನು. ಅವರಿಬ್ಬರು ಪಾರ್ಥಿವ ಪೂಜೆಯನ್ನು ಮಾಡುತ್ತಾ ಬಹಳ ದಿನಗಳು ಕಳೆದು ಹೋದುವು. ಆಗ ಒಮ್ಮೆ ಪರಮೇಶ್ವರ ಶಿವನು ಪ್ರಸನ್ನನಾಗಿ 'ನಾನು ನಿಮ್ಮ ಆರಾಧನೆಯಿಂದ ಬಹಳ ಸಂತುಷ್ಟನಾಗಿರುವೆನು. ನೀವಿಬ್ಬರೂ ನನ್ನಿಂದ ವರವನ್ನು ಕೇಳಿಕೊಳ್ಳಿರಿ' ಎಂದು ಅವನು ಹೇಳಿದಾಗ ನರ-ನಾರಾಯಣರು ಜನರ ಹಿತದ ಕಾಮನೆಯಿಂದ ಇಂತೆಂದರು - 'ದೇವೇಶ್ವರನೇ ! ನೀನು ಪ್ರಸನ್ನನಾಗಿದ್ದು ನಮಗೆ ವರವನ್ನು ಕೊಡಲು ಬಯಸುವೆಯಾದರೆ ನಿನ್ನ ಸ್ವರೂಪದಿಂದ ಪೂಜೆಯನ್ನು ಸ್ವೀಕರಿಸಲು ಇಲ್ಲೇ ಸ್ಥಿರವಾಗಿರು.' ಆ ಇಬ್ಬರು ಬಂಧುಗಳು ಹೀಗೆ ಒತ್ತಾಯಮಾಡಿದಾಗ ಕಲ್ಯಾಣಕಾರಿ ಮಹೇಶ್ವರನು ಹಿಮಾಲಯದ ಆ ಕೇದಾರ ತೀರ್ಥದಲ್ಲಿ ಸಾಕ್ಷಾತ್ ಜ್ಯೋತಿರ್ಲಿಂಗದ ರೂಪದಲ್ಲಿ ಸ್ಥಿತನಾದನು. ಅವರಿಬ್ಬರಿಂದ ಪೂಜಿತನಾಗಿ ಸಂಪೂರ್ಣ ದುಃಖ ಮತ್ತು ಭಯವನ್ನು ನಾಶಗೊಳಿಸುವಂತಹ ಶಂಭುವು ಜನರಿಗೆ ಉಪಕಾರವನ್ನು ಮಾಡಲು, ಭಕ್ತರಿಗೆ ದರ್ಶನಕೊಡಲು ಸಾಕ್ಷಾತ್ ಕೇದಾರೇಶ್ವರ ಎಂದು ಪ್ರಸಿದ್ಧನಾಗಿ ಅಲ್ಲಿ ನೆಲೆಸಿರುವನು. ದರ್ಶನ, ಪೂಜೆ ಮಾಡುವ ಭಕ್ತರಿಗೆ ಅವನು ಸದಾ ಅಭೀಷ್ಟ ವಸ್ತುಗಳನ್ನು ಕರುಣಿಸುವನು. ಅಂದಿನಿಂದ ಭಕ್ತಿಭಾವದಿಂದ ಕೇದಾರೇಶ್ವರನನ್ನು ಪೂಜಿಸಿದವನಿಗೆ ಸ್ವಪ್ನದಲ್ಲಿಯೂ ದುಃಖವು ದುರ್ಲಭವಾಯಿತು. ಭಗವಾನ್ ಶಿವನ ಪ್ರಿಯಭಕ್ತನು ಅಲ್ಲಿ ಶಿವಲಿಂಗದ ಸನ್ನಿಧಿಯಲ್ಲಿ ಶಿವರೂಪದಿಂದ ಅಂಕಿತವಾದ ವಲಯ (ಕಡಗ)ವನ್ನು ಅರ್ಪಿಸುವವನು ಆ ವಲಯಯುಕ್ತ ಸ್ವರೂಪದ ದರ್ಶನ ಮಾಡಿ ಸಮಸ್ತ ಪಾಪಗಳಿಂದ ಮುಕ್ತನಾಗುತ್ತಾನೆ, ಜೊತೆಗೆ ಜೀವನ್ಮುಕ್ತನಾಗಿ ಹೋಗುವನು. ಬದರೀವನದ ಯಾತ್ರೆ ಮಾಡುವವನಿಗೂ ಜೀವನ್ಮುಕ್ತಿ ಪ್ರಾಪ್ತವಾಗುತ್ತದೆ. ನರ-ನಾರಾಯಣರ ಹಾಗೂ ಕೇದಾರೇಶ್ವರ ಶಿವನ ರೂಪವನ್ನು ದರ್ಶಿಸುವವನು ಮೋಕ್ಷಕ್ಕೆ ಭಾಗಿಯಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ. ಕೇದಾರೇಶ್ವರನಲ್ಲಿ ಭಕ್ತಿಯುಳ್ಳ ಮನುಷ್ಯನು ಅಲ್ಲಿಯ ಯಾತ್ರೆ ಆರಂಭಿಸಿ ಅವನ ಸನ್ನಿಧಿಗೆ ಹೋಗುವ ಮೊದಲು ದಾರಿಯಲ್ಲೇ ದೇಹಾಂತವಾದರೂ ಮೋಕ್ಷವನ್ನು ಪಡೆಯುವನು, ಇದರಲ್ಲಿ ಯೋಚಿಸುವ ಅವಶ್ಯಕತೆ ಇಲ್ಲ.* ಕೇದಾರತೀರ್ಥಕ್ಕೆ ತಲುಪಿ ಅಲ್ಲಿ

---

* ಕೇದಾರೇಶಸ್ಯ ಭಕ್ತಾಯೇ ಮಾರ್ಗಸ್ಥಾಸ್ತಸ್ಯ ವೈ ಮೃತಾಃ । ತೇಽಪಿ ಮುಕ್ತಾ ಭವಂತ್ಯೇವ ನಾತ್ರ ಕಾರ್ಯಾ ವಿಚಾರಣಾ ॥
(ಶಿ- ಪು - ಕೋಟಿ - ರು - ಸಂ - ೧೯/೨೨)

ಪ್ರೇಮದಿಂದ ಕೇದಾರೇಶ್ವರನನ್ನು ಪೂಜಿಸಿ, ಅಲ್ಲಿಯ ನೀರನ್ನು ಕುಡಿದ ಬಳಿಕ ಮನುಷ್ಯನು ಪುನಃ ಹುಟ್ಟುವುದಿಲ್ಲ. ಬ್ರಾಹ್ಮಣರೇ ! ಈ ಭಾರತವರ್ಷದಲ್ಲಿ ಸಮಸ್ತ ಜೀವರು ಭಕ್ತಿ-ಭಾವದಿಂದ ಭಗವಾನ್ ನರ-ನಾರಾಯಣರನ್ನು ಹಾಗೂ ಕೇದಾರೇಶ್ವರ ಶಂಭುವನ್ನು ಪೂಜಿಸಬೇಕು.

ಇನ್ನು ನಾನು ಭೀಮಶಂಕರ ಎಂಬ ಜ್ಯೋತಿರ್ಲಿಂಗದ ಮಾಹಾತ್ಮ್ಯವನ್ನು ಹೇಳುವೆನು. ಕಾಮರೂಪ ದೇಶದಲ್ಲಿ ಲೋಕಹಿತದ ಕಾಮನೆಯಿಂದ ಸಾಕ್ಷಾತ್ ಭಗವಾನ್ ಶಂಕರನು ಜ್ಯೋತಿರ್ಲಿಂಗದ ರೂಪದಲ್ಲಿ ಅವತರಿಸಿದ್ದನು. ಅವನ ಆ ಸ್ವರೂಪವು ಕಲ್ಯಾಣ ಮತ್ತು ಸುಖದ ಆಶ್ರಯವಾಗಿದೆ. ಬ್ರಾಹ್ಮಣರೇ ! ಹಿಂದಿನ ಕಾಲದಲ್ಲಿ ಒಬ್ಬ ಮಹಾಪರಾಕ್ರಮಿ ಭೀಮನೆಂಬ ರಾಕ್ಷಸನಿದ್ದನು. ಅವನು ಸದಾ ಧರ್ಮದ ವಿಧ್ವಂಸಕನಾಗಿ, ಸಮಸ್ತ ಪ್ರಾಣಿಗಳಿಗೆ ದುಃಖವನ್ನು ಕೊಡುತ್ತಿದ್ದನು. ಆ ಮಹಾಬಲಿ ರಾಕ್ಷಸನು ಕುಂಭಕರ್ಣನ ವೀರ್ಯದಿಂದ ಕರ್ಕಟೀಯ ಗರ್ಭದಿಂದ ಹುಟ್ಟಿದ್ದನು. ಅವನು ತನ್ನ ತಾಯಿಯ ಜೊತೆಗೆ ಸಹ್ಯ ಪರ್ವತದಲ್ಲಿ ವಾಸಿಸುತ್ತಿದ್ದನು. ಒಂದು ದಿನ ಸಮಸ್ತ ಜನರಿಗೆ ದುಃಖವನ್ನು ಕೊಡುವ ಭಯಾನಕ ಪರಾಕ್ರಮಿ ದುಷ್ಟ ಭೀಮನು ತನ್ನ ತಾಯಿಯಬಳಿ ಕೇಳಿದನು - 'ಅಮ್ಮಾ ! ನನ್ನ ತಂದೆ ಎಲ್ಲಿರುವರು ? ನೀನೊಬ್ಬಳೇ ಏಕೆ ಇರುತ್ತೀಯೇ ? ನಾನು ಇದೆಲ್ಲವನ್ನು ತಿಳಿಯಲು ಬಯಸುವೆನು. ಆದ್ದರಿಂದ ನಿಜವನ್ನು ತಿಳಿಸು.'

ಕರ್ಕಟಿಯು ಹೇಳಿದಳು - ಮಗೂ ! ರಾವಣನ ತಮ್ಮ ಕುಂಭಕರ್ಣನೇ ನಿನ್ನ ತಂದೆಯು. ಅಣ್ಣನೊಂದಿಗೆ ಆ ಮಹಾಬಲಿ ವೀರನನ್ನು ಶ್ರೀರಾಮನು ಕೊಂದು ಹಾಕಿದನು. ನನ್ನ ತಂದೆಯ ಹೆಸರು ಕರ್ಕಟ ಮತ್ತು ತಾಯಿಯ ಹೆಸರು ಪುಷ್ಕಸೀ ಎಂದಿತ್ತು. ವಿರಾಧನು ನನ್ನ ಪತಿಯಾಗಿದ್ದನು. ಅವನನ್ನು ಹಿಂದೆ ರಾಮನು ಕೊಂದಿದ್ದನು. ನನ್ನ ಸ್ವಾಮಿಯು ಸತ್ತುಹೋದಾಗ ನಾನು ನನ್ನ ತಂದೆ-ತಾಯಿಯರ ಬಳಿಯಲ್ಲಿ ಇರುತ್ತಿದ್ದೆ. ಒಂದು ದಿನ ನನ್ನ ತಂದೆ-ತಾಯಿಯರು ಅಗಸ್ತ್ಯಮುನಿಯ ಶಿಷ್ಯ ಸುತೀಕ್ಷ್ಣರನ್ನು ತಿಂದು ಹಾಕಲು ಹೋದರು. ಅವರು ದೊಡ್ಡ ತಪಸ್ವಿಗಳೂ, ಮಹಾತ್ಮರೂ ಆಗಿದ್ದರು. ಅವರು ಕುಪಿತರಾಗಿ ನನ್ನ ತಂದೆ-ತಾಯಿಯರನ್ನು ಭಸ್ಮಮಾಡಿಬಿಟ್ಟರು. ಅವರಿಬ್ಬರೂ ಸತ್ತಹೋದರು. ಅಂದಿನಿಂದ ನಾನೊಬ್ಬಳೇ ದುಃಖದಿಂದ ಈ ಪರ್ವತದಲ್ಲಿ ಇರತೊಡಗಿದೆನು. ನನಗೆ ಯಾವುದೇ ಆಶ್ರಯ ಉಳಿಯಲಿಲ್ಲ. ಅಸಹಾಯಕಳಾದ ನಾನು ದುಃಖಾತುರಳಾಗಿ ಇಲ್ಲಿ ವಾಸಿಸುತ್ತಿದ್ದೆ. ಆಗಲೇ ಒಂದು ದಿನ ಮಹಾಬಲ - ಪರಾಕ್ರಮದಿಂದ ಸಂಪನ್ನ ರಾವಣನ ತಮ್ಮ ರಾಕ್ಷಸ ಕುಂಭಕರ್ಣನು ಇಲ್ಲಿಗೆ ಬಂದನು. ಅವನು ಬಲಾತ್ಕಾರದಿಂದ ನನ್ನೊಡನೆ ಸಮಾಗಮ ಮಾಡಿದನು. ಮತ್ತೆ ಅವನು ನನ್ನನ್ನು ಬಿಟ್ಟು ಲಂಕೆಗೆ ಹೊರಟುಹೋದನು. ಅನಂತರ ನೀನು ಹುಟ್ಟಿದೆ. ನೀನೂ ತಂದೆಯಂತೆಯೇ ಮಹಾನ್ ಬಲವಂತನಾಗಿರುವೆ ಮತ್ತು ಪರಾಕ್ರಮಿಯಾಗಿರುವೆ. ಈಗ ನಾನು ನಿನ್ನ ಆಸರೆಯಿಂದ ಇಲ್ಲಿ ಕಾಲವನ್ನು ಕಳೆಯುತ್ತಿದ್ದೇನೆ.

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರೇ ! ಕರ್ಕಟಿಯ ಮಾತನ್ನು ಕೇಳಿ ಭಯಾನಕ ಪರಾಕ್ರಮಿ ಭೀಮನು ಕುಪಿತನಾಗಿ - 'ನಾನು ವಿಷ್ಣುವಿನ ಜೊತೆಗೆ ಹೇಗೆ ವರ್ತಿಸಬೇಕು ?' ಅವನು ನನ್ನ ತಂದೆಯನ್ನು ಕೊಂದು ಹಾಕಿರುವನು, ನನ್ನ ಅಜ್ಜ-ಅಜ್ಜಿ ಇಬ್ಬರೂ ಅವನ ಭಕ್ತನ ಕೈಯಿಂದ ಸತ್ತುಹೋದರು. ವಿರಾಧನನ್ನೂ ಕೂಡ ಅವನೇ ಕೊಂದು ಹಾಕಿದನು. ಹೀಗೆ ನನಗೆ ಬಹಳ ದುಃಖವನ್ನು ಕೊಟ್ಟಿರುವನು. ನಾನು ನಿಜವಾಗಿ ತಂದೆಯ ಮಗನಾಗಿದ್ದರೆ ಶ್ರೀಹರಿಯನ್ನು ಖಂಡಿತವಾಗಿ ಪೀಡಿಸುವೆನು' ಎಂದು ಯೋಚಿಸಿದನು.

ಹೀಗೆ ನಿಶ್ಚಯಿಸಿ ಭೀಮನು ಮಹಾತಪಸ್ಸನ್ನು ಮಾಡಲು ಹೊರಟುಬಿಟ್ಟನು. ಅವನು ಬ್ರಹ್ಮದೇವರನ್ನು ಒಲಿಸಿಕೊಳ್ಳಲು ಒಂದು ಸಾವಿರ ವರ್ಷಗಳವರೆಗೆ ಮಹಾತಪಸ್ಸನ್ನು ಮಾಡಿದನು. ತಪಸ್ಸಿನೊಂದಿಗೆ ಅವನು ಮನಸ್ಸಿನಲ್ಲೇ ಇಷ್ಟದೇವನನ್ನು ಧ್ಯಾನಮಾಡುತ್ತಾ ಇದ್ದನು. ಆಗ ಲೋಕಪಿತಾಮಹ ಬ್ರಹ್ಮದೇವರು ಅವನಿಗೆ ವರವನ್ನು ಕೊಡಲು ಬಂದು ಇಂತೆಂದರು.

ಬ್ರಹ್ಮದೇವರು ಹೇಳಿದರು - ಭೀಮನೇ ! ನಾನು ನಿನ್ನ ಮೇಲೆ ಪ್ರಸನ್ನನಾಗಿರುವೆನು. ನಿನಗೆ ಇಚ್ಛೆಯಿರುವಂತೆ ವರವನ್ನು ಕೇಳು.

ಭೀಮನು ಹೇಳಿದನು - ದೇವೇಶ್ವರನೇ ! ಕಮಲಾಸನನೇ ! ನೀನು ಪ್ರಸನ್ನನಾಗಿದ್ದು, ನನಗೆ ವರವನ್ನು ಕೊಡಲು ಬಯಸುವೆಯಾದರೆ, ಇಂದು ನನಗೆ ಅತುಲವಾದ ಬಲವನ್ನು ಕರುಣಿಸು.

ಸೂತಪುರಾಣಿಕರು ಹೇಳುತ್ತಾರೆ - ಹೀಗೆ ಹೇಳಿ ಆ ರಾಕ್ಷಸನು ಬ್ರಹ್ಮದೇವರಿಗೆ ನಮಸ್ಕರಿಸಿದನು ಹಾಗೂ ಬ್ರಹ್ಮದೇವರೂ ಕೂಡ ಅವನಿಗೆ ಅಭೀಷ್ಟ ವರವನ್ನು ಕೊಟ್ಟು ತಮ್ಮ ಧಾಮಕ್ಕೆ ಹೊರಟುಹೋದರು. ಬ್ರಹ್ಮದೇವರಿಂದ ಅತ್ಯಂತ ಬಲವನ್ನು ಪಡೆದು ರಾಕ್ಷಸನು ಮನೆಗೆ ಬಂದು ತಾಯಿಗೆ ನಮಸ್ಕಾರಮಾಡಿ ಬೇಗ-ಬೇಗನೇ ತುಂಬಾ ಗರ್ವದಿಂದ - 'ಅಮ್ಮಾ ! ಇನ್ನು ನೀನು ನನ್ನ ಬಲವನ್ನು

ನೋಡು. ನಾನು ಇಂದ್ರಾದಿ ದೇವತೆಗಳನ್ನು ಹಾಗೂ ಅವರ ಸಹಾಯಕನಾದ ಶ್ರೀಹರಿಯನ್ನು ಸಂಹರಿಸಿ ಬಿಡುವೆನು.' ಹೀಗೆ ಹೇಳಿ ಭಯಾನಕ ಪರಾಕ್ರಮಿ ಭೀಮನು ಮೊದಲಿಗೆ ಇಂದ್ರಾದಿ ದೇವತೆಗಳನ್ನು ಗೆದ್ದುಕೊಂಡು ಅವರೆಲ್ಲರನ್ನೂ ಅವರವರ ಸ್ಥಾನಗಳಿಂದ ತೆಗೆದು ಹೊರ ಹಾಕಿದನು. ಅನಂತರ ದೇವತೆಗಳ ಪ್ರಾರ್ಥನೆಯಂತೆ ಅವರ ಪಕ್ಷವನ್ನು ವಹಿಸುವ ಶ್ರೀಹರಿಯನ್ನು ಕೂಡ ಅವನು ಯುದ್ಧದಲ್ಲಿ ಸೋಲಿಸಿದನು. ಮತ್ತೆ ಪ್ರಯತ್ನಪೂರ್ವಕ ಭೂಮಿಯನ್ನು ಗೆಲ್ಲಲು ಪ್ರಾರಂಭಿಸಿದನು. ಮೊಟ್ಟಮೊದಲಿಗೆ ಅವನು ಕಾಮರೂಪ ದೇಶದ ರಾಜಾಸುದಕ್ಷಿಣನನ್ನು ಗೆದ್ದುಕೊಳ್ಳಲು ಹೋದನು. ಅಲ್ಲಿ ರಾಜನೊಂದಿಗೆ ಅವನ ಭಯಂಕರ ಯುದ್ಧವಾಯಿತು. ದುಷ್ಟ ಅಸುರ ಭೀಮನು ಬ್ರಹ್ಮದೇವರಿಂದ ಪಡೆದ ವರಬಲದಿಂದ ಶಿವನ ಆಶ್ರಯದಲ್ಲಿರುವ ಮಹಾವೀರ ಸುದಕ್ಷಿಣರಾಜನನ್ನೂ ಸೋಲಿಸಿಬಿಟ್ಟನು ಹಾಗೂ ಎಲ್ಲ ಸಾಮಗ್ರಿಗಳಸಹಿತ ಅವನ ರಾಜ್ಯ ಮತ್ತು ಸರ್ವಸ್ವವನ್ನು ತನ್ನ ಅಧಿಕಾರಕ್ಕೆ ತೆಗೆದುಕೊಂಡನು. ಭಗವಾನ್ ಶಿವನ ಪ್ರಿಯ ಭಕ್ತ ಧರ್ಮಪ್ರೇಮಿ ಪರಮ ಧಾರ್ಮಿಕ ರಾಜನನ್ನೂ ಕೂಡ ಅವನು ಬಂಧಿಸಿ ಕಾಲುಗಳಿಗೆ ಕೊಳಗಳನ್ನು ತೊಡಿಸಿ ಏಕಾಂತ ಸ್ಥಾನದಲ್ಲಿ ಬಂಧಿಸಿಟ್ಟನು. ಅಲ್ಲಿ ರಾಜನು ಭಗವಂತನ ಪ್ರೀತಿಗಾಗಿ ಶಿವನ ಉತ್ತಮ ಪಾರ್ಥಿವ ಮೂರ್ತಿಯನ್ನು ಮಾಡಿಕೊಂಡು ಭಜನೆ-ಪೂಜೆಯನ್ನು ಪ್ರಾರಂಭಿಸಿದನು. ರಾಜನು ಪದೇ-ಪದೇ ಗಂಗೆಯನ್ನು ಸ್ತುತಿಸಿ ಮಾನಸಿಕ ಸ್ನಾನಾದಿಗಳನ್ನು ಮಾಡಿ ಪಾರ್ಥಿವ ಪೂಜೆಯ ವಿಧಾನದಿಂದ ಶಂಕರನ ಪೂಜೆಯನ್ನು ನೆರವೇರಿಸಿದನು. ವಿಧಿವತ್ತಾಗಿ ಭಗವಾನ್ ಶಿವನನ್ನು ಧ್ಯಾನಿಸಿ ಅವನು ಪ್ರಣವಯುಕ್ತ ಪಂಚಾಕ್ಷರಮಂತ್ರ (**ಓಂ ನಮಃ ಶಿವಾಯ**)ವನ್ನು ಜಪಿಸ ತೊಡಗಿದನು. ಈಗ ಅವನಿಗೆ ಬೇರೆ ಯಾವುದೇ ಕೆಲಸ ಮಾಡಲಿಕ್ಕಾಗಿ ಅವಕಾಶವೇ ಸಿಗುತ್ತಿರಲಿಲ್ಲ. ಆಗ ಅವನ ಸಾಧ್ವಿ ಪತ್ನಿಯು ರಾಜವಲ್ಲಭೆ ದಕ್ಷಿಣೆಯು ಭಕ್ತಿಯಿಂದ ಪಾರ್ಥಿವ ಪೂಜೆಯನ್ನು ಮಾಡುತ್ತಿದ್ದಳು. ಆ ದಂಪತಿಗಳು ಅನನ್ಯ ಭಾವದಿಂದ ಭಕ್ತರ ಕಲ್ಯಾಣ ಮಾಡುವ ಭಗವಾನ್ ಶಂಕರನ ಭಜನೆ ಮಾಡುತ್ತಾ, ಪ್ರತಿದಿನವೂ ಅವನ ಆರಾಧನೆಯಲ್ಲೇ ತತ್ಪರರಾಗಿರುತ್ತಿದ್ದರು. ಇತ್ತ ಆ ರಾಕ್ಷಸನು ವರಗರ್ವದಿಂದ ಮೋಹಾಂಧನಾಗಿ ಯಜ್ಞ ಕರ್ಮಾದಿ ಎಲ್ಲವನ್ನು ಕೆಡಿಸಿ ಧರ್ಮಗಳನ್ನು ಲೋಪಗೊಳಿಸುತ್ತಾ ಎಲ್ಲರಲ್ಲಿ - 'ನೀವೆಲ್ಲರೂ ಎಲ್ಲವನ್ನೂ ನನಗೆ ಕೊಟ್ಟು ಬಿಡಿರಿ', ಎಂದು ಹೇಳತೊಡಗಿದನು. ಮಹರ್ಷಿಗಳೇ ! ದುರಾತ್ಮರಾದ ರಾಕ್ಷಸರ ಬಹಳ ದೊಡ್ಡ ಸೈನ್ಯವನ್ನು ಜೊತೆಗೆ ಸೇರಿಸಿಕೊಂಡು ಅವನು ಇಡೀ ಪೃಥಿವಿಯನ್ನು ವಶಪಡಿಸಿಕೊಂಡನು. ಅವನು ವೇದ, ಶಾಸ್ತ್ರಗಳಲ್ಲಿ, ಸ್ಮೃತಿಗಳಲ್ಲಿ, ಪುರಾಣಗಳಲ್ಲಿ ಹೇಳಲಾದ ಧರ್ಮಗಳನ್ನು ಲೋಪಗೊಳಿಸಿ, ಶಕ್ತಿಶಾಲಿಯಾದ ಕಾರಣ ಎಲ್ಲವನ್ನು ತಾನೇ ಅನುಭವಿಸತೊಡಗಿದನು.

ಆಗ ಎಲ್ಲ ದೇವತೆಗಳು ಹಾಗೂ ಋಷಿಗಳು ಅತ್ಯಂತ ಪೀಡಿತರಾಗಿ ಮಹಾಕೋಶಿಯ ತೀರಕ್ಕೆ ಹೋಗಿ ಶಿವನನ್ನು ಆರಾಧಿಸಿ, ಸ್ತುತಿಸತೊಡಗಿದರು. ಅವರು ಹೀಗೆ ಸ್ತುತಿಸಿದಾಗ ಭಗವಾನ್ ಶಿವನು ಅತ್ಯಂತ ಪ್ರಸನ್ನನಾಗಿ ದೇವತೆಗಳಲ್ಲಿ ಹೇಳಿದನು - ದೇವತೆಗಳೇ ಮತ್ತು ಋಷಿಗಳೇ ! ನಾನು ಪ್ರಸನ್ನನಾಗಿರುವೆನು. ವರವನ್ನು ಕೇಳಿರಿ. ನಿಮ್ಮ ಯಾವ ಕಾರ್ಯವನ್ನು ಸಿದ್ಧಗೊಳಿಸಲಿ?

ದೇವತೆಗಳು ಹೇಳಿದರು - ದೇವೇಶ್ವರನೇ ! ನೀನು ಅಂತರ್ಯಾಮಿಯಾಗಿರುವೆ. ಆದ್ದರಿಂದ ಎಲ್ಲರ ಮನಸ್ಸಿನ ಎಲ್ಲ ಮಾತನ್ನು ತಿಳಿದಿರುವೆ. ನಿನ್ನಿಂದ ಯಾವುದೇ ಮರೆಯಾಗಿಲ್ಲ. ಪ್ರಭೋ ! ಮಹೇಶ್ವರನೇ ! ಕುಂಭಕರ್ಣನಿಂದ ಹುಟ್ಟಿದ ಕರ್ಕಟಿಯ ಬಲಿಷ್ಠ ಪುತ್ರ ರಾಕ್ಷಸ ಭೀಮನು ಬ್ರಹ್ಮದೇವರ ವರದಿಂದ ಶಕ್ತಿಶಾಲಿಯಾಗಿ ದೇವತೆಗಳನ್ನು ನಿರಂತರವಾಗಿ ಪೀಡಿಸುತ್ತಿರುವನು. ಆದ್ದರಿಂದ ನೀನು ಈ ರಾಕ್ಷಸನನ್ನು ನಾಶಗೊಳಿಸಿ ನಮ್ಮ ಮೇಲೆ ಕೃಪೆಮಾಡು. ಇನ್ನು ತಡಮಾಡಬೇಡ.

ಶಂಭುವು ಹೇಳಿದನು - ದೇವತೆಗಳಿರಾ ! ಕಾಮರೂಪ ದೇಶದ ಸುದಕ್ಷಿಣರಾಜನು ನನ್ನ ಶ್ರೇಷ್ಠ ಭಕ್ತನಾಗಿರುವನು. ಅವನಲ್ಲಿ ನನ್ನ ಸಂದೇಶವನ್ನು ತಿಳಿಸಿರಿ. ಮತ್ತೆ ನಿಮ್ಮ ಎಲ್ಲ ಕಾರ್ಯಗಳು ಶೀಘ್ರವಾಗಿ ಪೂರ್ಣಗೊಳ್ಳುವವು. ಅವನಲ್ಲಿ - 'ಕಾಮರೂಪ ದೇಶದ ಅಧಿಪತಿ ಸುದಕ್ಷಿಣ ಮಹಾರಾಜನೇ ! ಪ್ರಭು ! ನೀನು ನನ್ನ ವಿಶೇಷ ಭಕ್ತನಾಗಿರುವೆ. ಆದ್ದರಿಂದ, ಪ್ರೇಮಪೂರ್ವಕ ನನ್ನ ಭಜನೆ ಮಾಡು. ದುಷ್ಟ ಭೀಮರಾಕ್ಷಸನು ಬ್ರಹ್ಮದೇವರ ವರವನ್ನು ಪಡೆದು ಪ್ರಬಲನಾಗಿರುವನು. ಅದರಿಂದ ಅವನು ನಿನ್ನನ್ನು ತಿರಸ್ಕರಿಸಿರುವನು. ಆದರೆ ಈಗ ನಾನು ಆ ದುಷ್ಟನನ್ನು ಕೊಂದುಹಾಕುವೆ, ಇದರಲ್ಲಿ ಸಂದೇಹವೇ ಇಲ್ಲ.' ಈ ಸಂದೇಶವನ್ನು ಹೇಳಿರಿ.

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರೇ ! ಆಗ ಆ ದೇವತೆಗಳೆಲ್ಲರೂ ಸಂತೋಷದಿಂದ ರಾಜನ ಬಳಿಗೆ ಹೋಗಿ ಅವನಲ್ಲಿ ಶಂಭುವಿನ ಎಲ್ಲ ಮಾತನ್ನು ತಿಳಿಸಿದರು. ಅವನಿಗೆ ಆ ಸಂದೇಶವನ್ನು ಅರುಹಿ ದೇವತೆಗಳಿಗೆ ಮತ್ತು ಋಷಿಗಳಿಗೆ ಬಹಳ ಆನಂದವಾಯಿತು. ಅವರೆಲ್ಲರೂ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು.

ಇತ್ತ ಭಗವಾನ್ ಶಿವನೂ ಕೂಡ ತನ್ನ ಗಣಗಳೊಂದಿಗೆ ಲೋಕಹಿತದ ಕಾಮನೆಯಿಂದ ತನ್ನ ಭಕ್ತನನ್ನು ರಕ್ಷಿಸಲಿಕ್ಕಾಗಿ ಅವನ ಬಳಿಗೆ ಸಾರಿ, ಗುಪ್ತರೂಪದಿಂದ ಅಲ್ಲೇ ನೆಲೆಸಿದನು. ಇಷ್ಟರಲ್ಲಿ ಯಾರೋ ರಾಕ್ಷಸನಲ್ಲಿಗೆ ಹೋಗಿ – 'ರಾಜನು ನಿನ್ನ ನಾಶಕ್ಕಾಗಿ ಯಾವುದೋ ಪುರಶ್ಚರಣ ಮಾಡುತ್ತಿದ್ದಾನೆ' ಎಂದು ತಿಳಿಸಿದರು.

ಈ ಸಮಾಚಾರ ಕೇಳುತ್ತಲೇ ಆ ರಾಕ್ಷಸನು ಕುಪಿತನಾಗಿ, ಅವನನ್ನು ಕೊಂದು ಹಾಕಲು ಬಿಚ್ಚುಕತ್ತಿಯನ್ನು ಕೈಯಲ್ಲೆತ್ತಿಕೊಂಡು ರಾಜನ ಬಳಿಗೆ ಹೋದನು. ಅಲ್ಲಿದ್ದ ಪಾರ್ಥಿವ ಪೂಜೆಯ ಸಾಮಗ್ರಿಯನ್ನು ನೋಡಿ, ಅದರ ಪ್ರಯೋಜನ, ಸ್ವರೂಪವನ್ನು ತಿಳಿದು ರಾಕ್ಷಸನು –ರಾಜನು ನನಗಾಗಿ ಏನನ್ನೋ ಅಹಿತವನ್ನು ಮಾಡುತ್ತಿರುವನೆಂದು ಅರಿತನು.

ಆದ್ದರಿಂದ ಎಲ್ಲ ಸಾಮಗ್ರಿಗಳೊಂದಿಗೆ ಈ ನರೇಶನನ್ನು ನಾನು ಬಲವಂತವಾಗಿ ನಾಶಮಾಡಿ ಬಿಡುತ್ತೇನೆ, ಎಂದು ಯೋಚಿಸಿ ಆ ಮಹಾಕ್ರೋಧೀ ರಾಕ್ಷಸನು ರಾಜನನ್ನು ಅತಿಯಾಗಿ ಗದರಿಸುತ್ತಾ – 'ಏನು ಮಾಡುತ್ತಿರುವಿ ?' ಎಂದು ಕೇಳಿದನು. ರಾಜನು ಭಗವಾನ್ ಶಂಕರನ ಮೇಲೆ ರಕ್ಷಣೆಯ ಭಾರವನ್ನು ಒಪ್ಪಿಸಿದನು. 'ನಾನು ಚರಾಚರ ಜಗತ್ತಿನ ಸ್ವಾಮಿ ಭಗವಾನ್ ಶಿವನನ್ನು ಪೂಜಿಸುತ್ತಿರುವೆನು' ಎಂದು ನುಡಿದನು. ಆಗ ರಾಕ್ಷಸ ಭೀಮನು ಭಗವಾನ್ ಶಂಕರನ ಕುರಿತು ಅತ್ಯಂತ ತಿರಸ್ಕಾರಯುಕ್ತ ದುರ್ವಚನಗಳನ್ನು ಹೇಳುತ್ತಾ ರಾಜನನ್ನು ಗದರಿಸಿದನು ಮತ್ತು ಭಗವಾನ್ ಶಂಕರನ ಪಾರ್ಥಿವ ಲಿಂಗದಮೇಲೆ ಕತ್ತಿಯನ್ನು ಬೀಸಿದನು. ಆ ಕತ್ತಿಯು ಪಾರ್ಥಿವಲಿಂಗವನ್ನು ಸ್ಪರ್ಶಿಸುವ ಮೊದಲೇ ಅದರಿಂದ ಸಾಕ್ಷಾತ್ ಭಗವಾನ್ ಹರನು ಅಲ್ಲಿ ಪ್ರಕಟನಾಗಿ ಹೇಳಿದನು – 'ನೋಡು, ನಾನು ಭೀಮೇಶ್ವರನಾಗಿರುವೆನು. ನನ್ನ ಭಕ್ತನ ರಕ್ಷಣೆಗಾಗಿ ಪ್ರಕಟನಾಗಿರುವೆನು. ಹಿಂದಿನಿಂದಲೂ ಸದಾ ಭಕ್ತರನ್ನು ಕಾಪಾಡುವುದೇ ನನ್ನ ವ್ರತವಾಗಿದೆ. ಅದಕ್ಕಾಗಿ ಭಕ್ತರಿಗೆ ಸುಖವನ್ನು ಕೊಡುವ ನನ್ನ ಬಲವನ್ನು ನೋಡು.'

ಹೀಗೆ ನುಡಿದು ಭಗವಾನ್ ಶಿವನು ಪಿನಾಕದಿಂದ ಅವನ ಕತ್ತಿಯನ್ನು ತುಂಡರಿಸಿದನು. ಆಗ ರಾಕ್ಷಸನು ತನ್ನ ತ್ರಿಶೂಲವನ್ನು ಪ್ರಯೋಗಿಸಿದನು. ಆದರೆ ಶಂಭುವು ಆ ದುಷ್ಟನ ತ್ರಿಶೂಲವನ್ನು ನುಚ್ಚುನೂರಾಗಿಸಿದನು. ಅನಂತರ ಶಂಕರನೊಂದಿಗೆ ಅವನು ಘೋರಯುದ್ಧ ನಡೆಯಿತು. ಆದರಿಂದ ಇಡೀ ಜಗತ್ತು ಕ್ಷುಬ್ಧವಾಯಿತು. ಆಗ ನಾರದರು ಬಂದು ಭಗವಾನ್ ಶಂಕರನಲ್ಲಿ ಪ್ರಾರ್ಥಿಸಿದರು.

ನಾರದರು ಹೇಳಿದರು – ಜನರನ್ನು ಭ್ರಮೆಯಲ್ಲಿ ಕೆಡಹುವ ಮಹೇಶ್ವರನೇ ! ನನ್ನ ಸ್ವಾಮಿಯೇ ! ನೀನು ಕ್ಷಮಿಸು, ಕ್ಷಮಿಸು, ಹುಲ್ಲುಕಡ್ಡಿಯನ್ನು ತುಂಡರಿಸಲು ಕೊಡಲಿಯ ಆವಶ್ಯಕತೆ ಇದೆಯೆ? ಬೇಗನೇ ಇವನನ್ನು ಸಂಹಾರ ಮಾಡಿಬಿಡು.

ನಾರದರ ಈ ಪ್ರಾರ್ಥನೆಯಂತೆ ಭಗವಾನ್ ಶಂಭುವು ಹುಂಕಾರಮಾತ್ರದಿಂದಲೇ ಆಗ ಸಮಸ್ತ ರಾಕ್ಷಸರನ್ನು ಭಸ್ಮಮಾಡಿಬಿಟ್ಟನು. ಮುನಿಗಳೇ ! ದೇವತೆಗಳೆಲ್ಲರೂ ನೋಡು-ನೋಡುತ್ತಿರುವಂತೆ ಎಲ್ಲ ರಾಕ್ಷಸರನ್ನು ಸುಟ್ಟು ಹಾಕಿದನು. ಅನಂತರ ಭಗವಾನ್ ಶಂಕರನ ಕೃಪೆಯಿಂದ ಇಂದ್ರಾದಿ ದೇವತೆಗಳಿಗೆ ಮತ್ತು ಮುನೀಶ್ವರರಿಗೆ ಶಾಂತಿಯು ಲಭಿಸಿ, ಸಂಪೂರ್ಣ ಜಗತ್ತು ನೆಮ್ಮದಿ ಪಡೆಯಿತು. ಆಗ ದೇವತೆಗಳು ಹಾಗೂ ವಿಶೇಷವಾಗಿ ಮುನಿಗಳು ಭಗವಾನ್ ಶಂಕರನಲ್ಲಿ ಪ್ರಾರ್ಥಿಸಿದರು – ಪ್ರಭೋ ! ನೀನು ಜನರಿಗೆ ಸುಖವನ್ನು ಕರುಣಿಸಲಿಕ್ಕಾಗಿ ಇಲ್ಲಿ ಸದಾ ನೆಲೆಸು. ಈ ದೇಶವು ನಿಂದಿತವೆಂದು ತಿಳಿಯಲಾಗಿದೆ. ಇಲ್ಲಿಗೆ ಬರುವ ಜನರಿಗೆ ಸಾಮಾನ್ಯವಾಗಿ ದುಃಖವೇ ದೊರೆಯುತ್ತದೆ. ಆದರೆ ನಿನ್ನ ದರ್ಶನ ಮಾಡುವುದರಿಂದ ಇಲ್ಲಿ ಎಲ್ಲ ಪ್ರಕಾರದ ಕಲ್ಯಾಣವಾಗುವುದು. ನೀನು ಭೀಮಶಂಕರನೆಂದು ವಿಖ್ಯಾತನಾಗುವೆ ಮತ್ತು ಎಲ್ಲರ ಸಂಪೂರ್ಣ ಮನೋರಥವನ್ನು ಪೂರ್ಣಗೊಳಿಸುವೆ. ನಿನ್ನ ಈ ಜ್ಯೋತಿರ್ಲಿಂಗವು ಸದಾ ಪೂಜನೀಯ ಹಾಗೂ ಸಮಸ್ತ ಆಪತ್ತುಗಳನ್ನು ನಿವಾರಿಸುವುದಾಗುವುದು.

ಸೂತಪುರಾಣಿಕರು ಹೇಳುತ್ತಾರೆ-ಬ್ರಾಹ್ಮಣರೇ ! ಅವರು ಹೀಗೆ ಪ್ರಾರ್ಥಿಸಿದಾಗ ಲೋಕಹಿತಕಾರಿ ಹಾಗೂ ಭಕ್ತವತ್ಸಲ ಪರಮ ಸ್ವತಂತ್ರ ಶಿವನು ಸಂತೋಷದಿಂದ ಅಲ್ಲೇ ನೆಲೆಸಿದನು.

(ಅಧ್ಯಾಯ ೧೯-೨೧)

❑ ❑ ❑

ವಿಶ್ವೇಶ್ವರ ಜ್ಯೋತಿರ್ಲಿಂಗ ಮತ್ತು ಅದರ ಮಹಿಮೆಯ ಪ್ರಸಂಗದಲ್ಲಿ ಪಂಚಕ್ರೋಶಿಯ ಮಹತ್ವದ ಪ್ರತಿಪಾದನೆ

ಸೂತಪುರಾಣಿಕರು ಹೇಳುತ್ತಾರೆ – ಮುನಿವರ್ಯರೇ ! ಇನ್ನು ನಾನು ಮಹಾಪಾತಕಗಳನ್ನು ನಾಶಮಾಡುವ ಕಾಶಿಯ ವಿಶ್ವೇಶ್ವರ ಎಂಬ ಜ್ಯೋತಿರ್ಲಿಂಗದ ಮಾಹಾತ್ಮ್ಯವನ್ನು ತಿಳಿಸುವೆನು; ಕೇಳಿರಿ. ಈ ಭೂತಳದಲ್ಲಿ ಕಣ್ಣಿಗೆ ಕಾಣುವ ಎಲ್ಲ ವಸ್ತುವೂ ಸಚ್ಚಿದಾನಂದಸ್ವರೂಪ, ನಿರ್ವಿಕಾರ ಮತ್ತು ಸನಾತನ ಬ್ರಹ್ಮಸ್ವರೂಪವಾಗಿದೆ. ತನ್ನ ಕೈವಲ್ಯ (ಅದ್ವೈತ) ಭಾವದಲ್ಲೇ ರಮಿಸುವ ಆ ಅದ್ವಿತೀಯ ಪರಮಾತ್ಮನಲ್ಲಿ ಎಂದೋ ಒಂದರಿಂದ ಎರಡಾಗುವ ಇಚ್ಛೆ ಜಾಗ್ರತವಾಯಿತು.* ಮತ್ತೆ ಅದೇ ಪರಮಾತ್ಮನು ಸಗುಣರೂಪದಲ್ಲಿ ಪ್ರಕಟನಾಗಿ ಶಿವನೆಂದು ಎನಿಸಿದನು. ಆ ಶಿವನೇ ಪುರುಷ ಮತ್ತು ಸ್ತ್ರೀ ಎರಡು ರೂಪಗಳಲ್ಲಿ ಪ್ರಕಟನಾದನು. ಅದರಲ್ಲಿರುವ ಪುರುಷನ ಹೆಸರು ಶಿವನೆಂದಾಯಿತು ಮತ್ತು ಸ್ತ್ರೀಯನ್ನು ಶಕ್ತಿ ಎಂದು ಹೇಳುತ್ತಾರೆ. ಆ ಚಿದಾನಂದಸ್ವರೂಪ ಶಿವ ಮತ್ತು ಶಕ್ತಿಯು ಸ್ವಯಂ ಅದೃಷ್ಟರಾಗಿದ್ದು ಸ್ವಭಾವದಿಂದಲೇ ಎರಡು ಚೇತನಗಳು (ಪ್ರಕೃತಿ ಮತ್ತು ಪುರುಷ) ಸೃಷ್ಟಿಯಾಯಿತು. ಮುನಿವರ್ಯರೇ ! ಅವರಿಬ್ಬರೂ ತಂದೆ-ತಾಯಿಯರನ್ನು ಇದಿರ್ಗಡೆ ಕಂಡು ಬಾರದಿದ್ದಾಗ ಆ ಪ್ರಕೃತಿ ಮತ್ತು ಪುರುಷರು ಬಹಳ ಸಂಶಯಕ್ಕೊಳಗಾದರು. ಆಗ ನಿರ್ಗುಣ ಪರಮಾತ್ಮನಿಂದ ಆಕಾಶವಾಣಿಯು ಪ್ರಕಟವಾಯಿತು – 'ನೀವಿಬ್ಬರೂ ತಪಸ್ಸು ಮಾಡಬೇಕು. ಮತ್ತೆ ನಿಮ್ಮಿಂದ ಪರಮೋತ್ತಮ ಸೃಷ್ಟಿಯ ವಿಸ್ತಾರವಾಗುವುದು'

ಆ ಪ್ರಕೃತಿ ಮತ್ತು ಪುರುಷರು ಕೇಳಿದರು – ಪ್ರಭೋ ! ಶಿವನೇ ! ತಪಸ್ಸಿಗಾದರೋ ಯಾವ ಸ್ಥಳವೂ ಇಲ್ಲವಲ್ಲ ಹಾಗಿರುವಾಗ ನಾವಿಬ್ಬರು ಈಗ ಎಲ್ಲಿ ಸ್ಥಿತರಾಗಿ ನಿನ್ನ ಆಜ್ಞೆಯಂತೆ ತಪಸ್ಸು ಮಾಡಲಿ ?

ಆಗ ನಿರ್ಗುಣ ಶಿವನು ತೇಜದ ಸಾರಭೂತ ಐದು ಗಾವುದ ಉದ್ದ-ಅಗಲ ಶುಭ ಹಾಗೂ ಸುಂದರ ನಗರವನ್ನು ನಿರ್ಮಿಸಿದನು. ಅದು ಅವನ ಸ್ವರೂಪವೇ ಆಗಿತ್ತು. ಅದು ಎಲ್ಲ ಆವಶ್ಯಕ ಉಪಕರಣಗಳಿಂದ ಕೂಡಿತ್ತು. ಆ ನಗರವನ್ನು ನಿರ್ಮಿಸಿ ಅವರಿಬ್ಬರನ್ನು ಅಲ್ಲಿಗೆ ಕಳಿಸಿದನು. ಆ ನಗರವು ಆಕಾಶದಲ್ಲಿ ಪುರುಷನ ಒಳಗೆ ಬಂದು ಸ್ಥಿತವಾಯಿತು. ಆಗ ಪುರುಷ-ಶ್ರೀಹರಿಯು ಆ ನಗರದಲ್ಲಿ ಸ್ಥಿತನಾಗಿ ಸೃಷ್ಟಿಯ ಕಾಮನೆಯಿಂದ ಶಿವನನ್ನು ಧ್ಯಾನಿಸುತ್ತಾ ಅನೇಕ ವರ್ಷಗಳತನಕ ತಪಸ್ಸು ಮಾಡಿದನು. ಆಗ ಪರಿಶ್ರಮದ ಕಾರಣದಿಂದ ಅವನ ಶರೀರದಿಂದ ಅನೇಕ ಶ್ವೇತಧಾರೆಗಳು ಪ್ರಕಟವಾದುವು. ಅದರಿಂದ ಇಡೀ ಶೂನ್ಯ ಆಕಾಶವು ವ್ಯಾಪ್ತವಾಯಿತು. ಅಲ್ಲಿ ಬೇರೆ ಏನೂ ಕಾಣುತ್ತಿರಲಿಲ್ಲ. ಅದನ್ನು ನೋಡಿ ಭಗವಾನ್ ವಿಷ್ಣುವು ಮನಸ್ಸಿನಲ್ಲೇ ಅಂದುಕೊಂಡನು – ಇದೆಂತಹ ಅದ್ಭುತ ವಸ್ತುವು ಕಂಡು ಬರುತ್ತದೆ? ಆಗ ಈ ಆಶ್ಚರ್ಯವನ್ನು ನೋಡಿ ಅವನು ತನ್ನ ತಲೆಯನ್ನು ಅಲುಗಾಡಿಸಿದನು. ಅದರಿಂದ ಆ ಪ್ರಭುವಿನ ಎದುರಿಗೇ ಅವನ ಕಿವಿಯಿಂದ ಒಂದು ಮಣಿಯು ಕೆಳಗೆ ಬಿತ್ತು. ಆ ಮಣಿಯು ಬಿದ್ದ ಸ್ಥಾನವು ಮಣಿಕರ್ಣಿಕಾ ಎಂಬ ಮಹಾತೀರ್ಥವು ಉಂಟಾಯಿತು. ಹಿಂದಿನ ಜಲರಾಶಿಯಿಂದ ಆ ಪಂಚಕ್ರೋಶಿಯು ಮುಳುಗಿ, ಹರಿದುಕೊಂಡು ಹೋಗಲು ತೊಡಗಿದಾಗ ನಿರ್ಗುಣ ಶಿವನು ಶೀಘ್ರವಾಗಿ ಅದನ್ನು ತನ್ನ ತ್ರಿಶೂಲದಿಂದ ಧರಿಸಿಬಿಟ್ಟನು. ಮತ್ತೆ ವಿಷ್ಣು ತನ್ನ ಪತ್ನೀ ಪ್ರಕೃತಿಯೊಂದಿಗೆ ಅಲ್ಲೇ ಮಲಗಿದನು. ಆಗ ಅವನ ನಾಭಿಯಿಂದ ಒಂದು ಕಮಲವು ಪ್ರಕಟವಾಯಿತು ಮತ್ತು ಆ ಕಮಲದಿಂದ ಬ್ರಹ್ಮನ ಉತ್ಪತ್ತಿಯಾಯಿತು. ಅವನ ಉತ್ಪತ್ತಿಯಲ್ಲಿಯೂ ಶಂಕರನ ಆದೇಶವೇ ಕಾರಣವಾಗಿತ್ತು. ಅನಂತರ ಅವನು ಶಿವನ ಅಪ್ಪಣೆಯನ್ನು ಪಡೆದು ಅದ್ಭುತ ಸೃಷ್ಟಿಯನ್ನು ಪ್ರಾರಂಭಿಸಿದನು. ಬ್ರಹ್ಮನು ಬ್ರಹ್ಮಾಂಡದಲ್ಲಿ ಹದಿನಾಲ್ಕು ಭುವನಗಳನ್ನು ನಿರ್ಮಿಸಿದನು. ಆ ಬ್ರಹ್ಮಾಂಡವನ್ನು ಮಹರ್ಷಿಗಳು ಐವತ್ತುಕೋಟಿ ಯೋಜನ ವಿಸ್ತರಿಸಿದರು. 'ಈ ಬ್ರಹ್ಮಾಂಡದ ಒಳಗೆ ಕರ್ಮಪಾಶದಿಂದ ಬಂಧಿತರಾದ ಪ್ರಾಣಿಗಳು ನನ್ನನ್ನು ಹೇಗೆ ಪಡೆದು ಕೊಳ್ಳಬಲ್ಲರು ?' ಎಂದು ಭಗವಾನ್ ಶಿವನು ಯೋಚಿಸಿ, ಮುಕ್ತಿದಾಯಿನೀ ಪಂಚಕ್ರೋಶಿಯನ್ನು ಈ ಜಗತ್ತಿನಲ್ಲಿ ಬಿಟ್ಟುಬಿಟ್ಟನು.

ಈ ಪಂಚಕ್ರೋಶಿ ಕಾಶಿಯು ಲೋಕದಲ್ಲಿ ಕಲ್ಯಾಣದಾಯಿನೀ, ಕರ್ಮಬಂಧನ ನಾಶಮಾಡುವಂತಹ, ಜ್ಞಾನದಾತ್ರೀ ಹಾಗೂ ಮೋಕ್ಷವನ್ನು ಪ್ರಕಾಶಿತ ಗೊಳಿಸುವುದೆಂದು ತಿಳಿಯಲಾಗಿದೆ. ಆದ್ದರಿಂದ ನನಗೆ ಪರಮಪ್ರಿಯವಾಗಿದೆ. ಇಲ್ಲಿ ಸಾಕ್ಷಾತ್ ಪರಮಾತ್ಮನು

---

* 'ಸ ದ್ವಿತೀಯ ಮೈಚ್ಛತ್' (ಬೃಹದಾರಣ್ಯಕ ಉ - ೧/೪/೩) ಈ ಶ್ರುತಿಯಿಂದಲೂ ಇದೇ ಸಿದ್ಧವಾಗುತ್ತದೆ.

'ಅವಿಮುಕ್ತ' ಲಿಂಗವನ್ನು ಸ್ಥಾಪಿಸಿರುವನು. ಆದ್ದರಿಂದ ನನ್ನ ಅಂಶಭೂತ ಹರಿಯೇ! ನೀನು ಎಂದೂ ಈ ಕ್ಷೇತ್ರವನ್ನು ತ್ಯಜಿಸಬಾರದು. ಹೀಗೆ ಹೇಳಿ ಭಗವಾನ್ ಹರನು ಕಾಶೀಪುರಿಯನ್ನು ಸ್ವತಃ ತನ್ನ ತ್ರಿಶೂಲದಿಂದ ಇಳಿಸಿ ಮರ್ತ್ಯಲೋಕದ ಜಗತ್ತಿನಲ್ಲಿ ಇರಿಸಿದನು. ಬ್ರಹ್ಮದೇವರ ಒಂದು ದಿನ ಪೂರ್ಣವಾಗುತ್ತಲೇ ಇಡೀ ಜಗತ್ತು ಪ್ರಳಯವಾದಾಗಲೂ ನಿಶ್ಚಯವಾಗಿ ಈ ಕಾಶೀಪುರಿಯು ನಾಶವಾಗುವುದಿಲ್ಲ. ಆಗ ಭಗವಾನ್ ಶಿವನು ಇದನ್ನು ತ್ರಿಶೂಲದ ಮೇಲೆ ಧರಿಸಿಕೊಳ್ಳುವನು. ಮತ್ತೆ ಬ್ರಹ್ಮನು ಪುನಃ ಸೃಷ್ಟಿಯು ಮಾಡಿದಾಗ, ಇದನ್ನು ಪುನಃ ಅವನು ಭೂತಳದಲ್ಲಿ ಸ್ಥಾಪಿಸುವನು. ಕರ್ಮಗಳನ್ನು ಕರ್ಷಣ ಮಾಡುವುದರಿಂದಲೇ ಈ ಪುರಿಯನ್ನು 'ಕಾಶೀ' ಎಂದು ಹೇಳುತ್ತಾರೆ. ಕಾಶಿಯಲ್ಲಿ ಅವಿಮುಕ್ತೇಶ್ವರಲಿಂಗವು ಸದಾ ವಿರಾಜಿಸುತ್ತಿರುವುದು. ಅದು ಮಹಾಪಾತಕಿಗಳನ್ನೂ ಕೂಡ ಮೋಕ್ಷವನ್ನು ಕೊಡುವುದಾಗಿದೆ. ಮುನೀಶ್ವರರೇ! ಇತರ ಮೋಕ್ಷದಾಯಕ ಧಾಮಗಳಲ್ಲಿ ಸಾರೂಪ್ಯಾದಿ ಮುಕ್ತಿಯು ಪ್ರಾಪ್ತವಾಗುತ್ತದೆ. ಕೇವಲ ಈ ಕಾಶಿಯಲ್ಲೇ ಜೀವಿಗಳಿಗೆ ಸಾಯುಜ್ಯವೆಂಬ ಸರ್ವೋತ್ತಮ ಮುಕ್ತಿಯು ಸುಲಭವಾಗುತ್ತದೆ. ಎಲ್ಲಿಯೂ ಗತಿಯಿಲ್ಲದವರಿಗೆ ವಾರಾಣಸೀ ಪುರಿಯೇ ಗತಿಯಾಗಿದೆ. ಮಹಾಪುಣ್ಯಮಯಿ ಪಂಚಕ್ರೋಶಿಯು ಕೋಟಿ ಹತ್ಯೆಗಳನ್ನೂ ವಿನಾಶ ಮಾಡುವುದಾಗಿದೆ. ಇಲ್ಲಿ ಸಮಸ್ತ ಅಮರರೂ ಕೂಡ ಮರಣವನ್ನು ಇಚ್ಛಿಸುತ್ತಾರೆ. ಹಾಗಿರುವಾಗ ಇತರರ ಮಾತಾದರೂ ಏನು? ಶಂಕರನ ಪ್ರಿಯ ಈ ನಗರೀ ಕಾಶಿಯು ಸದಾ ಭೋಗ ಮತ್ತು ಮೋಕ್ಷವನ್ನು ಕರುಣಿಸುವಂತಹುದಾಗಿದೆ.

ಕೈಲಾಸ ಪತಿಯು ಒಳಗಿನಿಂದ ಸತ್ತ್ವಗುಣೀ ಮತ್ತು ಹೊರಗಿನಿಂದ ತಮೋಗುಣೀ ಎಂದು ಹೇಳಲಾಗಿದೆ. ಕಾಲಾಗ್ನಿರುದ್ರನ ಹೆಸರಿನಿಂದ ವಿಖ್ಯಾತನಾಗಿರುವನು. ಅವನು ನಿರ್ಗುಣನಾಗಿದ್ದರೂ ಸಗುಣರೂಪದಿಂದ ಪ್ರಕಟನಾದ ಶಿವನಾಗಿರುವನು. ಅವನು ಪದೇ-ಪದೇ ನಮಸ್ಕರಿಸಿ ನಿರ್ಗುಣ ಶಿವನಲ್ಲಿ ಇಂತೆಂದನು.

ರುದ್ರನು ಹೇಳಿದನು - ವಿಶ್ವನಾಥನೇ! ಮಹೇಶ್ವರನೇ! ನಾನು ನಿನ್ನವನೇ ಆಗಿರುವೆನು; ಇದರಲ್ಲಿ ಸಂಶಯವೇ ಇಲ್ಲ. ಸಾಂಬಮಹಾದೇವನೇ! ಆತ್ಮಜನಾದ ನನ್ನ ಮೇಲೆ ಕೃಪೆಮಾಡು. ಜಗತ್ಪತಿಯೇ! ಲೋಕಹಿತದ ಕಾಮನೆಯಿಂದ ನೀನು ಸದಾ ಇಲ್ಲೇ ನೆಲೆಸಬೇಕು. ಜಗನ್ನಾಥನೇ! ನಾನು ನಿನ್ನಲ್ಲಿ ಪ್ರಾರ್ಥಿಸುತ್ತಿರುವೆನು. ನೀನು ಇಲ್ಲಿ ಇದ್ದುಕೊಂಡು ಜೀವರನ್ನು ಉದ್ಧರಿಸಬೇಕು.

ಸೂತಪುರಾಣಿಕರು ಹೇಳುತ್ತಾರೆ - ಅನಂತರ ಮನ ಮತ್ತು ಇಂದ್ರಿಯಗಳನ್ನು ವಶದಲ್ಲಿಸಿಕೊಂಡ ಅವಿಮುಕ್ತನೂ ಶಂಕರನಲ್ಲಿ ಪದೇ-ಪದೇ ಪ್ರಾರ್ಥಿಸಿ ಕಣ್ಣುಗಳಿಂದ ನೀರನ್ನು ಹರಿಸುತ್ತಾ ಪ್ರಸನ್ನತೆಯಿಂದ ಇಂತೆಂದನು.

ಅವಿಮುಕ್ತನು ಹೇಳಿದನು - ಕಾಲರೂಪೀ ರೋಗದ ಸುಂದರ ಔಷಧನಾಗಿರುವ ದೇವಾಧಿದೇವ ಮಹಾದೇವನೇ! ನೀನು ವಾಸ್ತವವಾಗಿ ಮೂರು ಲೋಕಗಳ ಸ್ವಾಮಿಯಾಗಿರುವೆ. ಬ್ರಹ್ಮಾ, ವಿಷ್ಣು ಮೊದಲಾದವರಿಂದ ಸೇವನೀಯನೂ ಆಗಿರುವೆ. ದೇವ! ಕಾಶಿಪುರಿಯನ್ನು ನಿನ್ನ ರಾಜಧಾನಿಯನ್ನಾಗಿ ಸ್ವೀಕರಿಸು. ಅಚಿಂತ್ಯ ಸುಖದ ಪ್ರಾಪ್ತಿಗಾಗಿ ನಾನು ಇಲ್ಲಿ ಸದಾ ನಿನ್ನ ಧ್ಯಾನವನ್ನು ಮಾಡುತ್ತಾ ಸ್ಥಿರಭಾವದಿಂದ ಕುಳಿತಿರುವೆನು. ನೀನೇ ಮುಕ್ತಿಯನ್ನು ಕೊಡುವವನೂ ಹಾಗೂ ಸಂಪೂರ್ಣ ಕಾಮನೆಗಳ ಪೂರಕನಾಗಿರುವೆ; ಬೇರೆ ಯಾರೂ ಇಲ್ಲ. ಆದ್ದರಿಂದ ನೀನು ಪರೋಪಕಾರಕ್ಕಾಗಿ ಉಮೆಯ ಸಹಿತ ಸದಾ ಇಲ್ಲಿ ವಿರಾಜಿಸುತ್ತಾ ಇರು. ಸದಾಶಿವನೇ! ನೀನು ಸಮಸ್ತ ಜೀವಿಗಳನ್ನು ಸಂಸಾರದಿಂದ ದಾಟಿಸಿ ಬಿಡು. ಹರನೇ! ನೀನು ನಿನ್ನ ಭಕ್ತರ ಕಾರ್ಯವನ್ನು ಸಿದ್ಧಗೊಳಿಸು ಎಂದು ನಾನು ಪದೇ-ಪದೇ ಪ್ರಾರ್ಥಿಸುವೆನು.

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರೇ! ವಿಶ್ವನಾಥನು ಭಗವಾನ್ ಶಂಕರನಲ್ಲಿ ಹೀಗೆ ಪ್ರಾರ್ಥಿಸಿದಾಗ ಸರ್ವೇಶ್ವರ ಶಿವನು ಸಮಸ್ತ ಲೋಕಗಳ ಉಪಕಾರ ಮಾಡಲಿಕ್ಕಾಗಿ ಅಲ್ಲೇ ವಿರಾಜಮಾನನಾದನು. ಭಗವಾನ್ ಶಿವನು ಕಾಶಿಗೆ ಬಂದಂದಿನಿಂದ ಅದು ಸರ್ವಶ್ರೇಷ್ಠ ಪುರಿಯಾಯಿತು.

(ಅಧ್ಯಾಯ ೨೨)

❐ ❐ ❐

ವಾರಾಣಸೀ ಹಾಗೂ ವಿಶ್ವೇಶ್ವರನ ಮಾಹಾತ್ಮ್ಯ

ಸೂತಪುರಾಣಿಕರು ಹೇಳುತ್ತಾರೆ – ಮುನೀಶ್ವರರೇ ! ನಾನು ಸಂಕ್ಷೇಪವಾಗಿ ವಾರಾಣಸೀ ಮತ್ತು ವಿಶ್ವೇಶ್ವರನ ಪರಮ ಸುಂದರ ಮಾಹಾತ್ಮ್ಯವನ್ನು ವರ್ಣಿಸುವೆನು; ಮನಸಿಟ್ಟು ಕೇಳಿರಿ. ಒಮ್ಮೆ ಪಾರ್ವತಿದೇವಿಯು ಲೋಕ-ಹಿತದ ಕಾಮನೆಯಿಂದ ಬಹಳ ಪ್ರಸನ್ನತೆಯಿಂದ ಭಗವಾನ್ ಶಿವನಲ್ಲಿ ಅವಿಮುಕ್ತ ಕ್ಷೇತ್ರ ಹಾಗೂ ಅವಿಮುಕ್ತ ಲಿಂಗದ ಮಾಹಾತ್ಮ್ಯವನ್ನು ಕೇಳಿದಳು.

ಆಗ ಪರಮೇಶ್ವರ ಶಿವನು ಹೇಳಿದನು – ದೇವಿ ! ಈ ವಾರಾಣಸೀಪುರಿಯು ಎಂದೆಂದಿಗೂ ನನ್ನ ಗುಹ್ಯತಮ ಕ್ಷೇತ್ರವಾಗಿದೆ ಮತ್ತು ಎಲ್ಲ ಜೀವಿಗಳ ಮುಕ್ತಿಯ ಸರ್ವಥಾ ಕಾರಣವಾಗಿದೆ. ಈ ಕ್ಷೇತ್ರದಲ್ಲಿ ಸಿದ್ಧಗಣರು ಸದಾ ನನ್ನ ವ್ರತವನ್ನು ಆಶ್ರಯಿಸಿ ನಾನಾ ವೇಷಗಳನ್ನು ಧರಿಸಿ ನನ್ನ ಲೋಕವನ್ನು ಪಡೆಯುವ ಇಚ್ಛೆಯಿಂದ ಜಿತಾತ್ಮಾ ಜಿತೇಂದ್ರಿಯರಾಗಿ ನಿತ್ಯವೂ ಮಹಾಯೋಗವನ್ನು ಅಭ್ಯಾಸ ಮಾಡುತ್ತಿರುವರು. ಆ ಉತ್ತಮ ಮಹಾಯೋಗದ ಹೆಸರು ಪಾಶುಪತಯೋಗವಾಗಿದೆ. ಶ್ರುತಿಗಳು ಅದನ್ನು ಪ್ರತಿಪಾದಿಸಿವೆ. ಅದು ಭೋಗ ಮತ್ತು ಮೋಕ್ಷರೂಪೀ ಫಲವನ್ನು ಕರುಣಿಸುವುದಾಗಿದೆ. ಮಹೇಶ್ವರೀ ! ವಾರಾಣಸೀ ಪುರಿಯಲ್ಲಿ ವಾಸಿಸಲು ನನಗೆ ಸದಾ ಒಳ್ಳೆಯದೆನಿಸುತ್ತದೆ. ಈ ಕಾರಣದಿಂದ ನಾನು ಎಲ್ಲವನ್ನು ಬಿಟ್ಟು ಕಾಶಿಯಲ್ಲಿ ಇರುತ್ತೇನೆ. ಅದನ್ನು ತಿಳಿಸುತ್ತೇನೆ; ಕೇಳು. ನನ್ನ ಭಕ್ತ ಹಾಗೂ ನನ್ನ ತತ್ತ್ವದ ಜ್ಞಾನಿ ಇವರಿಬ್ಬರೂ ಅವಶ್ಯವಾಗಿ ಮೋಕ್ಷಕ್ಕೆ ಭಾಗಿಯಾಗುತ್ತಾರೆ. ಅವರಿಗೆ ತೀರ್ಥದ ಅವಶ್ಯಕತೆಯಿಲ್ಲ. ವಿಹಿತ ಮತ್ತು ಅವಿಹಿತ ಇವೆರಡೂ ರೀತಿಯ ಕರ್ಮಗಳೂ ಅವರಿಗೆ ಸಮಾನವಾಗಿವೆ. ಅವರನ್ನು ಜೀವನ್ಮುಕ್ತರೆಂದೇ ಎಂದು ತಿಳಿಯಬೇಕು. ಇವರಿಬ್ಬರೂ ಎಲ್ಲೇ ಸತ್ತರೂ ಕೂಡಲೇ ಮೋಕ್ಷವನ್ನು ಪಡೆದುಕೊಳ್ಳುವರು. ಇದನ್ನು ನಾನು ನಿಶ್ಚಿತವಾದ ಮಾತನ್ನು ಹೇಳಿರುವೆನು. ಸರ್ವೋತ್ತಮಶಕ್ತಿ ಉಮಾದೇವಿಯೇ ! ಈ ಪರಮೋತ್ತಮ ಅವಿಮುಕ್ತ ತೀರ್ಥದಲ್ಲಿರುವ ವಿಶೇಷ ಮಾತನ್ನು ನೀನು ಮನಸ್ಸಿಟ್ಟು ಕೇಳು. ಎಲ್ಲ ವರ್ಣ ಮತ್ತು ಸಮಸ್ತ ಆಶ್ರಮದ ಜನರು ಬೇಕಾದರೆ ಬಾಲಕನಾಗಿರಲಿ, ಯುವಕ, ವೃದ್ಧನಾಗಿರಲಿ, ಯಾರೇ ಆಗಿರಲೀ, ಈ ಪುರಿಯಲ್ಲಿ ಸತ್ತು ಹೋದರೆ ಮುಕ್ತರೇ ಆಗುವರು; ಇದರಲ್ಲಿ ಸಂಶಯವಿಲ್ಲ. ಸ್ತ್ರೀಯು ಪವಿತ್ರ ವಾಗಿರಲೀ, ಅಪವಿತ್ರವಾಗಿರಲೀ, ಕುಮಾರಿಯಾಗಿರಲೀ, ವಿವಾಹಿತೆಯಾಗಿರಲೀ, ವಿಧವೆಯಾಗಿರಲೀ, ವಂಧ್ಯೆಯಾಗಿರಲಿ, ರಜಸ್ವಲೆಯಿರಲಿ, ಪ್ರಸೂತೆಯಿರಲಿ, ಸಂಸ್ಕಾರ ಹೀನೆಯಾಗಿರಲಿ ಅಥವಾ ಹೇಗೆ ಬೇಕಾದರೂ ಇರಲಿ; ಈ ಕ್ಷೇತ್ರದಲ್ಲಿ ಮರಣ ಹೊಂದಿದರೆ ಅವಶ್ಯವಾಗಿ ಮೋಕ್ಷಕ್ಕೆ ಭಾಗಿಯಾಗುವಳು; ಇದರಲ್ಲಿ ಸಂಶಯವೇ ಇಲ್ಲ. ಸ್ವೇದಜ, ಅಂಡಜ, ಉದ್‌ಭಿಜ್ಜ ಅಥವಾ ಜರಾಯುಜ ಪ್ರಾಣಗಳು ಇಲ್ಲಿ ಸತ್ತಾಗ ಮೋಕ್ಷಪಡೆಯುವಂತೆ ಬೇರೆ ಎಲ್ಲಿಯೂ ಮೋಕ್ಷ ಪಡೆಯುವುದಿಲ್ಲ. ದೇವೀ ! ಇಲ್ಲಿ ಸಾಯುವವರಿಗೆ ಜ್ಞಾನದ್ದಾಗಲೀ, ಭಕ್ತಿಯದ್ದಾಗಲೀ, ಕರ್ಮದ, ದಾನದ, ಸಂಸ್ಕೃತಿಯ, ಧರ್ಮದ ಅಪೇಕ್ಷೆಯು ಇರುವುದಿಲ್ಲ. ಎಲ್ಲಿಯವರೆಗೆಂದರೆ, ನಾಮಕೀರ್ತನ, ಪೂಜನ, ಉತ್ತಮ ಜಾತಿಯ ಅಪೇಕ್ಷೆಯೂ ಇಲ್ಲ. ನನ್ನ ಈ ಮೋಕ್ಷದಾಯಕ ಕ್ಷೇತ್ರದಲ್ಲಿ ವಾಸಿಸುವವನು ಹೇಗೆ ಬೇಕಾದರೂ ಸಾಯಲಿ, ಅವನಿಗಾಗಿ ಮೋಕ್ಷದ ಪ್ರಾಪ್ತಿಯು ಸುನಿಶ್ಚಿತವಾಗಿದೆ. ಪ್ರಿಯೇ ! ನನ್ನ ಈ ದಿವ್ಯ ಪುರವು ಗುಹ್ಯಾತಿಗುಹ್ಯವಾಗಿದೆ. ಬ್ರಹ್ಮಾದಿ ದೇವತೆಗಳೂ ಇದರ ಮಾಹಾತ್ಮ್ಯವನ್ನು ಅರಿಯಲಾರರು. ಅದಕ್ಕಾಗಿ ಈ ಮಹಾ ಕ್ಷೇತ್ರವು ಅವಿಮುಕ್ತ ಹೆಸರಿನಿಂದ ಪ್ರಸಿದ್ಧವಾಗಿದೆ. ಏಕೆಂದರೆ, ನೈಮಿಷಾದಿ ಎಲ್ಲ ತೀರ್ಥಗಳಿಂದ ಇದು ಶ್ರೇಷ್ಠವಾಗಿದೆ. ಇದು ಸತ್ತಮೇಲೆ ಮೋಕ್ಷವನ್ನು ಕೊಡುವುದಾಗಿದೆ. ಧರ್ಮದ ಸಾರ ಸತ್ಯ ವಾಗಿದೆ, ಮೋಕ್ಷದ ಸಾರ ಸಮತೆಯಾಗಿದೆ, ಸಮಸ್ತ ಕ್ಷೇತ್ರಗಳ ಮತ್ತು ತೀರ್ಥಗಳ ಸಾರ ಈ 'ಅವಿಮುಕ್ತ' ತೀರ್ಥ (ಕಾಶೀ)ಯಾಗಿದೆ; ಹೀಗೆ ವಿದ್ವಾಂಸರ ಮಾನ್ಯತೆಯಾಗಿದೆ. ಇಚ್ಛಾನುಸಾರ ಭೋಜನ, ಶಯನ, ಕ್ರೀಡೆ ಹಾಗೂ ವಿವಿಧ ಕರ್ಮಗಳ ಅನುಷ್ಠಾನ ಮಾಡುತ್ತಾ ಇದ್ದರೂ, ಈ ಅವಿಮುಕ್ತ ತೀರ್ಥದಲ್ಲಿ ಪ್ರಾಣತ್ಯಾಗ ಮಾಡಿದ ಮನುಷ್ಯನಿಗೆ ಮೋಕ್ಷವು ದೊರೆಯುವುದು. ವಿಷಯಗಳಲ್ಲಿ ಆಸಕ್ತ ಚಿತ್ತವುಳ್ಳವನೂ, ಧರ್ಮದ ರುಚಿಯನ್ನು ತ್ಯಜಿಸಿದವನೂ ಕೂಡ ಈ ಕ್ಷೇತ್ರದಲ್ಲಿ ಮರಣಹೊಂದಿದರೆ ಪುನಃ ಸಂಸಾರದ ಬಂಧನದಲ್ಲಿ ಬೀಳುವುದಿಲ್ಲ. ಹಾಗಿರುವಾಗ ಮಮತಾರಹಿತ, ಧೀರ, ಸತ್ವಗುಣೀ, ದಂಭಹೀನ ಕರ್ಮಕುಶಲ, ಕರ್ತೃತ್ವದ ಅಭಿಮಾನದಿಂದ ರಹಿತನಾದ ಕಾರಣ ಯಾವುದೇ ಕರ್ಮವನ್ನು ಮಾಡದಿರುವವರ ಮಾತಾದರೂ ಏನಿದೆ ? ಅವರೆಲ್ಲರೂ ನನ್ನಲ್ಲೇ ಸ್ಥಿತರಾಗಿರುವರು.

ಈ ಕಾಶೀಪುರಿಯಲ್ಲಿ ಶಿವಭಕ್ತರ ಮೂಲಕ ಅನೇಕ ಶಿವಲಿಂಗಗಳು ಸ್ಥಾಪಿತವಾಗಿವೆ. ಪಾರ್ವತೀ ! ಅವೆಲ್ಲವೂ ಸಂಪೂರ್ಣ ಅಭೀಷ್ಟಗಳನ್ನು ಕೊಡುವ ಮತ್ತು

ಮೋಕ್ಷದಾಯಕವಾಗಿವೆ. ನಾಲ್ಕು ದಿಕ್ಕುಗಳಲ್ಲಿ ಐದು-ಐದು ಗಾವುದ ಹರಡಿಕೊಂಡಿರುವ ಈ ಕ್ಷೇತ್ರವು 'ಅವಿಮುಕ್ತ' ಎಂದು ಹೇಳಲಾಗಿದೆ. ಅದು ಎಲ್ಲೆಡೆ ಮೋಕ್ಷದಾಯಕವಾಗಿದೆ. ಜೀವಿಗೆ ಮರಣಕಾಲದಲ್ಲಿ ಈ ಕ್ಷೇತ್ರವು ದೊರಕಿದರೆ ಅವನಿಗೆ ಅವಶ್ಯವಾಗಿ ಮೋಕ್ಷದ ಪ್ರಾಪ್ತಿಯಾಗುತ್ತದೆ. ನಿಷ್ಪಾಪ ಮನುಷ್ಯನು ಕಾಶಿಯಲ್ಲಿ ಸತ್ತರೆ ತತ್‌ಕಾಲದಲ್ಲೇ ಮೋಕ್ಷಕ್ಕೆ ಹೋಗುವನು ಮತ್ತು ಪಾಪೀ ಮನುಷ್ಯನು ಸತ್ತರೆ ಕಾಯವ್ಯೂಹಗಳನ್ನು ಪಡೆಯುತ್ತಾನೆ. ಅವನು ಮೊದಲಿಗೆ ಯಾತನೆಯನ್ನು ಅನುಭವಿಸಿ, ಕೊನೆಗೆ ಮೋಕ್ಷವನ್ನು ಪಡೆದುಕೊಳ್ಳುವನು. ಸುಂದರೀ ! ಈ ಅವಿಮುಕ್ತ ಕ್ಷೇತ್ರದಲ್ಲಿ ಪಾಪವನ್ನು ಮಾಡುವವನು ಸಾವಿರಾರು ವರ್ಷಗಳವರೆಗೆ ಭೈರವೀ ಯಾತನೆಯನ್ನು ಪಡೆದು ಪಾಪದ ಫಲವನ್ನು ಭೋಗಿಸಿದ ಬಳಿಕವೇ ಮೋಕ್ಷವನ್ನು ಪಡೆಯುವನು. ಶತಕೋಟಿ ಕಲ್ಪಗಳಲ್ಲಿಯೂ ತಾನು ಮಾಡಿದ ಕರ್ಮಗಳ ಕ್ಷಯವಾಗುವುದಿಲ್ಲ. ಜೀವನಿಗೆ ತಾನು ಮಾಡಿದ ಶುಭಾಶುಭ ಕರ್ಮಗಳ ಫಲವನ್ನು ಅವಶ್ಯವಾಗಿ ಭೋಗಿಸ ಬೇಕಾಗುತ್ತದೆ. ಕೇವಲ ಅಶುಭ ಕರ್ಮವು ನರಕವನ್ನು ಕೊಡುವುದು. ಕೇವಲ ಶುಭಕರ್ಮವು ಸ್ವರ್ಗವನ್ನು ದೊರಕಿಸಿಕೊಡುವುದು. ಶುಭ ಮತ್ತು ಅಶುಭ ಎರಡೂ ಕರ್ಮಗಳಿಂದ ಮನುಷ್ಯ ಯೋನಿಯ ಪ್ರಾಪ್ತಿ ಎಂದು ಹೇಳಲಾಗಿದೆ. ಅಶುಭ ಕರ್ಮವು ಕಡಿಮೆ ಮತ್ತು ಶುಭಕರ್ಮವು ಹೆಚ್ಚು ಇದ್ದಾಗ ಉತ್ತಮ ಜನ್ಮವು ಪ್ರಾಪ್ತವಾಗುತ್ತದೆ. ಶುಭ ಕರ್ಮವು ಕಮ್ಮಿ ಹಾಗೂ ಅಶುಭ ಕರ್ಮವು ಹೆಚ್ಚಾದಾಗ ಅಧಮ ಜನ್ಮದ ಪ್ರಾಪ್ತಿಯಾಗುತ್ತದೆ. ಪಾರ್ವತಿಯೇ ! ಶುಭ ಮತ್ತು ಅಶುಭ ಎರಡೂ ಕರ್ಮಗಳ ಕ್ಷಯವಾದಾಗ ಜೀವಿಗೆ ನಿಜವಾದ ಮೋಕ್ಷ ಪ್ರಾಪ್ತವಾಗುತ್ತದೆ. ಯಾರಾದರೂ ಹಿಂದಿನ ಜನ್ಮದಲ್ಲಿ ಆದರದಿಂದ ಕಾಶಿಯನ್ನು ದರ್ಶಿಸಿದ್ದರೆ, ಅವನಿಗೆ ಕಾಶಿಗೆ ತಲುಪಿ ಮೃತ್ಯುವಿನ ಪ್ರಾಪ್ತಿಯಾಗುತ್ತದೆ. ಕಾಶಿಗೆ ಹೋಗಿ ಗಂಗಾಸ್ನಾನ ಮಾಡುವವನ ಕ್ರಿಯಮಾಣ ಮತ್ತು ಸಂಚಿತ ಕರ್ಮಗಳು ನಾಶವಾಗಿ ಹೋಗುತ್ತವೆ.

ಆದರೆ ಪ್ರಾರಬ್ಧ ಕರ್ಮವು ಭೋಗಿಸದೆ ನಾಶವಾಗುವುದಿಲ್ಲ; ಇದು ನಿಶ್ಚಯವಾದುದು. ಕಾಶಿಯಲ್ಲಿ ಮುಕ್ತಿಯಾದವನ ಪ್ರಾರಬ್ಧ ಕರ್ಮವು ಕ್ಷಯವಾಗಿ ಹೋಗುತ್ತದೆ. ಪ್ರಿಯೇ ! ಒಬ್ಬ ಬ್ರಾಹ್ಮಣನಿಗಾದರೂ ಕಾಶಿವಾಸವನ್ನು ಏರ್ಪಡಿಸಿದವನಿಗೆ ಸ್ವಯಂ ಕಾಶೀವಾಸದ ಅವಕಾಶ ದೊರೆತು ಮೋಕ್ಷಲಾಭವು ದೊರೆಯುವುದು.

ಸೂತಪುರಾಣಿಕರು ಹೇಳುತ್ತಾರೆ - ಮುನಿವರ್ಯರೇ ! ಹೀಗೆ ಕಾಶಿಯ ಹಾಗೂ ವಿಶ್ವೇಶ್ವರ ಲಿಂಗದ ಪ್ರಸಿದ್ಧ ಮಾಹಾತ್ಮ್ಯವನ್ನು ಹೇಳಲಾಯಿತು. ಇದು ಸತ್ಪುರುಷರಿಗೆ ಭೋಗ ಮತ್ತು ಮೋಕ್ಷಗಳನ್ನು ಕರುಣಿಸುವಂತಹುದು. ಇನ್ನು ಮುಂದೆ ನಾನು ತ್ರ್ಯಂಬಕವೆಂಬ ಜ್ಯೋತಿರ್ಲಿಂಗದ ಮಾಹಾತ್ಮ್ಯವನ್ನು ಹೇಳುವೆನು. ಅದನ್ನು ಕೇಳಿ ಮನುಷ್ಯನು ತತ್‌ಕ್ಷಣ ಸಮಸ್ತ ಪಾಪಗಳಿಂದ ಮುಕ್ತನಾಗುವನು.

(ಅಧ್ಯಾಯ ೨೩)

❑ ❑ ❑

ತ್ರ್ಯಂಬಕ ಜ್ಯೋತಿರ್ಲಿಂಗದ ಪ್ರಸಂಗದಲ್ಲಿ ಮಹರ್ಷಿ ಗೌತಮರು ಮಾಡಿದ ಪರೋಪಕಾರದ ಕಥೆ, ಋಷಿಗಳು ಕಪಟದಿಂದ ಗೌತಮರನ್ನು ಗೋಹತ್ಯೆಯಲ್ಲಿ ಸಿಕ್ಕಿಸಿ ಆಶ್ರಮದಿಂದ ಹೊರಹಾಕುವುದು ಹಾಗೂ ಶುದ್ಧಿಯ ಉಪಾಯವನ್ನು ತಿಳಿಸುವುದು

ಸೂತಪುರಾಣಿಕರು ಹೇಳುತ್ತಾರೆ - ಮುನಿವರ್ಯರೇ ! ನಾನು ಸದ್ಗುರು ವೇದವ್ಯಾಸರಿಂದ ಕೇಳಿದಂತೆಯೇ ಒಂದು ಪಾಪನಾಶಕ ಕಥೆಯನ್ನು ನಿಮಗೆ ಹೇಳುತ್ತಿರುವೆನು; ಕೇಳಿರಿ. ಹಿಂದೆ ಗೌತಮನೆಂಬ ವಿಖ್ಯಾತರಾದ ಓರ್ವ ಶ್ರೇಷ್ಠ ಋಷಿಗಳಿದ್ದರು. ಅವರ ಪರಮ ಧಾರ್ಮಿಕ ಪತ್ನಿಯ ಹೆಸರು ಅಹಲ್ಯೆಯೆಂದಿತ್ತು. ದಕ್ಷಿಣದ ಬ್ರಹ್ಮಗಿರಿಯಲ್ಲಿ ಅವರು ಹತ್ತು ಸಾವಿರ ವರ್ಷಗಳವರೆಗೆ ತಪಸ್ಸು ಮಾಡಿದ್ದರು. ಉತ್ತಮ ವ್ರತವನ್ನು ಪಾಲಿಸುವ ಮಹರ್ಷಿಗಳೇ ! ಒಮ್ಮೆ ಅಲ್ಲಿ ನೂರುವರ್ಷಗಳವರೆಗೆ ಭಾರಿ ದೊಡ್ಡ ಬರಗಾಲ ಉಂಟಾಯಿತು. ಎಲ್ಲ ಜನರು ಮಹಾದುಃಖದಲ್ಲಿ ಬಿದ್ದರು. ಈ ಭೂತಲದಲ್ಲಿ ಎಲ್ಲಿಯೂ ಹಸುರಾದ ಒಂದು ಎಲೆಯೂ ಕಂಡು ಬರುತ್ತಿರಲಿಲ್ಲ. ಹಾಗಿರುವಾಗ ಜೀವಿಗಳ ಆಧಾರ ಭೂತವಾದ ನೀರು ಎಲ್ಲಿಂದ ಕಾಣಬೇಕು. ಆಗ ಮುನಿಗಳು, ಮನುಷ್ಯರು, ಪಶು, ಪಕ್ಷಿ, ಮೃಗಗಳು ಹೀಗೆ ಎಲ್ಲರೂ ಅಲ್ಲಿಂದ ಹತ್ತು ದಿಕ್ಕುಗಳಿಗೂ ಹೊರಟುಹೋದರು. ಆಗ ಗೌತಮ ಋಷಿಗಳು ಆರು ತಿಂಗಳು ತಪಸ್ಸನ್ನು ಮಾಡಿ ವರುಣನನ್ನು ಒಲಿಸಿಕೊಂಡರು. ವರುಣನು ಪ್ರಕಟನಾಗಿ ವರ ಕೇಳಲು ಹೇಳಿದಾಗ, ಋಷಿಯು ಮಳೆಗಾಗಿ ಪ್ರಾರ್ಥಿಸಿದರು.

ವರುಣನು ಹೇಳಿದನು - ದೇವತೆಗಳ ವಿಧಾನದ ವಿರುದ್ಧ ವೃಷ್ಟಿಯನ್ನು ಮಾಡದೆ, ನಾನು ನಿಮ್ಮ ಇಚ್ಛೆಗನುಸಾರವಾಗಿ ನಿಮಗೆ ಅಕ್ಷಯವಾಗಿ ಇರುವ ಜಲವನ್ನು ಕೊಡುವೆನು. ನೀವು ಒಂದು ಹೊಂಡವನ್ನು ನಿರ್ಮಿಸಿರಿ.

ವರುಣನು ಹೀಗೆ ಹೇಳಿದಾಗ ಗೌತಮರು ಒಂದು ಹಸ್ತ ಆಳವಾದ ಹೊಂಡವನ್ನು ಅಗೆದರು. ವರುಣನು ಅದನ್ನು ದಿವ್ಯ ನೀರಿನಿಂದ ತುಂಬಿ, ಪರೋಪಕಾರದಿಂದ ಸುಶೋಭಿತರಾದ ಮುನಿಶ್ರೇಷ್ಠ ಗೌತಮರಲ್ಲಿ ಹೇಳಿದನು - ಮಹಾಮುನಿಗಳೇ ! ಎಂದಿಗೂ ಬತ್ತದೆ ಇರುವ ಈ ಜಲವು ನಿನಗೆ ತೀರ್ಥರೂಪವಾಗುವುದು ಹಾಗೂ ನಿಮ್ಮ ಹೆಸರಿನಿಂದಲೇ ಪೃಥಿವಿಯಲ್ಲಿ ಖ್ಯಾತವಾಗುವುದು. ಇಲ್ಲಿ ಮಾಡಿದ ದಾನ, ಹೋಮ, ತಪಸ್ಸು ದೇವಪೂಜನ, ಪಿತೃಗಳ ಶ್ರಾದ್ಧ-ಇವೆಲ್ಲವೂ ಅಕ್ಷಯವಾಗುವುದು.

ಹೀಗೆ ನುಡಿದು ಮಹರ್ಷಿಯಿಂದ ಪ್ರಶಂಸಿತನಾಗಿ ವರುಣದೇವನು ಅಂತರ್ಧಾನನಾದನು. ಆ ಜಲದಿಂದ ಇತರರಿಗೂ ಉಪಕಾರವಾಗಿ ಮಹರ್ಷಿ ಗೌತಮರಿಗೂ ಬಹಳ ಸುಖ ದೊರೆಯಿತು. ಮಹಾತ್ಮರ ಆಶ್ರಯವು ಮನುಷ್ಯರಿಗೆ ಮಹತ್ವದ ಪ್ರಾಪ್ತಿಯನ್ನೇ ಮಾಡಿಸುವುದು. ಮಹಾಪುರುಷರೇ ಮಹಾತ್ಮರ ಆ ಸ್ವರೂಪವನ್ನು ನೋಡಿ, ತಿಳಿದುಕೊಳ್ಳುವರು; ಇತರ ಅಧಮರು ತಿಳಿಯಲಾರರು. ಮನುಷ್ಯನು ಎಂತಹವರನ್ನು ಸೇವಿಸುವನೋ ಅಂತಹ ಫಲವನ್ನೇ ಪಡೆಯುವನು. ಮಹಾಪುರುಷರ ಸೇವೆಯಿಂದ ಮಹತ್ತು ದೊರೆಯುತ್ತದೆ ಹಾಗೂ ಕ್ಷುದ್ರರ ಸೇವೆಯಿಂದ ಕ್ಷುದ್ರತೆ. ಬೇರೆಯವರ ದುಃಖವನ್ನು ಸಹಿಸದಿರುವುದೇ ಉತ್ತಮ ಪುರುಷರ ಸ್ವಭಾವವಾಗಿದೆ. ತಮಗೆ ದುಃಖ ಪ್ರಾಪ್ತವಾದರೂ ಅದನ್ನು ಸ್ವೀಕರಿಸುತ್ತಾರೆ. ಆದರೆ ಇತರರ ದುಃಖವನ್ನು ನಿವಾರಿಸುತ್ತಾರೆ. ದಯಾಳುತ್ವ, ಅಭಿಮಾನಶೂನ್ಯತೆ, ಉಪಕಾರ ಮತ್ತು ಜಿತೇಂದ್ರಿಯ - ಇವು ನಾಲ್ಕು ಪುಣ್ಯದ ಕಂಬವಾಗಿವೆ. ಅದರ ಆಧಾರದ ಮೇಲೆ ಈ ಪೃಥಿವಿಯು ನಿಂತಿದೆ.*

ಅನಂತರ ಗೌತಮರು ಅಲ್ಲಿ ಆ ಪರಮ ದುರ್ಲಭ ನೀರನ್ನು ಪಡೆದು ವಿಧಿವತ್ತಾಗಿ ನಿತ್ಯ-ನೈಮಿತ್ತಿಕ ಕರ್ಮಗಳನ್ನು ನಡೆಸತೊಡಗಿದರು. ಆ ಮುನೀಶ್ವರರು ಅಲ್ಲಿ ನಿತ್ಯ ಹೋಮದ ಸಿದ್ಧಿಗಾಗಿ ಭತ್ತ, ಜವೆಗೋಧಿ, ಕಾಡುಬತ್ತ ಇವುಗಳನ್ನು ಬಿತ್ತಿದ್ದರು. ಬಗೆ-ಬಗೆಯ ಧಾನ್ಯ, ತರ-ತರದ ವೃಕ್ಷಗಳು, ಅನೇಕ ಪ್ರಕಾರದ ಹೂವು-ಹಣ್ಣುಗಳು ಅಲ್ಲಿ ಬೆಳೆಯುತ್ತಿದ್ದವು. ಈ ಸಮಾಚಾರ ಕೇಳಿ ಇತರ ಸಾವಿರಾರು ಋಷಿ-ಮುನಿಗಳು, ಪಶು, ಪಕ್ಷಿ ಅನೇಕ ಸಂಖ್ಯೆಯ ಜೀವರು ಅಲ್ಲಿಗೆ ಬಂದು ಇರತೊಡಗಿದರು. ಅನಾವೃಷ್ಟಿಯು ಅಲ್ಲಿ ದುಃಖದಾಯಕವಾಗಿ ಉಳಿಯಲಿಲ್ಲ. ಆ ವನದಲ್ಲಿ ಅನೇಕ ಶುಭಕರ್ಮಪರಾಯಣ ಋಷಿಗಳು ತಮ್ಮ ಶಿಷ್ಯರು, ಭಾರ್ಯೆ, ಪುತ್ರರೊಂದಿಗೆ ವಾಸಿಸತೊಡಗಿದರು. ಅವರೂ ಜೀವನ ನಿರ್ವಹಣೆಗೆ ಭತ್ತವನ್ನು ಬಿತ್ತಿದರು. ಗೌತಮರ ಪ್ರಭಾವದಿಂದ ಆ ವನದಲ್ಲಿ ಎಲ್ಲೆಡೆ ಆನಂದವೇ ಪಸರಿಸಿತ್ತು.

ಒಮ್ಮೆ ಅಲ್ಲಿ ಗೌತಮರ ಆಶ್ರಮಕ್ಕೆ ಹೋಗಿ ನೆಲೆಸಿರುವ ಬ್ರಾಹ್ಮಣ ಪತ್ನಿಯರು ನೀರಿನ ಪ್ರಸಂಗದಿಂದಾಗಿ ಅಹಲ್ಯೆಯ ಮೇಲೆ ಬೇಸರಗೊಂಡರು. ಅವರು ತಮ್ಮ ಪತಿಗಳನ್ನು ಎತ್ತಿಕಟ್ಟಿದರು. ಅವರು ಗೌತಮರಿಗೆ ಅನಿಷ್ಟವನ್ನು ಮಾಡಲಿಕ್ಕಾಗಿ ಗಣಪತಿಯ ಆರಾಧನೆಯನ್ನು ಮಾಡಿದರು. ಭಕ್ತಪರಾಧೀನ ಗಣಪತಿಯು ಪ್ರಕಟನಾಗಿ ವರವನ್ನು ಕೇಳಿಕೊಳ್ಳಲು ಹೇಳಿದನು-ಆಗ ಋಷಿಗಳು- ಭಗವಂತನೇ ! ನೀನು ನಮಗೆ ವರವನ್ನು ಕೊಡುವೆಯಾದರೆ - 'ಸಮಸ್ತ ಋಷಿಗಳು ಗೌತಮರನ್ನು ಗದರಿಸಿ ಆಶ್ರಮದಿಂದ ಹೊರಗೆ ಹಾಕುವಂತೆ ಯಾವುದಾದರು ಉಪಾಯಮಾಡು' ಇದೊಂದು ವರವನ್ನು ಕರುಣಿಸು ಎಂದು ಬೇಡಿದರು.

ಗಣಪತಿಯು ಹೇಳಿದನು - ಋಷಿಗಳೇ ! ನೀವೆಲ್ಲರೂ ಕೇಳಿರಿ. ಈಗ ನೀವು ಉಚಿತವಾದ ಕಾರ್ಯವನ್ನು ಮಾಡುತ್ತಿಲ್ಲ. ಯಾವುದೇ ಅಪರಾಧವಿಲ್ಲದೆ ಅವರ ಮೇಲೆ ಸಿಟ್ಟಾಗುವುದರಿಂದ ನಿಮ್ಮ ಹಾನಿಯೇ ಆಗುವುದು. ಮೊದಲು ಉಪಕಾರ ಮಾಡಿದವರಿಗೆ ದುಃಖವನ್ನು ಕೊಟ್ಟರೆ, ಅದು ತನಗಾಗಿ ಹಿತಕಾರಕವಾಗಲಾರದು. ಉಪಕಾರಿಗೆ ದುಃಖವನ್ನು ಕೊಟ್ಟರೆ ಅದರಿಂದ ಜಗತ್ತಿನಲ್ಲಿ ತನ್ನದೇ ನಾಶವಾಗುವುದು.** ಇಂತಹ ತಪಸ್ಸನ್ನು ಮಾಡಿ ಉತ್ತಮ ಫಲದ ಸಿದ್ಧಿಯನ್ನು ಮಾಡಲಾಗುತ್ತದೆ. ಸ್ವತಃ ಶುಭಫಲವನ್ನು ತ್ಯಜಿಸಿ ಅಹಿತಕಾರಕ

---

* ಉತ್ತಮಾನಾಂ ಸ್ವಭಾವೋಽಯಂ ಪರದುಃಖಾಸಹಿಷ್ಣುತಾ ॥ ಸ್ವಯಂ ದುಃಖಂ ಚ ಸಂಪ್ರಾಪ್ತಂ ಮನ್ಯತೇಽನ್ಯಸ್ಯ ವಾರ್ಯತೇ ।
ದಯಾಲುರಮದಸ್ಪರ್ಶ ಉಪಕಾರೀ ಜಿತೇಂದ್ರಿಯಃ ॥ ಏತೈಶ್ಚ ಪುಣ್ಯಸ್ತಂಭೈಸ್ತು ಚತುರ್ಭಿರ್ಧಾರ್ಯತೇ ಮಹೀ ।
(ಶಿ- ಪು - ಕೋಟಿ - ಸಂ - ೨೪/೨೪-೨೬)

** ಅಪರಾಧಂ ವಿನಾ ತಸ್ಮೈ ಕ್ರುಧ್ಯತಾಂ ಹಾನಿರೇವ ಚ ॥ ಉಪಸ್ಕೃತಂ ಪುರಾ ಯೈಸ್ತು ತೇಭ್ಯೋ ದುಃಖಂ ಹಿತಂ ನಹಿ । ಯದಾ ಚ ದೀಯತೇ ದುಃಖಂ ತದಾ ನಾಶೋ ಭವೇದಿಹ ॥
(ಶಿ - ಪು - ಕೋ - ರು - ಸಂ - ೨೫/೧೪-೧೫)

ಫಲವನ್ನು ಸ್ವೀಕರಿಸಲಾಗುವುದಿಲ್ಲ. ಬ್ರಹ್ಮದೇವರು ಹೇಳಿದಂತೆ - 'ಅಸಾಧು ಎಂದೂ ಸಾಧುತನವನ್ನು ಹಾಗೂ ಸಾಧು ಎಂದೂ ಅಸಾಧುತನವನ್ನು ಸ್ವೀಕರಿಸುವುದಿಲ್ಲ' ಎಂಬುದು ನಿಶ್ಚಯವಾಗಿ ಸರಿಯೇ ಆಗಿದೆ. ಮೊದಲು ಉಪವಾಸದ ಕಾರಣ ನೀವು ದುಃಖಿ ಭೋಗಿಸುತ್ತಿದ್ದಾಗ ಮಹರ್ಷಿ ಗೌತಮರು ನೀರಿನ ವ್ಯವಸ್ಥೆಮಾಡಿ ನಿಮ್ಮನ್ನು ಸುಖಿಯಾಗಿಸಿದರು. ಆದರೆ ಈಗ ನೀವೆಲ್ಲ ಅವರಿಗೆ ದುಃಖಿ ಕೊಡುತ್ತಿರುವಿರಲ್ಲ. ಪ್ರಪಂಚದಲ್ಲಿ ಇಂತಹ ಕಾರ್ಯವನ್ನು ಮಾಡುವುದು ಎಂದಿಗೂ ಉಚಿತವಲ್ಲ. ಇದರ ಕುರಿತು ನೀವೆಲ್ಲರೂ ಸರಿಯಾಗಿ ವಿಚಾರಮಾಡಿರಿ. ಪತ್ನಿಯರ ಶಕ್ತಿಯಿಂದ ಮೋಹಿತರಾದ ನೀವು ನನ್ನ ಮಾತನ್ನು ಕೇಳದಿದ್ದರೂ ನಿಮ್ಮ ವರ್ತನೆ ಗೌತಮರಿಗೆ ಅತ್ಯಂತ ಹಿತಕಾರಕವೇ ಆದೀತು; ಇದರಲ್ಲಿ ಸಂಶಯವೇ ಇಲ್ಲ. ಈ ಮುನಿಶ್ರೇಷ್ಠ ಗೌತಮರು ನಿಮಗೆ ಪುನಃ ನಿಶ್ಚಯವಾಗಿ ಸುಖವನ್ನೇ ಕೊಡುವರು. ಆದ್ದರಿಂದ ಅವರೊಂದಿಗೆ ಕಪಟವು ಎಂದಿಗೂ ಉಚಿತವಲ್ಲ. ಅದಕ್ಕಾಗಿ ನೀವು ಬೇರೆ ಯಾವುದಾದರೂ ವರವನ್ನು ಕೇಳಿರಿ.

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರೇ ! ಮಹಾತ್ಮಾ ಗಣಪತಿಯು ಋಷಿಗಳಿಗೆ ಹೇಳಿದ ಮಾತು ಅವರಿಗೆ ಹಿತಕರವಾಗಿದ್ದರೂ ಅವರು ಅದನ್ನು ಸ್ವೀಕರಿಸಲಿಲ್ಲ. ಆಗ ಭಕ್ತರಿಗೆ ಅಧೀನನಾದ ಕಾರಣ ಆ ಶಿವಕುಮಾರನು ಹೇಳಿದನು - 'ನೀವು ಪ್ರಾರ್ಥಿಸಿದ ವಸ್ತುವನ್ನು ನಾನು ಅವಶ್ಯವಾಗಿ ಕೊಡುವೆನು. ಮುಂದೆ ಏನಾಗಬೇಕೋ ಅದು ಆಗಿಯೇ ತೀರುವುದು' ಎಂದು ಹೇಳಿ ಅವನು ಅಂತರ್ಧಾನನಾದನು. ಮುನೀಶ್ವರರೇ ! ಅನಂತರ ಆ ದುಷ್ಟ ಋಷಿಗಳ ಪ್ರಭಾವದಿಂದ ಹಾಗೂ ದೊರಕಿದ ವರದಿಂದಾಗಿ ನಡೆದ ಘಟನೆಯನ್ನು ಕೇಳಿರಿ. ಗೌತಮರ ಹೊಲದಲ್ಲಿ ಭತ್ತ, ಜವೆ, ಗೋಧಿ ಬಿತ್ತಿದಲ್ಲಿಗೆ ಗಣಪತಿಯು ಒಂದು ದುರ್ಬಲ ಹಸುವಾಗಿ ಹೋದನು. ಕೊಟ್ಟ ವರದಂತೆ ಆ ಗೋವು ನಡುಗುತ್ತಾ ಅಲ್ಲಿ ಭತ್ತ, ಗೋಧಿಯನ್ನು ಮೇಯತೊಡಗಿತು. ಆಗಲೇ ದೈವವಶದಿಂದ ಗೌತಮರು ಅಲ್ಲಿಗೆ ಬಂದರು. ಅವರು ದಯಾಳುಗಳಾಗಿದ್ದರಿಂದ ಹಿಡಿಯಲ್ಲಿ ಹುಲ್ಲನ್ನು ಹಿಡಿದು ಅವರು ಆ ಗೋವನ್ನು ಓಡಿಸತೊಡಗಿದರು. ಆ ಹುಲ್ಲಿನ ಸ್ಪರ್ಶವಾಗುತ್ತಲೇ ಆ ಹಸುವು ನೆಲಕ್ಕೆ ಉರುಳಿತು. ಹಾಗೂ ಋಷಿಯು ನೋಡು-ನೋಡುತ್ತಾ ಆಗಲೇ ಸತ್ತೇ ಹೋಯಿತು.

ಗೌತಮರ ದ್ವೇಷೀ ಬ್ರಾಹ್ಮಣರು ಮತ್ತು ಅವರ ದುಷ್ಟ ಪತ್ನಿಯರು ಅಲ್ಲೇ ಅಡಗಿದ್ದು ಇದೆಲ್ಲವನ್ನು ನೋಡುತ್ತಿದ್ದರು. ಆ ಗೋವು ಬೀಳುತ್ತಲೇ ಎಲ್ಲರೂ - ಗೌತಮರು ಇದೇನು ಮಾಡಿಬಿಟ್ಟರು ಎಂದು ಬೊಬ್ಬಿಟ್ಟರು. ಗೌತಮರೂ ಕೂಡ ಆಶ್ಚರ್ಯಚಕಿತರಾಗಿ ಅಹಲ್ಯೆಯನ್ನು ಕರೆದು ವ್ಯಥೆಗೊಂಡ ಮನಸ್ಸಿನಿಂದ ಹೇಳಿದರು - ದೇವಿ ! ಇದೇನಾಯಿತು ! ಹೇಗಾಯಿತು ! ಪರಮೇಶ್ವರನು ನನ್ನ ಮೇಲೆ ಕುಪಿತನಾದಂತೆ ತೋರುತ್ತದೆ. ಈಗ ಏನು ಮಾಡಲಿ? ಎಲ್ಲಿಗೆ ಹೋಗಲಿ? ನನಗೆ ಗೋ ಹತ್ಯೆಯ ಪಾಪತಟ್ಟಿತಲ್ಲ.

ಆಗಲೇ ಬ್ರಾಹ್ಮಣರು ಮತ್ತು ಪತ್ನಿಯರು ಗೌತಮರನ್ನು ಗದರಿಸುತ್ತಾ ದುರ್ವಚನಗಳಿಂದ ಅಹಲ್ಯೆಯನ್ನು ಪೀಡಿಸ ತೊಡಗಿದರು. ಅವರ ದುರ್ಬುದ್ಧಿ ಶಿಷ್ಯರು ಹಾಗೂ ಪುತ್ರರೂ ಕೂಡ ಗೌತಮರನ್ನು ಪದೇ-ಪದೇ ಗದರಿಸುತ್ತಾ ಧಿಕ್ಕರಿಸ ತೊಡಗಿದರು.

ಬ್ರಾಹ್ಮಣರು ಹೇಳಿದರು - ಈಗ ನೀನು ನಿನ್ನ ಮುಖವನ್ನು ತೋರಬಾರದು. ಇಲ್ಲಿಂದ ಹೊರಟು ಹೋಗು. ಗೋಹತ್ಯೆ ಮಾಡಿದವನ ಮುಖ ನೋಡಿದಾಕ್ಷಣವೇ ಸಚೈಲಸ್ನಾನ ಮಾಡಬೇಕು. ನೀನು ಈ ಆಶ್ರಮದಲ್ಲಿ ಇರುವತನಕ ಅಗ್ನಿ ಮತ್ತು ಪಿತೃಗಳು ನಾವು ಅರ್ಪಿಸಿದ ಹವ್ಯ-ಕವ್ಯಗಳನ್ನು ಸ್ವೀಕರಿಸಲಾರರು. ಆದ್ದರಿಂದ ಪಾಪಿಯಾದ ಗೋಹತ್ಯೆ ಮಾಡಿದವನೇ ! ನೀನು ಪರಿವಾರಸಹಿತ ಇಲ್ಲಿಂದ ಬೇರೆ ಎಲ್ಲಿಗಾದರೂ ಹೊರಟುಹೋಗು. ತಡಮಾಡಬೇಡ.

ಸೂತಪುರಾಣಿಕರು ಹೇಳುತ್ತಾರೆ - ಹೀಗೆ ಹೇಳಿ ಅವರೆಲ್ಲರೂ ಗೌತಮರಿಗೆ ಕಲ್ಲುಗಳಿಂದ ಹೊಡೆಯಲು ಪ್ರಾರಂಭಿಸಿದರು. ಅವರು ಬೈಯುತ್ತಾ ಗೌತಮರನ್ನು ಮತ್ತು ಅಹಲ್ಯೆಯನ್ನು ಸತಾಯಿಸತೊಡಗಿದರು. ಆ ದುಷ್ಟರು ಹೊಡೆಯುತ್ತಿರುವಾಗ, ಗದರಿಸಿದಾಗ ಗೌತಮರು ಹೇಳಿದರು - ಮುನಿಗಳೇ ! ನಾನು ಇಲ್ಲಿಂದ ಬೇರೆಲ್ಲಾದರೂ ಹೋಗಿ ಇರುವೆನು. ಹೀಗೆಂದು ಗೌತಮರು ಆ ಸ್ಥಾನದಿಂದ ಕೂಡಲೇ ಹೊರಟುಹೋದರು. ಅವರೆಲ್ಲರ ಅಪ್ಪಣೆಯಂತೆ ಒಂದು ಗಾವುದ ದೂರ ಹೋಗಿ ಆಶ್ರಮವನ್ನು ರಚಿಸಿ ಇರತೊಡಗಿದರು. ಅಲ್ಲಿಗೂ ಹೋಗಿ ಬ್ರಾಹ್ಮಣರು - ನಿನಗೆ ಗೋಹತ್ಯೆ ತಗಲಿರುವ ತನಕ ನೀನು ಯಾವುದೇ ಯಜ್ಞ-ಯಾಗಾದಿಗಳನ್ನು ಮಾಡಬಾರದು. ಯಾವುದೇ ವೈದಿಕ ದೇವಯಜ್ಞ, ಪಿತೃಯಜ್ಞಗಳ ಅನುಷ್ಠಾನವನ್ನೂ ಮಾಡುವ ಅಧಿಕಾರ ನಿನ್ನಲ್ಲಿ ಉಳಿಯಲಿಲ್ಲ ಎಂದು ಹೇಳಿದರು. ಮುನಿವರ್ಯ ಗೌತಮರು ಅವರ ಮಾತಿನಿಂದ ಹೇಗಾದರೂ ಒಂದು ಪಕ್ಷವನ್ನು ಕಳೆದು, ದುಃಖಿತರಾಗಿ ಪದೇ-ಪದೇ ಆ ಮುನಿಗಳಲ್ಲಿ ತಮ್ಮ ಶುದ್ಧಿಗಾಗಿ

ಪ್ರಾರ್ಥಿಸತೊಡಗಿದರು. ಅವರು ದೀನಭಾವದಿಂದ ಪ್ರಾರ್ಥಿಸಿದಾಗ ಆ ಬ್ರಾಹ್ಮಣರು ಹೇಳಿದರು - ಗೌತಮನೇ! ನೀನು ನಿನ್ನ ಪಾಪವನ್ನು ಪ್ರಕಟಿಸುತ್ತಾ ಮೂರು ಬಾರಿ ಇಡೀ ಪೃಥಿವಿಯನ್ನು ಪ್ರದಕ್ಷಿಣೆ ಮಾಡು. ಮರಳಿದ ಬಳಿಕ ಇಲ್ಲಿ ಒಂದು ತಿಂಗಳವರೆಗೆ ವ್ರತಸ್ಥನಾಗು. ಮತ್ತೆ ಈ ಬ್ರಹ್ಮಗಿರಿಗೆ ಒಂದು ನೂರು ಪ್ರದಕ್ಷಿಣೆ ಮಾಡಿದಾಗ ನಿನ್ನ ಶುದ್ಧಿಯಾದೀತು. ಅಥವಾ ಗಂಗೆಯನ್ನು ಇಲ್ಲಿಗೆ ತಂದು, ಆ ಗಂಗೆಯಲ್ಲಿ ಸ್ನಾನಮಾಡಿ ಒಂದು ಕೋಟಿ ಪಾರ್ಥಿವ ಶಿವಲಿಂಗಗಳನ್ನು ರಚಿಸಿ ಮಹಾದೇವನ ಆರಾಧನೆಯನ್ನು ಮಾಡು. ಮತ್ತೆ ಗಂಗಾಸ್ನಾನ ಮಾಡಿ ಈ ಪರ್ವತದ ಹನ್ನೊಂದು ಪ್ರದಕ್ಷಿಣೆ ಮಾಡು. ಅನಂತರ ನೂರು ಗಡಿಗೆ ಜಲದಿಂದ ಪಾರ್ಥಿವ ಶಿವಲಿಂಗಕ್ಕೆ ಅಭಿಷೇಕ ಮಾಡಿದಾಗ ನಿನ್ನ ಉದ್ಧಾರವಾಗುವುದು. ಆ ಋಷಿಗಳು ಹೀಗೆ ಹೇಳಿದಾಗ ಗೌತಮರು 'ಸರಿ, ಹಾಗೆಯೇ ಆಗಲಿ' ಎಂದು ಹೇಳಿ ಅವರ ಮಾತನ್ನು ಒಪ್ಪಿಕೊಂಡರು. ಅವರೆಂದರು - ಮುನಿವರ್ಯರೇ! ನಿಮ್ಮ ಆಜ್ಞೆಯಂತೆ ನಾನು ಇಲ್ಲಿ ಪಾರ್ಥಿವ ಪೂಜೆ ಹಾಗೂ ಬ್ರಹ್ಮಗಿರಿಯ ಪ್ರದಕ್ಷಿಣೆ ಮಾಡುವೆನು. ಹೀಗೆ ಹೇಳಿ ಮುನಿಶ್ರೇಷ್ಠ ಗೌತಮರು ಆ ಪರ್ವತ ಪ್ರದಕ್ಷಿಣೆ ಮಾಡಿ, ಮತ್ತೆ ಪಾರ್ಥಿವ ಲಿಂಗಗಳನ್ನು ನಿರ್ಮಿಸಿ ಅವನ್ನು ಪೂಜಿಸಿದನು. ಸಾಧ್ವೀ ಅಹಲ್ಯೆಯೂ ಜೊತೆಗಿದ್ದು ಎಲ್ಲವನ್ನು ಮಾಡಿದಳು. ಆಗ ಶಿಷ್ಯ-ಪ್ರಶಿಷ್ಯರು ಅವರಿಬ್ಬರ ಸೇವೆ ಮಾಡುತ್ತಿದ್ದರು.

(ಅಧ್ಯಾಯ ೨೪-೨೫)

❑ ❑ ❑

ಪತ್ನೀಸಹಿತ ಗೌತಮರ ಆರಾಧನೆಯಿಂದ ಸಂತುಷ್ಟನಾದ ಭಗವಾನ್ ಶಂಕರನು ಅವರಿಗೆ ದರ್ಶನ ಕೊಡುವುದು, ಗಂಗೆಯು ಗೌತಮೀ (ಅಥವಾ ಗೋದಾವರಿ) ಹೆಸರಿನಿಂದ ಮತ್ತು ಶಿವನು ತ್ರ್ಯಂಬಕ ಜ್ಯೋತಿರ್ಲಿಂಗ ಎಂಬ ಹೆಸರಿನಿಂದ ವಿಖ್ಯಾತವಾಗುವುದು, ಇವರಿಬ್ಬರ ಮಹಿಮೆ

ಸೂತಪುರಾಣಿಕರು ಹೇಳುತ್ತಾರೆ - ಪತ್ನೀಸಹಿತ ಗೌತಮರು ಈ ಪ್ರಕಾರ ಆರಾಧನೆ ಮಾಡಿದಾಗ ಸಂತುಷ್ಟನಾದ ಭಗವಾನ್ ಶಿವನು ಶಿವೆಯೊಂದಿಗೆ, ಪ್ರಮಥಗಣಗಳಿಂದ ಕೂಡಿ ಅಲ್ಲಿ ಪ್ರಕಟನಾದನು. ಮತ್ತೆ ಪ್ರಸನ್ನನಾದ ಕೃಪಾನಿಧಾನ ಶಂಕರನು - ಮಹಾಮುನಿಯೇ! ನಿನ್ನ ಉತ್ತಮ ಭಕ್ತಿಯಿಂದ ನಾನು ಬಹಳ ಪ್ರಸನ್ನನಾಗಿರುವೆನು. ನೀನು ಯಾವುದಾದರೂ ವರವನ್ನು ಬೇಡು ಎಂದು ಹೇಳಿದನು. ಆಗ ಮಹಾತ್ಮಾ ಶಂಭುವಿನ ಸುಂದರ ರೂಪವನ್ನು ನೋಡಿ ಆನಂದಿತರಾದ ಗೌತಮರು ಭಕ್ತಿಭಾವದಿಂದ ಶಂಕರನಿಗೆ ನಮಸ್ಕಾರಮಾಡಿ ಅವನನ್ನು ಸ್ತುತಿಸಿದನು. ದೀರ್ಘವಾಗಿ ಸ್ತುತಿಮಾಡಿ ಪ್ರಣಾಮಗೈದು ಎರಡೂ ಕೈಗಳನ್ನು ಜೋಡಿಸಿ ಅವನ ಮುಂದೆ ನಿಂತು, - ದೇವಾ! ನನ್ನನ್ನು ನಿಷ್ಪಾಪನನ್ನಾಗಿ ಮಾಡು ಎಂದು ಬೇಡಿದರು.

ಭಗವಾನ್ ಶಿವನು ಹೇಳಿದನು - ಮುನಿಯೇ! ನೀನು ಧನ್ಯನಾಗಿರುವೆ, ಕೃತಕೃತ್ಯನಾಗಿರುವೆ, ಸದಾ ನಿಷ್ಪಾಪನಾಗಿರುವೆ. ಈ ದುಷ್ಟರು ನಿನ್ನನ್ನು ವಂಚಿಸಿದರು. ಜಗತ್ತಿನ ಜನರು ನಿನ್ನ ದರ್ಶನದಿಂದ ಪಾಪರಹಿತರಾಗುತ್ತಾರೆ. ಹಾಗಿರುವಾಗ ಸದಾ ನನ್ನ ಭಕ್ತಿಯಲ್ಲಿ ತತ್ಪರನಾಗಿರುವ ನೀನು ಪಾಪಿ ಹೇಗಾಗಬಲ್ಲೆ? ಮುನಿಯೇ! ನಿನ್ನ ಮೇಲೆ ಅನಾಚಾರಮಾಡಿದ ದುರಾತ್ಮರೇ ಪಾಪಿಗಳೂ, ದುರಾಚಾರಿಗಳೂ, ಕೊಲೆಗಡುಕರೂ ಆಗಿರುವರು. ಅವರ ದರ್ಶನದಿಂದ ಇತರ ಜನರು ಪಾಪಿಷ್ಠರಾಗುವರು. ಅವರೆಲ್ಲರೂ ಕೃತಘ್ನರಾಗಿದ್ದಾರೆ. ಅವರ ಉದ್ಧಾರವು ಎಂದಿಗೂ ಆಗಲಾರದು.

ಮಹಾದೇವನ ಮಾತನ್ನು ಕೇಳಿ ಮಹರ್ಷಿ ಗೌತಮರು ಮನಸ್ಸಿನಲ್ಲೇ ವಿಸ್ಮಿತರಾದರು. ಅವರು ಭಕ್ತಿಯಿಂದ ಶಿವನಿಗೆ ನಮಸ್ಕರಿಸಿ ಕೈ ಜೋಡಿಸಿಕೊಂಡು ಪುನಃ ಇಂತೆಂದರು.

ಗೌತಮರು ಹೇಳಿದರು - ಮಹೇಶ್ವರನೇ! ಆ ಋಷಿಗಳಾದರೋ ನನಗೆ ದೊಡ್ಡ ಉಪಕಾರವನ್ನೇ ಮಾಡಿರುವರು. ಅವರು ಹೀಗೆ ವರ್ತಿಸದಿದ್ದರೆ ನನಗೆ ನಿನ್ನ ದರ್ಶನ ಹೇಗಾಗುತ್ತಿತ್ತು? ಆ ಮಹರ್ಷಿಗಳು ಧನ್ಯರು. ನನಗಾಗಿ ಪರಮ ಕಲ್ಯಾಣಕಾರೀ ಕಾರ್ಯವನ್ನೇ ಮಾಡಿರುವರು. ಅವರ ಈ ದುರಾಚಾರದಿಂದಲೇ ನನ್ನ ಮಹಾ ಸ್ವಾರ್ಥವು ಸಿದ್ಧಿಸಿತು.

ಗೌತಮರ ಮಾತನ್ನು ಕೇಳಿ ಮಹೇಶ್ವರನು ಅತ್ಯಂತ ಪ್ರಸನ್ನನಾದನು. ಅವನು ಗೌತಮರ ಕಡೆಗೆ ಕೃಪಾದೃಷ್ಟಿಯನ್ನು ಬೀರಿ ಹೀಗೆ ಉತ್ತರಿಸಿದನು.

ಶಿವನು ಹೇಳಿದನು - ವಿಪ್ರವರ್ಯನೇ! ನೀನು

ಧನ್ಯನಾಗಿರುವೆ, ಎಲ್ಲ ಋಷಿಗಳಲ್ಲಿ ಶ್ರೇಷ್ಠತರನಾಗಿರುವೆ. ನಾನು ನಿನ್ನ ಮೇಲೆ ಬಹಳ ಪ್ರಸನ್ನನಾಗಿರುವೆನು. ಹೀಗೆ ತಿಳಿದು ನೀನು ನನ್ನಿಂದ ವರವನ್ನು ಪಡೆ.

ಗೌತಮರು ಹೇಳಿದರು – ಸ್ವಾಮಿ! ನೀನು ಹೇಳುವುದು ನಿಜವೆ. ಆದರೂ ಐದು ಜನರು ಹೇಳಿದುದು, ಮಾಡಿದುದು ವ್ಯರ್ಥವಾಗಲಾರದು. ಆದ್ದರಿಂದ ಆದದ್ದಾಗಿ ಹೋಯಿತು. ದೇವೇಶನೇ! ನೀನು ಪ್ರಸನ್ನನಾಗಿದ್ದರೆ ನನಗೆ ಗಂಗೆಯನ್ನು ಕರುಣಿಸು ಮತ್ತು ಹೀಗೆ ಮಾಡಿ ಲೋಕಕ್ಕೆ ಮಹೋಪಕಾರ ಮಾಡು. ನಿನಗೆ ನನ್ನ ನಮೋ ನಮಃ.

ಹೀಗೆ ಹೇಳಿ ಗೌತಮರು ದೇವೇಶ್ವರ ಭಗವಾನ್ ಶಿವನ ಚರಣಾರವಿಂದಗಳನ್ನು ಹಿಡಿದುಕೊಂಡು, ಲೋಕಹಿತದ ಕಾಮನೆಯಿಂದ ಅವನಿಗೆ ನಮಸ್ಕಾರ ಮಾಡಿದನು. ಆಗ ಶಂಕರನು ಪೃಥಿವಿ ಮತ್ತು ಸ್ವರ್ಗದ ಸಾರಭೂತ ಜಲವನ್ನು ತೆಗೆದು, ಅದನ್ನು ಅವನು ಮೊದಲೇ ತೆಗೆದಿರಿಸಿದ್ದನ್ನು ಮತ್ತು ವಿವಾಹಕಾಲದಲ್ಲಿ ಬ್ರಹ್ಮದೇವರು ಕೊಟ್ಟಿರುವ ಜಲದಲ್ಲಿ ಸ್ವಲ್ಪ ಶೇಷ ಉಳಿದಿತ್ತು, ಅದೆಲ್ಲವನ್ನು ಭಕ್ತವತ್ಸಲ ಶಂಭುವು ಗೌತಮರಿಗೆ ಕೊಟ್ಟುಬಿಟ್ಟನು. ಆಗ ಗಂಗೆಯ ಜಲವು ಪರಮ ಸುಂದರ ಸ್ತ್ರೀಯ ರೂಪವನ್ನು ಧರಿಸಿ ಅಲ್ಲಿ ನಿಂತುಕೊಂಡಳು. ಆಗ ಮುನಿವರ್ಯ ಗೌತಮರು ಅಕೆಗೆ ವಂದಿಸಿದರು.

ಗೌತಮರು ಹೇಳಿದರು–ಗಂಗೆ! ನೀನು ಧನ್ಯಳಾಗಿರುವೆ, ಕೃತಕೃತ್ಯಳಾಗಿರುವೆ. ನೀನು ಸಂಪೂರ್ಣ ಭುವನಗಳನ್ನು ಪವಿತ್ರಗೊಳಿಸಿರುವೆ. ಅದಕ್ಕಾಗಿ ನರಕಕ್ಕೆ ಬೀಳುತ್ತಿರುವ ಗೌತಮನಾದ ನನ್ನನ್ನು ನಿಶ್ಚಯವಾಗಿ ಪವಿತ್ರನನ್ನಾಗಿಸು.

ಅನಂತರ ಶಿವನು ಗಂಗೆಗೆ ಹೇಳಿದನು – ದೇವಿ! ನೀನು ಮುನಿಯನ್ನು ಪವಿತ್ರಗೊಳಿಸಿ, ಕೂಡಲೇ ಮರಳಿಹೋಗದೆ ವೈವಸ್ವತ ಮನುವಿನ ಇಪ್ಪತ್ತೆಂಟನೆಯ ಕಲಿಯುಗದವರೆಗೆ ಇಲ್ಲೇ ಇರು.

ಗಂಗೆಯು ಹೇಳಿದಳು – ಮಹೇಶ್ವರನೇ! ನನ್ನ ಮಾಹಾತ್ಮ್ಯವು ಎಲ್ಲ ನದಿಗಳಿಗಿಂತ ಹೆಚ್ಚಾಗಿದ್ದರೆ ಮತ್ತು ಅಂಬಿಕೆ ಹಾಗೂ ಗಣನಾಥರೊಂದಿಗೆ ನೀನೂ ಇಲ್ಲೇ ಇರುವಿಯಾದರೆ ನಾನೂ ಈ ಧರಣಿಯಲ್ಲಿ ಇರುವೆನು.

ಗಂಗೆಯ ಮಾತನ್ನು ಕೇಳಿ ಭಗವಾನ್ ಶಿವನು ಹೇಳಿದನು – ಗಂಗೇ! ನೀನು ಧನ್ಯಳು. ನನ್ನ ಮಾತನ್ನು ಕೇಳು. ನಾನು ನಿನ್ನಿಂದ ಬೇರೆಯಾಗಿಲ್ಲ, ಆದರೂ ನಾನು ನೀನು ಹೇಳಿದಂತೆ ಇಲ್ಲೇ ಸ್ಥಿತನಾಗಿರುವೆನು. ನೀನೂ ಸ್ಥಿತಳಾಗು.

ಸ್ವಾಮಿ ಪರಮೇಶ್ವರ ಶಿವನ ಮಾತನ್ನು ಕೇಳಿ ಗಂಗೆಯು ಮನಸ್ಸಿನಲ್ಲೇ ಪ್ರಸನ್ನಳಾಗಿ ಅವನನ್ನು ಬಹಳವಾಗಿ ಪ್ರಶಂಸಿದಳು. ಆಗಲೇ ದೇವತೆಗಳು, ಪ್ರಾಚೀನ ಋಷಿಗಳು, ಅನೇಕ ಉತ್ತಮ ತೀರ್ಥಗಳು, ನಾನಾ ವಿಧದ ಕ್ಷೇತ್ರಗಳು ಅಲ್ಲಿಗೆ ಬಂದು ತಲುಪಿದವು. ಅವರೆಲ್ಲರೂ ಆದರದಿಂದ ಜಯ-ಜಯಕಾರ ಮಾಡುತ್ತಾ ಗೌತಮರ, ಗಂಗೆಯ, ಗಿರಿಶಾಯಿ ಶಿವನ ಪೂಜೆ ಮಾಡಿದರು. ಅನಂತರ ದೇವತೆಗಳೆಲ್ಲರೂ ನತಮಸ್ತಕರಾಗಿ, ಕೈಜೋಡಿಸಿಕೊಂಡು ಸಂತೋಷದಿಂದ ಎಲ್ಲರನ್ನು ಸ್ತುತಿಸಿದರು. ಆಗ ಪ್ರಸನ್ನರಾದ ಗಂಗೆ ಮತ್ತು ಗಿರೀಶನು ಹೇಳಿದನು – ಶ್ರೇಷ್ಠದೇವತೆಗಳಿರಾ! ವರವನ್ನು ಕೇಳಿರಿ. ನಿಮಗೆ ಪ್ರಿಯವನ್ನು ಮಾಡುವ ಇಚ್ಛೆಯಿಂದ ನಾವು ವರವನ್ನು ಕೊಡುವೆವು.

ದೇವತೆಗಳು ಹೇಳಿದರು – ದೇವೇಶ್ವರನೇ! ನದಿಗಳಲ್ಲಿ ಶ್ರೇಷ್ಠ ಗಂಗೆಯೇ! ನೀವು ಪ್ರಸನ್ನರಾಗಿದ್ದರೆ ನಮ್ಮ ಹಾಗೂ ಮನುಷ್ಯರ ಪ್ರಿಯವನ್ನು ಮಾಡುವುದಕ್ಕಾಗಿ ನೀವುಗಳು ದಯಮಾಡಿ ಇಲ್ಲಿ ವಾಸಿಸಿರಿ.

ಗಂಗೆಯು ಹೇಳಿದಳು – ದೇವತೆಗಳಿರಾ! ಹಾಗಿರುವಾಗ ಎಲ್ಲರ ಪ್ರಿಯವನ್ನು ಮಾಡಲಿಕ್ಕಾಗಿ ನೀವುಗಳೂ ಕೂಡ ಇಲ್ಲೇ ಏಕೆ ಬಂದಿರಬಾರದು? ನಾನಾದರೋ ಗೌತಮರ ಪಾಪವನ್ನು ತೊಳೆದು ಬಂದ ಹಾಗೆಯೇ ಮರಳಿ ಹೋಗುವೆನು. ನಿಮ್ಮ ಸಮಾಜದಲ್ಲಿ ಇಲ್ಲಿ ನನ್ನ ವಿಶೇಷತೆಯನ್ನು ಹೇಗೆ ತಿಳಿಯಲಾದೀತು? ನೀವೆಲ್ಲ ನನ್ನ ವಿಶೇಷತೆಯನ್ನು ಸಿದ್ಧಗೊಳಿಸುವುದಾದರೆ ನಾನು ಅವಶ್ಯವಾಗಿ ಇಲ್ಲಿ ಇರುವೆನು. ಇದರಲ್ಲಿ ಸಂಶಯವೇ ಇಲ್ಲ.

ಎಲ್ಲ ದೇವತೆಗಳು ಹೇಳಿದರು – ನದಿಗಳಲ್ಲಿ ಶ್ರೇಷ್ಠ ಗಂಗೆಯೇ! ಎಲ್ಲರ ಪರಮ ಸುಹೃದ್ ಬೃಹಸ್ಪತಿಯು ಸಿಂಹರಾಶಿಯಲ್ಲಿ ಸ್ಥಿತನಾದಾಗಲೆಲ್ಲ ನಾವೆಲ್ಲರೂ ಇಲ್ಲಿಗೆ ಬರುವೆವು. ಇದರಲ್ಲಿ ಸಂಶಯವಿಲ್ಲ. ಹನ್ನೊಂದು ವರ್ಷಗಳವರೆಗೆ ಜನರ ಪಾಪಗಳು ಇಲ್ಲಿ ತೊಳೆಯಲ್ಪಟ್ಟು ಅದರಿಂದ ಮಲಿನವಾದಾಗ ಆ ಪಾಪರಾಶಿಯನ್ನು ತೊಳೆಯಲಿಕ್ಕಾಗಿ ಅದರದಿಂದ ನಿನ್ನ ಬಳಿಗೆ ಬರುವೆವು. ಇದು ಸರ್ವಥಾ ಸತ್ಯವಾದುದು. ಶ್ರೇಷ್ಠನದಿಯೇ! ಮಹಾದೇವಿಯೇ! ಆದ್ದರಿಂದ ನೀನು ಮತ್ತು ಭಗವಾನ್ ಶಂಕರನು ಸಮಸ್ತ ಜನರ ಮೇಲೆ ಅನುಗ್ರಹ ಮಾಡಲು ಹಾಗೂ ನಮ್ಮ ಪ್ರಿಯವನ್ನು ಮಾಡಲು ಇಲ್ಲಿ ನಿವಾಸ ಮಾಡಬೇಕು. ಗುರುವು ಸಿಂಹರಾಶಿಯಲ್ಲಿ ಇರುವತನಕ ನಾವು ಇಲ್ಲಿ ವಾಸಿಸುವೆವು. ಆಗ ನಿನ್ನ ಜಲದಲ್ಲಿ ತ್ರಿಕಾಲಸ್ನಾನ ಮತ್ತು ಭಗವಾನ್ ಶಂಕರನ ದರ್ಶನ ಮಾಡಿ ನಾವು ಶುದ್ಧರಾಗುವೆವು. ಮತ್ತೆ ನಿನ್ನ ಅಪ್ಪಣೆಯನ್ನು ಪಡೆದು ನಮ್ಮ ಸ್ಥಾನಗಳಿಗೆ ಮರಳುವೆವು.

ಸೂತಪುರಾಣಿಕರು ಹೇಳುತ್ತಾರೆ – ಈ ಪ್ರಕಾರ ಆ

ದೇವತೆಗಳು ಹಾಗೂ ಮಹರ್ಷಿ ಗೌತಮರು ಪ್ರಾರ್ಥಿಸಿದಾಗ ಭಗವಾನ್ ಶಂಕರನು ಮತ್ತು ನದಿಗಳಲ್ಲಿ ಶ್ರೇಷ್ಠಳಾದ ಗಂಗೆಯು ಅಲ್ಲೇ ಸ್ಥಿತರಾದರು. ಅಲ್ಲಿಯ ಗಂಗೆಯು ಗೌತಮಿ (ಗೋದಾವರಿ) ಹೆಸರಿನಿಂದ ವಿಖ್ಯಾತಳಾದಳು ಮತ್ತು ಭಗವಾನ್ ಶಿವನು ಜ್ಯೋತಿರ್ಮಯ ಲಿಂಗ ತ್ರ್ಯಂಬಕನೆಂದು ಪ್ರಸಿದ್ಧನಾದನು. ಈ ಜ್ಯೋತಿರ್ಲಿಂಗವು ಮಹಾ ಪಾಪಗಳನ್ನು ನಾಶ ಮಾಡುವಂತಹುದು. ಅಂದಿನಿಂದ ಬೃಹಸ್ಪತಿಯು ಸಿಂಹರಾಶಿಯಲ್ಲಿ ಸ್ಥಿತನಾದಾಗ ಎಲ್ಲ ತೀರ್ಥಗಳು, ಕ್ಷೇತ್ರಗಳು, ದೇವತೆಗಳು, ಪುಷ್ಕರವೇ ಆದಿ ಸರೋವರಗಳು, ಗಂಗಾದಿ ನದಿಗಳು, ವಿಷ್ಣುವೇ ಆದಿ ದೇವತೆಗಳು ಅವಶ್ಯವಾಗಿ ಗೌತಮಿಯ ತೀರಕ್ಕೆ ಆಗಮಿಸಿ, ವಾಸಿಸುವರು. ಅವರೆಲ್ಲರೂ ಗೌತಮಿಯ ತೀರದಲ್ಲಿ ಇರುವತನಕ ತಮ್ಮ ಸ್ಥಾನದಲ್ಲಿ ಅವರ ಯಾವುದೇ ಫಲವಿರುವುದಿಲ್ಲ. ಅವರು ತಮ್ಮ ಪ್ರದೇಶಕ್ಕೆ ಮರಳಿದಾಗಲೇ ಇವರ ಸೇವನೆಯ ಫಲವು ದೊರೆಯುವುದು. ಈ ತ್ರ್ಯಂಬಕವೆಂಬ ಪ್ರಸಿದ್ಧ ಜ್ಯೋತಿರ್ಲಿಂಗವು ಗೌತಮಿಯ ತಟದಲ್ಲಿ ಸ್ಥಿತವಾಗಿದ್ದು ದೊಡ್ಡ -ದೊಡ್ಡ ಪಾತಕಗಳನ್ನು ನಾಶಮಾಡುವಂತಹುದು. ಭಕ್ತಿ-ಭಾವದಿಂದ ಈ ತ್ರ್ಯಂಬಕಲಿಂಗದ ದರ್ಶನ, ಪೂಜೆ, ಸ್ತುತಿ, ವಂದನೆ ಮಾಡುವವನು ಸಮಸ್ತ ಪಾಪಗಳಿಂದ ಮುಕ್ತನಾಗುವನು. ಗೌತಮರಿಂದ ಪೂಜಿತ ತ್ರ್ಯಂಬಕವೆಂಬ ಜ್ಯೋತಿರ್ಲಿಂಗವು ಈ ಲೋಕದಲ್ಲಿ ಸಮಸ್ತ ಅಭೀಷ್ಟಗಳನ್ನು ಕೊಡುವುದು ಹಾಗೂ ಪರಲೋಕದಲ್ಲಿ ಉತ್ತಮ ಮೋಕ್ಷವನ್ನು ಕರುಣಿಸುವುದು. ಮುನೀಶ್ವರರೇ! ಈ ಪ್ರಕಾರವಾಗಿ ನೀವು ಕೇಳಿದಂತೆ ನಾನು ಎಲ್ಲವನ್ನು ಹೇಳಿದೆನು. ಇನ್ನೇನು ಕೇಳಬೇಕೆಂದು ಬಯಸುವಿರಿ, ಹೇಳಿರಿ. ನಾನು ಅದನ್ನೂ ನಿಮಗೆ ತಿಳಿಸುವೆನು. ಇದರಲ್ಲಿ ಸಂಶಯವಿಲ್ಲ.

(ಅಧ್ಯಾಯ ೨೬)

❐ ❐ ❐

ವೈದ್ಯನಾಥೇಶ್ವರ ಜ್ಯೋತಿರ್ಲಿಂಗದ ಪ್ರಾಕಟ್ಯದ ಕಥೆ ಹಾಗೂ ಮಹಿಮೆ

ಸೂತಪುರಾಣಿಕರು ಹೇಳುತ್ತಾರೆ – ಈಗ ನಾನು ವೈದ್ಯನಾಥೇಶ್ವರ ಜ್ಯೋತಿರ್ಲಿಂಗದ ಪಾಪಹಾರೀ ಮಾಹಾತ್ಮ್ಯವನ್ನು ತಿಳಿಸುವೆನು; ಕೇಳಿರಿ. ರಾಕ್ಷಸರಾಜ ರಾವಣನು ಬಹಳ ಅಭಿಮಾನಿ ಮತ್ತು ತನ್ನ ಅಹಂಕಾರವನ್ನು ತೋರಿಸಿಕೊಳ್ಳುವವನಾಗಿದ್ದನು. ಪರಮೋತ್ತಮ ಕೈಲಾಸ ಪರ್ವತದಲ್ಲಿ ಭಕ್ತಿಯಿಂದ ಭಗವಾನ್ ಶಿವನನ್ನು ಆರಾಧಿಸುತ್ತಿದ್ದನು. ಕೆಲವು ಕಾಲ ಆರಾಧನೆ ಮಾಡಿದರೂ ಶಿವನು ಒಲಿಯದಿದ್ದಾಗ, ಅವನು ಶಿವನ ಪ್ರಸನ್ನತೆಗಾಗಿ ಇನ್ನೊಂದು ತಪಸ್ಸನ್ನು ಮಾಡತೊಡಗಿದನು. ಪುಲಸ್ತ್ಯಕುಲನಂದನ ರಾವಣನು ಸಿದ್ಧಿಯಸ್ಥಾನವಾದ ಹಿಮಾಲಯದ ದಕ್ಷಿಣದಲ್ಲಿ ವೃಕ್ಷಗಳಿಂದ ತುಂಬಿದ ಕಾಡಿನಲ್ಲಿ ಒಂದು ದೊಡ್ಡ ಹೊಂಡವನ್ನು ಅಗೆದು ಅದರಲ್ಲಿ ಅಗ್ನಿಯನ್ನು ಸ್ಥಾಪಿಸಿದನು. ಅದರ ಪಕ್ಕದಲ್ಲೇ ಭಗವಾನ್ ಶಿವನನ್ನು ಸ್ಥಾಪಿಸಿ ಹವನವನ್ನು ಪ್ರಾರಂಭಿಸಿದನು. ಗ್ರೀಷ್ಮ ಋತುವಿನಲ್ಲಿ ಅವನು ಪಂಚಾಗ್ನಿಗಳ ನಡುವೆ ಕುಳಿತುಕೊಳ್ಳುತ್ತಿದ್ದನು. ವರ್ಷಾಋತುವಿನಲ್ಲಿ ಬಯಲಿನಲ್ಲಿ ಮಲಗುತ್ತಿದ್ದನು. ಚಳಿಕಾಲದಲ್ಲಿ ನೀರಿನಲ್ಲಿ ನಿಂತುಕೊಳ್ಳುತ್ತಿದ್ದನು. ಹೀಗೆ ಮೂರು ವಿಧದಿಂದ ಅವನ ತಪಸ್ಸು ನಡೆಯುತ್ತಿತ್ತು. ಈ ಪ್ರಕಾರವಾಗಿ ರಾವಣನು ಬಹಳ ತಪಸ್ಸನ್ನು ಮಾಡಿದರೂ ದುರಾತ್ಮರಿಗೆ ದೂರನಾದ ಪರಮಾತ್ಮಾ ಮಹೇಶ್ವರನು ಅವನಿಗೆ ಒಲಿಯಲಿಲ್ಲ. ಆಗ ಮಹಾಮನಸ್ವೀ ದೈತ್ಯರಾಜ ರಾವಣನು ತನ್ನ ಮಸ್ತಕವನ್ನು ಕಡಿದು ಶಂಕರನನ್ನು ಪೂಜಿಸಲು ಪ್ರಾರಂಭಿಸಿದನು. ವಿಧಿವತ್ತಾಗಿ ಶಿವನನ್ನು ಪೂಜಿಸಿ ಅವನು ತನ್ನ ಒಂದೊಂದು ಶಿರವನ್ನು ಕಡಿದು ಭಗವಂತನಿಗೆ ಅರ್ಪಿಸುತ್ತಿದ್ದನು. ಹೀಗೆ ಅವನು ಕ್ರಮವಾಗಿ ತನ್ನ ಒಂಭತ್ತು ತಲೆಗಳನ್ನು ಕತ್ತರಿಸಿ ಹಾಕಿದನು. ಒಂದೇ ಶಿರವು ಉಳಿದಾಗ ಭಕ್ತವತ್ಸಲ ಭಗವಾನ್ ಶಂಕರನು ಸಂತುಷ್ಟನಾಗಿ, ಪ್ರಸನ್ನನಾಗಿ ಅಲ್ಲೇ ಅವನ ಮುಂದೆ ಪ್ರಕಟನಾದನು. ಭಗವಾನ್ ಶಿವನು ಅವನ ಎಲ್ಲ ತಲೆಗಳನ್ನು ಹಿಂದಿನಂತೆ ನಿರೋಗಿಯಾಗಿಸಿ, ಅವನ ಇಚ್ಛೆಯಂತೆ ಅನುಪಮ ಉತ್ತಮ ಬಲವನ್ನು ಕರುಣಿಸಿದನು. ಭಗವಾನ್ ಶಿವನ ಕೃಪಾಪ್ರಸಾದ ಪಡೆದು ರಾಕ್ಷಸ ರಾವಣನು ನತಮಸ್ತಕನಾಗಿ, ಕೈಮುಗಿದು ಹೇಳಿದನು – ದೇವೇಶ್ವರನೇ ! ಪ್ರಸನ್ನನಾಗು, ನಾನು ನಿನ್ನನ್ನು ಲಂಕೆಗೆ ಕರೆದುಕೊಂಡು ಹೋಗಬೇಕೆಂದು ಬಯಸುವೆನು. ನೀನು ನನ್ನ ಈ ಮನೋರಥವನ್ನು ಸಫಲಗೊಳಿಸು. ನಾನು ನಿನಗೆ ಶರಣು ಬಂದಿರುವೆನು.

ರಾವಣನು ಹೀಗೆ ಹೇಳಿದಾಗ ಭಗವಾನ್ ಶಂಕರನು ದೊಡ್ಡ ಸಂಕಟದಲ್ಲಿ ಬಿದ್ದನು ಮತ್ತು ಬೇಸರಗೊಂಡು ಹೇಳಿದನು – ರಾಕ್ಷಸರಾಜನೇ ! ನನ್ನ ಸಾರಗರ್ಭಿತವಾದ ಮಾತನ್ನು ಕೇಳು. ನೀನು ನನ್ನ ಈ ಉತ್ತಮ ಲಿಂಗವನ್ನು ಭಕ್ತಿಭಾವದಿಂದ ನಿನ್ನ ಮನೆಗೆ ಕೊಂಡುಹೋಗು. ಆದರೆ

ನೀನು ಇದನ್ನು ಎಲ್ಲಾದರೂ ಭೂಮಿಯ ಮೇಲಿಟ್ಟರೆ, ಇದು ಅಲ್ಲೇ ಸುಸ್ಥಿರವಾಗುವುದು. ಇದರಲ್ಲಿ ಸಂಶಯವೇ ಇಲ್ಲ. ಇನ್ನು ನಿನ್ನ ಇಚ್ಛೆಯಿದ್ದಂತೆ ಮಾಡು.

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರೇ! ಭಗವಾನ್ ಶಂಕರನು ಹೀಗೆ ಹೇಳಿದಾಗ ರಾಕ್ಷಸರಾಜ ರಾವಣನು 'ಬಹಳ ಒಳ್ಳೆಯದು' ಎಂದು ಹೇಳಿ ಆ ಶಿವ ಲಿಂಗವನ್ನು ತೆಗೆದುಕೊಂಡು ಮನೆಯ ಕಡೆಗೆ ಹೊರಟನು. ಆದರೆ ಮಾರ್ಗದಲ್ಲಿ ಭಗವಾನ್ ಶಿವನ ಮಾಯೆಯಿಂದ ಅವನಿಗೆ ಲಘುಶಂಕೆಯ ಇಚ್ಛೆಯುಂಟಾಯಿತು. ಪುಲಸ್ತ್ಯನಂದನ ರಾವಣನು ಶಕ್ತಿಶಾಲಿಯಾಗಿದ್ದರೂ ಮೂತ್ರದ ವೇಗವನ್ನು ತಡೆಯದಾದನು. ಇದೇ ಸಮಯದಲ್ಲಿ ಅಲ್ಲೇ ಸನಿಹದಲ್ಲಿ ಒಬ್ಬ ದನಗಾಹಿಯನ್ನು ನೋಡಿ, ಅವನಲ್ಲಿ ಬೇಡಿಕೊಂಡು ಆ ಶಿವಲಿಂಗವನ್ನು ಅವನ ಕೈಯಲ್ಲಿಟ್ಟು ತಾನು ಲಘುಶಂಕೆಗಾಗಿ ಕುಳಿತನು. ಒಂದು ಕ್ಷಣ ಕಳೆಯುವಷ್ಟರಲ್ಲಿ ಆ ದನಗಾಹಿಯು ಆ ಶಿವಲಿಂಗದ ಭಾರವನ್ನು ತಡೆದು ಕೊಳ್ಳಲಾರದೆ ಅದನ್ನು ನೆಲಕ್ಕೆ ಇಟ್ಟು ಬಿಟ್ಟನು. ಮತ್ತೆ ಆ ವಜ್ರಮಯ ಶಿವಲಿಂಗವು ಅಲ್ಲೇ ಸ್ಥಿರವಾಯಿತು. ಅದು ದರ್ಶನ ಮಾತ್ರದಿಂದ ಸಮಸ್ತ ಅಭೀಷ್ಟಗಳನ್ನು ಕೊಡುವುದು ಮತ್ತು ಪಾಪರಾಶಿಯನ್ನು ಕಳೆಯುವಂತಹುದಾಗಿದೆ. ಮುನಿಗಳೇ ! ಆ ಶಿವಲಿಂಗವೇ ಮೂರು ಲೋಕಗಳಲ್ಲಿ ವೈದ್ಯನಾಥೇಶ್ವರ ಹೆಸರಿನಿಂದ ಪ್ರಸಿದ್ಧವಾಯಿತು. ಅದು ಸತ್ಪುರುಷರಿಗೆ ಭೋಗ ಮತ್ತು ಮೋಕ್ಷಗಳನ್ನು ಕೊಡುವುದು. ಈ ದಿವ್ಯ, ಉತ್ತಮ, ಶ್ರೇಷ್ಠ ಜ್ಯೋತಿರ್ಲಿಂಗದ ದರ್ಶನ, ಪೂಜನದಿಂದ ಸಮಸ್ತ ಪಾಪವನ್ನು ಕಳೆದು, ಮೋಕ್ಷವು ದೊರೆಯುವುದು. ಆ ಶಿವಲಿಂಗವು ಸಮಸ್ತ ಲೋಕಗಳ ಹಿತಕ್ಕಾಗಿ ಅಲ್ಲೇ ಸ್ಥಿತವಾಯಿತು. ಆಗ ರಾವಣನು ಭಗವಾನ್ ಶಿವನಿಂದ ಉತ್ತಮ ವರವನ್ನು ಪಡೆದು ತನ್ನ ಮನೆಗೆ ಹೋದನು. ಮನೆಗೆ ಹೋಗಿ ಆ ಮಹಾಸುರನು ಹರ್ಷದಿಂದ ತನ್ನ ಪ್ರಿಯೆ ಮಂದೋದರಿಗೆ ಎಲ್ಲವನ್ನು ತಿಳಿಸಿದನು. ಇಂದ್ರಾದಿ ದೇವತೆಗಳು ಹಾಗೂ ಪುಣ್ಯಾತ್ಮರಾದ ಮುನಿಗಳು ಈ ಸಮಾಚಾರವನ್ನು ಕೇಳಿದಾಗ ಪರಸ್ಪರ ಮಾತನಾಡಿಕೊಂಡು ಆ ಜ್ಯೋತಿರ್ಲಿಂಗದ ಬಳಿಗೆ ಬಂದರು. ಅವರೆಲ್ಲರ ಮನಸ್ಸು ಭಗವಾನ್ ಶಿವನಲ್ಲಿ ನೆಟ್ಟಿತ್ತು. ದೇವತೆಗಳೆಲ್ಲರೂ ಆಗ ಅಲ್ಲಿ ಬಹಳ ಸಂತೋಷವಾಗಿ ಶಿವನನ್ನು ವಿಶೇಷವಾಗಿ ಪೂಜಿಸಿದರು. ಅಲ್ಲಿ ಭಗವಾನ್ ಶಂಕರನನ್ನು ಪ್ರತ್ಯಕ್ಷವಾಗಿ ದರ್ಶಿಸಿ, ದೇವತೆಗಳು ಆ ಶಿವಲಿಂಗವನ್ನು ವಿಧಿವತ್ತಾಗಿ ಸ್ಥಾಪಿಸಿದರು ಮತ್ತು ವೈದ್ಯನಾಥ ಎಂದು ಹೆಸರಿಟ್ಟು ಅದನ್ನು ವಂದಿಸಿ, ಸ್ತುತಿಸಿ ಅವರು ಸ್ವರ್ಗಲೋಕಕ್ಕೆ ಹೋದರು.

ಋಷಿಗಳು ಕೇಳಿದರು - ಸೂತಪುರಾಣಿಕರೇ ! ಆ ಶಿವಲಿಂಗವು ಅಲ್ಲೇ ಸ್ಥಿತವಾಯಿತು ಹಾಗೂ ರಾವಣನು ತನ್ನ ಮನೆಗೆ ಹೋದಮೇಲೆ ಅಲ್ಲಿ ಯಾವ ಘಟನೆ ನಡೆಯಿತು? ಇದನ್ನು ತಾವು ತಿಳಿಸಿರಿ.

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರೇ! ಭಗವಾನ್ ಶಿವನಿಂದ ಉತ್ತಮವರವನ್ನು ಪಡೆದು ಮಹಾಸುರ ರಾವಣನು ಮನೆಗೆ ಹೊರಟು ಹೋದನು. ಅಲ್ಲಿ ತನ್ನ ಪ್ರಿಯೆಗೆ ಎಲ್ಲವನ್ನು ತಿಳಿಸಿ, ಅತ್ಯಂತ ಆನಂದವನ್ನು ಅನುಭವಿಸಿದನು. ಇತ್ತ ದೇವತೆಗಳು ಈ ಸಮಾಚಾರವನ್ನು ಕೇಳಿ - ಈ ದೇವದ್ರೋಹಿ ಮಹಾ ದುಷ್ಟ ರಾವಣನು ಭಗವಾನ್ ಶಿವನ ವರದಾನದಿಂದ ಬಲವನ್ನು ಪಡೆದು ಏನು ಮಾಡುವನೋ ತಿಳಿಯದು ಎಂದು ಗಾಬರಿಯಾದರು. ಆವರು ನಾರದರನ್ನು ಅವನ ಬಳಿಗೆ ಕಳಿಸಿದರು. ನಾರದರು ಹೋಗಿ ಹೇಳಿದರು - 'ರಾವಣನೇ! ನೀನು ಕೈಲಾಸ ಪರ್ವತವನ್ನು ಎತ್ತು. ಆಗ ಶಿವನು ಕೊಟ್ಟ ವರದಾನವು ಎಷ್ಟರಮಟ್ಟಿಗೆ ಫಲಪ್ರದವಾಯಿತೆಂಬುದು ತಿಳಿಯ ಬಹುದು'. ರಾವಣನಿಗೆ ಇದು ಸರಿಎನಿಸಿ, ಅವನು ಹೋಗಿ ಕೈಲಾಸವನ್ನು ಕಿತ್ತು ಎತ್ತಿದನು. ಇದರಿಂದ ಇಡೀ ಕೈಲಾಸವು ನಡುಗಿತು. ಆಗ ಗಿರಿಜೆಯು ಹೇಳಿದಂತೆ ಮಹಾದೇವನು ರಾವಣನನ್ನು ಅಹಂಕಾರಿ ಎಂದು ತಿಳಿದು ಹೀಗೆ ಶಪಿಸಿದನು.

ಮಹಾದೇವನು ಹೇಳಿದನು-ಎಲವೋ ದುಷ್ಟ ಭಕ್ತನೇ ! ದುರ್ಬುದ್ಧಿ ರಾವಣನೇ ! ನೀನು ನಿನ್ನ ಬಲದ ಮೇಲೆ ಇಷ್ಟೊಂದು ಗರ್ವಪಡಬೇಡ. ನಿನ್ನ ಈ ಭುಜಗಳ ಗರ್ವವನ್ನು ಚೂರಾಗಿಸುವ ವೀರ ಪುರುಷನು ಶೀಘ್ರವೇ ಈ ಜಗತ್ತಿನಲ್ಲಿ ಅವತರಿಸುವನು.

ಸೂತಪುರಾಣಿಕರು ಹೇಳುತ್ತಾರೆ - ಈ ಪ್ರಕಾರ ಅಲ್ಲಿ ನಡೆದ ಘಟನೆಯನ್ನು ನಾರದರು ಕೇಳಿದರು. ರಾವಣನೂ ಕೂಡ ಸಂತೋಷಚಿತ್ತನಾಗಿ ಬಂದ ಹಾಗೆಯೇ ತನ್ನ ಮನೆಗೆ ಮರಳಿದನು. ಹೀಗೆ ನಾನು ನಿಮಗೆ ವೈದ್ಯನಾಥೇಶ್ವರನ ಮಾಹಾತ್ಮ್ಯವನ್ನು ತಿಳಿಸಿದೆ. ಇದನ್ನು ಕೇಳುವವರ ಪಾಪಗಳು ಭಸ್ಮವಾಗಿ ಹೋಗುವವು.

(ಅಧ್ಯಾಯ ೨೭-೨೮)

❐ ❐ ❐

ನಾಗೇಶ್ವರ ಎಂಬ ಜ್ಯೋತಿರ್ಲಿಂಗದ ಪ್ರಾದುರ್ಭಾವ ಮತ್ತು ಅದರ ಮಹಿಮೆ

ಸೂತಪುರಾಣಿಕರು ಹೇಳುತ್ತಾರೆ – ಬ್ರಾಹ್ಮಣರೇ ! ಇನ್ನು ನಾನು ಪರಮಾತ್ಮಾ ಶಿವನ ನಾಗೇಶ ಎಂಬ ಪರಮೋತ್ತಮ ಜ್ಯೋತಿರ್ಲಿಂಗದ ಆವಿರ್ಭಾವದ ಪ್ರಸಂಗವನ್ನು ಹೇಳುವೆನು. ದಾರುಕಾ ಎಂದು ಪ್ರಸಿದ್ಧಳಾದ ಒಬ್ಬ ರಾಕ್ಷಸಿಯಿದ್ದಳು. ಅವಳು ಪಾರ್ವತಿಯ ವರದಿಂದ ಸದಾ ಗರ್ವಿಷ್ಠಳಾಗಿಯೇ ಇರುತ್ತಿದ್ದಳು. ಅತ್ಯಂತ ಬಲಿಷ್ಠವಾದ ದಾರುಕ ರಾಕ್ಷಸನು ಅವಳ ಪತಿಯಾಗಿದ್ದನು. ಅವನು ಬಹಳಷ್ಟು ರಾಕ್ಷಸರನ್ನು ಜೊತೆ ಸೇರಿಸಿಕೊಂಡು ಸತ್ಪುರುಷರ ಸಂಹಾರವನ್ನು ನಡೆಸಿದನು. ಅವನು ಜನರ ಯಜ್ಞ ಮತ್ತು ಧರ್ಮವನ್ನು ನಾಶ ಮಾಡುತ್ತಾ ತಿರುಗುತ್ತಿದ್ದನು. ಪಶ್ಚಿಮ ಸಮುದ್ರತೀರದಲ್ಲಿ ಸಂಪೂರ್ಣ ಸಮೃದ್ಧಿಗಳಿಂದ ಕೂಡಿದ ಅವನ ಒಂದು ವನವಿತ್ತು. ಆ ವನವು ಹದಿನಾರು ಯೋಜನ ವಿಸ್ತಾರವಾಗಿತ್ತು. ದಾರುಕಾ ತನ್ನ ವಿಲಾಸಕ್ಕಾಗಿ ಹೋದ ಕಡೆಗೆಲ್ಲ ಆ ಭೂಮಿ, ವೃಕ್ಷಗಳು ಹಾಗೂ ಇತರ ಎಲ್ಲ ಉಪಕರಣಗಳಿಂದ ಕೂಡಿದ ವನವೂ ಅವಳೊಂದಿಗೆ ಹೋಗುತ್ತಿತ್ತು. ಪಾರ್ವತಿದೇವಿಯು ಆ ವನದ ಮೇಲ್ವಿಚಾರಣೆಯನ್ನು ದಾರುಕಾಳಿಗೆ ಒಪ್ಪಿಸಿದ್ದಳು. ದಾರುಕಾ ತನ್ನ ಪತಿಯೊಂದಿಗೆ ಸ್ವೇಚ್ಛಾಚಾರಿಣಿಯಾಗಿ ಅದರಲ್ಲಿ ಸಂಚರಿಸುತ್ತಿದ್ದಳು. ರಾಕ್ಷಸ ದಾರುಕನು ತನ್ನ ಪತ್ನಿಯೊಂದಿಗೆ ಅಲ್ಲಿ ಇದ್ದುಕೊಂಡು ಎಲ್ಲರಿಗೂ ಭಯವನ್ನುಂಟುಮಾಡುತ್ತಿದ್ದನು. ಅವನಿಂದ ಪೀಡಿತವಾದ ಪ್ರಜೆಯು ಮಹರ್ಷಿ ಔರ್ವನಲ್ಲಿ ಶರಣಾಗಿ, ಅವರಿಗೆ ತಮ್ಮ ದುಃಖವನ್ನು ತಿಳಿಸಿದರು. ಔರ್ವನು ಶರಣಾಗತರ ರಕ್ಷಣೆಗಾಗಿ ರಾಕ್ಷಸನಿಗೆ – 'ಈ ರಾಕ್ಷಸನು ಪೃಥಿವಿಯಲ್ಲಿ ಪ್ರಾಣಿಗಳ ಹಿಂಸೆ ಅಥವಾ ಯಜ್ಞಗಳ ವಿಧ್ವಂಸ ಮಾಡಿದಾಗಲೇ ಗತಪ್ರಾಣನಾಗುವನು; ಎಂದು ಶಾಪಕೊಟ್ಟನು. ದೇವತೆಗಳಿಗೆ ಈ ಮಾತು ತಿಳಿದಾಗ ಅವರು ರಾಕ್ಷಸನ ಮೇಲೆ ಆಕ್ರಮಣ ಮಾಡಿದರು. ರಾಕ್ಷಸನು ಹೆದರಿದನು. ಅವನು ಯುದ್ಧದಲ್ಲಿ ದೇವತೆಗಳನ್ನು ಕೊಂದರೆ ಮುನಿಯ ಶಾಪದಿಂದ ಸ್ವತಃ ಸಾಯುತ್ತಿದ್ದನು. ಕೊಲ್ಲದಿದ್ದರೆ ಪರಾಜಿತನಾಗಿ ಹಸಿವಿನಿಂದ ಸಾಯುವನು. ಇಂತಹ ಸ್ಥಿತಿಯಲ್ಲಿ ರಾಕ್ಷಸಿ ದಾರುಕೆಯು ಹೇಳಿದಳು – 'ಭಗವತಿಯ ವರಪ್ರದಾನದಿಂದ ನಾನು ಈ ಇಡೀ ವನವನ್ನು ಬೇಕಾದಲ್ಲಿಗೆ ಕೊಂಡುಹೋಗಬಲ್ಲೆನು'. ಹೀಗೆ ಹೇಳಿ ಆ ಇಡೀ ವನವನ್ನು ಇದ್ದ ಹಾಗೆಯೇ ಸಮುದ್ರಕ್ಕೆ ಸಾಗಿಸಿ ಅಲ್ಲಿ ನೆಲೆಸಿದರು. ರಾಕ್ಷಸರು ಭೂಮಿಯ ಮೇಲೆ ಇರದೆ ಸಮುದ್ರದಲ್ಲಿದ್ದುಕೊಂಡು ಅಲ್ಲಿಯ ಪ್ರಾಣಿಗಳನ್ನು ಕಾಡತೊಡಗಿದರು.

ಒಮ್ಮೆ ಮನುಷ್ಯರಿಂದ ತುಂಬಿದ ಅನೇಕ ದೋಣಿಗಳು ಆ ಕಡೆಯಿಂದ ಬರುತ್ತಿರುವಾಗ ರಾಕ್ಷಸರು ಅದರಲ್ಲಿ ಕುಳಿತಿರುವ ಎಲ್ಲ ಜನರನ್ನು ಸೆರೆಹಿಡಿದು, ಕೊಳಗಳನ್ನು ತೊಡಿಸಿ ಕಾರಾಗೃಹದಲ್ಲಿರಿಸಿದರು. ದಾನವರು ಅವರನ್ನು ಪದೇ-ಪದೇ ಗದರಿಸತೊಡಗಿದರು. ಅವರಲ್ಲಿ ಸುಪ್ರಿಯನೆಂಬ ಪ್ರಸಿದ್ಧ ವೈಶ್ಯನೊಬ್ಬನಿದ್ದನು. ಅವನು ಆ ಗುಂಪಿನ ಮುಖಂಡನಾಗಿದ್ದನು. ಅವನು ಬಹಳ ಸದಾಚಾರಿಯೂ, ಭಸ್ಮ-ರುದ್ರಾಕ್ಷಧಾರಿಯೂ, ಭಗವಾನ್ ಶಿವನ ಪರಮಭಕ್ತನೂ ಆಗಿದ್ದನು. ಸುಪ್ರಿಯನು ಶಿವನ ಪೂಜೆ ಮಾಡದೆ ಭೋಜನ ಮಾಡುತ್ತಿರಲಿಲ್ಲ. ಅವನು ಸ್ವತಃ ಶಂಕರನನ್ನು ಪೂಜಿಸುವುದರೊಂದಿಗೆ ತನ್ನ ಜೊತೆಯ ಸಂಗಡಿಗರಿಗೂ ಶಿವಪೂಜೆಯನ್ನು ಕಲಿಸಿದ್ದನು. ಆಗ ಎಲ್ಲ ಜನರು 'ಓಂ ನಮಃ ಶಿವಾಯ' ಮಂತ್ರವನ್ನು ಜಪಿಸುತ್ತಾ, ಶಿವನನ್ನು ಧ್ಯಾನಿಸತೊಡಗಿದರು. ಸುಪ್ರಿಯನಿಗೆ ಭಗವಾನ್ ಶಂಕರನ ದರ್ಶನವೂ ಆಗುತ್ತಿತ್ತು. ದಾರುಕ ರಾಕ್ಷಸನಿಗೆ ಇದು ತಿಳಿದಾಗ ಅವನು ಬಂದು ಸುಪ್ರಿಯನಿಗೆ ಗದರಿಸಿದನು. ಅವನ ಸಂಗಡಿಗರು ವೈಶ್ಯನನ್ನು ಕೊಲ್ಲಲು ಓಡಿಬಂದರು. ಆ ರಾಕ್ಷಸರು ಬಂದಿರುವುದನ್ನು ನೋಡಿ ಸುಪ್ರಿಯನು ಭಯದಿಂದ ಕಾತರನಾಗಿ, ತುಂಬು ಪ್ರೇಮದಿಂದ ಶಿವನನ್ನು ಚಿಂತಿಸುತ್ತಾ, ಅವನ ನಾಮಂಗಳನ್ನು ಜಪಿಸತೊಡಗಿದನು.

ವೈಶ್ಯಪತಿಯು ಹೇಳಿದನು – ದೇವೇಶ್ವರ ಶಂಕರನೇ ! ನಮ್ಮನ್ನು ಕಾಪಾಡು. ಕಲ್ಯಾಣಕಾರಿ ತ್ರಿಲೋಕನಾಥನೇ ! ದುಷ್ಟಪಂತಾ ಭಕ್ತವತ್ಸಲ ಶಿವನೇ ! ನಮ್ಮನ್ನು ಈ ದುಷ್ಟರಿಂದ ರಕ್ಷಿಸು. ದೇವಾ ! ಈಗ ನೀನೇ ನಮಗೆ ಸರ್ವಸ್ವನಾಗಿರುವೆ. ಪ್ರಭೋ ! ನಾನು ನಿನ್ನವನು. ನಿನ್ನಾಧೀನನಾಗಿರುವೆನು. ನೀನೇ ಸದಾ ನನ್ನ ಜೀವನ, ಪ್ರಾಣನಾಗಿರುವೆ.

ಸೂತಪುರಾಣಿಕರು ಹೇಳುತ್ತಾರೆ – ಸುಪ್ರಿಯನು ಹೀಗೆ ಪ್ರಾರ್ಥಿಸಿದಾಗ ಭಗವಾನ್ ಶಂಕರನು ಒಂದು ಬಿಲದಿಂದ ಹೊರಬಂದನು. ಅವನೊಂದಿಗೇ ನಾಲ್ಕು ಬಾಗಿಲುಗಳುಳ್ಳ ಒಂದು ಉತ್ತಮ ಮಂದಿರವು ಪ್ರಕಟವಾಯಿತು. ಅದರ ಮಧ್ಯಭಾಗದಲ್ಲಿ ಅದ್ಭುತ ಜ್ಯೋತಿರ್ಮಯ ಶಿವಲಿಂಗವು ಪ್ರಕಾಶಿಸುತ್ತಿತ್ತು. ಅವನೊಂದಿಗೆ ಶಿವಪರಿವಾರದ ಎಲ್ಲರೂ ಉಪಸ್ಥಿತರಾಗಿದ್ದರು. ಸುಪ್ರಿಯನು ಅವನ ದರ್ಶನ ಮಾಡಿ ಪೂಜಿಸಿದನು. ಪೂಜಿತನಾದ ಭಗವಾನ್ ಶಂಭುವು ಪ್ರಸನ್ನನಾಗಿ ಸ್ವತಃ ಪಾಶುಪತವನ್ನು ಎತ್ತಿಕೊಂಡು ರಾಕ್ಷಸರೆಲ್ಲರನ್ನು, ಅವರ ಎಲ್ಲ ಉಪಕರಣಗಳನ್ನು, ಸೇವಕರನ್ನು

ತತ್‌ಕ್ಷಣವೇ ನಾಶಮಾಡಿ, ದುಷ್ಟಹಂತಾ ಶಂಕರನು ತನ್ನ ಭಕ್ತ ಸುಪ್ರಿಯನನ್ನು ರಕ್ಷಿಸಿದನು. ಅನಂತರ ಅದ್ಭುತ ಲೀಲೆಯನ್ನು ತೋರುವ, ಲೀಲೆಯಿಂದಲೇ ಶರೀರವನ್ನು ಧರಿಸುವ ಶಂಭುವು ಆ ವನಕ್ಕೆ - 'ಇಂದಿನಿಂದ ಈ ವನದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ನಾಲ್ಕು ವರ್ಣದವರೂ ತಮ್ಮ ಧರ್ಮವನ್ನು ಪಾಲಿಸುತ್ತಿರಲಿ. ಇಲ್ಲಿ ಶ್ರೇಷ್ಠ ಮುನಿಗಳು ವಾಸಿಸಲಿ. ತಮೋಗುಣೀ ರಾಕ್ಷಸರು ಇದರಲ್ಲಿ ಎಂದಿಗೂ ಇರಲಾರರು. ಶಿವ ಧರ್ಮದ ಉಪದೇಶಕರೂ, ಪ್ರಚಾರಕರೂ, ಪ್ರವರ್ತಕರೂ ಇದರಲ್ಲಿ ವಾಸಿಸಲಿ; ಎಂದು ವರವನ್ನು ಕೊಟ್ಟನು.

ಸೂತಪುರಾಣಿಕರು ಹೇಳುತ್ತಾರೆ - ಇದೇ ಸಮಯದಲ್ಲಿ ರಾಕ್ಷಸಿ ದಾರುಕೆಯು ದೀನಚಿತ್ತಳಾಗಿ ಪಾರ್ವತೀದೇವಿಯನ್ನು ಸ್ತುತಿಸಿದಳು. ಪಾರ್ವತೀದೇವಿಯು ಪ್ರಸನ್ನಳಾಗಿ ಇಂತೆಂದಳು - ನಿನ್ನ ಯಾವ ಕಾರ್ಯವನ್ನು ಮಾಡಲೀ? ಹೇಳು. ಆಕೆಯು ಹೇಳಿದಳು - ನನ್ನ ವಂಶವನ್ನು ರಕ್ಷಿಸು. ದೇವಿಯು - ನಿನ್ನ ಕುಲವನ್ನು ರಕ್ಷಿಸುವೆ. ಇದನ್ನು ನಾನು ನಿಜವಾಗಿ ಹೇಳುತ್ತಿರುವೆನು. ಹೀಗೆ ನುಡಿದು ದೇವಿಯು ಭಗವಾನ್ ಶಿವನಲ್ಲಿ - ಸ್ವಾಮಿ ! ನಿಮ್ಮ ಈ ಮಾತು ಯುಗಾಂತ್ಯದಲ್ಲಿ ನಿಜವಾಗುವುದು. ಅಲ್ಲಿಯವರೆಗೆ ತಾಮಸೀ ಸೃಷ್ಟಿಯೂ ಇರಲೆಂದು ನನ್ನ ವಿಚಾರವಾಗಿದೆ. ನಾನೂ ನಿಮ್ಮವಳೇ ಅಲ್ಲವೆ. ನಿಮ್ಮ ಆಶ್ರಯದಲ್ಲೇ ತಾನೇ ಇರುವವಳು. ಆದ್ದರಿಂದ ನನ್ನ ಮಾತನ್ನು ಸತ್ಯವಾಗಿಸಿರಿ. ಈ ರಾಕ್ಷಸಿ ದಾರುಕೆಯು ದೇವಿಯಾಗಿದ್ದು ನನ್ನ ಶಕ್ತಿಯೇ ಆಗಿರುವಳು ಹಾಗೂ ರಾಕ್ಷಸಿಯರಲ್ಲಿ ಬಲಿಷ್ಠಳಾಗಿರುವಳು. ಆದ್ದರಿಂದ ಇವಳೇ ರಾಕ್ಷಸರ ರಾಜ್ಯಕ್ಕೆ ಶಾಸಕಿಯಾಗಿರುವಳು. ಈ ರಾಕ್ಷಸಿ ಪತ್ನಿಯರು ಪಡೆಯುವ ಪುತ್ರರು ಎಲ್ಲರೂ ಸೇರಿ ಈ ವನದಲ್ಲಿ ವಾಸಿಸಲಿ. ಇದೇ ನನ್ನ ಇಚ್ಛೆಯಾಗಿದೆ.

ಶಿವನು ಹೇಳಿದನು - ನೀನು ಹೀಗೆ ಹೇಳುವೆಯಾದರೆ, ನನ್ನ ಮಾತನ್ನು ಕೇಳು. ನಾನು ಭಕ್ತರನ್ನು ಪಾಲಿಸಲಿಕ್ಕಾಗಿ ಸಂತೋಷದಿಂದ ಈ ವನದಲ್ಲಿ ನೆಲೆಸುವೆನು. ವರ್ಣಧರ್ಮದ ಪಾಲನೆಯಲ್ಲಿ ತತ್ಪರನಾಗಿ, ಪ್ರೇಮದಿಂದ ನನ್ನನ್ನು ದರ್ಶನ ಮಾಡುವವನೇ ಇಲ್ಲಿ ಚಕ್ರವರ್ತಿ ರಾಜನಾಗುವನು. ಕಲಿಯುಗದ ಅಂತ್ಯ ಮತ್ತು ಕೃತಯುಗದ ಪ್ರಾರಂಭದಲ್ಲಿ ಮಹಾಸೇನನ ಪುತ್ರ ವೀರಸೇನನು ರಾಜರಿಗೂ ರಾಜನಾಗುವನು. ಅವನು ನನ್ನ ಭಕ್ತನೂ, ಅತ್ಯಂತ ಪರಾಕ್ರಮಿಯೂ ಆಗುವನು ಹಾಗೂ ಇಲ್ಲಿಗೆ ಬಂದು ನನ್ನ ದರ್ಶನ ಮಾಡುವನು. ದರ್ಶನ ಮಾಡುತ್ತಲೇ ಅವನು ಚಕ್ರವರ್ತಿ ಸಾಮ್ರಾಟನಾಗುವನು.

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರೇ ! ಹೀಗೆ ದೊಡ್ಡ-ದೊಡ್ಡ ಲೀಲೆಗಳನ್ನು ಮಾಡುವ ಆ ದಂಪತಿಗಳು ಪರಸ್ಪರ ಹಾಸ್ಯಯುಕ್ತ ವಾರ್ತಾಲಾಪವನ್ನು ಮಾಡುತ್ತಾ ಅಲ್ಲೇ ಸ್ಥಿತರಾದರು. ಜ್ಯೋತಿರ್ಲಿಂಗಸ್ವರೂಪೀ ಮಹಾದೇವನು ಇಲ್ಲಿ ನಾಗೇಶ್ವರನೆಂದೂ, ಪಾರ್ವತಿಯು ನಾಗೇಶ್ವರೀ ಎಂದೂ ವಿಖ್ಯಾತರಾದರು. ಅವರಿಬ್ಬರೂ ಸತ್ಪುರುಷರಿಗೆ ಪ್ರಿಯರಾಗಿರುವರು.

ಹೀಗೆ ಜ್ಯೋತಿಗಳ ಒಡೆಯ ನಾಗೇಶ್ವರನೆಂಬ ಮಹಾದೇವನು ಜ್ಯೋತಿರ್ಲಿಂಗದ ರೂಪದಲ್ಲಿ ಪ್ರಕಟನಾದನು. ಅವನು ಮೂರು ಲೋಕಗಳ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವನು. ಈ ನಾಗೇಶ್ವರನ ಪ್ರಾದುರ್ಭಾವದ ಪ್ರಸಂಗವನ್ನು ಪ್ರತಿದಿನವೂ ಕೇಳುವವ ಬುದ್ಧಿವಂತ ಮಾನವನು ಮಹಾಪಾಪಗಳನ್ನು ನಾಶಮಾಡಿ ಸಮಸ್ತ ಮನೋರಥಗಳನ್ನು ಪಡೆದುಕೊಳ್ಳುವನು.

(ಅಧ್ಯಾಯ ೨೯-೩೦)

❐ ❐ ❐

ರಾಮೇಶ್ವರವೆಂಬ ಜ್ಯೋತಿರ್ಲಿಂಗದ ಆವಿರ್ಭಾವ ಹಾಗೂ ಮಾಹಾತ್ಮ್ಯದ ವರ್ಣನೆ

ಸೂತಪುರಾಣಿಕರು ಹೇಳುತ್ತಾರೆ - ಋಷಿಗಳಿರಾ ! ರಾಮೇಶ್ವರ ಎಂಬ ಜ್ಯೋತಿರ್ಲಿಂಗವು ಮೊದಲು ಹೇಗೆ ಪ್ರಕಟವಾಯಿತೆಂಬುದನ್ನು ಈಗ ನಿಮಗೆ ತಿಳಿಸುವೆನು. ಈ ಪ್ರಸಂಗವನ್ನು ನೀವು ಆದರದಿಂದ ಕೇಳಿರಿ. ಭಗವಾನ್ ವಿಷ್ಣುವಿನ ರಾಮಾವತಾರದಲ್ಲಿ ರಾವಣನು ಸೀತೆಯನ್ನು ಕದ್ದುಕೊಂಡು ಲಂಕೆಗೆ ಕೊಂಡುಹೋದಾಗ ಸುಗ್ರೀವನೊಂದಿಗೆ ಹದಿನೆಂಟು ಪದ್ಮ ವಾನರಸೇನೆಯನ್ನು ಕೂಡಿಕೊಂಡು ಶ್ರೀರಾಮನು ಸಮುದ್ರತೀರಕ್ಕೆ ಬಂದನು. ಅಲ್ಲಿ ಅವನು ನಾವು ಈ ಸಮುದ್ರವನ್ನು ಹೇಗೆ ದಾಟಬಹುದು ? ಹೇಗೆ ರಾವಣನನ್ನು ಗೆಲ್ಲುವುದು ? ಎಂದು ವಿಚಾರ ಮಾಡತೊಡಗಿದರು. ಅಷ್ಟರಲ್ಲಿ ಶ್ರೀರಾಮನಿಗೆ ಬಾಯಾರಿಕೆ ಉಂಟಾಯಿತು. ಅವನು ನೀರನ್ನು ಕೇಳಿದಾಗ ವಾನರರು ಸಿಹಿನೀರನ್ನು ತಂದುಕೊಟ್ಟರು. ಶ್ರೀರಾಮನು ಸಂತೋಷಗೊಂಡು ಆ ನೀರನ್ನು ತೆಗೆದುಕೊಂಡನು. ಅಷ್ಟರಲ್ಲಿ ಅವನಿಗೆ ನೆನಪಾಯಿತು - ನಾನು ನನ್ನ ಸ್ವಾಮಿ ಭಗವಾನ್ ಶಂಕರನ ದರ್ಶನ ಮಾಡಲಿಲ್ಲ, ಹಾಗಿರುವಾಗ ಈ ನೀರನ್ನು ಹೇಗೆ

ಕುಡಿಯಲಿ ? ಎಂದು ಹೇಳಿ ಅವನು ಆ ನೀರನ್ನು ಕುಡಿಯಲಿಲ್ಲ. ನೀರನ್ನು ಇಟ್ಟು ರಘುನಂದನನು ಪಾರ್ಥಿವ ಪೂಜೆಯನ್ನು ಮಾಡಿದನು. ಆವಾಹನಾದಿ ಷೋಡಶೋಪ ಚಾರಗಳಿಂದ ವಿಧಿವತ್ತಾಗಿ ಭಕ್ತಿಯಿಂದ ಶಂಕರನನ್ನು ಅರ್ಚಿಸಿದನು. ನಮಸ್ಕಾರ, ಸ್ತೋತ್ರಗಳಿಂದ ಶಂಕರನನ್ನು ಸಂತುಷ್ಟಗೊಳಿಸಿ ಶ್ರೀರಾಮನು ಭಕ್ತಿಭಾವದಿಂದ ಅವನಲ್ಲಿ ಪ್ರಾರ್ಥಿಸಿದನು.

ಶ್ರೀರಾಮನು ಹೇಳಿದನು – ಉತ್ತಮ ವ್ರತವನ್ನು ಪಾಲಿಸುವ ನನ್ನ ಸ್ವಾಮಿ ಮಹೇಶ್ವರ ದೇವನೇ ! ನೀನು ನನಗೆ ಸಹಾಯ ಮಾಡಬೇಕು. ನಿನ್ನ ಸಹಯೋಗವಿಲ್ಲದೆ ನನ್ನ ಕಾರ್ಯದ ಸಿದ್ಧಿಯು ಅತ್ಯಂತ ಕಠಿನವಾಗಿದೆ. ರಾವಣನೂ ನಿನ್ನ ಭಕ್ತನೇ ಆಗಿರುವನು. ಅವನು ಎಲ್ಲರಿಗಾಗಿ ದುರ್ಜಯನಾಗಿರುವನು. ಆದರೂ ನಿನ್ನ ವರಪ್ರದಾನದಿಂದ ಅವನು ಸದಾ ದರ್ಪದಿಂದಲೇ ಇರುವನು. ಅವನು ಮೂರು ಲೋಕಗಳ ವಿಜಯೀ ಮಹಾವೀರನಾಗಿರುವನು. ಇತ್ತ ನಾನೂ ನಿನ್ನ ದಾಸನಾಗಿರುವೆನು. ಸರ್ವಥಾ ನಿನ್ನ ಅಧೀನ ನಾಗಿರುವೆನು. ಸದಾಶಿವನೇ ! ಇದನ್ನು ವಿಚಾರಮಾಡಿ ನೀನು ನನ್ನ ಕುರಿತು ಪಕ್ಷಪಾತ ಮಾಡಬೇಕಾಗಿದೆ.

ಸೂತಪುರಾಣಿಕರು ಹೇಳುತ್ತಾರೆ – ಹೀಗೆ ಪ್ರಾರ್ಥಿಸಿ, ಪದೇ-ಪದೇ ನಮಸ್ಕರಿಸುತ್ತಾ ಅವನು ಗಟ್ಟಿಯಾಗಿ 'ಜಯ ಶಂಕರ, ಜಯ ಶಂಕರ' ಎಂದು ಘೋಷಣೆ ಮಾಡತೊಡಗಿ ಶಿವನನ್ನು ಸ್ತುತಿಸಿದನು. ಮತ್ತೆ ಶಿವನ ಮಂತ್ರವನ್ನು ಜಪಿಸುತ್ತಾ, ಧ್ಯಾನದಲ್ಲಿ ತತ್ಪರನಾದನು. ಅನಂತರ ಪುನಃ ಪೂಜೆಮಾಡಿ ಅವನು ಸ್ವಾಮಿಯ ಮುಂದೆ ನೃತ್ಯವಾಡಿದನು. ಆಗ ಅವನ ಹೃದಯ ಪ್ರೇಮದಿಂದ ದ್ರವಿತವಾಯಿತು. ಮತ್ತೆ ಅವನು ಶಿವನ ಸಂತೋಷಕ್ಕಾಗಿ ಗಲ್ಲವನ್ನು ಬಾರಿಸಿಕೊಂಡು ಅವ್ಯಕ್ತ ಶಬ್ದವನ್ನು ಮಾಡಿದನು. ಆಗ ಭಗವಾನ್ ಶಂಕರನು ರಾಮನ ಮೇಲೆ ಬಹಳ ಪ್ರಸನ್ನನಾಗಿ ಆ ಜ್ಯೋತಿರ್ಮಯ ಮಹೇಶ್ವರನು ವಾಮಾಂಗಭೂತಾ ಪಾರ್ವತಿ ಹಾಗೂ ಪಾರ್ಷದಗಣದೊಂದಿಗೆ ಶಾಸ್ತ್ರೋಕ್ತ ನಿರ್ಮಲರೂಪವನ್ನು ಧರಿಸಿ ತತ್‌ಕಾಲವೇ ಪ್ರಕಟನಾದನು. ಶ್ರೀರಾಮನ ಭಕ್ತಿಯಿಂದ ಸಂತುಷ್ಟಚಿತ್ತನಾದ ಮಹೇಶ್ವರನು ಅವನಲ್ಲಿ – ಶ್ರೀರಾಮನೇ ! ನಿನಗೆ ಕಲ್ಯಾಣವಾಗಲೀ. ನನ್ನಿಂದ ವರವನ್ನು ಕೇಳಿಕೊ, ಎಂದು ಹೇಳಿದನು. ಆಗ ಅವನ ರೂಪವನ್ನು ನೋಡಿ ಅಲ್ಲಿ ಉಪಸ್ಥಿತರಾದ ಎಲ್ಲ ಜನರು ಪವಿತ್ರರಾದರು. ಶಿವಧರ್ಮಪರಾಯಣ ಶ್ರೀರಾಮನು ಸ್ವತಃ ಅವನ ಪೂಜೆ ಮಾಡಿದನು. ಮತ್ತೆ ಬಗೆ-ಬಗೆಯಿಂದ ಸ್ತುತಿಸಿ, ನಮಸ್ಕರಿಸಿ ಭಗವಾನ್ ಶಿವನಲ್ಲಿ – ಲಂಕೆಯಲ್ಲಿ ರಾವಣನೊಂದಿಗೆ ನಡೆಯುವ ಯುದ್ಧದಲ್ಲಿ ತನಗೆ ಜಯವಾಗುವಂತೆ ಪ್ರಾರ್ಥಿಸಿದನು. ರಾಮಭಕ್ತಿಯಿಂದ ಪ್ರಸನ್ನನಾದ ಮಹೇಶ್ವರನು – 'ಮಹಾರಾಜಾ ! ನಿನಗೆ ಜಯವಾಗಲೀ' ಎಂದು ಹರಸಿದನು. ಶಿವನು ಕೊಟ್ಟ ವಿಜಯಸೂಚಕ ವರವನ್ನು ಹಾಗೂ ಯುದ್ಧದ ಆಜ್ಞೆಯನ್ನು ಪಡೆದು, ಶ್ರೀರಾಮನು ನತಮಸ್ತಕನಾಗಿ, ಕೈಜೋಡಿಸಿಕೊಂಡು ಇಂತು ಪ್ರಾರ್ಥಿಸಿದನು.

ಶ್ರೀರಾಮನು ಹೇಳಿದನು – ನನ್ನ ಸ್ವಾಮಿ ಶಂಕರನೇ ! ನೀನು ಸಂತುಷ್ಟನಾಗಿರುವೆಯಾದರೆ ಜಗತ್ತಿನ ಜನರನ್ನು ಪವಿತ್ರಗೊಳಿಸಲು ಹಾಗೂ ಇತರರ ಒಳ್ಳೆಯದನ್ನು ಮಾಡಲು ಸದಾ ಇಲ್ಲೇ ನೆಲೆಸು.

ಸೂತಪುರಾಣಿಕರು ಹೇಳುತ್ತಾರೆ – ಶ್ರೀರಾಮನು ಹೀಗೆ ಹೇಳಿದಾಗ ಭಗವಾನ್ ಶಿವನು ಅಲ್ಲಿ ಜ್ಯೋತಿರ್ಲಿಂಗದ ರೂಪದಲ್ಲಿ ಸ್ಥಿತನಾದನು. ಮೂರು ಲೋಕಗಳಲ್ಲಿಯೂ ರಾಮೇಶ್ವರ ಎಂಬ ಹೆಸರಿನಿಂದ ಅದರ ಪ್ರಸಿದ್ಧಿಯಾಯಿತು. ಅದರ ಪ್ರಭಾವದಿಂದಲೇ ಅಪಾರ ಸಮುದ್ರವನ್ನು ಅಯಾಸ ವಿಲ್ಲದೆ ದಾಟಿ ಶ್ರೀರಾಮನು ರಾವಣಾದಿ ರಾಕ್ಷಸರನ್ನು ಶೀಘ್ರವಾಗಿ ಸಂಹಾರಮಾಡಿ, ತನ್ನ ಪ್ರಿಯೆ ಸೀತೆಯನ್ನು ಪಡೆದುಕೊಂಡನು. ಅಂದಿನಿಂದ ಈ ಭೂತಳದಲ್ಲಿ ರಾಮೇಶ್ವರನ ಅದ್ಭುತ ಮಹಿಮೆಯು ಪ್ರಸಾರವಾಯಿತು. ಭಗವಾನ್ ರಾಮೇಶ್ವರನು ಸದಾ ಭೋಗ ಮತ್ತು ಮೋಕ್ಷವನ್ನು ಕೊಟ್ಟು, ಭಕ್ತರ ಇಚ್ಛೆಯನ್ನು ಪೂರ್ಣ ಗೊಳಿಸುವನು. ದಿವ್ಯ ಗಂಗಾಜಲದಿಂದ ರಾಮೇಶ್ವರ ಶಿವನಿಗೆ ಭಕ್ತಿಯಿಂದ ಅಭಿಷೇಕ ಮಾಡುವವನು ಜೀವನ್ಮುಕ್ತನೇ ಆಗಿರುವನು. ಈ ಜಗತ್ತಿನಲ್ಲಿ ದೇವದುರ್ಲಭ ಸಮಸ್ತ ಭೋಗಗಳನ್ನು ಅನುಭವಿಸಿ ಅಂತ್ಯದಲ್ಲಿ ಉತ್ತಮ ಜ್ಞಾನಪಡೆದು ಅವನು ನಿಶ್ಚಯವಾಗಿಯೂ ಕೈವಲ್ಯ ಮೋಕ್ಷವನ್ನು ಪಡೆಯುವನು. ಈ ಪ್ರಕಾರ ನಾನು ನಿಮಲ್ಲಿ ಭಗವಾನ್ ಶಿವನ ರಾಮೇಶ್ವರ ಎಂಬ ದಿವ್ಯ ಜ್ಯೋತಿರ್ಲಿಂಗದ ವರ್ಣನೆಯನ್ನು ಮಾಡಿದೆನು. ಅದು ಅದರ ಮಹಿಮೆಯನ್ನು ಕೇಳುವವರ ಸಮಸ್ತ ಪಾಪಗಳನ್ನು ಅಪಹರಿಸುವುದು.

(ಅಧ್ಯಾಯ ೩೧)

❑ ❑ ❑

ಘುಶ್ಮಾಳ ಶಿವಭಕ್ತಿಯಿಂದ ಸತ್ತುಹೋದ ಆಕೆಯ ಪುತ್ರನು ಜೀವಿತನಾಗುವುದು, ಘುಶ್ಮೇಶ್ವರ ಶಿವನ ಪ್ರಾದುರ್ಭಾವ ಹಾಗೂ ಅವನ ಮಹಿಮೆಯ ವರ್ಣನೆ

ಸೂತಪುರಾಣಿಕರು ಹೇಳುತ್ತಾರೆ - ಇನ್ನು ನಾನು ಘುಶ್ಮೇಶ್ವರ ಎಂಬ ಜ್ಯೋತಿರ್ಲಿಂಗದ ಪ್ರಾದುರ್ಭಾವವನ್ನು ಹಾಗೂ ಅದರ ಮಾಹಾತ್ಮ್ಯವನ್ನು ವರ್ಣಿಸುವೆನು. ಮುನಿವರ್ಯರೇ ! ಗಮನವಿಟ್ಟು ಕೇಳಿರಿ. ದಕ್ಷಿಣದಲ್ಲಿ ದೇವಗಿರಿ ಎಂಬ ಒಂದು ಶ್ರೇಷ್ಠ ಪರ್ವತವಿದೆ. ಅದು ನೋಡಲು ಅದ್ಭುತ ಹಾಗೂ ನಿತ್ಯ ಪರಮ ಶೋಭೆಯಿಂದ ಸಂಪನ್ನವಾಗಿತ್ತು. ಅದರ ಹತ್ತಿರದಲ್ಲೇ ಭಾರದ್ವಾಜ ಗೋತ್ರಿಯ ಬ್ರಹ್ಮವೇತ್ತಾ ಸುಧರ್ಮಾ ಎಂಬ ಬ್ರಾಹ್ಮಣನು ಇರುತ್ತಿದ್ದನು. ಅವನ ಪ್ರಿಯ ಪತ್ನಿಯ ಹೆಸರು ಸುದೇಹಾ ಎಂದಿತ್ತು. ಆಕೆಯು ಸದಾ ಶಿವಧರ್ಮ ಪರಾಯಣೆಯಾಗಿ, ಮನೆಯ ಕೆಲಸ ಕಾರ್ಯಗಳಲ್ಲಿ ಕುಶಲಳಾಗಿದ್ದು, ಸದಾ ಪತಿಯ ಸೇವೆಯಲ್ಲಿ ತತ್ಪರಳಾಗಿದ್ದಳು. ದ್ವಿಜಶ್ರೇಷ್ಠ ಸುಧರ್ಮನೂ ಕೂಡ ದೇವತೆಗಳ, ಪಿತೃಗಳ, ಅತಿಥಿಗಳ ಪೂಜಕನಾಗಿದ್ದನು. ಅವನು ವೇದವಿಹಿತ ಮಾರ್ಗದಲ್ಲಿ ನಡೆಯುತ್ತಾ, ನಿತ್ಯ ಅಗ್ನಿಹೋತ್ರವನ್ನು ಮಾಡುತ್ತಿದ್ದನು. ತ್ರಿಕಾಲಗಳಲ್ಲಿ ಸಂಧ್ಯಾವಂದನೆ ಮಾಡುತ್ತಿದ್ದರಿಂದ ಅವನು ಸೂರ್ಯನಂತೆ ಕಾಂತಿಯಿಂದ ಬೆಳಗುತ್ತಿದ್ದನು. ಅವನು ವೇದ-ಶಾಸ್ತ್ರಗಳ ಮರ್ಮಜ್ಞನಾಗಿದ್ದನು ಮತ್ತು ಶಿಷ್ಯರಿಗೂ ಕಲಿಸುತ್ತಿದ್ದನು. ಧನಿಕನಾಗುವ ಜೊತೆಗೆ ದಾನಿಯೂ ಆಗಿದ್ದನು. ಸೌಜನ್ಯವೇ ಮುಂತಾದ ಸದ್ಗುಣಗಳಿಗೆ ಪಾತ್ರನಾಗಿದ್ದನು. ಶಿವಸಂಬಂಧೀ ಪೂಜಾದಿಕಾರ್ಯ ಗಳಲ್ಲಿಯೂ ಬಹಳ ಪ್ರೇಮವನ್ನಿರಿಸಿದ್ದನು. ಶಿವಭಕ್ತರಿಗೂ ಇವನು ಪ್ರಿಯನಾಗಿದ್ದನು.

ಇದೆಲ್ಲ ಇದ್ದರೂ ಅವನಿಗೆ ಸಂತಾನವಿರಲಿಲ್ಲ, ಇದರಿಂದ ಬ್ರಾಹ್ಮಣನಿಗೆ ದುಃಖವಿರಲಿಲ್ಲ ಆದರೆ ಅವನ ಪತ್ನಿಯು ಬಹಳ ದುಃಖಿಯಾಗಿರುತ್ತಿದ್ದಳು. ನೆರೆಮನೆಯವರು ಮತ್ತು ಇತರ ಜನರೂ ಕೂಡ ಆಕೆಯನ್ನು ಹಂಗಿಸುತ್ತಿದ್ದರು. ಅವಳು ಪತಿಯಲ್ಲಿ ಪದೇ-ಪದೇ ಮಗುವಿಗಾಗಿ ಪ್ರಾರ್ಥಿಸುತ್ತಿದ್ದಳು. ಪತಿಯು ಆಕೆಗೆ ಜ್ಞಾನೋಪದೇಶವನ್ನು ಕೊಡುತ್ತಾ ಸಮಜಾಯಿಸುತ್ತಿದ್ದನು. ಆದರೂ ಆಕೆಯ ಮನಸ್ಸು ಸಮಾಧಾನಗೊಳ್ಳುತ್ತಿರಲಿಲ್ಲ. ಕೊನೆಗೆ ಬ್ರಾಹ್ಮಣನು ಕೆಲವು ಉಪಾಯಗಳನ್ನೂ ಮಾಡಿದನು. ಆದರೂ ಯಾವುದೂ ಸಫಲವಾಗಲಿಲ್ಲ. ಆಗ ಬ್ರಾಹ್ಮಣಿಯು ಅತ್ಯಂತ ದುಃಖಿತೆ ಯಾಗಿ ಬಹಳ ಹಟಹಿಡಿದು ತನ್ನ ತಂಗೀ ಘುಶ್ಮಾಳೊಂದಿಗೆ ಪತಿಯ ಎರಡನೇ ಮದುವೆ ಮಾಡಿಸಿದಳು. ವಿವಾಹಕ್ಕೆ ಮೊದಲು ಸುಧರ್ಮನು ಆಕೆಯಲ್ಲಿ - 'ಈಗಲಾದರೋ ನೀನು ತಂಗಿಯನ್ನು ಪ್ರೀತಿಸುತ್ತಿರುವೆ. ಆದರೂ ಆಕೆಗೆ ಮಗುವಾದಾಗ ಅವಳೊಂದಿಗೆ ಸ್ಪರ್ಧೆಮಾಡತೊಡಗುವಿ' ಎಂದು ಹೇಳಿದಾಗ ಅವಳು - 'ನಾನು ತಂಗಿಯ ಕುರಿತು ಎಂದೂ ಮತ್ಸರ ತಾಳಲಾರೆನು' ಎಂದು ಮಾತುಕೊಟ್ಟಳು. ವಿವಾಹವಾಗಿ ಘುಶ್ಮಾಳು ದಾಸಿಯಂತೆ ಅಕ್ಕನ ಸೇವೆ ಮಾಡುತ್ತಿದ್ದಳು. ಸುದೇಹಾಳೂ ಕೂಡ ಆಕೆಯನ್ನು ಬಹಳ ಪ್ರೀತಿಸುತ್ತಿದ್ದಳು. ಘುಶ್ಮಾ ಶಿವಭಕ್ತಿಯಿಂದ ಅಕ್ಕನ ಅಪ್ಪಣೆ ಯಂತೆ ಪ್ರತಿದಿನವೂ ಒಂದು ನೂರ ಒಂದು ಪಾರ್ಥಿವ ಲಿಂಗಗಳನ್ನು ಮಾಡಿ ವಿಧಿವತ್ತಾಗಿ ಪೂಜಿಸತೊಡಗಿದಳು. ಪೂಜೆ ಮಾಡಿ ಅವನ್ನು ಹತ್ತಿರದ ಕೆರೆಯಲ್ಲಿ ವಿಸರ್ಜಿಸುತ್ತಿದ್ದಳು.

ಶಂಕರನ ಕೃಪೆಯಿಂದ ಆಕೆಯಲ್ಲಿ ಸುಂದರ, ಸೌಭಾಗ್ಯವಂತ, ಸದ್ಗುಣಸಂಪನ್ನ ಒಂದು ಪುತ್ರನು ಹುಟ್ಟಿದನು. ಘುಶ್ಮಾಳ ಗೌರವ ಬೆಳೆಯಿತು. ಇದರಿಂದ ಸುದೇಹಾಳ ಮನಸ್ಸಿನಲ್ಲಿ ಮತ್ಸರ ಉಂಟಾಯಿತು. ಘುಶ್ಮಾಳ ಮಗನು ದೊಡ್ಡವನಾಗಿ ವಿವಾಹಿತನಾದನು. ಸೊಸೆ ಮನೆಗೆ ಬಂದಳು. ಈಗಂತೂ ಸುದೇಹಳು ಇನ್ನು ಉರಿದೆದ್ದಳು. ಆಕೆಯ ಬುದ್ಧಿಯು ಭ್ರಷ್ಟವಾಯಿತು. ಆಕೆಯು ಒಂದು ದಿನ ರಾತ್ರಿಯಲ್ಲಿ ಮಲಗಿದ್ದ ಮಗನನ್ನು ಚಾಕುವಿನಿಂದ ಇರಿದು ಕೊಂದು ಶರೀರವನ್ನು ತುಂಡು-ತುಂಡು ಮಾಡಿದಳು. ತುಂಡಾದ ಶರೀರವನ್ನು - ಘುಶ್ಮಾಳು ಪ್ರತಿದಿನವು ಪಾರ್ಥಿವ ಲಿಂಗಗಳನ್ನು ವಿಸರ್ಜಿಸುತ್ತಿದ್ದ ಕೆರೆಯಲ್ಲಿ ಹಾಕಿಬಿಟ್ಟಳು. ಮಗನ ಶರೀರವನ್ನು ಕೆರೆಯಲ್ಲಿ ಎಸೆದು ಮನೆಗೆ ಬಂದು ಸುಖವಾಗಿ ಮಲಗಿದಳು. ಘುಶ್ಮಾಳು ಬೆಳಿಗ್ಗೆ ಎದ್ದು ಪ್ರತಿದಿನದ ಪೂಜನಾದಿ ಕರ್ಮಗಳನ್ನು ಮಾಡತೊಡಗಿದಳು. ಶ್ರೇಷ್ಠ ಬ್ರಾಹ್ಮಣ ಸುಧರ್ಮನೂ ಸ್ವತಃ ನಿತ್ಯಕರ್ಮದಲ್ಲಿ ತೊಡಗಿದನು. ಆಗಲೇ ಅವನ ಹಿರಿಯ ಪತ್ನಿ ಸುದೇಹಾಳು ಎದ್ದು ಆನಂದದಿಂದ ಗೃಹಕೃತ್ಯದಲ್ಲಿ ತೊಡಗಿದಳು. ಏಕೆಂದರೆ, ಆಕೆಯ ಹೃದಯದಲ್ಲಿ ಮೊದಲು ಉರಿಯುತ್ತಿದ್ದ ಈರ್ಷೆಯ ಬೆಂಕಿ ತಣ್ಣಗಾಗಿತ್ತು. ಪ್ರಾತಃಕಾಲ ಸೊಸೆಯು ಎದ್ದು ಪತಿಯ ಶಯ್ಯೆಯನ್ನು ನೋಡಿದರೆ ಅದು ರಕ್ತದಿಂದ ತೊಯ್ದು ಹೋಗಿತ್ತು. ಅದರ ಮೇಲೆ ಶರೀರದ ಕೆಲವು ತುಂಡುಗಳು ಗೋಚರಿಸಿದವು. ಇದರಿಂದ ಅವಳಿಗೆ ಬಹಳ ದುಃಖವಾಯಿತು. ಆಕೆಯು ಅತ್ತೆ (ಘುಶ್ಮಾ)ಯ ಬಳಿಗೆ

ಬಂದು ನಿವೇದಿಸಿಕೊಂಡಳು - 'ಉತ್ತಮ ವ್ರತವನ್ನು ಪಾಲಿಸುವ ಆರ್ಯೆ ! ನಿಮ್ಮ ಪುತ್ರನು ಎಲ್ಲಿಗೆ ಹೋದನು ? ಅದರ ಶಯ್ಯೆ ರಕ್ತದಿಂದ ನೆನೆದುಹೋಗಿದೆ ಮತ್ತು ಅದರಲ್ಲಿ ಶರೀರದ ಕೆಲವು ತುಂಡುಗಳು ಬಿದ್ದಿರುವುದು ಕಾಣುತ್ತವೆ. ಅಯ್ಯೋ ! ನಾನು ಸತ್ತು ಹೋದೆ. ಯಾರು ಇಂತಹ ದುಷ್ಟ ಕೃತ್ಯವನ್ನು ಮಾಡಿದರು?' ಎಂದು ಹೇಳುತ್ತಾ ಆ ಸೊಸೆಯು ಅನೇಕ ರೀತಿಯಿಂದ ವಿಲಾಪಿಸುತ್ತಾ ಅಳತೊಡಗಿದಳು. ಸುಧರ್ಮನ ಹಿರಿಯ ಪತ್ನಿ ಸುದೇಹಾಳೂ ಕೂಡ ಆಗ 'ಅಯ್ಯೋ ! ನಾನು ಸತ್ತುಹೋದೆ.' ಎಂದು ಹೇಳುತ್ತಾ ದುಃಖದಲ್ಲಿ ಮುಳುಗಿದಳು. ಅವಳು ಹೊರಗಿನಿಂದ ದುಃಖಿಸಿದಳು, ಆದರೆ ಮನಸ್ಸಿನೊಳಗೆ ಹರ್ಷದಿಂದ ಉಬ್ಬಿಹೋದಳು. ಘುಶ್ಮಾಳು ಆಗ ಸೊಸೆಯ ದುಃಖವನ್ನು ಕೇಳಿಯೂ ತನ್ನ ನಿತ್ಯ ಪಾರ್ಥಿವ ಪೂಜೆಯ ವ್ರತದಿಂದ ವಿಚಲಿತಳಾಗಲಿಲ್ಲ. ಆಕೆಯ ಮನಸ್ಸು ಮಗನನ್ನು ನೋಡಲು ಸ್ವಲ್ಪವೂ ಉತ್ಸುಕತೆ ಉಂಟಾಗಲಿಲ್ಲ. ಅವಳ ಪತಿಯೂ ಅದೇ ಸ್ಥಿತಿಯಲ್ಲಿದ್ದನು. ನಿತ್ಯ ನಿಯಮ ಪೂರ್ಣವಾಗುವವರೆಗೆ ಅವರಿಗೆ ಬೇರೆ ಯಾವುದೇ ಚಿಂತೆ ಉಂಟಾಗಲಿಲ್ಲ. ಮಧ್ಯಾಹ್ನವಾದಾಗ ಪೂಜೆಯನ್ನು ಮುಗಿಸಿ ಘುಶ್ಮಾಳು ತನ್ನ ಪುತ್ರನ ಭಯಂಕರ ಶಯ್ಯೆಯನ್ನು ನೋಡಿದಳು. ಆದರೂ ಆಕೆಯು ಮನಸ್ಸಿನಲ್ಲಿ ಸ್ವಲ್ಪವೂ ದುಃಖಿಸಲಿಲ್ಲ. ಆಕೆಯು ಯೋಚಿಸ ತೊಡಗಿದಳು - 'ಯಾರು ಈ ಪುತ್ರನನ್ನು ಕೊಟ್ಟಿರುವನೋ ಅವನೇ ಇವನನ್ನು ರಕ್ಷಿಸುವನು. ಅವನು ಭಕ್ತ ಪ್ರಿಯನೆಂದು ಹೇಳಿಸಿಕೊಳ್ಳುವನು, ಕಾಲಕ್ಕೂ ಕಾಲನಾಗಿರುವನು, ಸತ್ಪುರುಷರ ಆಶ್ರಯನಾಗಿರುವನು. ಏಕಮಾತ್ರ ಆ ಪ್ರಭು ಸರ್ವೇಶ್ವರ ಶಂಭುವೇ ನಮ್ಮ ರಕ್ಷಕನಾಗಿರುವನು. ಅವನು ಮಾಲೆಯನ್ನು ಪೋಣಿಸುವವನಂತೆ ಯಾರನ್ನು ಒಂದಾಗಿಸುವನೋ, ಅವರನ್ನು ಆಗಲಿಸಿಯೂ ಬಿಡುವನು. ಆದ್ದರಿಂದ ಈಗ ನಾನು ಚಿಂತೆ ಮಾಡುವುದರಿಂದ ಏನು ಪ್ರಯೋಜನ?' ಹೀಗೆ ತತ್ತ್ವವನ್ನು ವಿಚಾರಮಾಡಿ ಆಕೆಯು ಶಿವನ ಭರವಸೆಯಿಂದ ಧೈರ್ಯವನ್ನು ತಂದುಕೊಂಡು ದುಃಖವನ್ನು ಅನುಭವಿಸಲಿಲ್ಲ. ಅವಳು ಹಿಂದಿನಂತೆಯೇ ಪಾರ್ಥಿವ ಶಿವಲಿಂಗಗಳನ್ನು ತೆಗೆದು ಕೊಂಡು ಸ್ವಸ್ಥಚಿತ್ತದಿಂದ ಶಿವನ ನಾಮಗಳನ್ನು ಉಚ್ಚರಿಸುತ್ತಾ ಆ ಕೆರೆಯ ಬಳಿಗೆ ಹೋದಳು. ಆ ಪಾರ್ಥಿವ ಲಿಂಗಗಳನ್ನು ಕೆರೆಯಲ್ಲಿ ವಿಸರ್ಜಿಸಿ ಅವಳು ಮರಳಿ ಮನೆಗೆ ಹೊರಟಾಗ ತನ್ನ ಪುತ್ರನು ಅದೇ ಕೆರೆಯ ತಟದಲ್ಲಿ ನಿಂತಿರುವುದನ್ನು ನೋಡಿದಳು.

ಸೂತಪುರಾಣಿಕರು ಹೇಳುತ್ತಾರೆ - ಬ್ರಾಹ್ಮಣರಿರಾ ! ಆಗ ಅಲ್ಲಿ ತನ್ನ ಪುತ್ರನು ಜೀವಿತನಾದುದನ್ನು ನೋಡಿ ಅವನ ತಾಯಿ ಘುಶ್ಮಾಳಿಗೆ ಹರ್ಷವಾಗಲೀ, ವಿಷಾದವಾಗಲೀ ಆಗಲಿಲ್ಲ. ಅವಳು ಹಿಂದಿನಂತೆಯೇ ಸ್ವಸ್ಥಳಾಗಿದ್ದಳು. ಅದೇ ಸಮಯದಲ್ಲಿ ಆಕೆಯ ಮೇಲೆ ಸಂತುಷ್ಟನಾದ ಜ್ಯೋತಿಸ್ವರೂಪ ಮಹೇಶ್ವರ ಶಿವನು ಅವಳ ಮುಂದೆ ಪ್ರಕಟನಾದನು.

ಶಿವನು ಹೇಳಿದನು - ಸುಮುಖಿಯೇ ! ನಾನು ನಿನ್ನ ಮೇಲೆ ಪ್ರಸನ್ನನಾಗಿರುವೆನು. ನಿನ್ನ ದುಷ್ಟ ಸವತಿಯು ಈ ಬಾಲಕನನ್ನು ಕೊಂದಿದ್ದಳು. ಅದ್ದರಿಂದ ನಾನು ಆಕೆಯನ್ನು ತ್ರಿಶೂಲದಿಂದ ಕೊಂದುಬಿಡುವೆನು.

ಸೂತಪುರಾಣಿಕರು ಹೇಳುತ್ತಾರೆ - ಆಗ ಘುಶ್ಮಾಳು ಶಿವನಿಗೆ ವಂದಿಸಿ ಈ ರೀತಿಯಿಂದ ವರವನ್ನು ಕೇಳಿದಳು - ಸ್ವಾಮಿ ! ಈ ಸುದೇಹಳು ನನ್ನ ಅಕ್ಕನಾಗಿರುವಳು. ಆದ್ದರಿಂದ ನೀನು ಆಕೆಯನ್ನು ರಕ್ಷಿಸಬೇಕು.

ಶಿವನು ಹೇಳಿದನು - ಆಕೆಯಾದರೋ ಭಾರೀ ದೊಡ್ಡ ಅಪಕಾರವನ್ನು ಮಾಡಿರುವಳು. ನೀನು ಅವಳ ಮೇಲೆ ಉಪಕಾರವೇಕೆ ಮಾಡುತ್ತಿರುವೆ? ದುಷ್ಟ ಕರ್ಮವನ್ನು ಮಾಡುವ ಸುದೇಹಾ ಆದರೋ ಕೊಲ್ಲಲು ಯೋಗ್ಯವಾಗಿರುವಳು.

ಘುಶ್ಮಾಳು ಹೇಳಿದಳು - 'ದೇವ ದೇವಾ ! ನಿನ್ನ ದರ್ಶನ ಮಾತ್ರದಿಂದಲೇ ಪಾತಕಗಳು ನಿಲ್ಲಲಾರವು. ಈಗ ನಿನ್ನ ದರ್ಶನಮಾಡಿ ಆಕೆಯ ಪಾಪಗಳು ಭಸ್ಮವಾಗಿಹೋಗಲಿ' ಅಪಕಾರ ಮಾಡುವವನ ಮೇಲೆಯೂ ಉಪಕಾರ ಮಾಡುವವನ ದರ್ಶನ ಮಾತ್ರದಿಂದ ಪಾಪಗಳು ದೂರ ಓಡಿಹೋಗುತ್ತವೆ.* ಪ್ರಭೋ ! ಇಂತಹ ಅದ್ಭುತ ಭಗವದ್ ವಾಕ್ಯವನ್ನು ನಾನು ಕೇಳಿರುವೆನು. ಅದಕ್ಕಾಗಿ ಸದಾಶಿವನೇ ! ಯಾರು ಇಂತಹ ಕೆಟ್ಟ ಕರ್ಮ ಮಾಡಿದರೋ ಅವರು ಮಾಡಲಿ; ನಾನು ಹಾಗೇಕೇ ಮಾಡಬೇಕು. (ನಾನಾದರೋ ಕೆಟ್ಟದನ್ನು ಮಾಡುವವನಿಗೂ ಕೂಡ ಒಳ್ಳೆಯದನ್ನೇ ಮಾಡಬೇಕು.)

ಸೂತಪುರಾಣಿಕರು ಹೇಳುತ್ತಾರೆ - ಘುಶ್ಮಾಳು ಹೀಗೆ ಹೇಳಿದಾಗ ದಯಾಸಿಂಧು ಭಕ್ತವತ್ಸಲ ಮಹೇಶ್ವರನು ಇನ್ನೂ

---

* ಅಪಕಾರೇಷು ಯಶ್ಚೈವ ಹ್ಯುಪಕಾರಂ ಕರೋತಿ ವೈ । ತಸ್ಯ ದರ್ಶನ ಮಾತ್ರೇಣ ಪಾಪಂ ದೂರತರಂ ವ್ರಜೇತ್ ॥
(ಶಿ - ಪು - ಕೋ - ರು - ಸಂ - ೩೩/೨೯)

ಹೆಚ್ಚು ಪ್ರಸನ್ನನಾಗಿ ಹೀಗೆಂದನು - ಘುಶ್ಮೇ ! ನೀನು ಯಾವುದಾದರೂ ಇನ್ನೊಂದು ವರವನ್ನು ಕೇಳು. ನಾನು ನಿನಗೆ ಹಿತಕರ ವರವನ್ನು ಅವಶ್ಯವಾಗಿ ಕೊಡುವೆನು. ಏಕೆಂದರೆ, ನಿನ್ನ ಈ ಭಕ್ತಿಯಿಂದ ಮತ್ತು ವಿಕಾರಶೂನ್ಯ ಸ್ವಭಾವದಿಂದ ನಾನು ಬಹಳ ಪ್ರಸನ್ನನಾಗಿರುವೆನು.

ಭಗವಾನ್ ಶಿವನ ಮಾತನ್ನು ಕೇಳಿ ಘುಶ್ಮಾಳು ಹೇಳಿದಳು - 'ಪ್ರಭೋ ! ನೀನು ವರವನ್ನು ಕೊಡಲು ಬಯಸುವೆಯಾದರೆ ಜನರ ರಕ್ಷಣೆಗಾಗಿ ಸದಾ ಇಲ್ಲೇ ವಾಸಿಸು ಹಾಗೂ ನನ್ನ ಹೆಸರಿನಿಂದಲೇ ನಿನ್ನ ಖ್ಯಾತಿಯುಂಟಾಗಲಿ.' ಆಗ ಮಹೇಶ್ವರ ಶಿವನು ಅತ್ಯಂತ ಪ್ರಸನ್ನನಾಗಿ - 'ನಾನು ನಿನ್ನ ಹೆಸರಿನಿಂದ ಘುಶ್ಮೇಶ್ವರನೆಂದು ಕರೆಸಿಕೊಂಡು ಸದಾ ಇಲ್ಲೇ ವಾಸಿಸುವೆನು ಮತ್ತು ಎಲ್ಲರಿಗಾಗಿ ಸುಖದಾಯಕನಾಗುವೆನು. ನನ್ನ ಶುಭ ಜ್ಯೋತಿರ್ಲಿಂಗವು ಘುಶ್ಮೇಶ್ವರ ಎಂದು ಪ್ರಸಿದ್ಧವಾಗಲಿ. ಈ ಸರೋವರವು ಶಿವಲಿಂಗಗಳ ಆಲಯವಾಗಲಿ. ಆದ್ದರಿಂದ ಇದು ಮೂರು ಲೋಕಗಳಲ್ಲಿಯೂ ಶಿವಾಲಯ ಎಂಬ ಹೆಸರಿನಿಂದ ಪ್ರಸಿದ್ಧವಾಗಲಿ. ಈ ಸರೋವರವು ಸದಾ ದರ್ಶನ ಮಾತ್ರದಿಂದ ಸಂಪೂರ್ಣ ಅಭೀಷ್ಟಗಳನ್ನು ಕೊಡುವುದಾಗಲಿ. ಸುವ್ರತೇ ! ನಿನ್ನ ವಂಶದಲ್ಲಿ ಹುಟ್ಟುವ ಒಂದು ನೂರ ಒಂದು ತಲೆಮಾರಿನತನಕ ಇಂತಹ ಶ್ರೇಷ್ಠ ಪುತ್ರರೇ ಹುಟ್ಟುವರು; ಇದರಲ್ಲಿ ಸಂಶಯವಿಲ್ಲ. ಅವರೆಲ್ಲರೂ ಸುಂದರ ಪತ್ನೀ, ಉತ್ತಮ ಧನ, ಪೂರ್ಣಾಯುಷ್ಯಿನಿಂದ ಸಂಪನ್ನರಾಗುವರು. ಚತುರರೂ, ವಿದ್ವಾಂಸರೂ ಆಗುವರು. ಉದಾರಿಗಳು ಹಾಗೂ ಭೋಗ, ಮೋಕ್ಷರೂಪೀ ಫಲವನ್ನು ಪಡೆಯಲು ಅಧಿಕಾರಿಗಳಾಗುವರು. ಒಂದು ನೂರ ಒಂದು ತಲೆಮಾರಿನ ಎಲ್ಲ ಪುತ್ರರು ಗುಣಾಢ್ಯರಾಗುವರು. ನಿನ್ನ ವಂಶವು ಹೀಗೆ ವಿಸ್ತರಿಸಿ ಬಹಳ ಶೋಭಾದಾಯಕವಾಗುವುದು.

ಹೀಗೆ ಹೇಳಿ ಭಗವಾನ್ ಶಿವನು ಅಲ್ಲಿ ಜ್ಯೋತಿರ್ಲಿಂಗದ ರೂಪದಲ್ಲಿ ಸ್ಥಿತನಾದನು. ಅದು ಘುಶ್ಮೇಶ ಹೆಸರಿನಿಂದ ಪ್ರಸಿದ್ಧವಾಯಿತು ಮತ್ತು ಆ ಸರೋವರದ ಹೆಸರು ಶಿವಾಲಯವೆಂದಾಯಿತು. ಸುಧರ್ಮಾ, ಘುಶ್ಮಾ ಮತ್ತು ಸುದೇಹಾ ಮೂವರೂ ಬಂದು ಆ ಶಿವಲಿಂಗವನ್ನು ಒಂದು ನೂರ ಒಂದು ಪ್ರದಕ್ಷಿಣೆ ಮಾಡಿದರು. ಪೂಜೆ ಮಾಡಿ ಪರಸ್ಪರ ಸೇರಿ, ಮನಸ್ಸಿನ ಮಲಿನತೆಯನ್ನು ದೂರಗೊಳಿಸಿ ಅವರೆಲ್ಲರೂ ತುಂಬಾ ಸುಖವನ್ನು ಅನುಭವಿಸತೊಡಗಿದರು. ಪುತ್ರನು ಜೀವಿತವಾಗಿರುವುದನ್ನು ನೋಡಿ ಸುದೇಹಾ ಬಹಳ ಲಜ್ಜಿತಳಾದಳು. ಪತಿ ಮತ್ತು ಘುಶ್ಮಾಳಲ್ಲಿ ಕ್ಷಮೆಯನ್ನು ಯಾಚಿಸಿ ಆಕೆಯು ತನ್ನ ಪಾಪವನ್ನು ನಿವಾರಿಸಿಕೊಳ್ಳಲು ಪ್ರಾಯಶ್ಚಿತ್ತ ಮಾಡಿಕೊಂಡಳು. ಮುನೀಶ್ವರರೇ ! ಹೀಗೆ ಆ ಘುಶ್ಮೇಶ್ವರ ಲಿಂಗವು ಪ್ರಕಟವಾಯಿತು. ಅದರ ದರ್ಶನ, ಪೂಜೆ ಮಾಡುವುದರಿಂದ ಸದಾ ಸುಖದ ವೃದ್ಧಿಯಾಗುತ್ತದೆ. ಬ್ರಾಹ್ಮಣರೇ ! ಹೀಗೆ ನಾನು ನಿಮಗೆ ಹನ್ನೆರಡು ಜ್ಯೋತಿರ್ಲಿಂಗಗಳ ಮಹಿಮೆಯನ್ನು ಹೇಳಿದೆನು. ಈ ಎಲ್ಲ ಲಿಂಗಗಳು ಸಂಪೂರ್ಣ ಕಾಮನೆಗಳ ಪೂರಕ ಹಾಗೂ ಭೋಗ, ಮೋಕ್ಷಗಳನ್ನು ಕೊಡುವಂತಹವುಗಳು. ಈ ಜ್ಯೋತಿರ್ಲಿಂಗಗಳ ಕಥೆಯನ್ನು ಓದುವವನು, ಕೇಳುವವನು ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ ಮತ್ತು ಭೋಗ, ಮೋಕ್ಷಗಳನ್ನು ಪಡೆಯುತ್ತಾನೆ.

(ಅಧ್ಯಾಯ ೩೨-೩೩.)

ದ್ವಾದಶ ಜ್ಯೋತಿರ್ಲಿಂಗಗಳ ಮಾಹಾತ್ಮ್ಯವು ಮುಗಿದುದು

❑ ❑ ❑

ಶಂಕರನ ಆರಾಧನೆಯಿಂದ ಭಗವಾನ್ ವಿಷ್ಣುವಿಗೆ ಸುದರ್ಶನ ಚಕ್ರದ ಪ್ರಾಪ್ತಿ ಹಾಗೂ ಅದರಿಂದ ದೈತ್ಯರ ಸಂಹಾರ

ವ್ಯಾಸರು ಹೇಳುತ್ತಾರೆ - ಸೂತಪುರಾಣಿಕರ ಮಾತನ್ನು ಕೇಳಿ ಆ ಮುನೀಶ್ವರರು ಅವರನ್ನು ಭೂರಿ ಪ್ರಶಂಸಿಸಿ ಲೋಕಹಿತದ ಕಾಮನೆಯಿಂದ ಹೀಗೆ ಕೇಳಿದರು.

ಋಷಿಗಳು ಹೇಳಿದರು - ಸೂತಪುರಾಣಿಕರೇ ! ನೀವು ಎಲ್ಲವನ್ನು ತಿಳಿಯುತ್ತಿರುವಿರಿ. ಅದಕ್ಕಾಗಿ ನಾವು ನಿಮ್ಮಲ್ಲಿ ಕೇಳುತ್ತಿರುವೆವು. ಸ್ವಾಮಿ ! ಹರೀಶ್ವರ ಲಿಂಗದ ಮಹಿಮೆಯನ್ನು ವರ್ಣಿಸಿರಿ. ಅಯ್ಯಾ ! ಭಗವಾನ್ ವಿಷ್ಣುವು ಶಿವನ ಆರಾಧನೆಯಿಂದ ಸುದರ್ಶನ ಚಕ್ರವನ್ನು ಪಡೆದಿದ್ದನು ಎಂದು ನಾವು ಕೇಳಿರುವೆವು. ಆದ್ದರಿಂದ, ಆ ಕಥೆಯನ್ನು ವಿಶೇಷವಾಗಿ ಪ್ರಕಾಶಪಡಿಸಿರಿ.

ಸೂತಪುರಾಣಿಕರು ಹೇಳುತ್ತಾರೆ - ಮುನಿವರ್ಯರೇ ! ಹರೀಶ್ವರ ಲಿಂಗದ ಶುಭ ಕಥೆಯನ್ನು ಕೇಳಿರಿ. ಭಗವಾನ್ ವಿಷ್ಣುವು

ಹಿಂದೆ ಹರೀಶ್ವರ ಶಿವನಿಂದಲೇ ಸುದರ್ಶನ ಚಕ್ರವನ್ನು ಪಡೆದುಕೊಂಡಿದ್ದನು. ಒಮ್ಮೆ ದೈತ್ಯರು ಅತ್ಯಂತ ಪ್ರಬಲರಾಗಿ ಜನರನ್ನು ಪೀಡಿಸುತ್ತಾ, ಧರ್ಮದ ಲೋಪವನ್ನು ಮಾಡತೊಡಗಿದರು. ಆ ಮಹಾಬಲಿಷ್ಠರಾದ ಪರಾಕ್ರಮಿ ದೈತ್ಯರಿಂದ ಪೀಡಿತರಾದ ದೇವತೆಗಳು ದೇವರಕ್ಷಕ ಭಗವಾನ್ ವಿಷ್ಣುವಿನಲ್ಲಿ ತಮ್ಮ ದುಃಖವೆಲ್ಲವನ್ನು ಹೇಳಿದರು. ಆಗ ಶ್ರೀಹರಿಯು ಕೈಲಾಸಕ್ಕೆ ಹೋಗಿ ಭಗವಾನ್ ಶಿವನ ಆರಾಧನೆಯನ್ನು ವಿಧಿವತ್ತಾಗಿ ಮಾಡತೊಡಗಿದನು. ಅವನು ಸಾವಿರ ನಾಮಗಳಿಂದ ಶಿವನನ್ನು ಸ್ತುತಿಸುತ್ತಾ, ಪ್ರತಿಯೊಂದು ನಾಮದಿಂದ ಒಂದು ಕಮಲವನ್ನು ಏರಿಸುತ್ತಿದ್ದನು. ಆಗ ಭಗವಾನ್ ಶಂಕರನು ವಿಷ್ಣುವಿನ ಭಕ್ತಿಯನ್ನು ಪರೀಕ್ಷಿಸಲಿಕ್ಕಾಗಿ ಅವನು ತಂದ ಒಂದು ಸಾವಿರ ಕಮಲಗಳಲ್ಲಿ ಒಂದನ್ನು ಅಡಗಿಸಿಟ್ಟನು. ಶಿವನ ಮಾಯೆಯಿಂದ ನಡೆದ ಈ ಅದ್ಭುತ ಘಟನೆಯು ಭಗವಾನ್ ವಿಷ್ಣುವಿಗೆ ತಿಳಿಯಲಿಲ್ಲ. ಅವನು ಒಂದು ಹೂವು ಕಡಿಮೆಯಾಗಿದೆ ಎಂದು ಅದನ್ನು ಹುಡುಕಿದನು. ದೃಢತೆಯಿಂದ ಉತ್ತಮ ವ್ರತವನ್ನು ಪಾಲಿಸುವ ಶ್ರೀಹರಿಯು ಭಗವಾನ್ ಶಿವನ ಪ್ರಸನ್ನತೆಗಾಗಿ ಆ ಒಂದು ಹೂವಿನ ಪ್ರಾಪ್ತಿಯ ಉದ್ದೇಶದಿಂದ ಇಡೀ ಪೃಥಿವಿಯನ್ನು ಸುತ್ತಿದನು. ಆದರೆ ಎಲ್ಲಿಯೂ ಆ ಹೂವು ಸಿಗಲಿಲ್ಲ. ಆಗ ವಿಶುದ್ಧಚೇತಾ ವಿಷ್ಣುವು ಒಂದು ಹೂವಿನ ಪೂರ್ಣತೆಗಾಗಿ ತನ್ನ ಕಮಲ ಸದೃಶ ಒಂದು ಕಣ್ಣನ್ನೇ ಕಿತ್ತು ಅರ್ಪಿಸಿದನು. ಇದನ್ನು ನೋಡಿದ ಎಲ್ಲರ ದುಃಖವನ್ನು ದೂರಗೊಳಿಸುವ ಭಗವಾನ್ ಶಂಕರನು ಅತ್ಯಂತ ಪ್ರಸನ್ನನಾಗಿ ಅಲ್ಲೇ ಹರಿಯ ಎದುರಿಗೆ ಪ್ರಕಟನಾದನು. ಪ್ರಕಟನಾಗಿ ಶ್ರೀಹರಿಯಲ್ಲಿ ಹೇಳಿದನು – ಹರಿಯೇ! ನಾನು ನಿನ್ನ ಮೇಲೆ ಬಹಳ ಪ್ರಸನ್ನನಾಗಿರುವೆನು. ನೀನು ಇಚ್ಛಿಸಿದ ವರವನ್ನು ಕೇಳು. ನಾನು ನಿನಗೆ ಮನೋವಾಂಛಿತ ವಸ್ತುವನ್ನು ಕೊಡುವೆನು. ನಿನಗಾಗಿ ಕೊಡದಿರುವ ಯಾವ ವಸ್ತುವೂ ನನ್ನ ಬಳಿ ಇಲ್ಲ.

ವಿಷ್ಣುವು ಹೇಳಿದನು – ಸ್ವಾಮಿ! ನಿನ್ನ ಮುಂದೆ ನಾನೇನು ಹೇಳಲಿ? ನೀನು ಅಂತರ್ಯಾಮಿಯಾಗಿರುವೆ. ಆದ್ದರಿಂದ ಎಲ್ಲವನ್ನೂ ತಿಳಿದಿರುವೆ. ಆದರೂ ನಿನ್ನ ಆದೇಶವನ್ನು ಗೌರವಿಸಿ ಹೇಳುತ್ತೇನೆ – ದೈತ್ಯರು ಇಡೀ ಜಗತ್ತನ್ನು ಪೀಡಿಸಿರುವರು. ಸದಾಶಿವನೇ! ನಮಗೆ ಸುಖ ಸಿಗುವುದಿಲ್ಲ. ಸ್ವಾಮಿ! ನನ್ನ ಅಸ್ತ್ರ-ಶಸ್ತ್ರಗಳು ದೈತ್ಯರ ವಧೆಯಲ್ಲಿ ಉಪಯೋಗಕ್ಕೆ ಬರುವುದಿಲ್ಲ. ಪರಮೇಶ್ವರನೇ! ಅದಕ್ಕಾಗಿ ನಾನು ನಿನಗೆ ಶರಣು ಬಂದಿರುವೆನು.

ಸೂತಪುರಾಣಿಕರು ಹೇಳುತ್ತಾರೆ – ಶ್ರೀವಿಷ್ಣುವಿನ ಈ ಮಾತನ್ನು ಕೇಳಿ ದೇವಾಧಿದೇವ ಮಹಾದೇವನು ತೇಜೋರಾಶಿಮಯ ತನ್ನ ಸುದರ್ಶನ ಚಕ್ರವನ್ನು ಅವನಿಗೆ ನೀಡಿದನು. ಅದನ್ನು ಪಡೆದು ಭಗವಾನ್ ವಿಷ್ಣುವು ಆ ಸಮಸ್ತ ಪ್ರಬಲ ದೈತ್ಯರನ್ನು ಆ ಚಕ್ರದಿಂದ ಅಯಾಸವಿಲ್ಲದೆ ಸಂಹಾರಮಾಡಿದನು. ಇದರಿಂದ ಇಡೀ ಪ್ರಪಂಚವು ನೆಮ್ಮದಿ ಪಡೆಯಿತು. ದೇವತೆಗಳೂ ಸುಖಿಗಳಾದರು. ಆ ಆಯುಧವನ್ನು ಪಡೆದು ಭಗವಾನ್ ವಿಷ್ಣುವು ಅತ್ಯಂತ ಪ್ರಸನ್ನನಾಗಿ, ಪರಮ ಸುಖಿಯಾದನು.

ಋಷಿಗಳು ಕೇಳಿದರು – ಶಿವನ ಆ ಸಹಸ್ರ ನಾಮಗಳು ಯಾವುವು? ಅದರಿಂದ ಸಂತುಷ್ಟನಾದ ಮಹೇಶ್ವರನು ಶ್ರೀಹರಿಗೆ ಚಕ್ರವನ್ನು ಪ್ರದಾನಮಾಡಿದ್ದನು, ಅದನ್ನು ತಿಳಿಸಿರಿ. ಆ ನಾಮಗಳ ಮಾಹಾತ್ಮ್ಯವನ್ನೂ ವರ್ಣಿಸಿರಿ. ಶ್ರೀವಿಷ್ಣುವಿನ ಮೇಲೆ ಶಂಕರನ ಕೃಪೆಯಾದುದನ್ನು ಯಥಾರ್ಥವಾಗಿ ಪ್ರತಿಪಾದಿಸಿರಿ.

ಶುದ್ಧ ಅಂತಃಕರಣವುಳ್ಳ ಆ ಮುನಿಗಳ ಮಾತನ್ನು ಕೇಳಿ ಸೂತಪುರಾಣಿಕರು ಶಿವನ ಚರಣಾರವಿಂದಗಳನ್ನು ಚಿಂತಿಸಿ ಈ ಪ್ರಕಾರ ಹೇಳಲು ಪ್ರಾರಂಭಿಸಿದರು.

(ಅಧ್ಯಾಯ ೩೪)

❑ ❑ ❑

ಭಗವಾನ್ ವಿಷ್ಣುವು ಪಠಿಸಿದ ಶಿವಸಹಸ್ರನಾಮ – ಸ್ತೋತ್ರ

ಸೂತ ಉವಾಚ

ಶ್ರುಯತಾಂ ಭೋ ಋಷಿಶ್ರೇಷ್ಠಾ ಯೇನ ತುಷ್ಟೋ ಮಹೇಶ್ವರಃ।
ತದಹಂ ಕಥಯಾಮ್ಯದ್ಯ ಶೈವಂ ನಾಮಸಹಸ್ರಕಮ್ ॥೧॥

ಸೂತಪುರಾಣಿಕರು ಹೇಳಿದರು – ಮುನಿವರ್ಯರೇ! ಕೇಳಿರಿ. ಮಹೇಶ್ವರನು ಸಂತುಷ್ಟನಾಗುವ ಶಿವಸಹಸ್ರನಾಮ ಸ್ತೋತ್ರವನ್ನು ಇಂದು ನಿಮಗೆಲ್ಲರಿಗೆ ಹೇಳುತ್ತಿದ್ದೇನೆ.

ವಿಷ್ಣುರುವಾಚ

ಶಿವೋ ಹರೋ ಮೃಡೋ ರುದ್ರಃ ಪುಷ್ಕರಃ ಪುಷ್ಪಲೋಚನಃ ।
ಅರ್ಥಿಗಮ್ಯಃ ಸದಾಚಾರಃ ಶರ್ವಃ ಶಂಭುರ್ಮಹೇಶ್ವರಃ ॥೨॥

ಭಗವಾನ್ ವಿಷ್ಣುವು ಹೇಳಿದನು – ೧ **ಶಿವಃ** – ಕಲ್ಯಾಣಸ್ವರೂಪೀ, ೨ **ಹರಃ** – ಭಕ್ತರ ಪಾಪ-ತಾಪಗಳನ್ನು ಹರಿಸುವವನು, ೩. **ಮೃಡಃ** – ಸುಖದಾತಾ, ೪ **ರುದ್ರಃ** –

ದುಃಖವನ್ನು ದೂರಗೊಳಿಸುವವನು, ೫ **ಪುಷ್ಕರಃ** – ಆಕಾಶಸ್ವರೂಪೀ, ೬ **ಪುಷ್ಪಲೋಚನಃ** – ಪುಷ್ಪದಂತೆ ಅರಳಿದ ಕಣ್ಣುಳ್ಳವನು, ೭ **ಅರ್ಥಿಗಮ್ಯಃ** – ಪ್ರಾರ್ಥಿಸಿದವರಿಗೆ ದೊರೆಯುವವನು, ೮ **ಸದಾಚಾರಃ** – ಶ್ರೇಷ್ಠ ಆಚರಣೆಯುಳ್ಳವನು, ೯ **ಶರ್ವಃ** – ಸಂಹಾರಕಾರೀ, ೧೦ **ಶಂಭುಃ** –ಕಲ್ಯಾಣ ನಿಕೇತನ, ೧೧ **ಮಹೇಶ್ವರಃ** – ಮಹಾನ್ ಈಶ್ವರ ॥೨॥

ಚಂದ್ರಾಪೀಡಶ್ಚಂದ್ರಮೌಲಿರ್ವಿಶ್ವಂ ವಿಶ್ವಂಭರೇಶ್ವರಃ ।
ವೇದಾಂತಸಾರಸಂದೋಹಃ ಕಪಾಲೀ ನೀಲಲೋಹಿತಃ ॥೩॥

೧೨ **ಚಂದ್ರಾಪೀಡಃ** – ಚಂದ್ರನನ್ನು ಶಿರೋಭೂಷಣ ರೂಪದಲ್ಲಿ ಧರಿಸಿದವನು, ೧೩. **ಚಂದ್ರಮೌಲಿಃ** – ತಲೆಯಲ್ಲಿ ಚಂದ್ರನನ್ನು ಕಿರೀಟವನ್ನಾಗಿ ಧರಿಸಿದವನು, ೧೪ **ವಿಶ್ವಮ್** – ಸರ್ವಸ್ವರೂಪೀ, ೧೫ **ವಿಶ್ವಂಭರೇಶ್ವರಃ** – ವಿಶ್ವವನ್ನು ಪಾಲಿಸುವ ಶ್ರೀವಿಷ್ಣುವಿಗೂ ಒಡೆಯನು, ೧೬ **ವೇದಾಂತಸಾರಸಂದೋಹಃ** – ವೇದಾಂತದ ಸಾರ ತತ್ತ್ವ ಸಚ್ಚಿದಾನಂದಮಯ ಬ್ರಹ್ಮನ ಸಾಕಾರಮೂರ್ತಿ, ೧೭ **ಕಪಾಲೀ** – ಕೈಯಲ್ಲಿ ಕಪಾಲವನ್ನು ಧರಿಸಿದವನು, ೧೮ **ನೀಲಲೋಹಿತಃ** – ಕೊರಳು ನೀಲಿ ಮತ್ತು ಉಳಿದ ಶರೀರವು ಲೋಹಿತ (ಕೆಂಪು) ವರ್ಣವುಳ್ಳವನು ॥೩.॥

ಧ್ಯಾನಾಧಾರೋಽಪರಿಚ್ಛೇದ್ಯೋ ಗೌರೀಭರ್ತಾ ಗಣೇಶ್ವರಃ ।
ಅಷ್ಟಮೂರ್ತಿರ್ವಿಶ್ವಮೂರ್ತಿಸ್ತ್ರಿವರ್ಗಸ್ವರ್ಗಸಾಧನಃ ॥೪॥

೧೯ **ಧ್ಯಾನಾಧಾರಃ** – ಧ್ಯಾನದ ಆಧಾರನು, ೨೦ **ಅಪರಿಚ್ಛೇದ್ಯಃ** – ದೇಶ, ಕಾಲ ಮತ್ತು ವಸ್ತುಗಳ ಸೀಮೆಯಿಂದ ಅವಿಭಾಜ್ಯನು, ೨೧ **ಗೌರೀಭರ್ತಾ** – ಗೌರೀ ಅರ್ಥಾತ್ ಪಾರ್ವತಿಯ ಪತಿಯು, ೨೨ **ಗಣೇಶ್ವರಃ** – ಪ್ರಮಥಗಳ ಸ್ವಾಮಿ, ೨೩. **ಅಷ್ಟಮೂರ್ತಿಃ** – ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಪೃಥಿವಿ ಮತ್ತು ಯಜಮಾನ – ಹೀಗೆ ಎಂಟು ರೂಪವುಳ್ಳವನು, ೨೪ **ವಿಶ್ವಮೂರ್ತಿಃ** – ಅಖಿಲ ಬ್ರಹ್ಮಾಂಡಮಯ ವಿರಾಟ್‌ಪುರುಷನು, ೨೫ **ತ್ರಿವರ್ಗಸ್ವರ್ಗಸಾಧನಃ** – ಧರ್ಮ, ಅರ್ಥ, ಕಾಮ ಹಾಗೂ ಸ್ವರ್ಗವನ್ನು ಕೊಡುವವನು. ॥೪॥

ಜ್ಞಾನಗಮ್ಯೋ ದೃಢಪ್ರಜ್ಞೋ ದೇವದೇವ ಸ್ತ್ರಿಲೋಚನಃ ।
ವಾಮದೇವೋ ಮಹಾದೇವಃ ಪಟುಃ ಪರಿವೃಢೋ ದೃಢಃ ॥೫॥

೨೬ **ಜ್ಞಾನಗಮ್ಯಃ** – ಜ್ಞಾನದಿಂದಲೇ ಅನುಭವಕ್ಕೆ ಬರುವನು, ೨೭ **ದೃಢಪ್ರಜ್ಞಃ** – ಸುಸ್ಥಿರ ಬುದ್ಧಿಯುಳ್ಳವನು, ೨೮ **ದೇವದೇವಃ** –ದೇವತೆಗಳಿಗೂ ಆರಾಧ್ಯನು, ೨೯ **ತ್ರಿಲೋಚನಃ** – ಸೂರ್ಯ, ಚಂದ್ರ, ಅಗ್ನಿರೂಪೀ ಮೂರು ಕಣ್ಣುಗಳುಳ್ಳವನು, ೩೦ **ವಾಮದೇವಃ** – ಲೋಕ ವಿಪರೀತ ಸ್ವಭಾವವುಳ್ಳ ದೇವನು, ೩೧ **ಮಹಾದೇವಃ** – ಬ್ರಹ್ಮಾದಿ ಮಹಾದೇವತೆಗಳಿಗೂ ಪೂಜನೀಯನು, ೩೨ **ಪಟುಃ** – ಎಲ್ಲವನ್ನೂ ಮಾಡಲು ಸಮರ್ಥ ಮತ್ತು ಕುಶಲನು, ೩೩. **ಪರಿವೃಢಃ** – ಸ್ವಾಮಿ, ೩೪ **ದೃಢಃ** – ಎಂದೂ ವಿಚಲಿತನಾಗದವನು. ॥೫॥

ವಿಶ್ವರೂಪೋ ವಿರೂಪಾಕ್ಷೋ ವಾಗಿಶಃ ಶುಚಿಸತ್ತಮಃ ।
ಸರ್ವಪ್ರಮಾಣಸಂವಾದೀ ವೃಷಾಂಕೋ ವೃಷವಾಹನಃ ॥೬॥

೩೫ **ವಿಶ್ವರೂಪಃ** – ಜಗತ್‌ಸ್ವರೂಪೀ, ೩೬ **ವಿರೂಪಾಕ್ಷಃ** – ವಿಕಟ ನೇತ್ರವುಳ್ಳವನು, ೩೭ **ವಾಗೀಶಃ** – ವಾಣಿಯ ಅಧಿಪತಿ, ೩೮ **ಶುಚಿಸತ್ತಮಃ** – ಪವಿತ್ರ ಪುರುಷರಲ್ಲಿಯೂ ಸರ್ವಶ್ರೇಷ್ಠನು, ೩೯ **ಸರ್ವ ಪ್ರಮಾಣಸಂವಾದೀ** – ಸಮಸ್ತ ಪ್ರಮಾಣಗಳಲ್ಲಿ ಸಾಮಂಜಸ್ಯವನ್ನು ಸ್ಥಾಪಿಸುವವನು, ೪೦ **ವೃಷಾಂಕಃ** – ತನ್ನ ಧ್ವಜದಲ್ಲಿ ವೃಷಭ ಚಿಹ್ನೆಯನ್ನು ಧರಿಸಿದವನು, ೪೧ **ವೃಷವಾಹನಃ** – ವೃಷಭ ಅಥವಾ ಧರ್ಮವನ್ನು ವಾಹನವಾಗಿಸಿ ಕೊಂಡವನು. ॥೬॥

ಈಶಃ ಪಿನಾಕೀ ಖಟ್ವಾಂಗೀ ಚಿತ್ರವೇಷಶ್ಚಿರಂತನಃ ।
ತಮೋಹರೋ ಮಹಾಯೋಗೀ ಗೋಪ್ತಾ ಬ್ರಹ್ಮಾ ಚ ಧೂರ್ಜಟಿಃ ॥೭॥

೪೨ **ಈಶಃ** – ಸ್ವಾಮಿ ಅಥವಾ ಶಾಸಕನು, ೪೩. **ಪಿನಾಕೀ** – ಪಿನಾಕವೆಂಬ ಧನುಸ್ಸನ್ನು ಧರಿಸುವವನು, ೪೪ **ಖಟ್ವಾಂಗೀ** – ಮಂಚದ ಕಾಲಿನ ಆಕೃತಿಯ ಒಂದು ಆಯುಧವನ್ನು ಧರಿಸುವವನು, ೪೫ **ಚಿತ್ರವೇಷಃ** – ವಿಚಿತ್ರ ವೇಷಧಾರಿಯು, ೪೬ **ಚಿರಂತನಃ** – ಪುರಾಣ (ಅನಾದಿ) ಪುರುಷೋತ್ತಮನು, ೪೭ **ತಮೋಹರಃ** – ಅಜ್ಞಾನಾಂಧಕಾರವನ್ನು ಕಳೆಯುವವನು, ೪೮ **ಮಹಾಯೋಗೀ** – ಮಹಾನ್ ಯೋಗದಿಂದ ಸಂಪನ್ನನು, ೪೯ **ಗೋಪ್ತಾ** – ರಕ್ಷಕನು, ೫೦ **ಬ್ರಹ್ಮಾ** – ಸೃಷ್ಟಿಕರ್ತಾ, ೫೧ **ಧೂರ್ಜಟಿಃ** –ಜಟಾಭಾರದಿಂದ ಕೂಡಿದವನು ॥೭॥

ಕಾಲಕಾಲಃ ಕೃತ್ತಿವಾಸಾಃ ಸುಭಗಃ ಪ್ರಣವಾತ್ಮಕಃ ।
ಉನ್ನದ್ಧಃ ಪುರುಷೋ ಜುಷ್ಯೋ ದುರ್ವಾಸಾಃ ಪುರಶಾಸನಃ॥೮॥

೫೨ **ಕಾಲಕಾಲಃ**–ಕಾಲಕ್ಕೂ, ಕಾಲನು, ೫೩. **ಕೃತ್ತಿವಾಸಾಃ** – ಗಜಾಸುರನ ಚರ್ಮವನ್ನು ಬಟ್ಟೆಯಾಗಿ ಧರಿಸುವವನು, ೫೪ **ಸುಭಗಃ** – ಸೌಭಾಗ್ಯಶಾಲಿಯು, ೫೫ **ಪ್ರಣವಾತ್ಮಕಃ** – ಓಂಕಾರ ಸ್ವರೂಪೀ ಅಥವಾ ಪ್ರಣವದ ವಾಚ್ಯಾರ್ಥನು, ೫೬ **ಉನ್ನದ್ಧಃ** – ಬಂಧನರಹಿತನು, ೫೭ **ಪುರುಷಃ** –ಅಂತರ್ಯಾಮಿ ಆತ್ಮನು, ೫೮ **ಜುಷ್ಯಃ** – ಸೇವಿಸಲು ಯೋಗ್ಯನು, ೫೯ **ದುರ್ವಾಸಾಃ** – 'ದುರ್ವಾಸಾ' ಎಂಬ ಮುನಿಯ ರೂಪದಲ್ಲಿ ಅವತರಿಸಿದವನು, ೬೦ **ಪುರಶಾಸನಃ** – ಮೂರು ಮಾಯಾಮಯ ಅಸುರ ಪುರಗಳನ್ನು ದಮನ ಮಾಡಿದವನು. ॥೮॥

ದಿವ್ಯಾಯಧಃ ಸ್ಕಂದಗುರುಃ ಪರಮೇಷ್ಠಿ ಪರಾತ್ಪರಃ ।
ಅನಾದಿಮಧ್ಯನಿಧನೋ ಗಿರೀಶೋ ಗಿರಿಜಾಧವಃ ॥೯॥

೬೧ **ದಿವ್ಯಾಯುಧಃ** – 'ಪಾಶುಪತ' ಮೊದಲಾದ ದಿವ್ಯ ಅಸ್ತ್ರಗಳು ಧಾರಣಮಾಡುವವನು, ೬೨ **ಸ್ಕಂಧಗುರುಃ** – ಕಾರ್ತಿಕೇಯನ ತಂದೆ, ೬೩. **ಪರಮೇಷ್ಠಿ** – ತನ್ನ ಪ್ರಕೃಷ್ಟ ಮಹಿಮೆಯನ್ನು ಸ್ಥಿತನಾಗಿರುವವನು, ೬೪ **ಪರಾತ್ಪರಃ** – ಕಾರಣಕ್ಕೂ ಕಾರಣನು, ೬೫ **ಅನಾದಿಮಧ್ಯವಿಧನಃ** – ಆದಿ, ಮಧ್ಯ, ಅಂತ್ಯಗಳಿಂದ ರಹಿತನು, ೬೬ **ಗಿರೀಶಃ** – ಕೈಲಾಸದ ಅಧಿಪತಿ, ೬೭ **ಗಿರಿಜಾಧವಃ** – ಪಾರ್ವತೀ ಪತಿಯು. ॥೯॥

ಕುಬೇರಬಂಧುಃ ಶ್ರೀಕಂಠೋ ಲೋಕವರ್ಣೋತ್ತಮೋ ಮೃದುಃ ।
ಸಮಾಧಿವೇದ್ಯಃ ಕೋದಂಡೀ ನೀಲಕಂಠಃ ಪರಶ್ವಧೀಃ ॥೧೦॥

೬೮ **ಕುಬೇರಬಂಧುಃ** – ಕುಬೇರನನ್ನು ತನ್ನ ಬಂಧು (ಮಿತ್ರ)ವೆಂದು ತಿಳಿಯುವವನು, ೬೯ **ಶ್ರೀಕಂಠಃ** – ನೀಲಿ ಪ್ರಭೆಯಿಂದ ಸುಶೋಭಿತ ಕಂಠವುಳ್ಳವನು, ೭೦ **ಲೋಕವರ್ಣೋತ್ತಮಃ** – ಸಮಸ್ತ ಲೋಕಗಳಿಂದ ಮತ್ತು ವರ್ಣಗಳಿಂದ ಶ್ರೇಷ್ಠನು, ೭೧ **ಮೃದುಃ** – ಕೋಮಲ ಸ್ವಭಾವವುಳ್ಳವನು, ೭೨ **ಸಮಾಧಿವೇದ್ಯಃ** – ಸಮಾಧಿ ಅಥವಾ ಚಿತ್ತವೃತ್ತಿಗಳ ನಿರೋಧದಿಂದ ಅನುಭವಕ್ಕೆ ಬರುವವನು, ೭೩. **ಕೋದಂಡೀ** – ಧನುರ್ಧರನು, ೭೪ **ನೀಲಕಂಠಃ**–ಕಂಠದಲ್ಲಿ ಹಾಲಾಹಲ ವಿಷದ ನೀಲಿ ಚಿಹ್ನೆಯನ್ನು ಧರಿಸಿದವನು, ೭೫ **ಪರಶ್ವಧೀ** – ಪರಶುಧಾರೀ ॥೧೦॥

ವಿಶಾಲಾಕ್ಷೋ ಮೃಗವ್ಯಾಧಃ ಸುರೇಶಃ ಸೂರ್ಯತಾಪನಃ ।
ಧರ್ಮಧಾಮ ಕ್ಷಮಾಕ್ಷೇತ್ರಂ ಭಗವಾನ್ ಭಗನೇತ್ರಭಿತ್ ॥೧೧॥

೭೬ **ವಿಶಾಲಾಕ್ಷಃ** – ವಿಶಾಲವಾದ ಕಣ್ಣುಗಳುಳ್ಳವನು, ೭೭ **ಮೃಗವ್ಯಾಧಃ** – ವನದಲ್ಲಿ ವ್ಯಾಧ ಅಥವಾ ಕಿರಾತ ರೂಪದಿಂದ ಪ್ರಕಟನಾಗಿ ಹಂದಿಯ ಮೇಲೆ ಬಾಣವನ್ನು ಪ್ರಯೋಗಿಸುವವನು, ೭೮ **ಸುರೇಶಃ** – ದೇವತೆಗಳ ಸ್ವಾಮಿ, ೭೯ **ಸೂರ್ಯತಾಪನಃ**–ಸೂರ್ಯನನ್ನೂ ದಂಡಿಸುವವನು, ೮೦ **ಧರ್ಮಧಾಮ** – ಧರ್ಮದ ಆಶ್ರಯನು, ೮೧ **ಕ್ಷಮಾಕ್ಷೇತ್ರಮ್** – ಕ್ಷಮೆಯ ಉತ್ಪತ್ತಿ ಸ್ಥಾನನು, ೮೨ **ಭಗವಾನ್** – ಸಂಪೂರ್ಣ ಐಶ್ವರ್ಯ, ಧರ್ಮ, ಯಶ, ಶ್ರೀ, ಜ್ಞಾನ ಹಾಗೂ ವೈರಾಗ್ಯದ ಆಶ್ರಯನು, ೮೩. **ಭಗನೇತ್ರಭಿತ್** – ಭಗದೇವತೆಯ ಕಣ್ಣುಗಳನ್ನು ಭೇದಿಸುವವನು. ॥೧೧॥

ಉಗ್ರಃ ಪಶುಪತಿಸ್ತಾರ್ಕ್ಷ್ಯಃ ಪ್ರಿಯಭಕ್ತಃ ಪರಂತಪಃ ।
ದಾತಾ ದಯಾಕರೋ ದಕ್ಷಃ ಕಪರ್ದೀ ಕಾಮಶಾಸನಃ ॥೧೨॥

೮೪ **ಉಗ್ರಃ** – ಸಂಹಾರಕಾಲದಲ್ಲಿ ಭಯಂಕರ ರೂಪವನ್ನು ಧರಿಸುವವನು, ೮೫ **ಪಶುಪತಿಃ** – ಮಾಯೆಯಲ್ಲಿ ಬಂಧಿತರಾದ ಪಾಶಬದ್ಧ ಪಶುಗಳನ್ನು (ಜೀವರನ್ನು) ತತ್ತ್ವಜ್ಞಾನದ ಮೂಲಕ ಮುಕ್ತಗೊಳಿಸಿ, ಯಥಾರ್ಥವಾಗಿ ಅವರನ್ನು ಪಾಲಿಸುವವನು, ೮೬ **ತಾರ್ಕ್ಷ್ಯಃ** – ಗರುಡರೂಪೀ, ೮೭ **ಪ್ರಿಯಭಕ್ತಃ** – ಭಕ್ತರಲ್ಲಿ ಪ್ರೀತಿಯನ್ನಿರಿಸುವವನು, ೮೮ **ಪರಂತಪಃ** – ಶತ್ರುಗಳಿಗೆ ತಾಪವನ್ನುಂಟುಮಾಡುವವನು, ೮೯ **ದಾತಾ** – ದಾನೀ, ೯೦ **ದಯಾಕರಃ** – ದಯಾನಿಧಾನ ಅಥವಾ ಕೃಪೆಯನ್ನು ಮಾಡುವವನು, ೯೧ **ದಕ್ಷಃ** – ಕುಶಲನು, ೯೨ **ಕಪರ್ದೀ** – ಜಟಾಜೂಟಧಾರೀ, ೯೩. **ಕಾಮಶಾಸನಃ** – ಕಾಮದೇವನನ್ನು ದಮನ ಮಾಡಿದನು. ॥೧೨॥

ಶ್ಮಶಾನನಿಲಯಃ ಸೂಕ್ಷ್ಮಃ ಶ್ಮಶಾನಸ್ಥೋ ಮಹೇಶ್ವರಃ ।
ಲೋಕಕರ್ತಾ ಮೃಗಪತಿರ್ಮಹಾಕರ್ತಾ ಮಹೌಷಧಿಃ ॥೧೩॥

೯೪ **ಶ್ಮಶಾನನಿಲಯಃ** – ಶ್ಮಶಾನವಾಸೀ, ೯೫ **ಸೂಕ್ಷ್ಮಃ** – ಇಂದ್ರಿಯಾತೀತ ಮತ್ತು ಸರ್ವವ್ಯಾಪಿ, ೯೬ **ಶ್ಮಶಾನಸ್ಥಃ** – ಶ್ಮಶಾನದಲ್ಲಿ ವಿಶ್ರಮಿಸುವವನು, ೯೭ **ಮಹೇಶ್ವರಃ** – ಮಹಾನ್ ಈಶ್ವರ ಅಥವಾ ಪರಮೇಶ್ವರನು, ೯೮ **ಲೋಕಕರ್ತಾ**–ಜಗತ್ತನ್ನು ಸೃಷ್ಟಿಸುವವನು, ೯೯ **ಮೃಗಪತಿಃ**–ಮೃಗಗಳ ಪಾಲಕ ಅಥವಾ ಪಶುಪತಿ, ೧೦೦ **ಮಹಾಕರ್ತಾ** –ವಿರಾಟ್ ಬ್ರಹ್ಮಾಂಡವನ್ನು ಸೃಷ್ಟಿಸುವಾಗ ಮಹಾನ್ ಕರ್ತೃತ್ವದಿಂದ ಸಂಪನ್ನನು, ೧೦೧ **ಮಹೌಷಧಿಃ**– ಭವರೋಗವನ್ನು ನಿವಾರಿಸಲು ಮಹಾಔಷಧರೂಪನು ॥೧೩॥

ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ ।
ನೀತಿಃ ಸುನೀತಿಃ ಶುದ್ಧಾತ್ಮಾ ಸೋಮಃ ಸೋಮರತಃ ಸುಖೀ ॥೧೪॥

೧೦೨ **ಉತ್ತರಃ** – ಸಂಸಾರ ಸಾಗರದಿಂದ ದಾಟಿಸುವವನು, ೧೦೩. **ಗೋಪತಿಃ** – ಸ್ವರ್ಗ, ಪೃಥಿವಿ, ಪಶು, ವಾಣಿ, ಕಿರಣ, ಇಂದ್ರಿಯ ಮತ್ತು ಜಲದ ಸ್ವಾಮಿಯು, ೧೦೪ **ಗೋಪ್ತಾ** – ರಕ್ಷಕ, ೧೦೫ **ಜ್ಞಾನಗಮ್ಯಃ** – ತತ್ತ್ವ –ಜ್ಞಾನದಿಂದ, ಜ್ಞಾನಸ್ವರೂಪದಿಂದಲೇ ತಿಳಿಯಲು ಯೋಗ್ಯನು, ೧೦೬ **ಪುರಾತನಃ** – ಎಲ್ಲಕ್ಕಿಂತ ಪುರಾತನನು, ೧೦೭ **ನೀತಿಃ** – ನ್ಯಾಯ ಸ್ವರೂಪೀ, ೧೦೮ **ಸುನೀತಿಃ** – ಉತ್ತಮ ನೀತಿಯುಳ್ಳವನು, ೧೦೯ **ಶುದ್ಧಾತ್ಮಾ** – ವಿಶುದ್ಧ ಆತ್ಮಸ್ವರೂಪೀ, ೧೧೦ **ಸೋಮಃ** – ಉಮಾಸಹಿತನು, ೧೧೧ **ಸೋಮರತಃ** – ಚಂದ್ರನಲ್ಲಿ ಪ್ರೀತಿಯುಳ್ಳವನು, ೧೧೨ **ಸುಖೀ** – ಆತ್ಮಾನಂದದಿಂದ ಪರಿಪೂರ್ಣನು. ॥೧೪॥

ಸೋಮಪೋಽಮೃತಪಃ ಸೌಮ್ಯೋ ಮಹಾತೇಜಾ ಮಹಾದ್ಯುತಿಃ ।
ತೇಜೋಮಯೋಽಮೃತಮಯೋಽನ್ನಮಯಶ್ಚ ಸುಧಾಪತಿಃ ॥೧೫॥

೧೧೩. **ಸೋಮಪಃ** – ಸೋಮಪಾದ ಮಾಡುವವನು, ಅಥವಾ ಸೋಮನಾಥರೂಪದಿಂದ ಚಂದ್ರನ ಪಾಲಕನು, ೧೧೪ **ಅಮೃತಪಃ** – ಸಮಾಧಿಯ ಮೂಲಕ ಸ್ವರೂಪಭೂತ ಅಮೃತವನ್ನು ಆಸ್ವಾದಿಸುವವನು, ೧೧೫ **ಸೌಮ್ಯಃ** – ಭಕ್ತರಿಗಾಗಿ ಸೌಮ್ಯರೂಪನು, ೧೧೬ **ಮಹಾತೇಜಾಃ** –

ಮಹಾನ್ ತೇಜದಿಂದ ಸಂಪನ್ನನು, ೧೧೭ **ಮಹಾದ್ಯುತಿಃ** - ಪರಮಕಾಂತಿಯುಳ್ಳವನು, ೧೧೮ **ತೇಜೋಮಯಃ** - ಪ್ರಕಾಶಸ್ವರೂಪೀ, ೧೧೯ **ಅಮೃತಮಯಃ** - ಅಮೃತ ಸ್ವರೂಪೀ, ೧೨೦ **ಅನ್ನಮಯಃ** - ಅನ್ನರೂಪೀ, ೧೨೧ **ಸುಧಾಪತಿಃ** - ಅಮೃತದ ಪಾಲಕನು. ॥೧೫॥

ಅಜಾತಶತ್ರುರಾಲೋಕಃ ಸಂಭಾವ್ಯೋ ಹವ್ಯವಾಹನಃ ।
ಲೋಕಕರೋ ವೇದಕರಃ ಸೂತ್ರಕಾರಃ ಸನಾತನಃ ॥೧೬॥

೧೨೨ **ಅಜಾತಶತ್ರುಃ** - ಯಾರ ಕುರಿತೂ ಶತ್ರುಭಾವವು ಉಂಟಾಗದಿರುವ ಸಮದರ್ಶಿ, ೧೨೩. **ಆಲೋಕಃ** - ಪ್ರಕಾಶಸ್ವರೂಪೀ, ೧೨೪ **ಸಂಭಾವ್ಯಃ** - ಸಮ್ಮಾನನೀಯನು, ೧೨೫ **ಹವ್ಯವಾಹನಃ**-ಅಗ್ನಿಸ್ವರೂಪನು, ೧೨೬ **ಲೋಕಕರಃ** - ಜಗತ್ತಿನ ಸೃಷ್ಟಾ, ೧೨೭ **ವೇದಕರಃ** - ವೇದಗಳನ್ನು ಪ್ರಕಟಿಸುವವನು, ೧೨೮ **ಸೂತ್ರಕಾರಃ**-ಢಕ್ಕೆಯ ನಾದದಿಂದ ಹದಿನಾಲ್ಕು ಮಹೇಶ್ವರ ಸೂತ್ರಗಳನ್ನು ರಚಿಸಿದವನು, ೧೨೯ **ಸನಾತನಃ** - ನಿತ್ಯಸ್ವರೂಪನು. ॥೧೬॥

ಮಹರ್ಷಿಕಪಿಲಾಚಾರ್ಯೋ ವಿಶ್ವದೀಪ್ತಿಸ್ತ್ರಿಲೋಚನಃ ।
ಪಿನಾಕಪಾಣಿರ್ಭೂದೇವಃ ಸ್ವಸ್ತಿದಃ ಸ್ವಸ್ತಿಕೃತ್ಸುಧೀಃ ॥೧೭॥

೧೩೦ **ಮಹರ್ಷಿಕಪಿಲಾಚಾರ್ಯಃ** -ಸಾಂಖ್ಯಶಾಸ್ತ್ರದ ಪ್ರಣೇತಾ ಭಗವಾನ್ ಕಪಿಲಾಚಾರ್ಯನು, ೧೩೧ **ವಿಶ್ವದೀಪ್ತಿಃ** - ತನ್ನ ಪ್ರಭಾವದಿಂದ ಎಲ್ಲವನ್ನು ಪ್ರಕಾಶಿತಗೊಳಿಸುವವನು, ೧೩೨ **ತ್ರಿಲೋಚನಃ** - ಮೂರು ಲೋಕಗಳ ದೃಷ್ಟಾ, ೧೩೩. **ಪಿನಾಕಪಾಣಿಃ** - ಕೈಯಲ್ಲಿ ಪಿನಾಕವೆಂಬ ಧನುಸ್ಸನ್ನು ಧರಿಸುವವನು, ೧೩೪ **ಭೂದೇವಃ** - ಭೂಸುರ - ಬ್ರಾಹ್ಮಣನು ಅಥವಾ ಪಾರ್ಥಿವ ಲಿಂಗರೂಪೀ, ೧೩೫ **ಸ್ವಸ್ತಿದಃ** - ಕಲ್ಯಾಣದಾತಾ, ೧೩೬ **ಸ್ವಸ್ತಿಕೃತ್** - ಕಲ್ಯಾಣಕಾರಿ, ೧೩೭ **ಸುಧೀಃ** - ವಿಶುದ್ಧ ಬುದ್ಧಿಯುಳ್ಳವನು. ॥೧೭॥

ಧಾತೃಧಾಮಾ ಧಾಮಕರಃ ಸರ್ವಗಃ ಸರ್ವಗೋಚರಃ ।
ಬ್ರಹ್ಮಸೃಗ್ವಿಶ್ವಸೃಕ್ಸರ್ಗಃ ಕರ್ಣಿಕಾರಪ್ರಿಯಃ ಕವಿಃ ॥೧೮॥

೧೩೮ **ಧಾತೃಧಾಮಾ** - ವಿಶ್ವದ ಧಾರಣ-ಪೋಷಣೆ ಮಾಡುವುದರಲ್ಲಿ ಸಮರ್ಥ ತೇಜವುಳ್ಳವನು, ೧೩೯ **ಧಾಮಕರಃ** - ತೇಜವನ್ನು ಸೃಷ್ಟಿಸುವವನು, ೧೪೦ **ಸರ್ವಗಃ** - ಸರ್ವವ್ಯಾಪೀ, ೧೪೧ **ಸರ್ವಗೋಚರಃ** - ಎಲ್ಲದರಲ್ಲಿ ವ್ಯಾಪ್ತನು, ೧೪೨ **ಬ್ರಹ್ಮಸೃಕ್** - ಬ್ರಹ್ಮದೇವರ ಉತ್ಪಾದಕನು, ೧೪೩. **ವಿಶ್ವಸೃಕ್** - ಜಗತ್ತಿನ ಸೃಷ್ಟಾ, ೧೪೪ **ಸರ್ಗಃ** - ಸೃಷ್ಟಿಸ್ವರೂಪೀ, ೧೪೫ **ಕರ್ಣಿಕಾರಪ್ರಿಯಃ** - ಕಣಗಿಲೆ ಹೂವುಗಳನ್ನು ಮೆಚ್ಚುವವನು, ೧೪೬ **ಕವಿಃ** - ತ್ರಿಕಾಲದರ್ಶಿ. ॥೧೮॥

ಶಾಖೋ ವಿಶಾಖೋ ಗೋಶಾಖಃ ಶಿವೋ ಭಿಷಗನುತ್ತಮಃ ।
ಗಂಗಾಪ್ಲವೋದಕೋ ಭವ್ಯಃ ಪುಷ್ಕಲಃ ಸ್ಥಪತಿಃ ಸ್ಥಿರಃ ॥೧೯॥

೧೪೭ **ಶಾಖಃ** - ಕಾರ್ತಿಕೇಯನ ತಮ್ಮ ಶಾಖ ಸ್ವರೂಪನು, ೧೪೮ **ವಿಶಾಖಃ** - ಸ್ಕಂದನ ತಮ್ಮ ವಿಶಾಖಿಸ್ವರೂಪನು ಅಥವಾ ವಿಶಾಖಿ ಎಂಬ ಋಷಿ, ೧೪೯ **ಗೋಶಾಖಃ** - ವೇದವಾಣಿಯ ಶಾಖೆಗಳನ್ನು ವಿಸ್ತಾರ ಮಾಡುವವನು, ೧೫೦ **ಶಿವಃ** - ಮಂಗಲಮಯನು, ೧೫೧ **ಭಿಷಗನುತ್ತಮಃ** - ಭವರೋಗ ವೈದ್ಯರಲ್ಲಿ (ಜ್ಞಾನಿಗಳಲ್ಲಿ) ಸರ್ವಶ್ರೇಷ್ಠನು, ೧೫೨ **ಗಂಗಾಪ್ಲವೋದಕಃ** - ಗಂಗಾಪ್ರವಾಹವನ್ನು ಶಿರದಲ್ಲಿ ಧರಿಸುವವನು, ೧೫೩. **ಭವ್ಯಃ** - ಕಲ್ಯಾಣಸ್ವರೂಪೀ, ೧೫೪ **ಪುಷ್ಕಲಃ** - ಪೂರ್ಣತಮ ಅಥವಾ ವ್ಯಾಪಕನು, ೧೫೫ **ಸ್ಥಪತಿಃ** - ಬ್ರಹ್ಮಾಂಡರೂಪೀ ಭವನವನ್ನು ನಿರ್ಮಿಸಿದವನು (ಶಿಲ್ಪಿ), ೧೫೬ **ಸ್ಥಿರಃ** - ಅಚಂಚಲ ಅಥವಾ ಸ್ಥಾಣುರೂಪೀ ॥೧೯॥

ವಿಜಿತಾತ್ಮಾ ವಿಧೇಯಾತ್ಮಾ ಭೂತವಾಹನಸಾರಥಿಃ ।
ಸಗಣೋ ಗಣಕಾಯಶ್ಚ ಸುಕೀರ್ತಿಶ್ಛಿನ್ನ ಸಂಶಯಃ ॥೨೦॥

೧೫೭ **ವಿಜಿತಾತ್ಮಾ** - ಮನಸ್ಸನ್ನು ವಶದಲ್ಲಿರಿಸಿ ಕೊಳ್ಳುವವನು, ೧೫೮ **ವಿಧೇಯಾತ್ಮಾ** - ಶರೀರ, ಮನಸ್ಸು ಮತ್ತು ಇಂದ್ರಿಯಗಳಿಂದ ತನ್ನಿಚ್ಛೆಗೆ ಅನುಸಾರವಾಗಿ ಕಾರ್ಯವನ್ನು ಮಾಡಿಸುವವನು, ೧೫೯ **ಭೂತವಾಹನಸಾರಥಿಃ**-ಪಾಂಚಭೌತಿಕ ರಥ (ಶರೀರ)ವನ್ನು ಸಂಚಾಲನ ಮಾಡುವ ಬುದ್ಧಿರೂಪೀ ಸಾರಥಿಯು, ೧೬೦ **ಸಗಣಃ** - ಪ್ರಮಥಗಣಗಳೊಂದಿಗೆ ಇರುವವನು, ೧೬೧ **ಗಣಕಾಯಃ** - ಗಣಸ್ವರೂಪನು, ೧೬೨ **ಸುಕೀರ್ತಿಃ** - ಉತ್ತಮ ಕೀರ್ತಿಯುಳ್ಳವನು, ೧೬೩. **ಛಿನ್ನಸಂಶಯಃ** - ಸಂಶಯವನ್ನು ಕತ್ತರಿಸುವವನು. ॥೨೦॥

ಕಾಮದೇವಃ ಕಾಮಪಾಲೋ ಭಸ್ಮೋದ್ಧೂಲಿತವಿಗ್ರಹಃ ।
ಭಸ್ಮಪ್ರಿಯೋ ಭಸ್ಮಶಾಯೀ ಕಾಮೀ ಕಾಂತಃ ಕೃತಾಗಮಃ ॥೨೧॥

೧೬೪ **ಕಾಮದೇವಃ** - ಮನುಷ್ಯರು ಬಯಸುವ ಸಮಸ್ತ ಕಾಮನೆಗಳ ಅಧಿಷ್ಠಾತೃ ಪರಮದೇವನು, ೧೬೫ **ಕಾಮಪಾಲಃ** - ಸಕಾಮ ಭಕ್ತರ ಕಾಮನೆಗಳನ್ನು ಪೂರ್ಣಗೊಳಿಸುವವನು, ೧೬೬ **ಭಸ್ಮೋದ್ಧೂಲಿತವಿಗ್ರಹಃ** - ತನ್ನ ಶ್ರೀ ಅಂಗದಲ್ಲಿ ಭಸ್ಮವನ್ನು ಬಳಿದುಕೊಳ್ಳುವವನು, ೧೬೭ **ಭಸ್ಮಪ್ರಿಯಃ** - ಭಸ್ಮದ ಪ್ರೇಮಿ, ೧೬೮ **ಭಸ್ಮಶಾಯೀ** - ಭಸ್ಮದಲ್ಲಿ ಮಲಗುವವನು, ೧೬೯ **ಕಾಮೀ** - ತನ್ನ ಪ್ರಿಯ ಭಕ್ತರನ್ನು ಬಯಸುವವನು, ೧೭೦ **ಕಾಂತಃ** - ಪರಮ ಕಮನೀಯ ಪ್ರಾಣವಲ್ಲಭರೂಪೀ, ೧೭೧ **ಕೃತಾಗಮಃ** - ಸಮಸ್ತ ತಂತ್ರ ಶಾಸ್ತ್ರಗಳನ್ನು ರಚಿಸಿದವನು. ॥೨೧॥

ಸಮಾವರ್ತೋಽನಿವೃತ್ತಾತ್ಮಾ ಧರ್ಮಪುಂಜಃ ಸದಾಶಿವಃ ।
ಅಕಲ್ಮಷಶ್ಚತುರ್ಬಾಹುರ್ದುರಾವಾಸೋ ದುರಾಸದಃ ॥೨೨॥

೧೭೨ **ಸಮಾವರ್ತಃ** - ಸಂಸಾರ ಚಕ್ರವನ್ನು ಚೆನ್ನಾಗಿ ನಡೆಸುವವನು, ೧೭೩. **ಅನಿವೃತ್ತಾತ್ಮಾ** - ಎಲ್ಲೆಡೆ ಇರುವುದರಿಂದ ಅವನ ಆತ್ಮವು ಎಲ್ಲಿಯೂ ಬರಿದಾಗಿಲ್ಲ, ಅರ್ಥಾತ್ ಸರ್ವವ್ಯಾಪ್ತನು, ೧೭೪ **ಧರ್ಮಪುಂಜಃ** - ಧರ್ಮ ಅಥವಾ ಪುಣ್ಯದ ರಾಶಿಯು, ೧೭೫ **ಸದಾಶಿವಃ** - ನಿರಂತರ ಕಲ್ಯಾಣಕಾರಿಯು, ೧೭೬ **ಅಕಲ್ಮಷಃ** - ಪಾಪರಹಿತನು, ೧೭೭ **ಚತುರ್ಬಾಹುಃ** - ನಾಲ್ಕು ಭುಜಗಳುಳ್ಳವನು, ೧೭೮ **ದುರಾವಾಸಃ** - ಯೋಗಿಗಳೂ ಕೂಡ ಬಹಳ ಕುಷ್ಟದಿಂದ ತಮ್ಮ ಹೃದಯಮಂದಿರದಲ್ಲಿ ಧರಿಸುವರೋ ಅವನು, ೧೭೯ **ದುರಾಸದಃ** - ಪರಮ ದುರ್ಜಯ. ॥೨೨॥

ದುರ್ಲಭೋ ದುರ್ಗಮೋ ದುರ್ಗಃ ಸರ್ವಾಯುಧವಿಶಾರದಃ ।
ಅಧ್ಯಾತ್ಮಯೋಗನಿಲಯಃ ಸುತಂತುಸ್ತಂತುವರ್ಧನಃ ॥೨೩॥

೧೮೦ **ದುರ್ಲಭಃ** - ಭಕ್ತಿಹೀನರಿಗೆ ಕಷ್ಟದಿಂದ ದೊರೆಯುವಮನು, ೧೮೧ **ದುರ್ಗಮಃ** - ಅವನ ಬಳಿಗೆ ಹೋಗುವುದು ಯಾರಿಗೂ ಸುಲಭವಲ್ಲ ಅಂತವನು, ೧೮೨ **ದುರ್ಗಃ** - ಪಾಪ -ತಾಪದಿಂದ ರಕ್ಷಿಸಲಿಕ್ಕಾಗಿ ದುರ್ಗರೂಪೀ ಅಥವಾ ದುರ್ಜ್ಞೇಯ, ೧೮೩. **ಸರ್ವಾಯುಧವಿಶಾರದಃ** - ಸಂಪೂರ್ಣ ಅಸ್ತ್ರಗಳ ಪ್ರಯೋಗದಲ್ಲಿ ಕುಶಲನು, ೧೮೪ **ಅಧ್ಯಾತ್ಮಯೋಗನಿಲಯಃ** - ಅಧ್ಯಾತ್ಮಯೋಗದಲ್ಲಿ ಸ್ಥಿತನಾದವನು, ೧೮೫ **ಸುತಂತುಃ** - ಸುಂದರ ವಿಸ್ತೃತ ಜಗತ್‌ರೂಪೀ ತಂತುವುಳ್ಳವನು, ೧೮೬ **ತಂತುವರ್ಧನಃ** - ಜಗತ್‌ರೂಪೀ ತಂತುವನ್ನು ಬೆಳೆಸುವವನು. ॥೨೩॥

ಶುಭಾಂಗೋ ಲೋಕಸಾರಂಗೋ ಜಗದೀಶೋ ಜನಾರ್ದನಃ ।
ಭಸ್ಮಶುದ್ಧಿಕರೋ ಮೇರುರೋಜಸ್ವೀ ಶುದ್ಧವಿಗ್ರಹಃ ॥೨೪॥

೧೮೭ **ಶುಭಾಂಗಃ** - ಸುಂದರ ಅಂಗವುಳ್ಳವನು, ೧೮೮ **ಲೋಕಸಾರಂಗಃ**- ಲೋಕಸಾರಗ್ರಾಹೀ, ೧೮೯ **ಜಗದೀಶಃ** - ಜಗತ್ತಿನ ಸ್ವಾಮಿ, ೧೯೦ **ಜನಾರ್ದನಃ** - ಭಕ್ತರ ಯಾಚನೆಗೆ ಆಲಂಬನ (ನೆಲೆ), ೧೯೧ **ಭಸ್ಮಶುದ್ಧಿಕರಃ** - ಭಸ್ಮದಿಂದ ಶುದ್ಧಿಯನ್ನು ನೆರವೇರಿಸುವವನು, ೧೯೨ **ಮೇರುಃ** - ಸುಮೇರು ಪರ್ವತದಂತೆ ಕೇಂದ್ರರೂಪನು, ೧೯೩. **ಓಜಸ್ವೀ** - ತೇಜ-ಬಲಸಂಪನ್ನನು, ೧೯೪ **ಶುದ್ಧವಿಗ್ರಹಃ** - ನಿರ್ಮಲ ಶರೀರವುಳ್ಳವನು. ॥೨೪॥

ಅಸಾಧ್ಯಃ ಸಾಧುಸಾಧ್ಯಶ್ಚ ಭೃತ್ಯಮರ್ಕಟರೂಪಧೃಕ್ ।
ಹಿರಣ್ಯರೇತಾಃ ಪೌರಾಣಿಕೋ ರಿಪುಜೀವಹರೋ ಬಲೀ ॥೨೫॥

೧೯೫ **ಅಸಾಧ್ಯಃ** - ಸಾಧನೆ-ಭಜನೆಗಳಿಂದ ದೂರ ವಿರುವವರಿಗೆ ಅಲಭ್ಯನು, ೧೯೬ **ಸಾಧುಸಾಧ್ಯಃ** - ಸಾಧನೆ -ಭಜನೆಯಲ್ಲಿ ಪರಾಯಣರಾದ ಸತ್ಪುರುಷರಿಗೆ ಸುಲಭನು, ೧೯೭ **ಭೃತ್ಯಮರ್ಕಟರೂಪಧೃಕ್** - ಶ್ರೀರಾಮನ ಸೇವಕ ವಾನರ ಹನುಮಂತನ ರೂಪವನ್ನು ಧರಿಸುವವನು, ೧೯೮ **ಹಿರಣ್ಯರೇತಾಃ**-ಅಗ್ನಿಸ್ವರೂಪನು ಅಥವಾ ಸುವರ್ಣಮಯ ವೀರ್ಯವುಳ್ಳವನು , ೧೯೯ **ಪೌರಾಣಿಃ** - ಪುರಾಣಗಳಿಂದ ಪ್ರತಿಪಾದನು, ೨೦೦ **ರಿಪುಜೀವಹರಃ** - ಶತ್ರುಗಳ ಪ್ರಾಣವನ್ನು ಕಳೆಯುವವನು, ೨೦೧ **ಬಲೀ** - ಬಲ ಶಾಲಿಯು ॥೨೫॥

ಮಹಾಹ್ರದೋ ಮಹಾಗರ್ತಃ ಸಿದ್ಧವೃಂದಾರವಂದಿತಃ ।
ವ್ಯಾಘ್ರಚರ್ಮಾಂಬರೋ ವ್ಯಾಲೀ ಮಹಾಭೂತೋ ಮಹಾನಿಧಿಃ ॥೨೬॥

೨೦೨ **ಮಹಾಹ್ರದಃ** - ಪರಮಾನಂದದ ಮಹಾ ಸರೋವರನು, ೨೦೩. **ಮಹಾಗರ್ತಃ** - ಮಹಾನ್ ಆಕಾಶ ಸ್ವರೂಪಿಯು, ೨೦೪ **ಸಿದ್ಧವೃಂದಾರವಂದಿತಃ** - ಸಿದ್ಧರಿಂದ ಮತ್ತು ದೇವತೆಗಳಿಂದ ವಂದಿತನು. ೨೦೫ **ವ್ಯಾಘ್ರಚರ್ಮಾಂಬರಃ** - ವ್ಯಾಘ್ರಚರ್ಮವನ್ನು ಬಟ್ಟೆಯಂತೆ ಧರಿಸುವವನು, ೨೦೬ **ವ್ಯಾಲೀ**-ಸರ್ಪಗಳನ್ನು ಒಡವೆಗಳಂತೆ ಧರಿಸುವವನು, ೨೦೭ **ಮಹಾಭೂತಃ** - ತ್ರಿಕಾಲಗಳಲ್ಲಿಯೂ ಎಂದೂ ನಾಶವಾಗದಿರುವ ಮಹಾಭೂತಸ್ವರೂಪನು, ೨೦೮ **ಮಹಾನಿಧಿಃ** - ಎಲ್ಲರ ಮಹಾನಿವಾಸಸ್ಥಾನನು. ॥೨೬॥

ಅಮೃತಾಶೋಽಮೃತವಪುಃ ಪಾಂಚಜನ್ಯಃ ಪ್ರಭಂಜನಃ ।
ಪಂಚವಿಂಶತಿತತ್ತ್ವಸ್ಥಃ ಪಾರಿಜಾತಃ ಪರಾವರಃ ॥೨೭॥

೨೦೯ **ಅಮೃತಾಶಃ** - ಆಸೆಗಳು ಎಂದೂ ವಿಫಲವಾಗದಿರುವ ಅಮೋಘ ಸಂಕಲ್ಪನು, ೨೧೦ **ಅಮೃತವಪುಃ** - ಶರೀರವು ಎಂದೂ ನಾಶವಾಗದಿರುವ ನಿತ್ಯ ವಿಗ್ರಹನು, ೨೧೧ **ಪಾಂಚಜನ್ಯಃ** - ಪಾಂಚಜನ್ಯ ಎಂಬ ಶಂಖಸ್ವರೂಪನು, ೨೧೨ **ಪ್ರಭಂಜನಃ** - ವಾಯುಸ್ವರೂಪನು ಅಥವಾ ಸಂಹಾರಕಾರಿಯು, ೨೧೩. **ಪಂಚ ವಿಂಶತಿತತ್ತ್ವಸ್ಥಃ** - ಪ್ರಕೃತಿ, ಮಹತ್ತತ್ವ (ಬುದ್ಧಿ), ಅಹಂಕಾರ, ಚಕ್ಷು, ಶ್ರೋತ್ರ, ಪ್ರಾಣ, ರಸನೆ, ತ್ವಕ್, ವಾಕ್, ಪಾಣಿ, ಪಾಯು, ಪಾದ, ಉಪಸ್ಥ, ಮನ, ಶಬ್ದ, ಸ್ಪರ್ಶ, ರೂಪ ರಸ, ಗಂಧ, ಪೃಥಿವಿ, ಜಲ, ತೇಜ, ವಾಯು ಮತ್ತು ಆಕಾಶ - ಹೀಗೆ ಇಪ್ಪತ್ತನಾಲ್ಕು ಜಡ ತತ್ತ್ವಗಳೊಂದಿಗೆ ಇಪ್ಪತ್ತೈದನೆಯ ಚೇತನ- ತತ್ತ್ವಪುರುಷನಲ್ಲಿ ವ್ಯಾಪ್ತನು, ೨೧೪ **ಪಾರಿಜಾತಃ** - ಯಾಚಕರ ಇಚ್ಛೆಯನ್ನು ಪೂರ್ಣಮಾಡಲು ಕಲ್ಪವೃಕ್ಷನು, ೨೧೫ **ಪರಾವರಃ** ಕಾರಣ - ಕಾರ್ಯರೂಪನು. ॥೨೭॥

ಸುಲಭಃ ಸುವ್ರತಃ ಶೂರೋ ಬ್ರಹ್ಮವೇದ ನಿಧಿರ್ನಿಧಿಃ ।
ವರ್ಣಾಶ್ರಮಗುರುರ್ವರ್ಣೀ ಶತ್ರುಜಿಚ್ಛತ್ರುತಾಪನಃ ॥೨೮॥

೨೧೬ **ಸುಲಭಃ** - ನಿತ್ಯ - ನಿರಂತರ ಚಿಂತಿಸುವ ಏಕನಿಷ್ಠ ಶ್ರದ್ಧೆಯುಳ್ಳ ಭಕ್ತನಿಗೆ ಸುಲಭವಾಗಿ ದೊರೆಯುವಮನು,

೨೧೭ **ಸುವ್ರತಃ** – ಉತ್ತಮ ವ್ರತಧಾರಿ, ೨೧೮ **ಶೂರಃ** – ಶೌರ್ಯಸಂಪನ್ನನು, ೨೧೯ **ಬ್ರಹ್ಮ ವೇದನಿಧಿಃ** – ಬ್ರಹ್ಮಾ ಮತ್ತು ವೇದದ ಪ್ರಾದುರ್ಭಾವದ ಸ್ಥಾನನು, ೨೨೦ **ನಿಧಿಃ** – ಜಗತ್‌ರೂಪೀ ರತ್ನದ ಉತ್ಪತ್ತಿಸ್ಥಾನನು, ೨೨೧ **ವರ್ಣಾಶ್ರಮಗುರುಃ** – ವರ್ಣಗಳ ಹಾಗೂ ಆಶ್ರಮಗಳ ಗುರು (ಉಪದೇಷ್ಟಾ), ೨೨೨ **ವರ್ಣೀ** – ಬ್ರಹ್ಮಚಾರೀ, ೨೨೩. **ಶತ್ರುಜಿತ್** – ಅಂಧಕಾಸುರ ಮೊದಲಾದ ಶತ್ರುಗಳನ್ನು ಗೆಲ್ಲುವವನು, ೨೨೪ **ಶತ್ರುತಾಪನಃ** – ಶತ್ರುಗಳಿಗೆ ಸಂತಾಪವನ್ನುಂಟು ಮಾಡುವವನು. ॥೨೪॥

ಆಶ್ರಮಃ ಕ್ಷಪಣಃ ಕ್ಷಾಮೋ ಜ್ಞಾನವಾನಚಲೇಶ್ವರಃ ।
ಪ್ರಾಮಾಣಭೂತೋ ದುರ್ಜ್ಞೇಯಃ ಸಪರ್ಣೋ ವಾಯುವಾಹನಃ ॥೨೯॥

೨೨೫ **ಆಶ್ರಮಃ** – ಎಲ್ಲರ ವಿಶ್ರಾಮಸ್ಥಾನನು, ೨೨೬ **ಕ್ಷಪಣಃ** – ಜನ್ಮ-ಮರಣದ ಕಷ್ಟಗಳನ್ನು ಸಮೂಲವಾಗಿ ಇಲ್ಲವಾಗಿಸುವವನು, ೨೨೭ **ಕ್ಷಾಮಃ** – ಪ್ರಳಯಕಾಲದಲ್ಲಿ ಪ್ರಜೆಯನ್ನು ಕ್ಷೀಣಗೊಳಿಸುವವನು, ೨೨೮ **ಜ್ಞಾನವಾನ್** – ಜ್ಞಾನೀ, ೨೨೯ **ಅಚಲೇಶ್ವರಃ** – ಪರ್ವತಗಳ ಅಥವಾ ಸ್ಥಾವರ ಪದಾರ್ಥಗಳ ಸ್ವಾಮಿ, ೨೩೦ **ಪ್ರಾಮಾಣಭೂತಃ** – ನಿತ್ಯಸಿದ್ಧ ಪ್ರಮಾಣರೂಪೀ, ೨೩೧ **ದುರ್ಜ್ಞೇಯಃ** – ಕಷ್ಟದಿಂದ ತಿಳಿಯಲಾಗುವ, ೨೩೨ **ಸುಪರ್ಣಃ** – ವೇದಮಯ ಸುಂದರ ರೆಕ್ಕೆಗಳುಳ್ಳ ಗರುಡರೂಪೀ, ೨೩೩. **ವಾಯುವಾಹನಃ** – ತನ್ನ ಭಯದಿಂದ ವಾಯುವನ್ನು ಬೀಸುವಂತೆ ಮಾಡುವವನು. ॥೨೯॥

ಧನುರ್ಧರೋ ಧನುರ್ವೇದೋ ಗುಣರಾಶಿರ್ಗುಣಾಕರಃ ।
ಸತ್ಯಃ ಸತ್ಯಪರೋಽದೀನೋ ಧರ್ಮಾಂಗೋ ಧರ್ಮಸಾಧನಃ ॥೩೦॥

೨೩೪ **ಧನುರ್ಧರಃ** – ಪಿನಾಕಧಾರೀ ೨೩೫ **ಧನುರ್ವೇದಃ** – ಧನುರ್ವೇದವನ್ನು ಬಲ್ಲವನು, ೨೩೬ **ಗುಣರಾಶಿಃ** – ಅನಂತ ಕಲ್ಯಾಣಮಯ ಗುಣಗಳ ರಾಶಿ, ೨೩೭ **ಗುಣಾಕರಃ** – ಸದ್ಗುಣಗಳ ಗಣಿಯು, ೨೩೮ **ಸತ್ಯಃ** – ಸತ್ಯ ಸ್ವರೂಪೀ, ೨೩೯ **ಸತ್ಯಪರಃ** – ಸತ್ಯಪರಾಯಣ, ೨೪೦ **ಅದೀನಃ** – ದೀನತೆಯಿಂದ ರಹಿತ ಉದಾರಿಯು, ೨೪೧ **ಧರ್ಮಾಂಗಃ** – ಧರ್ಮಮಯ ವಿಗ್ರಹವುಳ್ಳವನು, ೨೪೨ **ಧರ್ಮಸಾಧನಃ** – ಧರ್ಮದ ಅನುಷ್ಠಾನ ಮಾಡುವವನು. ॥೩೦॥

ಅನಂತ ದೃಷ್ಟಿರಾನಂದೋ ದಂಡೋ ದಮಯಿತಾ ದಮಃ ।
ಅಭಿವಾದ್ಯೋ ಮಹಾಮಾಯೋ ವಿಶ್ವಕರ್ಮವಿಶಾರದಃ ॥೩೧॥

೨೪೩. **ಅನಂತದೃಷ್ಟಿ** – ಅಸೀಮ ದೃಷ್ಟಿಯುಳ್ಳವನು, ೨೪೪ **ಆನಂದಃ** – ಪರಮಾನಂದಮಯ, ೨೪೫ **ದಂಡಃ** – ದುಷ್ಟರನ್ನು ದಂಡಿಸುವವನು ಅಥವಾ ದಂಡಸ್ವರೂಪೀ, ೨೪೬ **ದಮಯಿತಾ** – ದುರ್ದಾಂತ ದಾನವರನ್ನೂ ದಮನ ಮಾಡುವವನು, ೨೪೭ **ದಮಃ** – ದಮನಸ್ವರೂಪೀ, ೨೪೮ **ಅಭಿವಾದ್ಯಃ** – ನಮಸ್ಕರಿಸಲು ಯೋಗ್ಯನು, ೨೪೯ **ಮಹಾಮಾಯಃ** – ಮಾಯಾವಿಗಳಿಗೂ ಮೋಹಿತಗೊಳ್ಳುವ ಮಹಾಮಾಯಾವೀ, ೨೫೦ **ವಿಶ್ವಕರ್ಮವಿಶಾರದಃ** – ಜಗತ್ತನ್ನು ಸೃಷ್ಟಿಸುವಲ್ಲಿ ಕುಶಲನು. ॥೩೧॥

ವೀತರಾಗೋ ವಿನೀತಾತ್ಮಾ ತಪಸ್ವೀ ಭೂತಭಾವನಃ ।
ಉನ್ಮತ್ತವೇಷಃ ಪ್ರಚ್ಛನ್ನೋ ಜಿತಕಾಮೋಽಜಿತಪ್ರಿಯಃ ॥೩೨॥

೨೫೧ **ವೀತರಾಗಃ** – ಪೂರ್ಣವಾಗಿ ವಿರಕ್ತನು, ೨೫೨ **ವಿನೀತಾತ್ಮಾ** – ಮನಸ್ಸಿನಿಂದ ವಿನಯಶೀಲನು ಅಥವಾ ಮನಸ್ಸನ್ನು ಮತದಲ್ಲಿ ಇಟ್ಟುಕೊಳ್ಳುವವನು, ೨೫೩. **ತಪಸ್ವೀ** – ತಪಸ್ಯಾಪರಾಯಣ, ೨೫೪ **ಭೂತಭಾವನಃ** – ಸಮಸ್ತ ಪ್ರಾಣಿಗಳ ಉತ್ಪಾದಕನು ಹಾಗೂ ರಕ್ಷಕನು, ೨೫೫ **ಉನ್ಮತ್ತವೇಷಃ** – ಹುಚ್ಚರಂತೆ ವೇಷವನ್ನು ಧರಿಸುವವನು, ೨೫೬ **ಪ್ರಚ್ಛನ್ನಃ** – ಮಾಯೆಯ ಪರದೆಯಲ್ಲಿ ಅಡಗಿರುವವನು, ೨೫೭ **ಜಿತಕಾಮಃ** – ಕಾಮವಿಜಯಿ, ೨೫೮ **ಅಜಿತಪ್ರಿಯಃ** – ಭಗವಾನ್ ವಿಷ್ಣುವಿನ ಪ್ರೇಮಿಯು. ॥೩೨॥

ಕಲ್ಯಾಣಪ್ರಕೃತಿಃ ಕಲ್ಪಃ ಸರ್ವಲೋಕಪ್ರಜಾಪತಿಃ ।
ತರಸ್ವೀ ತಾರಕೋ ಧೀಮಾನ್ ಪ್ರಧಾನಃ ಪ್ರಭುರವ್ಯಯಃ ॥೩೩॥

೨೫೯ **ಕಲ್ಯಾಣಪ್ರಕೃತಿಃ** – ಕಲ್ಯಾಣಕಾರೀ ಸ್ವಭಾವವುಳ್ಳವನು, ೨೬೦ **ಕಲ್ಪಃ** – ಸಮರ್ಥನು, ೨೬೧ **ಸರ್ವಲೋಕ ಪ್ರಜಾಪತಿಃ** – ಸಮಸ್ತ ಲೋಕಗಳ ಪ್ರಜೆಯಪಾಲಕನು, ೨೬೨ **ತರಸ್ವೀ** – ವೇಗವುಳ್ಳವನು, ೨೬೩. **ತಾರಕಃ** – ಉದ್ಧಾರಕನು, ೨೬೪ **ಧೀಮಾನ್** – ವಿಶುದ್ಧ ಬುದ್ಧಿಯುಳ್ಳವನು, ೨೬೫ **ಪ್ರಧಾನಃ** – ಎಲ್ಲರಿಂದ ಶ್ರೇಷ್ಠನು, ೨೬೬ **ಪ್ರಭುಃ** – ಸರ್ವಸಮರ್ಥನು, ೨೬೭ **ಅವ್ಯಯಃ** – ಅವಿನಾಶಿ ॥೩೩॥

ಲೋಕಪಾಲೋಽಂತರ್ಹಿತಾತ್ಮಾ ಕಲ್ಪಾದಿಃ ಕಮಲೇಕ್ಷಣಃ ।
ವೇದಶಾಸ್ತ್ರಾರ್ಥ ತತ್ತ್ವಜ್ಞೋಽನಿಯಮೋ ನಿಯತಾಶ್ರಯಃ ॥೩೪॥

೨೬೮ **ಲೋಕಪಾಲಃ** – ಸಮಸ್ತ ಲೋಕಗಳನ್ನು ರಕ್ಷಿಸುವವನು, ೨೬೯ **ಅಂತರ್ಹಿತಾತ್ಮಾ** – ಅಂತರ್ಯಾಮಿ ಆತ್ಮಾ ಅಥವಾ ಅದೃಶ್ಯ ಸ್ವರೂಪವುಳ್ಳವನು, ೨೭೦ **ಕಲ್ಪಾದಿಃ** – ಕಲ್ಪದ ಆದಿಕಾರಣನು, ೨೭೧ **ಕಮಲೇಕ್ಷಣಃ** – ಕಮಲದಂತೆ ಕಣ್ಣುಗಳುಳ್ಳವನು, ೨೭೨ **ವೇದಶಾಸ್ತ್ರಾರ್ಥ ತತ್ತ್ವಜ್ಞಃ** – ವೇದಗಳ ಮತ್ತು ಶಾಸ್ತ್ರಗಳ ಅರ್ಥ ಹಾಗೂ ತತ್ತ್ವವನ್ನು ತಿಳಿದವನು, ೨೭೩. **ಅನಿಯಮಃ** ನಿಯಂತ್ರಣರಹಿತನು, ೨೭೪ **ನಿಯತಾಶ್ರಯಃ** – ಎಲ್ಲರ ಸುನಿಶ್ಚಿತವಾದ ಆಶ್ರಯಸ್ಥಾನನು. ॥೩೪॥

ಚಂದ್ರಃ ಸೂರ್ಯಃ ಶನಿಃ ಕೇತುರ್ವರಾಂಗೋಃ ವಿದ್ರುಮಚ್ಛವಿಃ ।
ಭಕ್ತಿವಶ್ಯಃ ಪರಬ್ರಹ್ಮ ಮೃಗಬಾಣಾರ್ಪಣೋಽನಘಃ ॥೩.೫॥

೨೭೫ **ಚಂದ್ರಃ** – ಚಂದ್ರನಂತೆ ಆಹ್ಲಾದಕಾರಿಯು, ೨೭೬ **ಸೂರ್ಯಃ** – ಎಲ್ಲರ ಉತ್ಪತ್ತಿಯ ಕಾರಣೀಭೂತ ಸೂರ್ಯನು, ೨೭೭ **ಶನಿಃ** – ಶನೈಶ್ಚರರೂಪನು, ೨೭೮ **ಕೇತುಃ** – ಕೇತು ಎಂಬ ಗ್ರಹಸ್ವರೂಪೀ, ೨೭೯ **ವರಾಂಗಃ** – ಸುಂದರ ಶರೀರವುಳ್ಳವನು, ೨೮೦ **ವಿದ್ರುಮಚ್ಛವಿಃ** – ಹವಳದಂತೆ ಕೆಂಪು ಕಾಂತಿಯುಳ್ಳವನು, ೨೮೧ **ಭಕ್ತಿವಶ್ಯಃ** – ಭಕ್ತಿಯ ಮೂಲಕ ವಶನಾಗುವವನು, ೨೮೨ **ಪರಬ್ರಹ್ಮ**– ಪರಮಾತ್ಮನು, ೨೮೩ **ಮೃಗಬಾಣಾರ್ಪಣಃ** – ಮೃಗ ರೂಪಧಾರೀ ಯಜ್ಞವನ್ನು ಪ್ರಯೋಗಿಸುವವನು, ೨೮೪ **ಅನಘಃ** – ಪಾಪರಹಿತನು. ॥೩.೫॥

ಅದ್ರಿರದ್ರ್ಯಾಲಯಃ ಕಾಂತಃ ಪರಮಾತ್ಮಾ ಜಗದ್ಗುರುಃ ।
ಸರ್ವಕರ್ಮಾಲಯಸ್ತುಷ್ಟೋ ಮಂಗಲ್ಯೋ ಮಂಗಲಾವೃತಃ ॥೩.೬॥

೨೮೫ **ಅದ್ರಿಃ** – ಕೈಲಾಸವೇ ಮೊದಲಾದ ಪರ್ವತ ಸ್ವರೂಪನು, ೨೮೬ **ಅದ್ರ್ಯಾಲಯಃ** – ಕೈಲಾಸ ಮತ್ತು ಮಂದರವೇ ಆದಿ ಪರ್ವತಗಳಲ್ಲಿ ವಾಸಿಸುವವನು, ೨೮೭ **ಕಾಂತಃ** – ಎಲ್ಲರ ಪ್ರಿಯತಮನು, ೨೮೮ **ಪರಮಾತ್ಮಾ** – ಪರಬ್ರಹ್ಮ ಪರಮೇಶ್ವರನು, ೨೮೯ **ಜಗದ್ಗುರುಃ** – ಸಮಸ್ತ ಪ್ರಪಂಚದ ಗುರು, ೨೯೦ **ಸರ್ವಕರ್ಮಾಲಯಃ** – ಸಮಸ್ತ ಕರ್ಮಗಳ ಆಶ್ರಯಸ್ಥಾನನು, ೨೯೧ **ತುಷ್ಟಃ** – ಸದಾ ಪ್ರಸನ್ನನು, ೨೯೨ **ಮಂಗಲ್ಯಃ** – ಮಂಗಲಕಾರೀ, ೨೯೩. **ಮಂಗಲಾವೃತಃ** – ಮಂಗಲಕಾರಿಣೀ ಶಕ್ತಿಯಿಂದ ಕೂಡಿದವನು. ॥೩.೬॥

ಮಹಾತಪಾ ದೀರ್ಘತಪಾಃ ಸ್ಥವಿಷ್ಠಃ ಸ್ಥವಿರೋ ಧ್ರುವಃ ।
ಅಹಃಸಂವತ್ಸರೋ ವ್ಯಾಪ್ತಿಃ ಪ್ರಮಾಣಂ ಪರಮಂ ತಪಃ ॥೩.೭॥

೨೯೪ **ಮಹಾತಪಾಃ** – ಮಹಾನ್ ತಪಸ್ವೀ, ೨೯೫ **ದೀರ್ಘತಪಾಃ** – ದೀರ್ಘಕಾಲದವರೆಗೆ ತಪಸ್ಸು ಮಾಡುವವನು, ೨೯೬ **ಸ್ಥವಿಷ್ಠಃ** – ಅತ್ಯಂತ ಸ್ಥೂಲನು, ೨೯೭ **ಸ್ಥವಿರೋಧ್ರುವಃ** – ಅತಿ ಪ್ರಾಚೀನ ಹಾಗೂ ಅತ್ಯಂತ ಸ್ಥಿರನು, ೨೯೮ **ಅಹಃಸಂವತ್ಸರಃ** – ದಿನ ಹಾಗೂ ಸಂವತ್ಸರಾದಿ ಕಾಲರೂಪದಿಂದ ಸ್ಥಿತ, ಅಂಶಕಾಲ ಸ್ವರೂಪನು, ೨೯೯ **ವ್ಯಾಪ್ತಿಃ** – ವ್ಯಾಪಕಸ್ವರೂಪಿಯು, ೩೦೦ **ಪ್ರಮಾಣಮ್** – ಪ್ರತ್ಯಕ್ಷಾದಿ ಪ್ರಮಾಣಸ್ವರೂಪನು, ೩೦೧ **ಪರಮಂ ತಪಃ** – ಉತ್ಕೃಷ್ಟ ತಪಸ್ಸು ಸ್ವರೂಪನು. ॥೩.೭॥

ಸಂವತ್ಸರಕರೋ ಮಂತ್ರಪ್ರತ್ಯಯಃ ಸರ್ವದರ್ಶನಃ ।
ಅಜಃ ಸರ್ವೇಶ್ವರಃ ಸಿದ್ಧೋ ಮಹಾರೇತಾ ಮಹಾಬಲಃ ॥೩.೮॥

೩೦೨ **ಸಂವತ್ಸರಕರಃ** – ಸಂವತ್ಸರ ಮೊದಲಾದ ಕಾಲವಿಭಾಗದ ಉತ್ಪಾದಕನು, ೩೦೩. **ಮಂತ್ರಪ್ರತ್ಯಯಃ** – ವೇದಾದಿ ಮಂತ್ರಗಳಿಂದ ಪ್ರತೀತ (ಪ್ರತ್ಯಕ್ಷ)ನಾಗುವವನು, ೩೦೪ **ಸರ್ವದರ್ಶನಃ** – ಎಲ್ಲರ ಸಾಕ್ಷಿಯು, ೩೦೫ **ಅಜಃ** – ಅಜನ್ಮಾ, ೩೦೬ **ಸರ್ವೇಶ್ವರಃ** – ಎಲ್ಲರ ಶಾಸಕನು, ೩೦೭ **ಸಿದ್ಧಃ** –ಸಿದ್ಧಿಗಳ ಆಶ್ರಯನು, ೩೦೮ **ಮಹಾರೇತಾಃ** – ಶ್ರೇಷ್ಠ ವೀರ್ಯವುಳ್ಳವನು, ೩೦೯ **ಮಹಾಬಲಃ**–ಪ್ರಮಥಗಣಗಳ ಮಹತೀ ಸೈನ್ಯದಿಂದ ಸಂಪನ್ನನು. ॥೩.೮॥

ಯೋಗೀ ಯೋಗ್ಯೋ ಮಹಾತೇಜಾಃ ಸಿದ್ಧಿಃ ಸರ್ವಾದಿರಗ್ರಹಃ ।
ವಸುರ್ವಸುಮನಾಃ ಸತ್ಯಃ ಸರ್ವಪಾಪಹರೋ ಹರಃ ॥೩.೯॥

೩೧೦ **ಯೋಗೀಯೋಗ್ಯಃ** – ಸುಯೋಗ್ಯ ಯೋಗೀ, ೩೧೧ **ಮಹಾತೇಜಾಃ** – ಮಹಾತೇಜದಿಂದ ಸಂಪನ್ನನು, ೩೧೨ **ಸಿದ್ಧಿಃ** – ಸಮಸ್ತ ಸಾಧನೆಗಳ ಫಲನು, ೩೧೩. **ಸರ್ವಾದಿಃ** – ಎಲ್ಲ ಭೂತಗಳ ಆದಿಕಾರಣನು, ೩೧೪ **ಅಗ್ರಹಃ** – ಇಂದ್ರಿಯಗಳ ಗ್ರಹಣಶಕ್ತಿಯ ಅವಿಷಯನು, ೩೧೫ **ವಸುಃ** – ಎಲ್ಲ ಪ್ರಾಣಿಗಳ ವಾಸಸ್ಥಾನನು, ೩೧೬ **ವಸುಮನಾಃ** – ಉದಾರ ಮನವುಳ್ಳವನು, ೩೧೭ **ಸತ್ಯಃ** – ಸತ್ಯ ಸ್ವರೂಪನು, ೩೧೮ **ಸರ್ವ ಪಾಪಹರೋ ಹರಃ** – ಸಮಸ್ತ ಪಾಪಗಳನ್ನು ಅಪಹರಣ ಮಾಡುವುದರಿಂದ ಹರನೆಂದು ಪ್ರಸಿದ್ಧನು. ॥೩.೯॥

ಸುಕೀರ್ತಿ ಶೋಭನಃ ಶ್ರೀಮಾನ್ ವೇದಾಂಗೋ ವೇದವಿನ್ಮುನಿಃ ।
ಭ್ರಾಜಿಷ್ಣುರ್ಭೋಜನಂ ಭೋಕ್ತಾ ಲೋಕನಾಥೋ ದುರಾಧರಃ ॥೪೦॥

೩೧೯ **ಸುಕೀರ್ತಿಶೋಭನಃ** – ಉತ್ತಮ ಕೀರ್ತಿಯಿಂದ ಸುಶೋಭಿತನಾಗಿರುವವನು, ೩೨೦ **ಶ್ರೀಮಾನ್** –ವಿಭೂತಿ ಸ್ವರೂಪಾ ಉಮೆಯಿಂದ ಸಂಪನ್ನನು, ೩೨೧ **ವೇದಾಂಗಃ** – ವೇದರೂಪೀ ಅಂಗಗಳುಳ್ಳವನು, ೩೨೨ **ವೇದವಿನ್ಮುನಿಃ** – ವೇದಗಳ ವಿಚಾರಮಾಡುವ ಮನಸುಳ್ಳ ಮುನಿ, ೩೨೩. **ಭ್ರಾಜಿಷ್ಣುಃ** – ವಿಕರಸ ಪ್ರಕಾಶ ಸ್ವರೂಪನು, ೩೨೪ **ಭೋಜನಮ್** – ಜ್ಞಾನಿಗಳಿಂದ ಅನುಭವಿಸಲು ಯೋಗ್ಯ ಅಮೃತಸ್ವರೂಪೀ, ೩೨೫ **ಭೋಕ್ತಾ** – ಪುರುಷರೂಪದಿಂದ ಉಪಭೋಕ್ತಾ, ೩೨೬ **ಲೋಕನಾಥಃ** – ಭಗವಾನ್ ವಿಶ್ವನಾಥನು, ೩೨೭ **ದುರಾಧರಃ** – ಅಜಿತೇಂದ್ರಿಯ ಪುರುಷರ ಆರಾಧನೆಗೆ ಅತ್ಯಂತ ಕಠಿಣನಾಗಿರುವವನು. ॥೪೦॥

ಅಮೃತಃ ಶಾಶ್ವತಃ ಶಾಂತೋ ಬಾಣಹಸ್ತಃಪ್ರತಾಪವಾನ್ ।
ಕಮಂಡಲುಧರೋ ಧನ್ವೀ ಅವಾಜ್ಮನಸಗೋಚರಃ ॥೪೧॥

೩೨೮ **ಅಮೃತಃ ಶಾಶ್ವತಃ** – ಸನಾತನ ಅಮೃತಸ್ವರೂಪೀ, ೩೨೯ **ಶಾಂತಃ** – ಶಾಂತಿಮಯನು, ೩೩೦ **ಬಾಣಹಸ್ತಃ ಪ್ರತಾಪವಾನ್** – ಕೈಯಲ್ಲಿ ಬಾಣವನ್ನು ಧರಿಸಿದ ಪ್ರತಾಪೀ ವೀರನು, ೩೩೧ **ಕಮಂಡಲುಧರಃ** – ಕಮಂಡಲುವನ್ನು ಧರಿಸಿದವನು, ೩೩೨ **ಧನ್ವೀ** – ಪಿನಾಕಧಾರೀ, ೩೩೩.

ಅವಾಙ್ಮನಸಗೋಚರಃ - ಮನಸ್ಸು ಮತ್ತು ವಾಣಿಗೆ ಅಗೋಚರನು. ॥೪೧॥

ಅತೀಂದ್ರಿಯೋ ಮಹಾಮಾಯಃ ಸರ್ವಾವಾಸಶ್ಚತುಷ್ಪಥಃ ।
ಕಾಲಯೋಗೀ ಮಹಾನಾದೋ ಮಹೋತ್ಸಾಹೋ ಮಹಾಬಲಃ ॥೪೨॥

೨.೨.೪ **ಅತೀಂದ್ರಿಯೋ ಮಹಾಮಾಯಃ** - ಇಂದ್ರಿಯಾತೀತನು ಹಾಗೂ ಮಹಾಮಾಯಾವಿಯು, ೨.೨.೫ **ಸರ್ವಾವಾಸಃ** - ಎಲ್ಲರ ವಾಸಸ್ಥಾನನು, ೨.೨.೬ **ಚತುಷ್ಪಥಃ** - ನಾಲ್ಕು ಪುರುಷಾರ್ಥಗಳ ಸಿದ್ಧಿಯ ಏಕಮಾತ್ರ ಮಾರ್ಗನು, ೨.೨.೭ **ಕಾಲಯೋಗಿ** - ಪ್ರಳಯ ಸಮಯದಲ್ಲಿ ಎಲ್ಲರನ್ನು ಕಾಲನಿಂದ ಸಂಯುಕ್ತಗೊಳಿಸುವವನು, ೨.೨.೮ **ಮಹಾನಾದಃ** - ಗಂಭೀರ ಶಬ್ದವನ್ನು ಮಾಡುವವನು ಅಥವಾ ಅನಾಹತನಾದ ನಾದ ರೂಪನು, ೨.೨.೯ **ಮಹೋತ್ಸಾಹೋ ಮಹಾಬಲಃ** - ಮಹಾನ್ ಉತ್ಸಾಹ ಮತ್ತು ಬಲದಿಂದ ಸಂಪನ್ನನು. ॥೪೨॥

ಮಹಾಬುದ್ಧಿರ್ಮಹಾವೀರ್ಯೋ ಭೂತಚಾರೀ ಪುರಂದರಃ ।
ನಿಶಾಚರಃ ಪ್ರೇತಚಾರೀ ಮಹಾಶಕ್ತಿರ್ಮಹಾದ್ಯುತಿಃ ॥೪೩॥

೨.೪೦ **ಮಹಾಬುದ್ಧಿಃ** - ಶ್ರೇಷ್ಠಬುದ್ಧಿಯುಳ್ಳವನು, ೨.೪೧ **ಮಹಾವೀರ್ಯಃ** - ಅನಂತ ಪರಾಕ್ರಮಿ, ೨.೪೨ **ಭೂತಚಾರೀ** - ಭೂತಗಣಗಳೊಂದಿಗೆ ಸಂಚರಿಸುವವನು, ೨.೪೩. **ಪುರಂದರಃ** - ತ್ರಿಪುರಸಂಹಾರಕನು, ೨.೪೪ **ನಿಶಾಚರಃ** - ರಾತ್ರಿಯಲ್ಲಿ ಸಂಚರಿಸುವವನು, ೨.೪೫ **ಪ್ರೇತಚಾರೀ** - ಪ್ರೇತಗಳೊಂದಿಗೆ ಸಂಚರಿಸುವವನು, ೨.೪೬ **ಮಹಾಶಕ್ತಿರ್ಮಹಾದ್ಯುತಿಃ** - ಅನಂತಶಕ್ತಿ ಹಾಗೂ ಶ್ರೇಷ್ಠ ಕಾಂತಿಯಿಂದ ಸಂಪನ್ನನು. ॥೪೩॥

ಅನಿರ್ದೇಶ್ಯವಪುಃ ಶ್ರೀಮಾನ್ ಸರ್ವಾಚಾರ್ಯಮನೋಗತಿಃ ।
ಬಹುಶ್ರುತೋಽಮಹಾಮಾಯೋ ನಿಯತಾತ್ಮಾ ಧ್ರುವೋಽಧ್ರುವಃ ॥೪೪॥

೨.೪೭ **ಅನಿರ್ದೇಶ್ಯವಪುಃ** - ಅನಿರ್ವಚನೀಯ ಸ್ವರೂಪವುಳ್ಳವನು, ೨.೪೮ **ಶ್ರೀಮಾನ್** - ಐಶ್ವರ್ಯಶಾಲಿ, ೨.೪೯ **ಸರ್ವಾಚಾರ್ಯ ಮನೋಗತಿಃ** - ಎಲ್ಲರಿಗಾಗಿ ಅವಿಚಾರ್ಯ ಮನೋಗತಿಯುಳ್ಳವನು, ೨.೫೦ **ಬಹುಶ್ರುತಃ** - ಬಹಳ ತಿಳಿದವನು, ಅಥವಾ ಸರ್ವಜ್ಞನು, ೨.೫೧ **ಅಮಹಾಮಾಯಃ** - ಅತಿದೊಡ್ಡ ಮಾಯೆಯ ಪ್ರಭಾವವು ಬೀಳದಿರುವವನು, ೨.೫೨ **ನಿಯತಾತ್ಮಾ** - ಮನಸ್ಸನ್ನು ವಶದಲ್ಲಿರಿಸಿಕೊಂಡವನು, ೨.೫೩. **ಧ್ರುವೋಽಧ್ರುವಃ** - ಧ್ರುವ (ನಿತ್ಯಕಾರಣ) ಮತ್ತು ಅಧ್ರುವ (ಅನಿತ್ಯಕಾರ್ಯ) ರೂಪನು. ॥೪೪॥

ಓಜಸ್ತೇಜೋದ್ಯುತಿಧರೋ ಜನಕಃ ಸರ್ವಶಾಸನಃ ।
ನೃತ್ಯ ಪ್ರಿಯೋ ನಿತ್ಯನೃತ್ಯಃ ಪ್ರಕಾಶಾತ್ಮಾ ಪ್ರಕಾಶಕಃ ॥೪೫॥

೨.೫೪ **ಓಜಸ್ತೇಜೋದ್ಯುತಿ ಧರಃ** - ಓಜ (ಪ್ರಾಣ ಮತ್ತು ಬಲ), ತೇಜ (ಶೌರ್ಯಾದಿ ಗುಣಗಳು) ಹಾಗೂ ಜ್ಞಾನದ ದೀಪ್ತಿಯನ್ನು ಧರಿಸುವವನು, ೨.೫೫ **ಜನಕಃ** - ಎಲ್ಲರ ಉತ್ಪಾದಕನು, ೨.೫೬ **ಸರ್ವಶಾಸನಃ** - ಎಲ್ಲರ ಶಾಸಕನು, ೨.೫೭ **ನೃತ್ಯಪ್ರಿಯಃ** - ನೃತ್ಯದ ಪ್ರೇಮಿ, ೨.೫೮ **ನಿತ್ಯನೃತ್ಯಃ** - ಪ್ರತಿದಿನವೂ ತಾಂಡವ ನೃತ್ಯವನ್ನಾಡುವವನು, ೨.೫೯ **ಪ್ರಕಾಶಾತ್ಮಾ** - ಪ್ರಕಾಶಸ್ವರೂಪನು, ೨.೬೦ **ಪ್ರಕಾಶಕಃ** - ಸೂರ್ಯಾದಿಗಳಿಗೂ ಪ್ರಕಾಶವನ್ನು ಕೊಡುವವನು. ॥೪೫॥

ಸ್ಪಷ್ಟಾಕ್ಷರೋ ಬುಧೋ ಮಂತ್ರಃ ಸಮಾನಃ ಸಾರಸಂಪ್ಲವಃ ।
ಯುಗಾದಿಕೃದ್ಯುಗಾವರ್ತೋ ಗಂಭೀರೋ ವೃಷವಾಹನಃ ॥೪೬॥

೨.೬೧ **ಸ್ಪಷ್ಟಾಕ್ಷರಃ** - ಓಂಕಾರಸ್ವರೂಪ ಸ್ಪಷ್ಟ ಅಕ್ಷರವುಳ್ಳವನು, ೨.೬೨ **ಬುಧಃ** - ಜ್ಞಾನವಂತನು, ೨.೬೩. **ಮಂತ್ರಃ** - ಋಕ್, ಸಾಮ ಮತ್ತು ಯಜುರ್ವೇದಗಳ ಮಂತ್ರಸ್ವರೂಪನು, ೨.೬೪ **ಸಮಾನಃ** - ಎಲ್ಲರ ಕುರಿತು ಸಮಾನ ಭಾವವನ್ನಿರಿಸುವವನು, ೨.೬೫ **ಸಾರಸಂಪ್ಲವಃ** - ಸಂಸಾರ ಸಾಗರದಿಂದ ದಾಟಿ ಹೋಗಲು ನೌಕೆಯಂತಿರುವವನು, ೨.೬೬ **ಯುಗಾದಿಕೃದ್ಯುಗಾವರ್ತಃ** - ಯುಗಾದಿಯನ್ನು ಪ್ರಾರಂಭಿಸುವವನು ಹಾಗೂ ನಾಲ್ಕು ಯುಗಗಳನ್ನು ಚಕ್ರದಂತೆ ತಿರುಗಿಸುವವನು, ೨.೬೭ **ಗಂಭೀರಃ** - ಗಾಂಭೀರ್ಯದಿಂದ ಕೂಡಿದವನು, ೨.೬೮ **ವೃಷವಾಹನಃ** - ನಂದಿ ಎಂಬ ವೃಷಭವು ವಾಹನವಾಗಿ ಉಳ್ಳವನು. ॥೪೬॥

ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ ಸುಲಭಃ ಸಾರಶೋಧನಃ ।
ತೀರ್ಥರೂಪಸ್ತೀರ್ಥನಾಮಾ ತೀರ್ಥದೃಶ್ಯಸ್ತು ತೀರ್ಥದಃ ॥೪೭॥

೨.೬೯ **ಇಷ್ಟಃ** - ಪರಮಾನಂತ ಸ್ವರೂಪಿಯಾದ್ದರಿಂದ ಸರ್ವಪ್ರಿಯನು, ೨.೭೦ **ಅವಿಶಿಷ್ಟಃ** - ಸಂಪೂರ್ಣ ವಿಶೇಷಣಗಳಿಂದ ರಹಿತನು, ೨.೭೧ **ಶಿಷ್ಟೇಷ್ಟಃ** - ಶಿಷ್ಟ ಪುರುಷರ ಇಷ್ಟದೇವನು, ೨.೭೨ **ಸುಲಭಃ** - ಅನನ್ಯ ಚಿತ್ತದಿಂದ ನಿರಂತರ ಸ್ಮರಿಸುವ ಭಕ್ತರಿಗೆ ಸುಲಭವಾಗಿ ದೊರೆಯುವವನು, ೨.೭೩. **ಸಾರಶೋಧನಃ** - ಸಾರತತ್ತ್ವವನ್ನು ಹುಡುಕುವವನು, ೨.೭೪ **ತೀರ್ಥರೂಪಃ** - ತೀರ್ಥಸ್ವರೂಪನು, ೨.೭೫ **ತೀರ್ಥನಾಮಾ** - ತೀರ್ಥನಾಮಧಾರಿಯು ಅಥವಾ ತನ್ನ ನಾಮದಿಂದ ಭವಸಾಗರವನ್ನು ದಾಟಿಸುವವನು, ೨.೭೬ **ತೀರ್ಥದೃಶ್ಯಃ** - ತೀರ್ಥಯಾತ್ರೆಯಿಂದ ತನ್ನ ಸ್ವರೂಪದ ದರ್ಶನ ಮಾಡಿಸುವವನು ಅಥವಾ ಗುರುಕೃಪೆಯಿಂದ ಪ್ರತ್ಯಕ್ಷನಾಗುವವನು, ೨.೭೭ **ತೀರ್ಥದಃ** - ಚರಣೋದಕ ತೀರ್ಥವನ್ನು ಕೊಡುವವನು. ॥೪೭॥

ಅಪಾಂನಿಧಿರಧಿಷ್ಠಾನಂ ದುರ್ಜಯೋ ಜಯಕಾಲವಿತ್ ।
ಪ್ರತಿಷ್ಠಿತಃ ಪ್ರಮಾಣಜ್ಞೋ ಹಿರಣ್ಯಕವಚೋ ಹರಿಃ ॥೪೮॥

೩.೭೮ **ಅಪಾಂನಿಧಿಃ** – ಜಲದ ನಿಧಾನ ಸಮುದ್ರರೂಪನು, ೩.೭೯ **ಅಧಿಷ್ಠಾನಮ್** – ಉಪಾದಾನ ಕಾರಣದಿಂದ ಎಲ್ಲ ಪ್ರಾಣಿಗಳ ಆಶ್ರಯನು ಅಥವಾ ಜಗತ್‌ರೂಪೀ ಪ್ರಪಂಚದ ಅಧಿಷ್ಠಾನನು, ೩.೮೦ **ದುರ್ಜಯಃ** – ಜಯಿಸಲು ಸಾಧ್ಯವಿಲ್ಲದವನು, ೩.೮೧ **ಜಯಕಾಲವಿತ್** – ವಿಜಯದ ಸಂದರ್ಭವನ್ನು ತಿಳಿಯುವವನು, ೩.೮೨ **ಪ್ರತಿಷ್ಠಿತಃ** – ತನ್ನ ಮಹಿಮೆಯಲ್ಲಿ ಸ್ಥಿತನು, ೩.೮೩. **ಪ್ರಮಾಣಜ್ಞಃ**–ಪ್ರಮಾಣಗಳನ್ನು ತಿಳಿದವನು, ೩.೮೪ **ಹಿರಣ್ಯಕವಚಃ** – ಸುವರ್ಣಮಯ ಕವಚವನ್ನು ಧರಿಸುವವನು, ೩.೮೫ **ಹರಿಃ** –ಶ್ರೀಹರಿಸ್ವರೂಪನು. ॥೪೮॥

ವಿಮೋಚನಃ ಸುರಗಣೋ ವಿದ್ಯೇಶೋ ಬಿಂದುಸಂಶ್ರಯಃ।
ಬಾಲರೂಪೋಽಬಲೋನ್ಮತ್ತೋಽವಿಕರ್ತಾ ಗಹನೋ ಗುಹಃ ॥೪೯॥

೩.೮೬ **ವಿಮೋಚನಃ** – ಸಂಸಾರ ಬಂಧನದಿಂದ ಎಂದೆಂದಿಗೂ ಬಿಡಿಸುವವನು, ೩.೮೭ **ಸುರಗಣಃ** – ದೇವ ಸಮುದಾಯರೂಪೀ, ೩.೮೮ **ವಿದ್ಯೇಶಃ** – ಸಮಸ್ತ ವಿದ್ಯೆಗಳ ಒಡೆಯ, ೩.೮೯ **ಬಿಂದುಸಂಶ್ರಯಃ** – ಬಿಂದುರೂಪೀ ಪ್ರಣವದ ಆಶ್ರಯನು, ೩.೯೦ **ಬಾಲರೂಪಃ** – ಬಾಲಕನ ರೂಪವನ್ನು ಧರಿಸುವವನು, ೩.೯೧ **ಅಬಲೋನ್ಮತ್ತಃ** – ಬಲದಿಂದ ಉನ್ಮತ್ತನಾಗದಿರುವವನು, ೩.೯೨ **ಅವಿಕರ್ತಾ** – ವಿಕಾರರಹಿತನು, ೩.೯೩. **ಗಹನಃ** – ದುರ್ಭೋಧಸ್ವರೂಪೀ ಅಥವಾ ಅಗಮ್ಯನು, ೩.೯೪ **ಗುಹಃ** – ಮಾಯೆಯಿಂದ ತನ್ನ ಸ್ವರೂಪವನ್ನು ಮರೆಮಾಡಿಕೊಳ್ಳುವವನು. ॥೪೯॥

ಕರಣಂ ಕಾರಣಂ ಕರ್ತಾ ಸರ್ವಬಂಧ ವಿಮೋಚನಃ ।
ವ್ಯವಸಾಯೋ ವ್ಯವಸ್ಥಾನಃ ಸ್ಥಾನದೋ ಜಗದಾದಿಜಃ ॥೫೦॥

೩.೯೫ **ಕರಣಮ್** – ಪ್ರಪಂಚದ ಉತ್ಪತ್ತಿಯ ಎಲ್ಲಕ್ಕಿಂತ ದೊಡ್ಡ ಸಾಧನನು, ೩.೯೬ **ಕಾರಣಮ್** – ಜಗತ್ತಿನ ಉಪಾದಾನ ಮತ್ತು ನಿಮಿತ್ತ ಕಾರಣನು, ೩.೯೭ **ಕರ್ತಾ** – ಎಲ್ಲವನ್ನು ರಚಿಸುವವನು, ೩.೯೮ **ಸರ್ವಬಂಧವಿಮೋಚನಃ** – ಎಲ್ಲ ಬಂಧನಗಳಿಂದ ಬಿಡಿಸುವವನು, ೩.೯೯ **ವ್ಯವಸಾಯಃ** – ನಿಶ್ಚಯಾತ್ಮಕ ಜ್ಞಾನಸ್ವರೂಪನು, ೪೦೦ **ವ್ಯವಸ್ಥಾನಃ** – ಇಡೀ ಜಗತ್ತಿನ ವ್ಯವಸ್ಥೆ ಮಾಡುವವನು, ೪೦೧ **ಸ್ಥಾನದಃ** – ಧ್ರುವ ಮೊದಲಾದ ಭಕ್ತರಿಗೆ ಅವಿಚಲ ಸ್ಥಿತಿಯನ್ನು ಕೊಡಿಸುವವನು, ೪೦೨ **ಜಗದಾದಿಜಃ** – ಹಿರಣ್ಯಗರ್ಭ ರೂಪದಿಂದ ಜಗತ್ತಿನ ಆದಿಯಲ್ಲಿ ಪ್ರಕಟನಾಗುವವನು. ॥೫೦॥

ಗುರುದೋ ಲಲಿತೋಽಭೇದೋ ಭಾವಾತ್ಮಾತ್ಮಸ್ಥಿತಃ ಸಂಸ್ಥಿತಃ ।
ವೀರೇಶ್ವರೋ ವೀರಭದ್ರೋ ವೀರಾಸನ ವಿಧಿರ್ವಿರಾಟ್ ॥೫೧॥

೪೦೩. **ಗುರುದಃ** – ಶ್ರೇಷ್ಠವಸ್ತುಗಳನ್ನು ಕೊಡುವವನು, ಅಥವಾ ಜಿಜ್ಞಾಸುಗಳಿಗೆ ಗುರುವನ್ನು ದೊರಕಿಸಿ ಕೊಡುವವನು, ೪೦೪ **ಲಲಿತಃ** – ಸುಂದರ ಸ್ವರೂಪವುಳ್ಳವನು, ೪೦೫ **ಅಭೇದಃ** – ಭೇದರಹಿತನು, ೪೦೬ **ಭಾವಾತ್ಮಾತ್ಮನಿ ಸಂಸ್ಥಿತಃ** – ಸತ್ಸ್ವರೂಪ ಆತ್ಮನಲ್ಲಿ ಪ್ರತಿಷ್ಠಿತನು, ೪೦೭ **ವೀರೇಶ್ವರಃ** – ವೀರ ಶಿರೋಮಣಿ, ೪೦೮ **ವೀರಭದ್ರಃ** – ವೀರಭದ್ರ ಎಂಬ ಗಣಾಧ್ಯಕ್ಷನು, ೪೦೯ **ವೀರಾಸನವಿಧಿಃ** – ವೀರಾಸನದಿಂದ ಕುಳಿತುಕೊಳ್ಳುವವನು, ೪೧೦ **ವಿರಾಟ್** – ಅಖಿಲಬ್ರಹ್ಮಾಂಡಸ್ವರೂಪನು. ॥೫೧॥

ವೀರಚೂಡಾಮಣಿರ್ವೇತ್ತಾ ಚಿದಾನಂದೋ ನದೀಧರಃ ।
ಆಜ್ಞಾಧಾರ ಸ್ತ್ರಿಶೂಲೀ ಚ ಶಿಪಿವಿಷ್ಟಃ ಶಿವಾಲಯಃ ॥೫೨॥

೪೧೧ **ವೀರಚೂಡಾಮಣಿಃ** – ವೀರರಲ್ಲಿ ಶ್ರೇಷ್ಠನು, ೪೧೨ **ವೇತ್ತಾ** – ವಿದ್ವಾಂಸನು, ೪೧೩. **ಚಿದಾನಂದಃ** – ವಿಜ್ಞಾನಾನಂದಸ್ವರೂಪೀ, ೪೧೪ **ನದೀಧರಃ** – ತಲೆಯಲ್ಲಿ ಗಂಗೆಯನ್ನು ಧರಿಸಿರುವವನು, ೪೧೫ **ಆಜ್ಞಾಧಾರಃ** – ಆಜ್ಞೆಯನ್ನು ಪಾಲಿಸುವವನು, ೪೧೬ **ತ್ರಿಶೂಲೀ** – ತ್ರಿಶೂಲಧಾರಿ, ೪೧೭ **ಶಿಪಿವಿಷ್ಟಃ** – ತೇಜೋಮಯ ಕಿರಣಗಳಿಂದ ಕೂಡಿದವನು, ೪೧೮ **ಶಿವಾಲಯಃ** – ಭಗವತಿ ಶಿವೆಯ ಆಶ್ರಯನು. ॥೫೨॥

ವಾಲಖಿಲ್ಯೋ ಮಹಾಚಾಪಸ್ತಿಗ್ಮಾಂಶುರ್ಬಧಿರಃ ಖಗಃ ।
ಅಭಿರಾಮಃ ಸುಶರಣಃ ಸುಬ್ರಹ್ಮಣ್ಯಃ ಸುಧಾಪತಿಃ ॥೫೩॥

೪೧೯ **ವಾಲಖಿಲ್ಯಃ** – ವಾಲಖಿಲ್ಯ ಋಷಿರೂಪೀ, ೪೨೦ **ಮಹಾಚಾಪಃ** – ಮಹಾಧನುರ್ಧರನು, ೪೨೧ **ತಿಗ್ಮಾಂಶುಃ** – ಸೂರ್ಯರೂಪೀ, ೪೨೨ **ಬಧಿರಃ** – ಲೌಕಿಕ ಚರ್ಚೆಯನ್ನು ಕೇಳದವನು, ೪೨೩. **ಖಗಃ** – ಆಕಾಶಚಾರೀ, ೪೨೪ **ಅಭಿರಾಮಃ** – ಪರಮ ಸುಂದರನು, ೪೨೫ **ಸುಶರಣಃ** – ಎಲ್ಲರಿಗಾಗಿ ಸುಂದರ ಆಶ್ರಯರೂಪನು, ೪೨೬ **ಸುಬ್ರಹ್ಮಣ್ಯಃ** – ಬ್ರಾಹ್ಮಣರ ಪರಮ ಹಿತೈಷಿ, ೪೨೭ **ಸುಧಾಪತಿಃ** – ಅಮೃತಕಲಶದ ರಕ್ಷಕನು. ॥೫೩॥

ಮಘವಾನ್ ಕೌಶಿಕೋ ಗೋಮಾನ್ವಿರಾಮಃ ಸರ್ವಸಾಧನಃ ।
ಲಲಾಟಾಕ್ಷೋ ವಿಶ್ವದೇಹಃ ಸಾರಃ ಸಂಸಾರಚಕ್ರಭೃತ್ ॥೫೪॥

೪೨೮ **ಮಘವಾನ್ ಕೌಶಿಕಃ** – ಕುಶಿಕವಂಶೀಯ ಇಂದ್ರಸ್ವರೂಪೀ, ೪೨೯ **ಗೋಮಾನ್** – ಪ್ರಕಾಶ ಕಿರಣಗಳಿಂದ ಕೂಡಿದವನು, ೪೩೦ **ವಿರಾಮಃ** – ಸಮಸ್ತ ಪ್ರಾಣಿಗಳ ಲಯದ ಸ್ಥಾನನು, ೪೩೧ **ಸರ್ವಸಾಧನಃ** – ಸಮಸ್ತ ಕಾಮನೆಗಳನ್ನು ಸಿದ್ಧಗೊಳಿಸುವವನು, ೪೩೨ **ಲಲಾಟಾಕ್ಷಃ** – ಹಣೆಯಲ್ಲಿ ಮೂರನೆಯ ಕಣ್ಣನ್ನು ಧರಿಸಿದವನು, ೪೩೩. **ವಿಶ್ವದೇಹಃ** – ಜಗತ್ಸ್ವರೂಪೀ, ೪೩೪

ಸಾರಃ – ಸಾರತತ್ತ್ವರೂಪೀ, ೪೨.೫ **ಸಂಸಾರಚಕ್ರಭೃತ್** – ಜಗತ್‌ಚಕ್ರವನ್ನು ಧರಿಸಿದವನು. ॥೫೪॥

ಅಮೋಘದಂಡೋ ಮಧ್ಯಸ್ಥೋ ಹಿರಣ್ಯೋ ಬ್ರಹ್ಮವರ್ಚಸೀ ।
ಪರಮಾರ್ಥಃ ಪರೋ ಮಾಯೀ ಶಂಬರೋ ವ್ಯಾಘ್ರಲೋಚನಃ ॥೫೫॥

೪೨.೬ **ಅಮೋಘದಂಡಃ** – ತನ್ನ ದಂಡವು ಎಂದೂ ವ್ಯರ್ಥವಾಗದಿರುವವನು, ೪೨.೭ **ಮಧ್ಯಸ್ಥಃ** – ಉದಾಸೀನನು, ೪೨.೮ **ಹಿರಣ್ಯಃ** – ಸುವರ್ಣ ಅಥವಾ ತೇಜಃಸ್ವರೂಪ, ೪೨.೯ **ಬ್ರಹ್ಮವರ್ಚಸೀ** – ಬ್ರಹ್ಮತೇಜದಿಂದ ಸಂಪನ್ನ, ೪೪೦ **ಪರಮಾರ್ಥಃ** – ಮೋಕ್ಷರೂಪೀ ಪರಮಾರ್ಥವನ್ನು ಕೊಡುವವನು, ೪೪೧ **ಪರೋಮಾಯೀ** – ಮಹಾಮಾಯಾವಿ, ೪೪೨ **ಶಂಬರಃ** – ಕಲ್ಯಾಣಪ್ರದ, ೪೪೩. **ವ್ಯಾಘ್ರಲೋಚನಃ** – ಹುಲಿಯಂತೆ ಭಯಾನಕ ಕಣ್ಣುಗಳುಳ್ಳವನು. ॥೫೫॥

ರುಚಿರ್ವಿರಂಚಿಃ ಸ್ವರ್ಬಂಧುರ್ವಾಚಸ್ಪತಿರಹರ್ಪತಿಃ ।
ರವಿರ್ವಿರೋಚನಃ ಸ್ಕಂದಃ ಶಾಸ್ತಾ ವೈವಸ್ವತೋ ಯಮಃ ॥೫೬॥

೪೪೪ **ರುಚಿಃ** – ದೀಪ್ತಿರೂಪನು, ೪೪೫ **ವಿರಂಚಿಃ** – ಬ್ರಹ್ಮಾಸ್ವರೂಪನು, ೪೪೬ **ಸ್ವರ್ಬಂಧುಃ** – ಸ್ವರ್ಲೋಕದಲ್ಲಿ ಬಂಧುವಿನಂತೆ ಸುಖಪ್ರದನು, ೪೪೭ **ವಾಚಸ್ಪತಿಃ** – ವಾಣಿಯ ಅಧಿಪತಿ, ೪೪೮ **ಅಹರ್ಪತಿಃ** – ಹಗಲಿನ ಸ್ವಾಮಿ ಸೂರ್ಯರೂಪೀ, ೪೪೯ **ರವಿಃ** – ಸಮಸ್ತ ರಸಗಳನ್ನು ಶೋಷಣ ಮಾಡುವವನು, ೪೫೦ **ವಿರೋಚನಃ** – ವಿವಿಧ ರೀತಿಯಿಂದ ಪ್ರಕಾಶವನ್ನು ಹರಡುವವನು, ೪೫೧ **ಸ್ಕಂದಃ** – ಕಾರ್ತಿಕೇಯಸ್ವಾಮಿರೂಪನು, ೪೫೨ **ಶಾಸ್ತಾ ವೈವಸ್ವತೋ ಯಮಃ** – ಎಲ್ಲರ ಮೇಲೆ ಶಾಸನ ಮಾಡುವ ಸೂರ್ಯಕುಮಾರ ಯಮನು. ॥೫೬॥

ಯುಕ್ತಿರುನ್ನತಕೀರ್ತಿಶ್ಚ ಸಾನುರಾಗಃ ಪರಂಜಯಃ ।
ಕೈಲಾಸಾಧಿಪತಿಃ ಕಾಂತಃ ಸವಿತಾ ರವಿಲೋಚನಃ ॥೫೭॥

೪೫೩. **ಯುಕ್ತಿರುನ್ನತಕೀರ್ತಿಃ** – ಅಷ್ಟಾಂಗಯೋಗ ಸ್ವರೂಪೀ ಹಾಗೂ ಊರ್ಧ್ವಲೋಕದಲ್ಲಿ ಹರಡಿದ ಕೀರ್ತಿಯುಳ್ಳವನು, ೪೫೪ **ಸಾನುರಾಗಃ** – ಭಕ್ತರಮೇಲೆ ಪ್ರೇಮವನ್ನಿರಿಸುವವನು, ೪೫೫ **ಪರಂಜಯಃ** – ಬೇರೆಯವರ ಮೇಲೆ ವಿಜಯ ಪಡೆಯುವವನು, ೪೫೬ **ಕೈಲಾಸಾಧಿಪತಿಃ** – ಕೈಲಾಸದ ಒಡೆಯನು, ೪೫೭ **ಕಾಂತಃ** – ಕಮನೀಯ ಅಥವಾ ಕಾಂತಿಯುಳ್ಳವನು. ೪೫೮ **ಸವಿತಾ** – ಸಮಸ್ತ ಜಗತ್ತನ್ನು ಉತ್ಪನ್ನ ಮಾಡುವವನು, ೪೫೯ **ರವಿಲೋಚನಃ** – ಸೂರ್ಯರೂಪೀ ಕಣ್ಣುಳ್ಳವನು. ॥೫೭॥

ವಿದ್ವತ್ತಮೋ ವೀತಭಯೋ ವಿಶ್ವಭರ್ತಾನಿವಾರಿತಃ ।
ನಿತ್ಯೋ ನಿಯತಕಲ್ಯಾಣಃ ಪುಣ್ಯಶ್ರವಣಕೀರ್ತನಃ ॥೫೮॥

೪೬೦ **ವಿದ್ವತ್ತಮಃ** – ವಿದ್ವಾಂಸರಲ್ಲಿ ಸರ್ವಶ್ರೇಷ್ಠನು, ಪರಮ ವಿದ್ವಾಂಸ ೪೬೧ **ವೀತಭಯಃ** – ಎಲ್ಲ ರೀತಿಯ ಭಯದಿಂದ ರಹಿತನು, ೪೬೨ **ವಿಶ್ವಭರ್ತಾ** – ಜಗತ್ತನ್ನು ಸಾಕುವವನು, ೪೬೩. **ಅನಿವಾರಿತಃ** – ಯಾರಿಂದಲೂ ತಡೆಯಲ್ಪಡದವನು, ೪೬೪ **ನಿತ್ಯಃ** – ಸತ್ಯಸ್ವರೂಪೀ, ೪೬೫ **ನಿಯತಕಲ್ಯಾಣಃ** – ಸುನಿಶ್ಚಿತವಾಗಿ ಕಲ್ಯಾಣಕಾರೀ, ೪೬೬ **ಪುಣ್ಯಶ್ರವಣಕೀರ್ತನಃ** – ನಾಮ, ಗುಣ, ಮಹಿಮೆ, ಸ್ವರೂಪಗಳ ಶ್ರವಣ, ಕೀರ್ತನೆಗಳ ಪರಮ ಪಾವನನಾದವನು. ॥೫೮॥

ದೂರಶ್ರವಾ ವಿಶ್ವಸಹೋ ಧ್ಯೇಯೋ ದುಃಸ್ವಪ್ನನಾಶನಃ ।
ಉತ್ತಾರಣೋ ದುಷ್ಕೃತಿಹಾ ವಿಜ್ಞೇಯೋ ದುಸ್ಸಹೋಽಭವಃ ॥೫೯॥

೪೬೭ **ದೂರಶ್ರವಾಃ** – ಸರ್ವವ್ಯಾಪಿಯಾದ್ದರಿಂದ ದೂರದ ಮಾತನ್ನು ಕೇಳುವವನು, ೪೬೮ **ವಿಶ್ವಸಹಃ** – ಭಕ್ತರ ಎಲ್ಲ ಅಪರಾಧಗಳನ್ನು ಕೃಪಾಪೂರ್ವಕ ಸಹಿಸುವವನು, ೪೬೯ **ಧ್ಯೇಯಃ** – ಧ್ಯಾನಿಸಲು ಯೋಗ್ಯನು, ೪೭೦ **ದುಃಸ್ವಪ್ನನಾಶನಃ** – ಚಿಂತಿಸಿದ ಮಾತ್ರದಿಂದ ಕೆಟ್ಟ ಸ್ವಪ್ನಗಳನ್ನು ನಾಶ ಮಾಡುವವನು, ೪೭೧ **ಉತ್ತಾರಣಃ** – ಸಂಸಾರ ಸಾಗರದಿಂದ ದಾಟಿಸುವವನು, ೪೭೨ **ದುಷ್ಕೃತಿಹಾ** – ಪಾಪಗಳನ್ನು ನಾಶ ಮಾಡುವವನು, ೪೭೩. **ವಿಜ್ಞೇಯಃ** – ತಿಳಿಯಲು ಯೋಗ್ಯನು, ೪೭೪ **ದುಸ್ಸಹಃ** – ಬೇರೆಯವರಿಗೆ ಅವನ ವೇಗವನ್ನು ಸಹಿಸಲು ಕಷ್ಟಕರನು, ೪೭೫ **ಅಭವಃ** – ಸಂಸಾರ ಬಂಧನದಿಂದ ರಹಿತನು ಅಥವಾ ಅಜನ್ಮಾ. ॥೫೯॥

ಅನಾದಿರ್ಭೂರ್ಭುವೋ ಲಕ್ಷ್ಮೀಃ ಕಿರೀಟೀ ತ್ರಿದಶಾಧಿಪಃ ।
ವಿಶ್ವಗೋಪ್ತಾ ವಿಶ್ವಕರ್ತಾ ಸುವೀರೋ ರುಚಿರಾಂಗದಃ ॥೬೦॥

೪೭೬ **ಅನಾದಿಃ** – ಆದಿಯೇ ಇಲ್ಲದವನು, ಎಲ್ಲರ ಕಲ್ಯಾಣಸ್ವರೂಪನು, ೪೭೭ **ಭೂರ್ಭುವೋ ಲಕ್ಷ್ಮೀಃ** – ಭೂರ್ಲೋಕ ಮತ್ತು ಭುವರ್ಲೋಕಗಳ ಶೋಭೆಯು, ೪೭೮ **ಕಿರೀಟಿ** – ಮುಕುಟಧಾರೀ, ೪೭೯ **ತ್ರಿದಶಾಧಿಪಃ** – ದೇವತೆಗಳ ಸ್ವಾಮಿಯು, ೪೮೦ **ವಿಶ್ವಗೋಪ್ತಾ** – ಜಗತ್ತಿನ ರಕ್ಷಕನು, ೪೮೧ **ವಿಶ್ವಕರ್ತಾ** – ಜಗತ್ತನ್ನು ಸೃಷ್ಟಿಸುವವನು, ೪೮೨ **ಸುವೀರಃ** – ವೀರಶ್ರೇಷ್ಠನು, ೪೮೩. **ರುಚಿರಾಂಗದಃ** – ಸುಂದರ ತೋಳ್ಬಂದಿಗಳನ್ನು ಧರಿಸುವವನು. ॥೬೦॥

ಜನನೋ ಜನಜನ್ಮಾದಿಃ ಪ್ರೀತಿಮಾನ್ನೀತಿಮಾನ್ ಧವಃ ।
ವಸಿಷ್ಠಃ ಕಶ್ಯಪೋ ಭಾನುರ್ಭೀಮೋ ಭೀಮಪರಾಕ್ರಮಃ ॥೬೧॥

೪೮೪ **ಜನನಃ** – ಪ್ರಾಣಿಮಾತ್ರರಿಗೆ ಜನ್ಮ ನೀಡುವವನು, ೪೮೫ **ಜನಜನ್ಮಾದಿಃ** – ಹುಟ್ಟುವವರ ಹುಟ್ಟಿನ ಮೂಲ ಕಾರಣನು, ೪೮೬ **ಪ್ರೀತಿಮಾನ್** – ಪ್ರಸನ್ನನು, ೪೮೭ **ನೀತಿಮಾನ್** – ನೀತಿಪರಾಯಣನು, ೪೮೮ **ಧವಃ** – ಎಲ್ಲರ ಸ್ವಾಮಿಯು, ೪೮೯ **ವಸಿಷ್ಠಃ** – ಮನಸ್ಸು, ಇಂದ್ರಿಯಗಳನ್ನು

ವಶದಲ್ಲಿರಿಸಿಕೊಂಡವನು, ಅಥವಾ ವಸಿಷ್ಠ ಋಷಿಯು, ೪೯೦ **ಕಶ್ಯಪಃ** – ದ್ರಷ್ಟಾ ಅಥವಾ ಕಶ್ಯಪ ಮುನಿರೂಪೀ, ೪೯೧ **ಭಾನುಃ** – ಪ್ರಕಾಶಮಾನ ಅಥವಾ ಸೂರ್ಯರೂಪೀ, ೪೯೨ **ಭೀಮಃ** – ದುಷ್ಟರಿಗೆ ಭಯವನ್ನುಂಟು ಮಾಡುವವನು, ೪೯೩. **ಭೀಮಪರಾಕ್ರಮಃ** – ಅತಿಶಯ ಭಯದಾಯಕ ಪರಾಕ್ರಮದಿಂದ ಕೂಡಿದವನು. ॥೬೧॥

ಪ್ರಣವಃ ಸತ್ಪಥಾಚಾರೋ ಮಹಾಕೋಶೋ ಮಹಾಧನಃ।
ಜನ್ಮಾಧಿಪೋ ಮಹಾದೇವಃ ಸಕಲಾಗಮಪಾರಗಃ॥೬೨॥

೪೯೪ **ಪ್ರಣವಃ** – ಓಂಕಾರಸ್ವರೂಪನು, ೪೯೫ **ಸತ್ಪಥಾಚಾರಃ** – ಸತ್ಪುರುಷರ ಮಾರ್ಗದಲ್ಲಿ ನಡೆಯುವವನು, ೪೯೬ **ಮಹಾಕೋಶಃ** – ಅನ್ನಮಯಾದಿ ಐದು ಕೋಶಗಳನ್ನು ತನ್ನೊಳಗೆ ಧರಿಸುವ ಕಾರಣ ಮಹಾಕೋಶರೂಪನು, ೪೯೭ **ಮಹಾಧನಃ** – ಅಪರಿಮಿತ ಐಶ್ವರ್ಯವುಳ್ಳವನು ಅಥವಾ ಕುಬೇರನಿಗೆ ಧನವನ್ನು ಕೊಟ್ಟ ಕಾರಣ ಮಹಾಧನಿಕನು, ೪೯೮ **ಜನ್ಮಾಧಿಪಃ** – ಜನ್ಮ (ಉತ್ಪಾದನೆ) ರೂಪೀ ಕಾರ್ಯದ ಅಧ್ಯಕ್ಷ ಬ್ರಹ್ಮನು, ೪೯೯ **ಮಹಾದೇವಃ** – ಸರ್ವೋತ್ಕೃಷ್ಟದೇವತೆ, ೫೦೦ **ಸಕಲಾಗಮಪಾರಗಃ** – ಸಮಸ್ತ ಶಾಸ್ತ್ರಗಳಲ್ಲಿ ಪಾರಂಗತ ವಿದ್ವಾಂಸನು. ॥೬೨॥

ತತ್ತ್ವಂ ತತ್ತ್ವವಿದೇಕಾತ್ಮಾ ವಿಭುರ್ವಿಶ್ವವಿಭೂಷಣಃ ।
ಋಷಿರ್ಬ್ರಾಹ್ಮಣ ಐಶ್ವರ್ಯಜನ್ಮ ಮೃತ್ಯುಜರಾತಿಗಃ ॥೬೩॥

೫೦೧ **ತತ್ತ್ವಮ್** – ಯಥಾರ್ಥ ತತ್ತ್ವರೂಪೀ, ೫೦೨ **ತತ್ತ್ವವಿತ್** – ಯಥಾರ್ಥ ತತ್ತ್ವವನ್ನು ಪೂರ್ಣವಾಗಿ ತಿಳಿದವನು, ೫೦೩. **ಏಕಾತ್ಮಾ** – ಅದ್ವಿತೀಯ ಆತ್ಮರೂಪೀ, ೫೦೪ **ವಿಭುಃ** – ಸರ್ವತ್ರವ್ಯಾಪಕನು, ೫೦೫ **ವಿಶ್ವಭೂಷಣಃ** – ಸಮಸ್ತ ಜಗತ್ತನ್ನು ಉತ್ತಮಗುಣಗಳಿಂದ ವಿಭೂಷಿತಗೊಳಿಸುವವನು, ೫೦೬ **ಋಷಿಃ** – ಮಂತ್ರದ್ರಷ್ಟಾ, ೫೦೭ **ಬ್ರಾಹ್ಮಣಃ** – ಬ್ರಹ್ಮವೇತ್ತಾ, ೫೦೮ **ಐಶ್ವರ್ಯಜನ್ಮ ಮೃತ್ಯುಜರಾತಿಗಃ** – ಐಶ್ವರ್ಯ, ಜನ್ಮ, ಮೃತ್ಯು, ಮತ್ತು ಜರೆಯಿಂದ ಅತೀತನು. ॥೬೩॥

ಪಂಚಯಜ್ಞಸಮುತ್ಪತ್ತಿರ್ವಿಶ್ವೇಶೋ ವಿಮಲೋದಯಃ।
ಆತ್ಮಯೋನಿರನಾದ್ಯಂತೋ ವತ್ಸಲೋ ಭಕ್ತಲೋಕಧೃಕ್ ॥೬೪॥

೫೦೯ **ಪಂಚಯಜ್ಞ ಸಮುತ್ಪತ್ತಿಃ** – ಪಂಚಮಹಾಯಜ್ಞಗಳ ಉತ್ಪತ್ತಿಗೆ ಕಾರಣನು, ೫೧೦ **ವಿಶ್ವೇಶಃ** – ವಿಶ್ವನಾಥನು, ೫೧೧ **ವಿಮಲೋದಯಃ** – ನಿರ್ಮಲ ಅಭ್ಯುದಯವನ್ನು ಕರುಣಿಸುವ ಧರ್ಮರೂಪನು, ೫೧೨ **ಆತ್ಮಯೋನಿಃ** – ಸ್ವಯಂಭೂ, ೫೧೩. **ಅನಾದ್ಯಂತಃ** – ಆದಿ ಅಂತ್ಯದಿಂದ ರಹಿತನು, ೫೧೪ **ವತ್ಸಲಃ** – ಭಕ್ತರ ಕುರಿತು ವಾತ್ಸಲ್ಯ ಸ್ನೇಹದಿಂದ ಕೂಡಿದವನು, ೫೧೫ **ಭಕ್ತಲೋಕಧೃಕ್** – ಭಕ್ತರ ಆಶ್ರಯನು. ॥೬೪॥

ಗಾಯತ್ರೀವಲ್ಲಭಃ ಪ್ರಾಂಶುರ್ವಿಶ್ವಾವಾಸಃ ಪ್ರಭಾಕರಃ ।
ಶಿಶುರ್ಗಿರಿರತಃ ಸಮ್ರಾಟ ಸುಷೇಣಃ ಸುರಶತ್ರುಹಾ ॥೬೫॥

೫೧೬ **ಗಾಯತ್ರೀವಲ್ಲಭಃ** – ಗಾಯತ್ರೀಮಂತ್ರದ ಪ್ರೇಮಿ, ೫೧೭ **ಪ್ರಾಂಶುಃ** – ಎತ್ತರವಾದ ಶರೀರವುಳ್ಳವನು, ೫೧೮ **ವಿಶ್ವಾವಾಸಃ** – ಇಡೀ ಜಗತ್ತಿನ ಆವಾಸಸ್ಥಾನವು, ೫೧೯ **ಪ್ರಭಾಕರಃ** – ಸೂರ್ಯರೂಪನು, ೫೨೦ **ಶಿಶುಃ** – ಬಾಲಕರೂಪೀ, ೫೨೧ **ಗಿರಿರತಃ** – ಕೈಲಾಸಪರ್ವತದಲ್ಲಿ ರಮಣ ಮಾಡುವವನು, ೫೨೨ **ಸಮ್ರಾಟ್** – ದೇವೇಶ್ವರರಿಗೂ ಈಶ್ವರನು, ೫೨೩. **ಸುಷೇಣಃ ಸುರಶತ್ರುಹಾ** – ಪ್ರಮಥಗಣಗಳ ಸುಂದರ ಸೈನ್ಯದಿಂದ ಕೂಡಿದವನು ಹಾಗೂ ದೇವಶತ್ರುಗಳನ್ನು ಸಂಹರಿಸುವವನು. ॥೬೫॥

ಅಮೋಘೋಽರಿಷ್ಟನೇಮಿಶ್ಚ ಕುಮುದೋ ವಿಗತಜ್ವರಃ ।
ಸ್ವಯಂಜ್ಯೋತಿಸ್ತನುಜ್ಯೋತಿರಾತ್ಮಜ್ಯೋತಿರಚಂಚಲಃ ॥೬೬॥

೫೨೪ **ಅಮೋಘೋಽರಿಷ್ಟನೇಮಿಃ** – ಅಮೋಘ ಸಂಕಲ್ಪವುಳ್ಳವನು, ಮಹರ್ಷಿ ಕಶ್ಯಪರೂಪನು, ೫೨೫ **ಕುಮುದಃ** – ಭೂತಳವನ್ನು ಆಹ್ಲಾದಿತಗೊಳಿಸುವ ಚಂದ್ರ ರೂಪನು, ೫೨೬ **ವಿಗತಜ್ವರಃ** – ಚಿಂತಾರಹಿತ, ೫೨೭ **ಸ್ವಯಂ ಜ್ಯೋತಿಸ್ತನುಜ್ಯೋತಿಃ** – ತನ್ನ ಪ್ರಕಾಶದಿಂದಲೇ ಪ್ರಕಾಶಿತ ನಾಗುವ ಸೂಕ್ಷ್ಮಜ್ಯೋತಿಃ ಸ್ವರೂಪನು, ೫೨೮ **ಆತ್ಮಜ್ಯೋತಿಃ** – ತನ್ನ ಸ್ವರೂಪಭೂತ ಜ್ಞಾನದ ಪ್ರಭೆಯಿಂದ ಪ್ರಕಾಶಿತನು, ೫೨೯ **ಅಚಂಚಲಃ** – ಚಂಚಲತೆಯಿಲ್ಲದವನು. ॥೬೬॥

ಪಿಂಗಲಃ ಕಪಿಲಶ್ಮಶ್ರುರ್ಭಾಲನೇತ್ರ ಸ್ತ್ರಯೀತನುಃ ।
ಜ್ಞಾನ ಸ್ಕಂದೋ ಮಹಾನೀತಿರ್ವಿಶ್ವೋತ್ಪತ್ತಿರುಪಪ್ಲವಃ ॥೬೭॥

೫೩೦ **ಪಿಂಗಲಃ** – ಪಿಂಗಳ ವರ್ಣವುಳ್ಳವನು, ೫೩೧ **ಕಪಿಲಶ್ಮಶ್ರುಃ** – ಕಪಿಲ ವರ್ಣದ ಗಡ್ಡ-ಮೀಸೆಯುಳ್ಳ ದುರ್ವಾಸ ಮುನಿಯ ರೂಪದಲ್ಲಿ ಅವತರಿಸಿದವನು, ೫೩೨ **ಭಾಲನೇತ್ರಃ** – ಹಣೆಯಲ್ಲಿ ಮೂರನೆಯ ಕಣ್ಣನ್ನು ಧರಿಸಿದವನು, ೫೩೩. **ತ್ರಯೀತನುಃ** – ಮೂರು ಲೋಕಗಳ ಅಥವಾ ಮೂರು ವೇದಗಳ ಸ್ವರೂಪವುಳ್ಳವನು, ೫೩೪ **ಜ್ಞಾನಸ್ಕಂದೋ ಮಹಾನೀತಿಃ** – ಜ್ಞಾನಪ್ರದ ಮತ್ತು ಶ್ರೇಷ್ಠ ನೀತಿಯುಳ್ಳವನು, ೫೩೫ **ವಿಶ್ವೋತ್ಪತ್ತಿಃ** – ಜಗತ್ತಿನ ಉತ್ಪಾದಕನು, ೫೩೬ **ಉಪಪ್ಲವಃ** – ಸಂಹಾರಕಾರಿ. ॥೬೭॥

ಭಗೋ ವಿವಸ್ವಾನಾದಿತ್ಯೋ ಯೋಗಪಾರೋ ದಿವಸ್ಪತಿಃ ।
ಕಲ್ಯಾಣಗುಣನಾಮಾ ಚ ಪಾಪಹಾ ಪುಣ್ಯದರ್ಶನಃ ॥೬೮॥

೫೩೭ **ಭಗೋ ವಿವಸ್ವಾನಾದಿತ್ಯಃ** – ಅದಿತಿನಂದನ ಭಗ ಹಾಗೂ ವಿವಸ್ವಾನ್, ೫೩೮ **ಯೋಗಪಾರಃ** – ಯೋಗ ವಿದ್ಯೆಯಲ್ಲಿ ಪಾರಂಗತನು, ೫೩೯ **ದಿವಸ್ಪತಿಃ** – ಸ್ವರ್ಗ

ಲೋಕದ ಸ್ವಾಮಿ, ೫೪೦ **ಕಲ್ಯಾಣಗುಣನಾಮ** - ಕಲ್ಯಾಣಕರ ಗುಣ ಮತ್ತು ನಾಮವುಳ್ಳವನು, ೫೪೧ **ಪಾಪಹಾ** -ಪಾಪನಾಶಕನು, ೫೪೨ **ಪುಣ್ಯದರ್ಶನಃ** - ಪುಣ್ಯಜನಕ ದರ್ಶನವುಳ್ಳವನು ಅಥವಾ ಅವನ ದರ್ಶನವು ಪುಣ್ಯದಿಂದಲೇ ಆಗುವುದು. ॥೬೮॥

ಉದಾರ ಕೀರ್ತಿರುದ್ಯೋಗೀ ಸದ್ಯೋಗೀ ಸದಸನ್ಮಯಃ ।
ನಕ್ಷತ್ರಮಾಲೀ ನಾಕೇಶಃ ಸ್ವಾಧಿಷ್ಠಾನಪದಾಶ್ರಯಃ ॥೬೯॥

೫೪೩. **ಉದಾರಕೀರ್ತಿಃ**-ಉತ್ತಮ ಕೀರ್ತಿಯುಳ್ಳವನು, ೫೪೪ **ಉದ್ಯೋಗೀ** - ಉದ್ಯೋಗಶೀಲನು, ೫೪೫ **ಸದ್ಯೋಗೀ** - ಶ್ರೇಷ್ಠಯೋಗೀ, ೫೪೬ **ಸದಸನ್ಮಯಃ** - ಸದಸತ್ಸ್ವರೂಪೀ, ೫೪೭ **ನಕ್ಷತ್ರಮಾಲೀ** - ನಕ್ಷತ್ರಗಳ ಮಾಲೆಯಿಂದ ಅಲಂಕೃತ ಆಕಾಶಸ್ವರೂಪನು, ೫೪೮ **ನಾಕೇಶಃ** - ಸ್ವರ್ಗದ ಒಡೆಯ, ೫೪೯ **ಸ್ವಾಧಿಷ್ಠಾನ ಪದಾಶ್ರಯಃ** - ಸ್ವಾಧಿಷ್ಠಾನ ಚಕ್ರದ ಆಶ್ರಯನು. ॥೬೯॥

ಪವಿತ್ರಃ ಪಾಪಹಾರೀ ಚ ಮಣಿಪುರೋ ನಭೋಗತಿಃ ।
ಹೃತ್ಪುಂಡರೀಕ ಮಾಸೀನಃ ಶಕ್ರಃ ಶಾಂತೋ ವೃಷಾಕಪಿಃ॥೭೦॥

೫೫೦ **ಪವಿತ್ರಃ ಪಾಪಹಾರೀ** - ನಿತ್ಯಶುದ್ಧ ಹಾಗೂ ಪಾಪನಾಶಕನು, ೫೫೧ **ಮಣಿಪೂರಃ** - ಮಣಿಪೂರ ಎಂಬ ಚಕ್ರಸ್ವರೂಪನು, ೫೫೨ **ನಭೋಗತಿಃ** - ಆಕಾಶಚಾರೀ, ೫೫೩. **ಹೃತ್ಪುಂಡರೀಕಮಾಸೀನಃ** - ಹೃದಯಕಮಲದಲ್ಲಿ ನೆಲೆಸುವವನು, ೫೫೪ **ಶಕ್ರಃ**-ಇಂದ್ರರೂಪೀ, ೫೫೫ **ಶಾಂತಃ** - ಶಾಂತಸ್ವರೂಪೀ, ೫೫೬ **ವೃಷಾಕಪಿಃ** - ಹರಿಹರ. ॥೭೦॥

ಉಷ್ಣೋ ಗೃಹಪತಿಃ ಕೃಷ್ಣಃ ಸಮರ್ಥೋಽನರ್ಥನಾಶನಃ ।
ಅಧರ್ಮಶತ್ರುರಜ್ಞೇಯಃ ಪುರುಹೂತಃ ಪುರುಶ್ರುತಃ ॥೭೧॥

೫೫೭ **ಉಷ್ಣಃ** - ಹಾಲಾಹಲ ವಿಷದ ಉರಿಯಿಂದ ಉಷ್ಣವಾಗಿರುವನು, ೫೫೮ **ಗೃಹಪತಿಃ** - ಸಮಸ್ತ ಬ್ರಹ್ಮಾಂಡರೂಪೀ ಗೃಹದ ಸ್ವಾಮಿ, ೫೫೯ **ಕೃಷ್ಣಃ** - ಸಚ್ಚಿದಾನಂದಸ್ವರೂಪೀ, ೫೬೦ **ಸಮರ್ಥಃ** - ಸಾಮರ್ಥ್ಯ ಶಾಲಿ, ೫೬೧ **ಅನರ್ಥನಾಶನಃ** - ಅನರ್ಥದ ನಾಶ ಮಾಡುವವನು, ೫೬೨ **ಅಧರ್ಮಶತ್ರುಃ** - ಅಧರ್ಮನಾಶಕನು, ೫೬೩. **ಅಜ್ಞೇಯಃ** - ಬುದ್ಧಿಗೆ ನಿಲುಕದವನು ಅಥವಾ ತಿಳಿಯಲು ಬಾರದವನು, ೫೬೪ **ಪುರುಹೂತಃ ಪುರುಶ್ರುತಃ** - ಅನೇಕ ನಾಮಗಳಿಂದ ಕರೆಯಲ್ಪಡುವವನು ಮತ್ತು ಕೇಳಲ್ಪಡುವವನು. ॥೭೧॥

ಬ್ರಹ್ಮಗರ್ಭೋ ಬೃಹದ್‌ಗರ್ಭೋ ಧರ್ಮಧೇನುರ್ಧನಾಗಮಃ ।
ಜಗದ್ವಿತೈಷೀ ಸುಗತಃ ಕುಮಾರಃ ಕುಶಲಾಗಮಃ ॥೭೨॥

೫೬೫ **ಬ್ರಹ್ಮಗರ್ಭಃ** - ಬ್ರಹ್ಮದೇವನು ಯಾರಿಗೆ ಗರ್ಭಸ್ಥ ಶಿಶುವಿನಂತಿರುವನೋ ಅವನು, ೫೬೬ **ಬೃಹದ್ಗರ್ಭಃ** - ವಿಶ್ವಬ್ರಹ್ಮಾಂಡವು ಪ್ರಳಯಕಾಲದಲ್ಲಿ ಗರ್ಭದಲ್ಲಿ ಇರಿಸಿಕೊಳ್ಳುವನು, ೫೬೭ **ಧರ್ಮಧೇನುಃ** - ಧರ್ಮರೂಪೀ ವೃಷಭವನ್ನು ಉತ್ಪನ್ನಗೊಳಿಸಲು ಧೇನು ಸ್ವರೂಪನು, ೫೬೮ **ಧನಾಗಮಃ** - ಧನವನ್ನು ಕೊಡಿಸುವವನು, ೫೬೯ **ಜಗದ್ವಿತೈಷೀ** - ಸಮಸ್ತ ಪ್ರಪಂಚದ ಹಿತವನ್ನು ಬಯಸುವವನು, ೫೭೦ **ಸುಗತಃ** - ಉತ್ತಮ ಜ್ಞಾನದಿಂದ ಸಂಪನ್ನನು ಅಥವಾ ಬುದ್ಧಸ್ವರೂಪನು, ೫೭೧ **ಕುಮಾರಃ** - ಕಾರ್ತಿಕೇಯರೂಪೀ, ೫೭೨ **ಕುಶಲಾಗಮಃ** - ಕಲ್ಯಾಣದಾತಾ. ॥೭೨॥

ಹಿರಣ್ಯವರ್ಣೋ ಜ್ಯೋತಿಷ್ಮಾನ್ನಾನಾಭೂತರತೋ ಧ್ವನಿಃ ।
ಅರಾಗೋ ನಯನಾಧ್ಯಕ್ಷೋ ವಿಶ್ವಾಮಿತ್ರೋ ಧನೇಶ್ವರಃ ॥೭೩॥

೫೭೩. **ಹಿರಣ್ಯವರ್ಣೋ ಜ್ಯೋತಿಷ್ಮಾನ್** - ಸುವರ್ಣದಂತೆ ಗೌರವರ್ಣವುಳ್ಳವನು ಹಾಗೂ ತೇಜಸ್ವಿಯು, ೫೭೪ **ನಾನಾಭೂತರತಃ** - ನಾನಾ ಪ್ರಕಾರದ ಭೂತಗಳೊಂದಿಗೆ ಕ್ರೀಡಿಸುವವನು, ೫೭೫ **ಧ್ವನಿಃ** - ನಾದಸ್ವರೂಪೀ, ೫೭೬ **ಅರಾಗಃ** - ಆಸಕ್ತಿಶೂನ್ಯನು, ೫೭೭ **ನಯನಾಧ್ಯಕ್ಷಃ** - ಕಣ್ಣುಗಳಲ್ಲಿ ದ್ರಷ್ಟಾರೂಪದಿಂದ ನೆಲೆಸಿರುವವನು, ೫೭೮ **ವಿಶ್ವಾಮಿತ್ರಃ** - ಸಮಸ್ತ ಜಗತ್ತಿನ ಕುರಿತು ಮಿತ್ರಭಾವನೆಯನ್ನಿರಿಸುವ ಮುನಿ ಸ್ವರೂಪನು, ೫೭೯ **ಧನೇಶ್ವರಃ** - ಧನದ ಸ್ವಾಮಿ ಕುಬೇರನು. ॥೭೩॥

ಬ್ರಹ್ಮಜ್ಯೋತಿರ್ವಸುಧಾಮಾ ಮಹಾಜ್ಯೋತಿರನುತ್ತಮಃ ।
ಮಾತಾಮಹೋ ಮಾತರಿಶ್ವಾ ನಭಸ್ವಾನ್ನಾಗಹಾರಧೃಕ್ ॥೭೪॥

೫೮೦ **ಬ್ರಹ್ಮಜ್ಯೋತಿಃ** - ಜ್ಯೋತಿಸ್ವರೂಪ ಬ್ರಹ್ಮನು, ೫೮೧ **ವಸುಧಾಮಾ** - ಸುವರ್ಣ ಮತ್ತು ರತ್ನಗಳ ತೇಜದಿಂದ ಪ್ರಕಾಶಿತ ಅಥವಾ ವಸುಧಾಸ್ವರೂಪೀ, ೫೮೨ **ಮಹಾಜ್ಯೋತಿರನುತ್ತಮಃ** - ಸೂರ್ಯಾದಿ ಜ್ಯೋತಿಗಳ ಪ್ರಕಾಶಕ ಸರ್ವೋತ್ತಮ ಮಹಾಜ್ಯೋತಿ ಸ್ವರೂಪಿಯು, ೫೮೩. **ಮಾತಾಮಹಃ** - ಮಾತೃಕೆಗಳಿಗೆ ಜನ್ಮದಾತನಾದ್ದರಿಂದ ಮಾತಾಮಹನು, ೫೮೪ **ಮಾತಾರಿಶ್ವಾ ನಭಸ್ವಾನ್** - ಆಕಾಶದಲ್ಲಿ ಸಂಚರಿಸುವ ವಾಯುದೇವನು, ೫೮೫ **ನಾಗಹಾರಧೃಕ್** - ಸರ್ಪಮಯ ಹಾರಗಳನ್ನು ಧರಿಸುವವನು. ॥೭೪॥

ಪುಲಸ್ತ್ಯಃ ಪುಲಹೋಽಗಸ್ತ್ಯೋ ಜಾತೂಕರ್ಣ್ಯಃ ಪರಾಶರಃ ।
ನಿರಾವರಣ ನಿರ್ವಾರೋ ವೈರಂಚ್ಯೋ ವಿಷ್ಟರಶ್ರವಾಃ ॥೭೫॥

೫೮೬ **ಪುಲಸ್ತ್ಯಃ** - ಪುಲಸ್ತ್ಯನೆಂಬ ಮುನಿಯು, ೫೮೭ **ಪುಲಹಃ** - ಪುಲಹನೆಂಬ ಋಷಿಯು, ೫೮೮ **ಅಗಸ್ತ್ಯಃ** - ಕುಂಭಜನ್ಮಾ ಅಗಸ್ತ್ಯ ಋಷಿಯು, ೫೮೯ **ಜಾತೂಕರ್ಣ್ಯಃ** - ಇದೇ ಹೆಸರಿನಿಂದ ಪ್ರಸಿದ್ಧ ಮುನಿಯು, ೫೯೦ **ಪರಾಶರಃ** -

ಶಕ್ತಿಯ ಪುತ್ರ ಹಾಗೂ ವ್ಯಾಸರ ಪಿತಾ ಮುನಿವರ ಪರಾಶರನು, ೫೯೧ **ನಿರಾವರಣನಿರ್ವಾರಃ** – ಆವರಣಶೂನ್ಯನು ಹಾಗೂ ತಡೆಯಿಲ್ಲದವನು, ೫೯೨ **ವೈರಂಚ್ಯಃ** – ಬ್ರಹ್ಮದೇವರ ಪುತ್ರ ನೀಲಲೋಹಿತ ರುದ್ರನು, ೫೯೩. **ವಿಷ್ಟರಶ್ರವಾಃ** – ವಿಸ್ತೃತ ಕೀರ್ತಿಯುಳ್ಳ ವಿಷ್ಣುರೂಪನು. ॥೭೫॥

ಆತ್ಮಭೂರನಿರುದ್ಧೋಽತ್ರಿರ್ಜ್ಞಾನಮೂರ್ತಿರ್ಮಹಾಯಶಾಃ ।
ಲೋಕವೀರಾಗ್ರಣೀರ್ವೀರ ಶ್ಚಂಡಃ ಸತ್ಯಪರಾಕ್ರಮಃ ॥೭೬॥

೫೯೪ **ಆತ್ಮಭೂಃ** – ಸ್ವಯಂಭೂ ಬ್ರಹ್ಮಾ, ೫೯೫ **ಅನಿರುದ್ಧಃ** – ತಡೆಯಿಲ್ಲದ ಗತಿಯುಳ್ಳವನು, ೫೯೬ **ಅತ್ರಿಃ** – ಅತ್ರಿ ಎಂಬ ಋಷಿ ಅಥವಾ ತ್ರಿಗುಣಾತೀತನು, ೫೯೭ **ಜ್ಞಾನಮೂರ್ತಿಃ** – ಜ್ಞಾನಸ್ವರೂಪೀ, ೫೯೮ **ಮಹಾಯಶಾಃ** – ಮಹಾಯಶಸ್ವೀ, ೫೯೯ **ಲೋಕವೀರಾಗ್ರಣೀಃ** – ವಿಶ್ವವಿಖ್ಯಾತ ವೀರರಲ್ಲಿ ಅಗ್ರಗಣ್ಯನು, ೬೦೦ **ವೀರಃ** – ಶೂರನು, ೬೦೧ **ಚಂಡಃ** – ಪ್ರಳಯಕಾಲದಲ್ಲಿ ಅತ್ಯಂತ ಕ್ರೋಧಿತನಾಗುವವನು, ೬೦೨ **ಸತ್ಯಪರಾಕ್ರಮಃ** – ನಿಜವಾದ ಪರಾಕ್ರಮಿಯು. ॥೭೬॥

ವ್ಯಾಲಾಕಲ್ಪೋ ಮಹಾಕಲ್ಪಃ ಕಲ್ಪವೃಕ್ಷಃ ಕಲಾಧರಃ ।
ಅಲಂಕರಿಷ್ಣುರಚಲೋ ರೋಚಿಷ್ಣುರ್ವಿಕ್ರಮೋನ್ನತಃ ॥೭೭॥

೬೦೩. **ವ್ಯಾಲಾಕಲ್ಪಃ** – ಸರ್ಪಗಳ ಆಭೂಷಣಗಳಿಂದ ಶೃಂಗರಿಸಿಕೊಳ್ಳುವವನು, ೬೦೪ **ಮಹಾಕಲ್ಪಃ** – ಮಹಾಕಲ್ಪ ಸಂಜ್ಞಕ ಕಾಲಸ್ವರೂಪನು, ೬೦೫ **ಕಲ್ಪವೃಕ್ಷಃ** – ಶರಣಾಗತರ ಇಚ್ಛೆಯನ್ನು ಪೂರ್ಣಗೊಳಿಸಲು ಕಲ್ಪವೃಕ್ಷದಂತೆ ಉದಾರನು, ೬೦೬ **ಕಲಾಧರಃ**–ಚಂದ್ರಕಲಾಧಾರೀ, ೬೦೭ **ಅಲಂಕರಿಷ್ಣುಃ** – ಅಲಂಕಾರವನ್ನು ಧರಿಸುವವನು ಅಥವಾ ಅಲಂಕಾರ ಮಾಡುವವನು, ೬೦೮ **ಅಚಲಃ** – ವಿಚಲಿತನಾಗದವನು, ೬೦೯ **ರೋಚಿಷ್ಣುಃ** – ಪ್ರಕಾಶವಂತನು, ೬೧೦ **ವಿಕ್ರಮೋನ್ನತಃ** – ಪರಾಕ್ರಮದಲ್ಲಿ ಉನ್ನತನು. ॥೭೭॥

ಆಯುಃ ಶಬ್ದಪತಿರ್ವೇಗೀ ಪ್ಲವನಃ ಶಿಖಿಸಾರಥಿಃ ।
ಅಸಂಸೃಷ್ಟೋಽತಿಥಿಃ ಶಕ್ರಪ್ರಮಾಥೀ ಪಾದಪಾಸನಃ ॥೭೮॥

೬೧೧ **ಆಯುಃ ಶಬ್ದಪತಿಃ** – ಆಯುಸ್ಸು ಹಾಗೂ ವಾಣಿಯ ಸ್ವಾಮಿ, ೬೧೨ **ವೇಗೀ ಪ್ಲವನಃ** – ವೇಗಶಾಲಿ ಹಾಗೂ ನೆಗೆಯುವವನು ಅಥವಾ ಈಜುವವನು, ೬೧೩. **ಶಿಖಿಸಾರಥಿಃ** – ಅಗ್ನಿರೂಪೀ ಸಹಾಯಕನು, ೬೧೪ **ಅಸಂಸೃಷ್ಟಃ** – ನಿರ್ಲೇಪನು, ೬೧೫ **ಅತಿಥಿಃ** – ಪ್ರೇಮಿ ಭಕ್ತರ ಮನೆಗಳಲ್ಲಿ ಅತಿಥಿಯಂತೆ ಉಪಸ್ಥಿತನಾಗಿ ಅವರ ಸತ್ಕಾರವನ್ನು ಸ್ವೀಕರಿಸುವವನು, ೬೧೬ **ಶಕ್ರಪ್ರಮಾಥೀ** – ಇಂದ್ರನ ಮಾನವನ್ನು ಮರ್ದಿಸುವವನು, ೬೧೭ **ಪಾದಪಾಸನಃ** – ವೃಕ್ಷಗಳ ಮೇಲೆ ಅಥವಾ ಕೆಳಗೆ ಆಸೀನನಾಗುವವನು. ॥೭೮॥

ವಸುಶ್ರವಾ ಹವ್ಯವಾಹಃ ಪ್ರತಪ್ತೋ ವಿಶ್ವಭೋಜನಃ ।
ಜಪ್ಯೋ ಜರಾದಿಶಮನೋ ಲೋಹಿತಾತ್ಮಾ ತನೂನಪಾತ್ ॥೭೯॥

೬೧೮ **ವಸುಶ್ರವಾಃ** – ಯಶರೂಪೀ ಧನದಿಂದ ಸಂಪನ್ನನು, ೬೧೯ **ಹವ್ಯವಾಹಃ** – ಅಗ್ನಿಸ್ವರೂಪನು, ೬೨೦ **ಪ್ರತಪ್ತಃ** – ಸೂರ್ಯರೂಪದಿಂದ ಪ್ರಚಂಡ ತಾಪವನ್ನು ಕೊಡುವವನು, ೬೨೧ **ವಿಶ್ವಭೋಜನಃ** – ಪ್ರಳಯಕಾಲದಲ್ಲಿ ವಿಶ್ವ–ಬ್ರಹ್ಮಾಂಡವನ್ನು ತುತ್ತಾಗಿಸಿಕೊಳ್ಳುವವನು, ೬೨೨ **ಜಪ್ಯಃ** – ಜಪಿಸಲು ಯೋಗ್ಯ ನಾಮಗಳುಳ್ಳವನು, ೬೨೩. **ಜರಾದಿಶಮನಃ** – ವೃದ್ಧಾಪ್ಯವೇ ಮುಂತಾದ ದೋಷಗಳನ್ನು ನಿವಾರಿಸುವವನು, ೬೨೪ **ಲೋಹಿತಾತ್ಮಾ ತನೂನಪಾತ್** – ಲೋಹಿತ ವರ್ಣವುಳ್ಳ ಅಗ್ನಿರೂಪನು. ॥೭೯॥

ಬೃಹದಶ್ವೋ ನಭೋಯೋನಿಃ ಸುಪ್ರತೀಕಸ್ತಮಿಸ್ರಹಾ ।
ನಿದಾಘಸ್ತಪನೋ ಮೇಘಃ ಸ್ವಕ್ಷಃ ಪರಪುರಂಜಯಃ ॥೮೦॥

೬೨೫ **ಬೃಹದಶ್ವಃ** – ವಿಶಾಲ ಅಶ್ವವುಳ್ಳವನು, ೬೨೬ **ನಭೋಯೋನಿಃ** – ಆಕಾಶದ ಉತ್ಪತ್ತಿಯ ಸ್ಥಾನನು, ೬೨೭ **ಸುಪ್ರತೀಕಃ** – ಸುಂದರ ಶರೀರವುಳ್ಳವನು, ೬೨೮ **ತಮಿಸ್ರಹಾ** – ಅಜ್ಞಾನಾಂಧಕಾರನಾಶಕನು, ೬೨೯ **ನಿದಾಘಸ್ತಪನಃ** – ಉರಿಯುವ ಗ್ರೀಷ್ಮರೂಪನು, ೬೩೦ **ಮೇಘಃ** – ಮೋಡಗಳಿಂದ ಕೂಡಿದ ಮಹಾರೂಪನು, ೬೩೧ **ಸ್ವಕ್ಷಃ** – ಸುಂದರ ಕಣ್ಣುಗಳುಳ್ಳವನು, ೬೩೨ **ಪರಪುರಂಜಯಃ** – ತ್ರಿಪುರರೂಪೀ ಶತ್ರುನಗರಗಳನ್ನು ಗೆದ್ದವನು. ॥೮೦॥

ಸುಖಾನಿಲಃ ಸುನಿಷ್ಪನ್ನಃ ಸುರಭಿಃ ಶಿಶಿರಾತ್ಮಕಃ ।
ವಸಂತೋ ಮಾಧವೋ ಗ್ರೀಷ್ಮೋ ನಭಸ್ಯೋ ಬೀಜವಾಹನಃ ॥೮೧॥

೬೩೩. **ಸುಖಾನಿಲಃ** – ಸುಖದಾಯಕ ವಾಯುವನ್ನು ಪ್ರಕಟಮಾಡುವ ಶರತ್ಕಾಲರೂಪೀ, ೬೩೪ **ಸುನಿಷ್ಪನ್ನಃ** – ಸುಂದರರೂಪದಿಂದ ಅನ್ನದ ಪರಿಪಾಕವಾಗುವ ಹೇಮಂತಕಾಲರೂಪನು. ೬೩೫ **ಸುರಭಿಃ ಶಿಶಿರಾತ್ಮಕಃ** – ಸುಗಂಧಿತ ಮಲಯಾನಿಲದಿಂದ ಕೂಡಿದ ಶಿಶಿರ ಋತುರೂಪೀ, ೬೩೬ **ವಸಂತೋ ಮಾಧವಃ** – ಚೈತ್ರ–ವೈಶಾಖ ಇವೆರಡು ತಿಂಗಳಿಂದ ಕೂಡಿದ ವಸಂತರೂಪೀ, ೬೩೭ **ಗ್ರೀಷ್ಮ** – ಗ್ರೀಷ್ಮ ಋತುರೂಪೀ, ೬೩೮ **ನಭಸ್ಯಃ** – ಭಾದ್ರಪದಮಾಸರೂಪನು, ೬೩೯ **ಬೀಜವಾಹನಃ** – ಭತ್ತವೇ ಮೊದಲಾದ ಬೀಜಗಳನ್ನು ಕೊಡುವ ಶರತ್ಕಾಲನು. ॥೮೧॥

ಅಂಗಿರಾ ಗುರುರಾತ್ರೇಯೋ ವಿಮಲೋ ವಿಶ್ವವಾಹನಃ।
ಪಾವನಃ ಸುಮತಿರ್ವಿದ್ವಾಂಶ್ತ್ರೈವಿದ್ಯೋ ವರವಾಹನಃ॥೮೨॥

೬೪೦ **ಅಂಗಿರಾಗುರುಃ** – ಅಂಗಿರಾ ಎಂಬ ಋಷಿ ಹಾಗೂ ಅವರ ಪುತ್ರ ದೇವಗುರು ಬೃಹಸ್ಪತಿಯು, ೬೪೧ **ಆತ್ರೇಯಃ** – ಅತ್ರಿಕುಮಾರ ದುರ್ವಾಸಾ, ೬೪೨ **ವಿಮಲಃ** –

ನಿರ್ಮಲನು, ೬೪೩. **ವಿಶ್ವವಾಹನಃ** - ಸಂಪೂರ್ಣ ಜಗತ್ತಿನ ನಿರ್ವಾಹ ಮಾಡುವವನು, ೬೪೪ **ಪಾವನಃ** - ಪವಿತ್ರಗೊಳಿಸುವವನು, ೬೪೫ **ಸುಮತಿರ್ವಿದ್ವಾನ್** - ಉತ್ತಮ ಬುದ್ಧಿಯುಳ್ಳ ವಿದ್ವಾಂಸನು, ೬೪೬ **ತ್ರೈವಿದ್ಯಃ** - ಮೂರು ವೇದಗಳ ವಿದ್ವಾಂಸ ಅಥವಾ ಮೂರು ವೇದಗಳಿಂದ ಪ್ರತಿಪಾದಿತನು, ೬೪೭ **ವರವಾಹನಃ** - ವೃಷರೂಪೀ ಶ್ರೇಷ್ಠವಾಹನವುಳ್ಳವನು. ॥೮೨॥

ಮನೋಬುದ್ಧಿರಹಂಕಾರಃ ಕ್ಷೇತ್ರಜ್ಞಃ ಕ್ಷೇತ್ರಪಾಲಕಃ ।
ಜಮದಗ್ನಿರ್ಬಲನಿಧಿರ್ವಿಗಾಲೋ ವಿಶ್ವಗಾಲವಃ ॥೮೩॥

೬೪೮ **ಮನೋಬುದ್ಧಿರಹಂಕಾರಃ** - ಮನ, ಬುದ್ಧಿ ಅಹಂಕಾರ ಸ್ವರೂಪನು, ೬೪೯ **ಕ್ಷೇತ್ರಜ್ಞಃ** - ಆತ್ಮಾ ೬೫೦ **ಕ್ಷೇತ್ರಪಾಲಕಃ** - ಶರೀರರೂಪೀ ಕ್ಷೇತ್ರವನ್ನು ಪಾಲಿಸುವ ಪರಮಾತ್ಮನು, ೬೫೧ **ಜಮದಗ್ನಿಃ** - ಜಮದಗ್ನಿ ಎಂಬ ಋಷಿರೂಪನು, ೬೫೨ **ಬಲನಿಧಿಃ** - ಅನಂತ ಬಲದ ಸಾಗರನು, ೬೫೩. **ವಿಗಾಲಃ** - ತನ್ನ ಜಟೆಯಿಂದ ಗಂಗೆಯ ನೀರನ್ನು ಬೀಳಿಸುವವನು, ೬೫೪ **ವಿಶ್ವಗಾಲವಃ** - ವಿಶ್ವವಿಖ್ಯಾತ ಗಾಲವ ಮುನಿ ಅಥವಾ ಪ್ರಳಯಕಾಲದಲ್ಲಿ ಕಾಲಾಗ್ನಿರೂಪದಿಂದ ಜಗತ್ತನ್ನು ನುಂಗುವವನು. ॥೮೩॥

ಅಘೋರೋಽನುತ್ತರೋ ಯಜ್ಞಃ ಶ್ರೇಷ್ಠೋ ನಿಃಶ್ರೇಯಸಪ್ರದಃ ।
ಶೈಲೋ ಗಗನಕುಂದಾಭೋ ದಾನವಾರಿರರಿಂದಮಃ ॥೮೪॥

೬೫೫ **ಅಘೋರಃ** - ಸೌಮ್ಯರೂಪವುಳ್ಳವನು, ೬೫೬ **ಅನುತ್ತರಃ** - ಸರ್ವಶ್ರೇಷ್ಠನು, ೬೫೭ **ಯಜ್ಞಃ ಶ್ರೇಷ್ಠಃ** - ಶ್ರೇಷ್ಠಯಜ್ಞರೂಪೀ, ೬೫೮ **ನಿಃಶ್ರೇಯಸಪ್ರದಃ** - ಕಲ್ಯಾಣದಾತಾ, ೬೫೯ **ಶೈಲಃ**-ಶಿಲಾಮಯ ಲಿಂಗರೂಪನು, ೬೬೦ **ಗಗನಕುಂದಾಭಃ** - ಆಕಾಶಕುಂದ - ಚಂದ್ರನಂತೆ ಗೌರಕಾಂತಿಯುಳ್ಳವನು, ೬೬೧ **ದಾನವಾರಿಃ** - ದಾನವ ಶತ್ರು, ೬೬೨ **ಅರಿಂದಮಃ** - ಶತ್ರುದಮನನು. ॥೮೪॥

ರಜನೀಜನಕಶ್ಚಾರುರ್ನಿಃಶಲ್ಯೋ ಲೋಕಶಲ್ಯಧೃಕ್ ।
ಚತುರ್ವೇದಶ್ಚತುರ್ಭಾವಶ್ಚತುರಶ್ಚತುರಪ್ರಿಯಃ ॥೮೫॥

೬೬೩. **ರಜನೀಜನಕಶ್ಚಾರುಃ** - ಸುಂದರ ನಿಶಾಕರರೂಪನು, ೬೬೪ **ನಿಃಶಲ್ಯಃ** - ನಿಷ್ಕಂಟಕನು, ೬೬೫ **ಲೋಕಶಲ್ಯಧೃಕ್** - ಶರಣಾಗತರ ಶೋಕಶಲ್ಯವನ್ನು ತೆಗೆದು ಸ್ವಯಂ ಧಾರಣ ಮಾಡುವವನು, ೬೬೬ **ಚತುರ್ವೇದಃ** - ನಾಲ್ಕು ವೇದಗಳ ಮೂಲಕ ತಿಳಿಯಲು ಯೋಗ್ಯನು, ೬೬೭ **ಚತುರ್ಭಾವಃ** - ನಾಲ್ಕು ಪುರುಷಾರ್ಥಗಳನ್ನು ಕರುಣಿಸುವವನು, ೬೬೮ **ಚತುರಶ್ಚತುರಪ್ರಿಯಃ** - ಚತುರ ಹಾಗೂ ಚತುರ ಪುರುಷರ ಪ್ರಿಯನು. ॥೮೫॥

ಆಮ್ನಾಯೋಽಥ ಸಮಾಮ್ನಾಯಸ್ತೀರ್ಥದೇವ ಶಿವಾಲಯಃ ।
ಬಹುರೂಪೋ ಮಹಾರೂಪಃ ಸರ್ವರೂಪಶ್ಚರಾಚರಃ ॥೮೬॥

೬೬೯ **ಆಮ್ನಾಯಃ** - ವೇದಸ್ವರೂಪನು, ೬೭೦ **ಸಮಾಮ್ನಾಯಃ** - ಅಕ್ಷರಸಮಾಮ್ನಾಯ - ಶಿವ ಸೂತ್ರರೂಪೀ, ೬೭೧ **ತೀರ್ಥದೇವ ಶಿವಾಲಯಃ** - ತೀರ್ಥಗಳ ದೇವತೆ ಮತ್ತು ಶಿವಾಲಯರೂಪನು, ೬೭೨ **ಬಹುರೂಪಃ** - ಅನೇಕರೂಪವುಳ್ಳವನು, ೬೭೩. **ಮಹಾರೂಪಃ** - ವಿರಾಟ್‌ರೂಪಧಾರಿ, ೬೭೪ **ಸರ್ವರೂಪಶ್ಚರಾಚರಃ** - ಚರ ಮತ್ತು ಅಚರ ಸಂಪೂರ್ಣ ರೂಪವುಳ್ಳವನು. ॥೮೬॥

ನ್ಯಾಯನಿರ್ಮಾಯಕೋ ನ್ಯಾಯೀ ನ್ಯಾಯಗಮ್ಯೋ ನಿರಂಜನಃ ।
ಸಹಸ್ರಮೂರ್ದ್ಧಾ ದೇವೇಂದ್ರಃ ಸರ್ವಶಸ್ತ್ರಪ್ರಭಂಜನಃ ॥೮೭॥

೬೭೫ **ನ್ಯಾಯನಿರ್ಮಾಯಕೋ ನ್ಯಾಯೀ** - ನ್ಯಾಯಕರ್ತನು ಹಾಗೂ ನ್ಯಾಯಶೀಲನು, ೬೭೬ **ನ್ಯಾಯಗಮ್ಯಃ** - ನ್ಯಾಯಯುಕ್ತ ಆಚರಣೆಯಿಂದ ದೊರೆಯುವವನು, ೬೭೭ **ನಿರಂಜನಃ** - ನಿರ್ಮಲನು, ೬೭೮ **ಸಹಸ್ರಮೂರ್ದ್ಧಾ** - ಸಾವಿರಾರು ಶಿರವುಳ್ಳವನು, ೬೭೯ **ದೇವೇಂದ್ರಃ** - ದೇವತೆಗಳ ಸ್ವಾಮಿಯು, ೬೮೦ **ಸರ್ವಶಸ್ತ್ರಪ್ರಭಂಜನಃ** - ವಿಪಕ್ಷ ಯೋಧರ ಸಮಸ್ತ ಶಸ್ತ್ರಗಳನ್ನು ನಾಶಮಾಡುವವನು. ॥೮೭॥

ಮುಂಡೋ ವಿರೂಪೋ ವಿಕ್ರಾಂತೋ ದಂಡೀ ದಾಂತೋ ಗುಣೋತ್ತಮಃ ।
ಪಿಂಗಲಾಕ್ಷೋ ಜನಾಧ್ಯಕ್ಷೋ ನೀಲಗ್ರೀವೋ ನಿರಾಮಯಃ ॥೮೮॥

೬೮೧ **ಮುಂಡಃ** - ತಲೆ ಬೋಳಿಸಿದ ಸಂನ್ಯಾಸೀ, ೬೮೨ **ವಿರೂಪಃ** - ವಿವಿಧರೂಪವುಳ್ಳವನು, ೬೮೩. **ವಿಕ್ರಾಂತಃ** - ವಿಕ್ರಮಶೀಲನು, ೬೮೪ **ದಂಡೀ** - ದಂಡಧಾರಿ, ೬೮೫ **ದಾಂತಃ** - ಮನಸ್ಸು ಮತ್ತು ಇಂದ್ರಿಯಗಳನ್ನು ದಮನಮಾಡುವವನು, ೬೮೬ **ಗುಣೋತ್ತಮಃ** - ಗುಣಗಳಲ್ಲಿ ಎಲ್ಲರಿಂದ ಶ್ರೇಷ್ಠನು, ೬೮೭ **ಪಿಂಗಲಾಕ್ಷಃ** - ಪಿಂಗಳ ಕಣ್ಣುಗಳುಳ್ಳವನು, ೬೮೮ **ಜನಾಧ್ಯಕ್ಷಃ** - ಜೀವಮಾತ್ರರ ಸಾಕ್ಷಿಯು, ೬೮೯ **ನೀಲಗ್ರೀವಃ** - ನೀಲಕಂಠನು, ೬೯೦ **ನಿರಾಮಯಃ** - ನೀರೋಗಿ. ॥೮೮॥

ಸಹಸ್ರಬಾಹುಃ ಸರ್ವೇಶಃ ಶರಣ್ಯಃ ಸರ್ವಲೋಕಧೃಕ್ ।
ಪದ್ಮಾಸನಃ ಪರಂ ಜ್ಯೋತಿಃ ಪಾರಂಪರ್ಯಫಲಪ್ರದಃ ॥೮೯॥

೬೯೧ **ಸಹಸ್ರಬಾಹುಃ** - ಸಾವಿರಾರು ಭುಜಗಳಿಂದ ಕೂಡಿದವನು, ೬೯೨ **ಸರ್ವೇಶಃ** - ಎಲ್ಲರ ಸ್ವಾಮಿ, ೬೯೩. **ಶರಣ್ಯಃ** - ಶರಣಾಗತರ ಹಿತೈಷಿ, ೬೯೪ **ಸರ್ವಲೋಕಧೃಕ್** - ಸಂಪೂರ್ಣ ಲೋಕಗಳನ್ನು ಧರಿಸುವವನು, ೬೯೫ **ಪದ್ಮಾಸನಃ** - ಕಮಲಾಸನದಲ್ಲಿ ವಿರಾಜಮಾನನು, ೬೯೬ **ಪರಂಜ್ಯೋತಿಃ** - ಪರಮ ಪ್ರಕಾಶಸ್ವರೂಪನು, ೬೯೭ **ಪಾರಂಪರ್ಯಫಲಪ್ರದಃ** - ಪರಂಪರಾಗತ ಫಲವನ್ನು ಕೊಡುವವನು. ॥೮೯॥

ಪದ್ಮಗರ್ಭೋ ಮಹಾಗರ್ಭೋ ವಿಶ್ವಗರ್ಭೋ ವಿಚಕ್ಷಣಃ ।
ಪರಾವರಜ್ಞೋ ವರದೋ ವರೇಣ್ಯಶ್ಚ ಮಹಾಸ್ವನಃ ॥೯೦॥

೬೯ **ಪದ್ಮಗರ್ಭಃ** – ತನ್ನ ನಾಭಿಯಿಂದ ಕಮಲವನ್ನು ಪ್ರಕಟಗೊಳಿಸುವ ವಿಷ್ಣುರೂಪನು, ೬೯ **ಮಹಾಗರ್ಭಃ** – ವಿರಾಟ್ ಬ್ರಹ್ಮಾಂಡವನ್ನು ಗರ್ಭದಲ್ಲಿ ಧರಿಸಿದ ಕಾರಣ ಮಹಾ ಗರ್ಭವುಳ್ಳವನು, ೭೦೦ **ವಿಶ್ವಗರ್ಭಃ** – ಸಂಪೂರ್ಣ ಜಗತ್ತನ್ನು ತನ್ನ ಉದರದಲ್ಲಿ ಧರಿಸುವವನು, ೭೦೧ **ವಿಚಕ್ಷಣಃ** – ಚತುರನು, ೭೦೨ **ಪರಾವರಜ್ಞಃ** – ಕಾರಣ ಮತ್ತು ಕಾರ್ಯಗಳನ್ನು ತಿಳಿದವನು, ೭೦೩ **ವರದಃ** – ಅಭೀಷ್ಟ ವರಗಳನ್ನು ಕೊಡುವವನು, ೭೦೪ **ವರೇಣ್ಯಃ** – ವರಣೀಯ ಅಥವಾ ಶ್ರೇಷ್ಠನು, ೭೦೫ **ಮಹಾಸ್ವನಃ** – ಡಮರುವಿನ ಗಂಭೀರ ನಾದವನ್ನು ಮಾಡುವವನು. ॥೯೦॥

ದೇವಾಸುರಗುರುರ್ದೇವೋ ದೇವಾಸುರನಮಸ್ಕೃತಃ ।
ದೇವಾಸುರ ಮಹಾಮಿತ್ರೋ ದೇವಾಸುರಮಹೇಶ್ವರಃ ॥೯೧॥

೭೦೬ **ದೇವಾಸುರಗುರುರ್ದೇವಃ** – ದೇವತೆಗಳ ಹಾಗೂ ಅಸುರರ ಗುರುವು ಮತ್ತು ಆರಾಧ್ಯನು, ೭೦೭ **ದೇವಾಸುರ ನಮಸ್ಕೃತಃ** – ದೇವತೆಗಳಿಂದ ಮತ್ತು ಅಸುರರಿಂದ ವಂದಿತನು, ೭೦೮ **ದೇವಾಸುರಮಹಾಮಿತ್ರಃ** – ದೇವತೆಗಳ ಮತ್ತು ಅಸುರರ ಮಿತ್ರನು, ೭೦೯ **ದೇವಾಸುರ ಮಹೇಶ್ವರಃ** – ದೇವತೆಗಳ ಮತ್ತು ಅಸುರರ ಮಹಾನ್ ಈಶ್ವರನು. ॥೯೧॥

ದೇವಾಸುರೇಶ್ವರೋ ದಿವ್ಯೋ ದೇವಾಸುರ ಮಹಾಶ್ರಯಃ ।
ದೇವದೇವ ಮಯೋಽಚಿಂತ್ಯೋ ದೇವದೇವಾತ್ಮಸಂಭವಃ ॥೯೨॥

೭೧೦ **ದೇವಾಸುರೇಶ್ವರಃ** – ದೇವತೆಗಳ ಮತ್ತು ಅಸುರರ ಶಾಸಕನು, ೭೧೧ **ದಿವ್ಯಃ** – ಅಲೌಕಿಕ ಸ್ವರೂಪವುಳ್ಳವನು, ೭೧೨ **ದೇವಾಸುರ ಮಹಾಶ್ರಯಃ** – ದೇವತೆಗಳ ಮತ್ತು ಅಸುರರ ಮಹಾನ್ ಆಶ್ರಯನು, ೭೧೩ **ದೇವದೇವಮಯಃ** – ದೇವತೆಗಳಿಗೂ ದೇವತಾರೂಪನು, ೭೧೪ **ಅಚಿಂತ್ಯಃ** – ಚಿತ್ತದ ಎಲ್ಲೆಯಿಂದ ಅತೀತ ನಾಗಿರುವವನು, ೭೧೫ **ದೇವದೇವಾತ್ಮಸಂಭವಃ** – ದೇವಾಧಿದೇವ ಬ್ರಹ್ಮದೇವನಿಂದ ರುದ್ರರೂಪದಿಂದ ಪ್ರಕಟನಾದವನು. ॥೯೨॥

ಸದ್ಯೋನಿರಸುರವ್ಯಾಘ್ರೋ ದೇವಸಿಂಹೋ ದಿವಾಕರಃ ।
ವಿಬುಧಾಗ್ರಚರಶ್ರೇಷ್ಠಃ ಸರ್ವದೇವೋತ್ತಮೋತ್ತಮಃ ॥೯೩॥

೭೧೬ **ಸದ್ಯೋನಿಃ** – ಸತ್‌ಪದಾರ್ಥಗಳ ಉತ್ಪತ್ತಿಯ ಕಾರಣನು, ೭೧೭ **ಅಸುರವ್ಯಾಘ್ರಃ** – ಅಸುರರನ್ನು ವಿನಾಶಗೊಳಿಸಲು ವ್ಯಾಘ್ರರೂಪನು, ೭೧೮ **ದೇವಸಿಂಹಃ** – ದೇವತೆಗಳಲ್ಲಿ ಶ್ರೇಷ್ಠನು, ೭೧೯ **ದಿವಾಕರಃ** – ಸೂರ್ಯರೂಪನು, ೭೨೦ **ವಿಬುಧಾಗ್ರಚರಶ್ರೇಷ್ಠಃ** – ದೇವತೆಗಳ ನಾಯಕರಲ್ಲಿ ಸರ್ವಶ್ರೇಷ್ಠನು, ೭೨೧ **ಸರ್ವದೇವೋತ್ತಮೋತ್ತಮಃ** – ಎಲ್ಲ ಶ್ರೇಷ್ಠ ದೇವತೆಗಳಿಗೂ ಶಿರೋಮಣಿಯು. ॥೯೩॥

ಶಿವಜ್ಞಾನರತಃ ಶ್ರೀಮಾನ್ ಶಿವಶ್ರೀಃ ಪರ್ವತಪ್ರಿಯಃ ।
ವಜ್ರಹಸ್ತಃ ಸಿದ್ಧಖಡ್ಗೋ ನರಸಿಂಹನಿಪಾತನಃ ॥೯೪॥

೭೨೨ **ಶಿವಜ್ಞಾನರತಃ** – ಕಲ್ಯಾಣಮಯ ಶಿವತತ್ತ್ವದ ವಿಚಾರದಲ್ಲಿ ತತ್ಪರನು, ೭೨೩ **ಶ್ರೀಮಾನ್** – ಅಣಿಮಾದಿ ವಿಭೂತಿಗಳಿಂದ ಸಂಪನ್ನನು, ೭೨೪ **ಶಿವಶ್ರೀಃ ಪರ್ವತಪ್ರಿಯಃ** – ಕುಮಾರ ಕಾರ್ತಿಕೇಯನ ನಿವಾಸಭೂತ ಶ್ರೀಶೈಲ ಎಂಬ ಪರ್ವತವನ್ನು ಪ್ರೀತಿಸುವವನು, ೭೨೫ **ವಜ್ರಹಸ್ತಃ** – ವಜ್ರಧಾರೀ ಇಂದ್ರರೂಪನು, ೭೨೬ **ಸಿದ್ಧಖಡ್ಗಃ** – ಶತ್ರುಗಳನ್ನು ಕೊಲ್ಲುವುದರಲ್ಲಿ ಯಾರ ಖಡ್ಗವು ಎಂದೂ ಅಸಫಲವಾಗುವುದಿಲ್ಲವೋ ಅವನು, ೭೨೭ **ನರಸಿಂಹನಿಪಾತನಃ** – ಶರಭರೂಪದಿಂದ ನರಸಿಂಹನನ್ನು ನೆಲಕ್ಕುರುಳಿಸಿದವನು. ॥೯೪॥

ಬ್ರಹ್ಮಚಾರೀ ಲೋಕಚಾರೀ ಧರ್ಮಚಾರೀ ಧನಾಧಿಪಃ ।
ನಂದೀ ನಂದೀಶ್ವರೋಽನಂತೋ ನಗ್ನವ್ರತಧರಃ ಶುಚಿಃ ॥೯೫॥

೭೨೮ **ಬ್ರಹ್ಮಚಾರೀ** – ಭಗವತಿ ಉಮೆಯ ಪ್ರೇಮವನ್ನು ಪರೀಕ್ಷಿಸಲು ಬ್ರಹ್ಮಚಾರಿಯ ರೂಪದಿಂದ ಪ್ರಕಟನಾದವನು, ೭೨೯ **ಲೋಕಚಾರೀ** – ಸಮಸ್ತ ಲೋಕಗಳಲ್ಲಿ ಸಂಚರಿಸುವವನು, ೭೩೦ **ಧರ್ಮಚಾರೀ** – ಧರ್ಮವನ್ನು ಆಚರಿಸುವವನು, ೭೩೧ **ಧನಾಧಿಪಃ** – ಧನದ ಅಧಿಪತಿ ಕುಬೇರನು, ೭೩೨ **ನಂದೀ** – ನಂದೀ ಎಂಬ ಗಣನು, ೭೩೩ **ನಂದೀಶ್ವರಃ** – ಇದೇ ಹೆಸರಿನಿಂದ ಪ್ರಸಿದ್ಧ ವೃಷಭನು, ೭೩೪ **ಅನಂತಃ** – ಅಂತರಹಿತ, ೭೩೫ **ನಗ್ನವ್ರತಧರಃ** – ದಿಗಂಬರನಾಗಿ ಇರುವ ವ್ರತವನ್ನು ಕೈಗೊಂಡವನು, ೭೩೬ **ಶುಚಿಃ** – ನಿತ್ಯಶುದ್ಧನು. ॥೯೫॥

ಲಿಂಗಾಧ್ಯಕ್ಷಃ ಸುರಾಧ್ಯಕ್ಷೋ ಯೋಗಾಧ್ಯಕ್ಷೋ ಯುಗಾವಹಃ ।
ಸ್ವಧರ್ಮಾ ಸ್ವರ್ಗತಃ ಸ್ವರ್ಗಸ್ವರಃ ಸ್ವರಮಯಸ್ವನಃ ॥೯೬॥

೭೩೭ **ಲಿಂಗಾಧ್ಯಕ್ಷಃ** – ಲಿಂಗದೇಹದ ದ್ರಷ್ಟಾ, ೭೩೮ **ಸುರಾಧ್ಯಕ್ಷಃ** – ದೇವತೆಗಳ ಅಧಿಪತಿಯು, ೭೩೯ **ಯೋಗಾಧ್ಯಕ್ಷಃ** – ಯೋಗೇಶ್ವರನು, ೭೪೦ **ಯುಗಾವಹಃ** – ಯುಗದ ನಿರ್ವಾಹಕನು, ೭೪೧ **ಸ್ವಧರ್ಮಾ** – ಆತ್ಮವಿಚಾರರೂಪೀ ಧರ್ಮದಲ್ಲಿ ಸ್ಥಿತ ಅಥವಾ ಸ್ವಧರ್ಮ ಪರಾಯಣ, ೭೪೨ **ಸ್ವರ್ಗತಃ** – ಸ್ವರ್ಗಲೋಕದಲ್ಲಿ ಸ್ಥಿತನು, ೭೪೩ **ಸ್ವರ್ಗಸ್ವರಃ** – ಸ್ವರ್ಗಲೋಕದಲ್ಲಿ ಯಶವನ್ನು

ಕೀರ್ತಿಸಲ್ಪಡುವವನು, ೭೪೪ **ಸ್ವರಮಯಸ್ವನಃ** - ಏಳು ಪ್ರಕಾರದ ಸ್ವರಗಳಿಂದ ಕೂಡಿದ ಧ್ವನಿಯುಳ್ಳವನು. ॥೯೬॥

ಬಾಣಾಧ್ಯಕ್ಷೋ ಬೀಜಕರ್ತಾ ಧರ್ಮಕೃದ್ಧರ್ಮಸಂಭವಃ ।
ದಂಭೋಽಲೋಭೋಽರ್ಥವಿಚ್ಛಂಭುಃ ಸರ್ವಭೂತ ಮಹೇಶ್ವರಃ ॥೯೭॥

೭೪೫ **ಬಾಣಾಧ್ಯಕ್ಷಃ** - ಬಾಣಾಸುರನ ಸ್ವಾಮಿ ಅಥವಾ ಬಾಣಲಿಂಗ ನರ್ಮದೇಶ್ವರನಲ್ಲಿ ಅಧಿದೇವತಾರೂಪದಿಂದ ಸ್ಥಿತನಾಗಿರುವವನು, ೭೪೬ **ಬೀಜಕರ್ತಾ** - ಬೀಜದ ಉತ್ಪಾದಕನು, ೭೪೭ **ಧರ್ಮಕೃದ್ಧರ್ಮಸಂಭವಃ** - ಧರ್ಮದ ಪಾಲಕನು ಮತ್ತು ಉತ್ಪಾದಕನು, ೭೪೮ **ದಂಭಃ** - ಮಾಯಾಮಯರೂಪಧಾರೀ, ೭೪೯ **ಅಲೋಭಃ** - ಲೋಭರಹಿತನು, ೭೫೦ **ಅರ್ಥವಿಚ್ಛಂಭುಃ** - ಎಲ್ಲರ ಪ್ರಯೋಜನವನ್ನು ತಿಳಿಯುವ ಕಲ್ಯಾಣನಿಕೇತನ ಶಿವನು, ೭೫೧ **ಸರ್ವಭೂತ ಮಹೇಶ್ವರಃ** - ಸಂಪೂರ್ಣ ಪ್ರಾಣಿಗಳ ಪರಮೇಶ್ವರನು. ॥೯೭॥

ಶ್ಮಶಾನನಿಲಯಸ್ತ್ರ್ಯಕ್ಷಃ ಸೇತುರಪ್ರತಿಮಾಕೃತಿಃ ।
ಲೋಕೋತ್ತರಸ್ಫುಟಾಲೋಕ ಸ್ತ್ರ್ಯಂಬಕೋ ನಾಗಭೂಷಣಃ ॥೯೮॥

೭೫೨ **ಶ್ಮಶಾನನಿಲಯಃ** - ಶ್ಮಶಾನವಾಸೀ, ೭೫೩. **ತ್ರ್ಯಕ್ಷಃ** - ತ್ರಿನೇತ್ರಧಾರೀ, ೭೫೪ **ಸೇತುಃ** - ಧರ್ಮಮರ್ಯಾದೆಯ ಪಾಲಕನು, ೭೫೫ **ಅಪ್ರತಿಮಾಕೃತಿಃ** - ಅನುಪಮ ರೂಪವುಳ್ಳವನು, ೭೫೬ **ಲೋಕೋತ್ತರಸ್ಫುಟಾಲೋಕಃ** - ಅಲೌಲಿಕ ಹಾಗೂ ಸುಸ್ಪಷ್ಟ ಪ್ರಕಾಶದಿಂದ ಕೂಡಿದವನು, ೭೫೭ **ತ್ರ್ಯಂಬಕಃ** - ತ್ರಿನೇತ್ರಧಾರಿ ಅಥವಾ ತ್ರ್ಯಂಬಕ ಹೆಸರಿನ ಜ್ಯೋತಿರ್ಲಿಂಗನು, ೭೫೮ **ನಾಗಭೂಷಣಃ** - ನಾಗಹಾರದಿಂದ ವಿಭೂಷಿತನು. ॥೯೮॥

ಅಂಧಕಾರಿರ್ಮಖದ್ವೇಷೀ ವಿಷ್ಣುಕಂಧರಪಾತನಃ ।
ಹೀನದೋಷೋಽಕ್ಷಯಗುಣೋ ದಕ್ಷಾರಿಃ ಪೂಷದಂತಭಿತ್ ॥೯೯॥

೭೫೯ **ಅಂಧಕಾರಿಃ** - ಅಂಧಕಾಸುರನನ್ನು ವಧಿಸಿದವನು, ೭೬೦ **ಮಖದ್ವೇಷೀ** - ದಕ್ಷಸಯಜ್ಞವನ್ನು ವಿಧ್ವಂಸ ಮಾಡುವವನು, ೭೬೧ **ವಿಷ್ಣುಕಂಧರಪಾತನಃ** - ಯಜ್ಞಮಯ ವಿಷ್ಣುವಿನ ಕತ್ತನ್ನು ಕತ್ತರಿಸಿದವನು, ೭೬೨ **ಹೀನದೋಷಃ** - ದೋಷರಹಿತನು, ೭೬೩. **ಅಕ್ಷಯಗುಣಃ** - ಅವಿನಾಶೀ ಗುಣಗಳಿಂದ ಸಂಪನ್ನನು, ೭೬೪ **ದಕ್ಷಾರಿಃ** - ದಕ್ಷದ್ರೋಹೀ, ೭೬೫ **ಪೂಷದಂತಭಿತ್** - ಪೂಷಾ ದೇವತೆಯ ಹಲ್ಲನ್ನು ಕಿತ್ತವನು. ॥೯೯॥

ಧೂರ್ಜಟಿಃ ಖಂಡಪರಶುಃ ಸಕಲೋ ನಿಷ್ಕಲೋಽನಘಃ ।
ಅಕಾಲಃ ಸಕಲಾಧಾರಃ ಪಾಂಡುರಾಭೋ ಮೃಡೋ ನಟಃ ॥೧೦೦॥

೭೬೬ **ಧೂರ್ಜಟಿಃ** - ಜಟಾಭಾರದಿಂದ ವಿಭೂಷಿತನು, ೭೬೭ **ಖಂಡಪರಶುಃ** - ತುಂಡಾದ ಪರಶುವುಳ್ಳವನು, ೭೬೮ **ಸಕಲೋ ನಿಷ್ಕಲಃ** - ಸಾಕಾರ ಹಾಗೂ ನಿರಾಕಾರ ಪರಮಾತ್ಮನು. ೭೬೯ **ಅನಘಃ** - ಪಾಪದ ಸ್ಪರ್ಶದಿಂದ ಶೂನ್ಯನು, ೭೭೦ **ಅಕಾಲಃ** - ಕಾಲದ ಪ್ರಭಾವದಿಂದ ರಹಿತನು, ೭೭೧ **ಸಕಲಾಧಾರಃ** - ಎಲ್ಲರ ಆಧಾರನು, ೭೭೨ **ಪಾಂಡುರಾಭಃ** - ಶ್ವೇತ ಕಾಂತಿಯುಳ್ಳವನು, ೭೭೩. **ಮೃಡೋ ನಟಃ** - ಸುಖದಾಯಕ ಹಾಗೂ ತಾಂಡವ ನೃತ್ಯಕಾರೀ. ॥೧೦೦॥

ಪೂರ್ಣಃ ಪೂರಯಿತಾ ಪುಣ್ಯಃ ಸುಕುಮಾರಃ ಸುಲೋಚನಃ ।
ಸಾಮಗೇಯಪ್ರಿಯೋಽಕ್ರೂರಃ ಪುಣ್ಯಕೀರ್ತಿರನಾಮಯಃ ॥೧೦೧॥

೭೭೪ **ಪೂರ್ಣಃ** - ಸರ್ವವ್ಯಾಪೀ ಪರಬ್ರಹ್ಮ ಪರಮಾತ್ಮನು, ೭೭೫ **ಪೂರಯಿತಾ** - ಭಕ್ತರ ಅಭಿಲಾಷೆಯನ್ನು ಪೂರ್ಣ ಮಾಡುವವನು, ೭೭೬ **ಪುಣ್ಯಃ** - ಪರಮ ಪವಿತ್ರನು, ೭೭೭ **ಸುಕುಮಾರಃ** - ಸುಂದರ ಕುಮಾರರುಳ್ಳವನು, ೭೭೮ **ಸುಲೋಚನಃ** - ಸುಂದರ ಕಣ್ಣುಗಳುಳ್ಳವನು, ೭೭೯ **ಸಾಮಗೇಯಪ್ರಿಯಃ** - ಸಾಮಗಾನದ ಪ್ರೇಮಿ, ೭೮೦ **ಅಕ್ರೂರಃ** - ಕ್ರೂರತಾರಹಿತನು, ೭೮೧ **ಪುಣ್ಯಕೀರ್ತಿಃ** - ಪವಿತ್ರ ಕೀರ್ತಿಯುಳ್ಳವನು, ೭೮೨ **ಅನಾಮಯಃ** - ರೋಗ-ಶೋಕಗಳಿಂದ ರಹಿತನು. ॥೧೦೧॥

ಮನೋಜವಸ್ತೀರ್ಥಕರೋ ಜಟಿಲೋ ಜೀವಿತೇಶ್ವರಃ ।
ಜೀವಿತಾಂತಕರೋ ನಿತ್ಯೋ ವಸುರೇತಾ ವಸುಪ್ರದಃ ॥೧೦೨॥

೭೮೩. **ಮನೋಜವಃ** - ಮನಸ್ಸಿನಂತೆ ವೇಗಶಾಲಿಯು, ೭೮೪ **ತೀರ್ಥಕರಃ** - ತೀರ್ಥಗಳ ನಿರ್ಮಾತ್ರನು, ೭೮೫ **ಜಟಿಲಃ** - ಜಟಾಧಾರೀ, ೭೮೬ **ಜೀವಿತೇಶ್ವರಃ** - ಎಲ್ಲರ ಪ್ರಾಣೇಶ್ವರನು, ೭೮೭ **ಜೀವಿತಾಂತಕರಃ** - ಪ್ರಳಯಕಾಲದಲ್ಲಿ ಎಲ್ಲರ ಜೀವನವನ್ನು ಅಂತ್ಯಗೊಳಿಸುವವನು, ೭೮೮ **ನಿತ್ಯಃ** - ಸನಾತನನು, ೭೮೯ **ವಸುರೇತಾಃ**-ಸುವರ್ಣಮಯ ವೀರ್ಯವುಳ್ಳವನು, ೭೯೦ **ವಸುಪ್ರದಃ** - ಧನದಾತಾ. ॥೧೦೨॥

ಸದ್ಗತಿಃ ಸತ್ಕೃತಿಃ ಸಿದ್ಧಿಃ ಸಜ್ಜಾತಿಃ ಖಿಲಕಂಟಕಃ ।
ಕಲಾಧರೋ ಮಹಾಕಾಲಭೂತಃ ಸತ್ಯಪರಾಯಣಃ ॥೧೦೩॥

೭೯೧ **ಸದ್ಗತಿಃ** - ಸತ್ಪುರುಷರ ಆಶ್ರಯನು, ೭೯೨ **ಸತ್ಕೃತಿಃ** - ಶುಭ ಕರ್ಮಗಳನ್ನು ಮಾಡುವವನು, ೭೯೩. **ಸಿದ್ಧಿಃ** - ಸಿದ್ಧಿಸ್ವರೂಪೀ, ೭೯೪ **ಸಜ್ಜಾತಿಃ** - ಸತ್ಪುರುಷರ ಜನ್ಮದಾತನು, ೭೯೫ **ಖಿಲಕಂಟಕಃ** - ದುಷ್ಟರಿಗೆ ಕಂಟಕ ಪ್ರಾಯನು, ೭೯೬ **ಕಲಾಧರಃ** - ಕಲಾಧರನು, ೭೯೭ **ಮಹಾಕಾಲಭೂತಃ** - ಮಹಾಕಾಲವೆಂಬ ಜ್ಯೋತಿರ್ಲಿಂಗ ಸ್ವರೂಪೀ ಅಥವಾ ಕಾಲನಿಗೂ ಕಾಲನಾದ್ದರಿಂದ ಮಹಾಕಾಲನು, ೭೯೮ **ಸತ್ಯಪರಾಯಣಃ** - ಸತ್ಯನಿಷ್ಠ. ॥೧೦೩॥

ಲೋಕಲಾವಣ್ಯಕರ್ತಾ ಚ ಲೋಕೋತ್ತರಸುಖಾಲಯಃ ।
ಚಂದ್ರಸಂಜೀವನಃ ಶಾಸ್ತಾ ಲೋಕಗೂಢೋ ಮಹಾಧಿಪಃ ॥೧೦೪॥

೯೯೯ **ಲೋಕಲಾವಣ್ಯಕರ್ತಾ** – ಎಲ್ಲ ಜನರಿಗೆ ಸೌಂದರ್ಯವನ್ನು ಕೊಡುವವನು, ೧೦೦ **ಲೋಕೋತ್ತರಸುಖಾಲಯಃ** – ಲೋಕೋತ್ತರ ಸುಖದ ಆಶ್ರಯನು, ೧೦೧ **ಚಂದ್ರಂಸಜೀವನಃ ಶಾಸ್ತಾ** – ಸೋಮನಾಥ ರೂಪದಿಂದ ಚಂದ್ರನಿಗೆ ಜೀವನ ಪ್ರದಾನಮಾಡಿದವನು, ಸರ್ವಶಾಸಕ ಶಿವನು, ೧೦೨ **ಲೋಕಗೂಢಃ** – ಸಮಸ್ತ ಜಗತ್ತಿನಲ್ಲಿ ಅವ್ಯಕ್ತ ರೂಪದಿಂದ ವ್ಯಾಪಕನು, ೧೦೩. **ಮಹಾಧಿಪಃ** – ಮಹೇಶ್ವರನು. ॥೧೦೪॥

ಲೋಕಬಂಧುರ್ಲೋಕನಾಥಃ ಕೃತಜ್ಞಃ ಕೀರ್ತಿಭೂಷಣಃ ।
ಅನಪಾಯೋಽಕ್ಷರಃ ಕಾಂತಃ ಸರ್ವಶಸ್ತ್ರಭೃತಾಂ ವರಃ ॥೧೦೫॥

೧೦೪ **ಲೋಕಬಂಧುರ್ಲೋಕನಾಥಃ** – ಸಮಸ್ತ ಲೋಕಗಳ ಬಂಧು ಹಾಗೂ ರಕ್ಷಕನು, ೧೦೫ **ಕೃತಜ್ಞಃ** – ಉಪಕಾರವನ್ನು ಸ್ಮರಿಸುವವನು, ೧೦೬ **ಕೀರ್ತಿಭೂಷಣಃ** – ಉತ್ತಮ ಕೀರ್ತಿಯಿಂದ ಭೂಷಿತನು, ೧೦೭ **ಅನಪಾಯೋಽಕ್ಷರಃ** – ವಿನಾಶರಹಿತ – ಅವಿನಾಶೀ, ೧೦೮ **ಕಾಂತಃ** – ಪ್ರಜಾಪತಿ ದಕ್ಷನ ಅಂತ ಮಾಡುವವನು, ೧೦೯ **ಸರ್ವಶಸ್ತ್ರಭೃತಾಂ ವರಃ** – ಸಮಸ್ತ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನು. ॥೧೦೫॥

ತೇಜೋಮಯೋ ದ್ಯುತಿಧರೋ ಲೋಕಾನಾಮಗ್ರಣೀರಣುಃ ।
ಶುಚಿಸ್ಮಿತಃ ಪ್ರಸನ್ನಾತ್ಮಾ ದುರ್ಜೇಯೋ ದುರತಿಕ್ರಮಃ ॥೧೦೬॥

೧೧೦ **ತೇಜೋಮಯೋ ದ್ಯುತಿಧರಃ** – ತೇಜಸ್ವೀ ಮತ್ತು ಕಾಂತಿಯುಳ್ಳವನು, ೧೧೧ **ಲೋಕಾನಾಮಗ್ರಣೀಃ** – ಸಂಪೂರ್ಣ ಜಗತ್ತಿಗಾಗಿ ಅಗ್ರಗಣ್ಯ ದೇವತೆ ಅಥವಾ ಜಗತ್ತನ್ನು ಮುಂದೆ ಬೆಳೆಸುವವನು, ೧೧೨ **ಅಣುಃ** – ಅತ್ಯಂತ ಸೂಕ್ಷ್ಮನು, ೧೧೩. **ಶುಚಿಸ್ಮಿತಃ** – ಪವಿತ್ರ ಮುಗುಳ್ನಗೆ ಯುಳ್ಳವನು, ೧೧೪ **ಪ್ರಸನ್ನಾತ್ಮಾ** – ಹರ್ಷತುಂಬಿದ ಹೃದಯವಂತನು, ೧೧೫ **ದುರ್ಜೇಯಃ** – ಪರರಿಂದ ಜಯಿಸಲು ಅತ್ಯಂತ ಕಠಿಣನು, ೧೧೬ **ದುರತಿಕ್ರಮಃ** – ದುರ್ಲಂಘ್ಯನು, (ಯಾರಿಂದಲೂ ದಾಟಲಾರದವನು.) ॥೧೦೬॥

ಜ್ಯೋತಿರ್ಮಯೋ ಜಗನ್ನಾಥೋ ನಿರಾಕಾರೋ ಜಲೇಶ್ವರಃ ।
ತುಂಬವೀಣೋ ಮಹಾಕೋಪೋ ವಿಶೋಕಃ ಶೋಕನಾಶನಃ ॥೧೦೭॥

೧೧೭ **ಜ್ಯೋತಿರ್ಮಯಃ** – ತೇಜೋಮಯನು, ೧೧೮ **ಜಗನ್ನಾಥಃ** – ವಿಶ್ವನಾಥನು, ೧೧೯ **ನಿರಾಕಾರಃ** – ಆಕಾರರಹಿತ ಪರಮಾತ್ಮನು, ೧೨೦ **ಜಲೇಶ್ವರಃ** – ಜಲದ ಸ್ವಾಮಿ, ೧೨೧ **ತುಂಬವೀಣಃ** – ಸೋರೆಕಾಯಿಯ ವೀಣೆಯನ್ನು ನುಡಿಸುವವನು, ೧೨೨ **ಮಹಾಕೋಪಃ** – ಸಂಹಾರಕಾಲದಲ್ಲಿ ಮಹಾಕ್ರೋಧವನ್ನು ಮಾಡುವವನು, ೧೨೩. **ವಿಶೋಕಃ** – ಶೋಕರಹಿತನು, ೧೨೪ **ಶೋಕನಾಶನಃ** – ಶೋಕವನ್ನು ನಾಶ ಮಾಡುವವನು ॥೧೦೭॥

ತ್ರಿಲೋಕಪಸ್ತ್ರಿಲೋಕೇಶಃ ಸರ್ವಶುದ್ಧಿರಧೋಕ್ಷಜಃ ।
ಅವ್ಯಕ್ತಲಕ್ಷಣೋ ದೇವೋ ವ್ಯಕ್ತಾವ್ಯಕ್ತೋ ವಿಶಾಂಪತಿಃ ॥೧೦೮॥

೧೨೫ **ತ್ರಿಲೋಕಪಃ** – ಮೂರು ಲೋಕಗಳನ್ನು ಪಾಲಿಸುವವನು, ೧೨೬ **ತ್ರಿಲೋಕೇಶಃ** – ತ್ರೈಭುವನಗಳ ಒಡೆಯ, ೧೨೭ **ಸರ್ವಶುದ್ಧಿಃ** – ಎಲ್ಲರನ್ನು ಶುದ್ಧ ಗೊಳಿಸುವವನು, ೧೨೮ **ಅಧೋಕ್ಷಜಃ** – ಇಂದ್ರಿಯಗಳಿಂದ ಮತ್ತು ಅವುಗಳ ವಿಷಯಗಳಿಂದ ಅತೀತನು, ೧೨೯ **ಅವ್ಯಕ್ತ ಲಕ್ಷಣೋದೇವಃ** – ಅವ್ಯಕ್ತ ಲಕ್ಷಣಗಳುಳ್ಳ ದೇವನು, ೧೩೦ **ವ್ಯಕ್ತಾವ್ಯಕ್ತಃ** – ಸ್ಥೂಲಸೂಕ್ಷ್ಮರೂಪಿಯು, ೧೩೧ **ವಿಶಾಂಪತಿಃ** – ಪ್ರಜೆಗಳ ಪಾಲಕನು. ॥೧೦೮॥

ವರಶೀಲೋ ವರಗುಣಃ ಸಾರೋ ಮಾನಧನೋ ಮಯಃ ।
ಬ್ರಹ್ಮಾ ವಿಷ್ಣುಃ ಪ್ರಜಾಪಾಲೋ ಹಂಸೋ ಹಂಸಗತಿರ್ವಯಃ ॥೧೦೯॥

೧೩೨ **ವರಶೀಲಃ** – ಶ್ರೇಷ್ಠ ಸ್ವಭಾವವುಳ್ಳವನು, ೧೩೩. **ವರಗುಣಃ** – ಉತ್ತಮ ಗುಣಗಳುಳ್ಳವನು, ೧೩೪ **ಸಾರಃ** – ಸಾರತತ್ತ್ವನು, ೧೩೫ **ಮಾನಧನಃ** – ಸ್ವಾಭಿಮಾನದ ಧನಿ, ೧೩೬ **ಮಯಃ** – ಸುಖಸ್ವರೂಪನು, ೧೩೭ **ಬ್ರಹ್ಮಾ** – ಸೃಷ್ಟಿಕರ್ತಾ ಬ್ರಹ್ಮ, ೧೩೮ **ವಿಷ್ಣುಃ ಪ್ರಜಾಪಾಲಃ** – ಪ್ರಜಾಪಾಲಕ ವಿಷ್ಣು, ೧೩೯ **ಹಂಸಃ** – ಸೂರ್ಯಸ್ವರೂಪಿ, ೧೪೦ **ಹಂಸಗತಿಃ** – ಹಂಸದಂತೆ ನಡೆಯುವವನು, ೧೪೧ **ವಯಃ** – ಗರುಡ ಪಕ್ಷಿ. ॥೧೦೯॥

ವೇಧಾ ವಿಧಾತಾ ಧಾತಾ ಚ ಸ್ರಷ್ಟಾ ಹರ್ತಾ ಚತುರ್ಮುಖಃ ।
ಕೈಲಾಸಶಿಖಿರಾವಾಸೀ ಸರ್ವಾವಾಸೀ ಸದಾಗತಿಃ ॥೧೧೦॥

೧೪೨ **ವೇಧಾ ವಿಧಾತಾ ಧಾತಾ**–ಬ್ರಹ್ಮಾ, ಧಾತಾ ಮತ್ತು ವಿಧಾತಾ ಎಂಬ ದೇವತಾಸ್ವರೂಪನು, ೧೪೩. **ಸ್ರಷ್ಟಾ** – ಸೃಷ್ಟಿಕರ್ತಾ, ೧೪೪ **ಹರ್ತಾ** – ಸಂಹಾರಕಾರೀ, ೧೪೫ **ಚತುರ್ಮುಖಃ** – ನಾಲ್ಕು ಮುಖಗಳುಳ್ಳ ಬ್ರಹ್ಮಾ, ೧೪೬ **ಕೈಲಾಸ ಶಿಖಿರಾವಾಸೀ** – ಕೈಲಾಸ ಶಿಖರದಲ್ಲಿ ವಾಸಿಸುವವನು, ೧೪೭ **ಸರ್ವಾವಾಸೀ** – ಸರ್ವವ್ಯಾಪೀ, ೧೪೮ **ಸದಾಗತಿಃ** – ನಿರಂತರ ಗತಿಯುಳ್ಳ ವಾಯುದೇವರು. ॥೧೧೦॥

ಹಿರಣ್ಯಗರ್ಭೋ ದ್ರುಹಿಣೋ ಭೂತಪಾಲೋಽಥ ಭೂಪತಿಃ ।
ಸದ್ಯೋಗೀ ಯೋಗವಿದ್ಯೋಗೀ ವರದೋ ಬ್ರಾಹ್ಮಣಪ್ರಿಯಃ ॥೧೧೧॥

೧೪೯ **ಹಿರಣ್ಯಗರ್ಭಃ** – ಬ್ರಹ್ಮದೇವರು, ೧೫೦ **ದ್ರುಹಿಣಃ** – ಬ್ರಹ್ಮಾ, ೧೫೧ **ಭೂತಪಾಲಃ** – ಪ್ರಾಣಿಗಳನ್ನು ಪಾಲಿಸುವವನು, ೧೫೨ **ಭೂಪತಿಃ** – ಪೃಥಿವಿಯ ಒಡೆಯ, ೧೫೩. **ಸದ್ಯೋಗೀ** – ಶ್ರೇಷ್ಠಯೋಗೀ, ೧೫೪

ಯೋಗವಿದ್ಯೋಗೀ – ಯೋಗವಿದ್ಯೆಯನ್ನು ತಿಳಿದ ಯೋಗಿಯು, ೮೫೫ **ವರದಃ** – ವರಗಳನ್ನು ಕೊಡುವವನು, ೮೫೬ **ಬ್ರಾಹ್ಮಣಪ್ರಿಯಃ** – ಬ್ರಾಹ್ಮಣರ ಪ್ರೇಮಿ ॥೧೧೧॥

ದೇವಪ್ರಿಯೋ ದೇವನಾಥೋ ದೇವಜ್ಞೋ ದೇವಚಿಂತಕಃ ।
ವಿಷಮಾಕ್ಷೋ ವಿಶಾಲಾಕ್ಷೋ ವೃಷದೋ ವೃಷವರ್ಧನಃ ॥೧೧೨॥

೮೫೭ **ದೇವಪ್ರಿಯೋ ದೇವನಾಥಃ** – ದೇವತೆಗಳ ಪ್ರಿಯನು ಹಾಗೂ ರಕ್ಷಕನು, ೮೫೮ **ದೇವಜ್ಞಃ** – ದೇವತತ್ತ್ವವನ್ನು ತಿಳಿದವನು, ೮೫೯ **ದೇವಚಿಂತಕಃ** – ದೇವತೆಗಳ ಕುರಿತು ವಿಚಾರ ಮಾಡುವವನು, ೮೬೦ **ವಿಷಮಾಕ್ಷಃ** – ವಿಷಮ ಕಣ್ಣುಗಳುಳ್ಳವನು, ೮೬೧ **ವಿಶಾಲಾಕ್ಷಃ** – ವಿಶಾಲ ಕಣ್ಣುಗಳುಳ್ಳವನು, ೮೬೨ **ವೃಷದೋ ವೃಷವರ್ಧನಃ** – ಧರ್ಮದ ದಾನ ಮತ್ತು ವೃದ್ಧಿ ಮಾಡುವವನು. ॥೧೧೨॥

ನಿರ್ಮಮೋ ನಿರಹಂಕಾರೋ ನಿರ್ಮೋಹೋ ನಿರುಪದ್ರವಃ ।
ದರ್ಪಹಾ ದರ್ಪದೋ ದೃಪ್ತಃ ಸರ್ವರ್ತುಪರಿವರ್ತಕಃ ॥೧೧೩॥

೮೬೩. **ನಿರ್ಮಮಃ** – ಮಮತಾ ರಹಿತನು, ೮೬೪ **ನಿರಹಂಕಾರಃ** – ಅಹಂಕಾರಶೂನ್ಯನು, ೮೬೫ **ನಿರ್ಮೋಹಃ** – ಮೋಹಶೂನ್ಯನು, ೮೬೬ **ನಿರುಪದ್ರವಃ** – ಉಪದ್ರವ ಅಥವಾ ಉತ್ಪಾತದಿಂದ ದೂರನು, ೮೬೭ **ದರ್ಪಹಾ ದರ್ಪದಃ** – ದರ್ಪವನ್ನು ಕಳೆಯುವವನು ಮತ್ತು ಖಂಡಿಸುವವನು, ೮೬೮ **ದೃಪ್ತಃ** – ಸ್ವಾಭಿಮಾನೀ, ೮೬೯ **ಸರ್ವರ್ತುಪರಿವರ್ತಕಃ** – ಸಮಸ್ತ ಋತುಗಳನ್ನು ಬದಲಿಸುವವನು. ॥೧೧೩.॥

ಸಹಸ್ರಜಿತ್ ಸಹಸ್ರಾರ್ಚಿಃ ಸ್ನಿಗ್ಧಪ್ರಕೃತಿದಕ್ಷಿಣಃ ।
ಭೂತಭವ್ಯಭವನ್ನಾಥಃ ಪ್ರಭವೋ ಭೂತಿನಾಶನಃ ॥೧೧೪॥

೮೭೦ **ಸಹಸ್ರಜಿತ್** – ಸಾವಿರಾರುಗಳ ಮೇಲೆ ವಿಜಯ ಪಡೆಯುವವನು, ೮೭೧ **ಸಹಸ್ರಾರ್ಚಿಃ** – ಸಹಸ್ರ ಕಿರಣಗಳಿಂದ ಪ್ರಕಾಶಮಾನ ಸೂರ್ಯರೂಪೀ, ೮೭೨ **ಸ್ನಿಗ್ಧ ಪ್ರಕೃತಿ ದಕ್ಷಿಣಃ** – ಸ್ನೇಹಯುಕ್ತ ಸ್ವಭಾವವುಳ್ಳವನು ಹಾಗೂ ಉದಾರನು, ೮೭೩. **ಭೂತಭವ್ಯ ಭವನ್ನಾಥಃ** – ಭೂತ, ಭವಿಷ್ಯ ಮತ್ತು ವರ್ತಮಾನದ ಸ್ವಾಮಿ, ೮೭೪ **ಪ್ರಭವಃ** – ಎಲ್ಲರ ಉತ್ಪತ್ತಿಯ ಕಾರಣನು, ೮೭೫ **ಭೂತಿನಾಶನಃ** – ದುಷ್ಟರ ಐಶ್ವರ್ಯವನ್ನು ನಾಶ ಮಾಡುವವನು. ॥೧೧೪॥

ಅರ್ಥೋಽನರ್ಥೋ ಮಹಾಕೋಶಃ ಪರಕಾರ್ಯ್ಯೈಕಪಂಡಿತಃ ।
ನಿಷ್ಕಂಟಕಃ ಕೃತಾನಂದೋ ನಿರ್ವ್ಯಾಜೋ ವ್ಯಾಜಮರ್ದನ ॥೧೧೫॥

೮೭೬ **ಅರ್ಥಃ** – ಪರಮ ಪುರುಷಾರ್ಥರೂಪೀ, ೮೭೭ **ಅನರ್ಥಃ** – ಪ್ರಯೋಜನರಹಿತನು, ೮೭೮ **ಮಹಾಕೋಶಃ**– ಅನಂತ ಧನರಾಶಿಯ ಸ್ವಾಮಿ, ೮೭೯ **ಪರಕಾರ್ಯ್ಯೈಪಂಡಿತಃ** – ಪರರ ಕಾರ್ಯವನ್ನು ಸಿದ್ಧಗೊಳಿಸುವ ಕಲೆಯಲ್ಲಿ ಏಕಮಾತ್ರ ವಿದ್ವಾಂಸನು, ೮೮೦ **ನಿಷ್ಕಂಟಕಃ** – ಕಂಕಟರಹಿತನು, ೮೮೧ **ಕೃತಾನಂದಃ** – ನಿತ್ಯಸಿದ್ಧ ಆನಂದ ಸ್ವರೂಪನು, ೮೮೨ **ನಿರ್ವ್ಯಾಜೋ ವ್ಯಾಜಮರ್ದನಃ** – ಸ್ವತಃ ಕಪಟರಹಿತನಾಗಿ ಇತರರ ಕಪಟವನ್ನು ನಾಶಗೊಳಿಸುವವನು. ॥೧೧೫॥

ಸತ್ತ್ವವಾನ್ ಸಾತ್ತ್ವಿಕಃ ಸತ್ಯಕೀರ್ತಿಃ ಸ್ನೇಹಕೃತಾಗಮಃ ।
ಅಕಂಪಿತೋ ಗುಣಗ್ರಾಹೀ ನೈಕಾತ್ಮಾ ನೈಕಕರ್ಮಕೃತ್ ॥೧೧೬॥

೮೮೩. **ಸತ್ತ್ವವಾನ್** – ಸತ್ತ್ವಗುಣದಿಂದ ಕೂಡಿದ, ೮೮೪ **ಸಾತ್ತ್ವಿಕಃ** – ಸತ್ತ್ವನಿಷ್ಠ ೮೮೫ **ಸತ್ಯಕೀರ್ತಿಃ** –ಸತ್ಯಕೀರ್ತಿಯುಳ್ಳವನು, ೮೮೬ **ಸ್ನೇಹಕೃತಾಗಮಃ** – ಜೀವಿಗಳಲ್ಲಿ ಪ್ರೀತಿಯಿದ್ದ ಕಾರಣ ಬೇರೆ-ಬೇರೆ ಆಗಮಗಳನ್ನು ಪ್ರಕಾಶಿಸುವವನು, ೮೮೭ **ಅಕಂಪಿತಃ** – ಸ್ಥಿರನು, ೮೮೮ **ಗುಣಗ್ರಾಹೀ** – ಗುಣಗಳನ್ನು ಆದರಿಸುವವನು, ೮೮೯ **ನೈಕಾತ್ಮಾ ನೈಕಕರ್ಮಕೃತ್** – ಅನೇಕರೂಪನಾಗಿ ಅನೇಕ ಪ್ರಕಾರದ ಕರ್ಮಗಳನ್ನು ಮಾಡುವವನು. ॥೧೧೬॥

ಸುಪ್ರೀತಃ ಸುಮುಖಃ ಸೂಕ್ಷ್ಮಃ ಸುಕರೋ ದಕ್ಷಿಣಾನಿಲಃ ।
ನಂದಿಸ್ಕಂಧಧರೋ ಧುರ್ಯಃ ಪ್ರಕಟಃ ಪ್ರೀತಿವರ್ಧನಃ ॥೧೧೭॥

೮೯೦ **ಸುಪ್ರೀತಃ** – ಅತ್ಯಂತ ಪ್ರಸನ್ನನು, ೮೯೧ **ಸುಮುಖಃ** – ಸುಂದರ ಮುಖವುಳ್ಳವನು, ೮೯೨ **ಸೂಕ್ಷ್ಮಃ** – ಸ್ಥೂಲಭಾವದಿಂದ ರಹಿತನು, ೮೯೩. **ಸುಕರಃ** – ಸುಂದರ ಕೈಗಳುಳ್ಳವನು, ೮೯೪ **ದಕ್ಷಿಣಾನಿಲಃ** – ಮಲಯಾನಿಲದಂತೆ ಸುಖಕರನು, ೮೯೫ **ನಂದಿಸ್ಕಂಧರಃ** – ನಂದಿಯ ಬೆನ್ನಮೇಲೆ ಕುಳಿತುಕೊಳ್ಳುವವನು, ೮೯೬ **ಧುರ್ಯಃ** – ಜವಾಬುದಾರಿಯನ್ನು ಸಮರ್ಥವಾಗಿ ನಿಭಾಯಿಸುವವನು, ೮೯೭ **ಪ್ರಕಟಃ** – ಭಕ್ತರ ಮುಂದೆ ಪ್ರಕಟನಾಗುವವನು ಅಥವಾ ಜ್ಞಾನಿಗಳ ಮುಂದೆ ನಿತ್ಯ ಪ್ರಕಟನು, ೮೯೮ **ಪ್ರೀತಿವರ್ಧನಃ** – ಪ್ರೇಮವನ್ನು ಬೆಳೆಸುವವನು. ॥೧೧೭॥

ಅಪರಾಜಿತಃ ಸರ್ವಸತ್ತ್ವೋ ಗೋವಿಂದಃ ಸತ್ತ್ವವಾಹನಃ ।
ಅಧೃತಃ ಸ್ವಧೃತಃ ಸಿದ್ಧಃ ಪೂತಮೂರ್ತಿರ್ಯಶೋಧನಃ ॥೧೧೮॥

೮೯೯ **ಅಪರಾಜಿತಃ** – ಯಾರಿಂದಲೂ ಸೋಲದವನು, ೯೦೦ **ಸರ್ವಸತ್ತ್ವಃ** – ಸಂಪೂರ್ಣ ಸತ್ತ್ವಗುಣದ ಆಶ್ರಯ ಅಥವಾ ಸಮಸ್ತ ಪ್ರಾಣಿಗಳ ಉತ್ಪತ್ತಿಯ ಕಾರಣನು, ೯೦೧ **ಗೋವಿಂದಃ** – ಗೋಲೋಕವನ್ನು ಕರುಣಿಸುವವನು, ೯೦೨ **ಸತ್ತ್ವವಾಹನಃ** – ಸತ್ತ್ವಸ್ವರೂಪೀ ಧರ್ಮಮಯ ವೃಷಭವನ್ನು ವಾಹನವುಳ್ಳವನು, ೯೦೩. **ಅಧೃತಃ** – ಆಧಾರರಹಿತನು, ೯೦೪ **ಸ್ವಧೃತಃ** – ತಾನೇ ತನ್ನಲ್ಲಿ ಸ್ಥಿತನು,

೯೦೫ **ಸಿದ್ಧಃ** – ನಿತ್ಯಸಿದ್ಧನು, ೯೦೬ **ಪೂತಮೂರ್ತಿಃ** – ಪವಿತ್ರ ಶರೀರವುಳ್ಳವನು, ೯೦೭ **ಯಶೋಧನಃ** – ಸುಕೀರ್ತಿಯ ಧನೀ. ॥೧೧೮॥

ವಾರಾಹಶೃಂಗಧೃಕ್ ಶೃಂಗೀ ಬಲವಾನೇಕನಾಯಕಃ ।
ಶ್ರುತಿಪ್ರಕಾಶಃ ಶ್ರುತಿಮಾನೇಕ ಬಂಧುರನೇಕ ಕೃತ್ ॥೧೧೯॥

೯೦೮ **ವಾರಾಹ ಶೃಂಗಧೃಕ್ ಶೃಂಗೀ** – ವಾರಾಹವನ್ನು ಕೊಂದು ಅದರ ದಾಡೆಯನ್ನು ಕೊಂಬಿನಂತೆ ಧರಿಸಿದ್ದರಿಂದ ಶೃಂಗಿಯೆಂದು ಪ್ರಸಿದ್ಧನು, ೯೦೯ **ಬಲವಾನ್** – ಶಕ್ತಿಶಾಲಿಯು, ೯೧೦ **ಏಕನಾಯಕಃ** – ಅದ್ವಿತೀಯ ಮುಖಂಡನು, ೯೧೧ **ಶ್ರುತಿಪ್ರಕಾಶಃ** – ವೇದಗಳನ್ನು ಪ್ರಕಾಶಿಸುವವನು, ೯೧೨ **ಶ್ರುತಿಮಾನ್** – ವೇದಜ್ಞಾನದಿಂದ ಸಂಪನ್ನನು, ೯೧೩ **ಏಕಬಂಧುಃ** – ಎಲ್ಲರ ಏಕಮಾತ್ರ ಸಹಾಯನು, ೯೧೪ **ಅನೇಕಕೃತ್** – ಅನೇಕ ಪ್ರಕಾರದ ಪದಾರ್ಥಗಳನ್ನು ಸೃಷ್ಟಿಸುವವನು. ॥೧೧೯॥

ಶ್ರೀಮತ್ಸಲ ಶಿವಾರಂಭಃ ಶಾಂತಭದ್ರಃ ಸಮೋ ಯಶಃ ।
ಭೂಶಯೋ ಭೂಷಣೋ ಭೂತಿರ್ಭೂತಕೃದ್ ಭೂತಭಾವನಃ ॥೧೨೦॥

೯೧೫ **ಶ್ರೀಮತ್ಸಲ ಶಿವಾರಂಭಃ** – ಶ್ರೀಮತ್ಸಧಾರೀ ವಿಷ್ಣುವಿಗಾಗಿ ಮಂಗಳಕಾರನು, ೯೧೬ **ಶಾಂತಭದ್ರಃ** – ಶಾಂತ ಹಾಗೂ ಮಂಗಳ ಸ್ವರೂಪನು, ೯೧೭ **ಸಮಃ** – ಸರ್ವತ್ರ ಸಮಭಾವ ಇರಿಸುವವನು, ೯೧೮ **ಯಶಃ** – ಕೀರ್ತಿ ಸ್ವರೂಪನು, ೯೧೯ **ಭೂಶಯಃ** – ಪೃಥಿವಿಯ ಮೇಲೆ ಶಯನ ಮಾಡುವವನು, ೯೨೦ **ಭೂಷಣಃ** – ಎಲ್ಲರನ್ನು ಭೂಷಿತಗೊಳಿಸುವವನು, ೯೨೧ **ಭೂತಿಃ** – ಕಲ್ಯಾಣಸ್ವರೂಪನು, ೯೨೨ **ಭೂತಕೃತ್** – ಪ್ರಾಣಿಗಳನ್ನು ಸೃಷ್ಟಿಸುವವನು, ೯೨೩ **ಭೂತಭಾವನಃ** – ಪ್ರಾಣಿಗಳ ಉತ್ಪಾದಕನು. ॥೧೨೦॥

ಆಕಂಪೋ ಭಕ್ತಿಕಾಯಸ್ತು ಕಾಲಹಾ ನೀಲಲೋಹಿತಃ ।
ಸತ್ಯವ್ರತ ಮಹಾತ್ಯಾಗೀ ನಿತ್ಯಶಾಂತಿ ಪರಾಯಣಃ ॥೧೨೧॥

೯೨೪ **ಆಕಂಪಃ** – ಕಂಪಿಸದೇ ಇರುವವನು, ೯೨೫ **ಭಕ್ತಿಕಾಯಃ** – ಭಕ್ತಿಸ್ವರೂಪೀ, ೯೨೬ **ಕಾಲಹಾ** – ಕಾಲನಾಶಕನು, ೯೨೭ **ನೀಲಲೋಹಿತಃ** – ನೀಲ ಮತ್ತು ಲೋಹಿತ ವರ್ಣವುಳ್ಳವನು, ೯೨೮ **ಸತ್ಯವ್ರತ ಮಹಾತ್ಯಾಗೀ** – ಸತ್ಯವ್ರತಧಾರೀ ಹಾಗೂ ಮಹಾತ್ಯಾಗಿಯು, ೯೨೯ **ನಿತ್ಯಶಾಂತಿ ಪರಾಯಣಃ** – ನಿರಂತರ ಶಾಂತಸ್ವರೂಪನು. ॥೧೨೧॥

ಪರಾರ್ಥವೃತ್ತಿರ್ವರದೋ ವಿರಕ್ತಸ್ತು ವಿಶಾರದಃ ।
ಶುಭದಃ ಶುಭಕರ್ತಾ ಚ ಶುಭನಾಮಾ ಶುಭಃ ಸ್ವಯಮ್ ॥೧೨೨॥

೯೩೦ **ಪರಾರ್ಥವೃತ್ತಿರ್ವರದಃ** – ಪರೋಪಕಾರೀ ವೃತೀ ಹಾಗೂ ಅಭೀಷ್ಟ ವರದಾತಾ, ೯೩೧ **ವಿರಕ್ತಃ** – ವೈರಾಗ್ಯವಂತನು, ೯೩೨ **ವಿಶಾರದಃ** – ವಿಜ್ಞಾನವಂತನು, ೯೩೩ **ಶುಭದಃ ಶುಭಕರ್ತಾ** – ಶುಭವನ್ನು ಕೊಡುವವನು ಮತ್ತು ಮಾಡುವವನು, ೯೩೪ **ಶುಭನಾಮಾ ಶುಭಃ ಸ್ವಯಮ್** – ಸ್ವಯಂ ಶುಭಸ್ವರೂಪಿಯಾದ್ದರಿಂದ ಶುಭ ನಾಮಧಾರೀ. ॥೧೨೨॥

ಅನರ್ಥಿತೋಽಗುಣಃ ಸಾಕ್ಷೀ ಹ್ಯಕರ್ತಾ ಕನಕಪ್ರಭಃ ।
ಸ್ವಭಾವಭದ್ರೋ ಮಧ್ಯಸ್ಥಃ ಶತುಘ್ನೋ ವಿಘ್ನನಾಶನಃ ॥೧೨೩॥

೯೩೫ **ಅನರ್ಥಿತಃ** – ಯಾಚನಾರಹಿತನು, ೯೩೬ **ಅಗುಣಃ** –ನಿರ್ಗುಣನು, ೯೩೭ **ಸಾಕ್ಷಿ ಅಕರ್ತಾ** – ದೃಷ್ಟಾ ಹಾಗೂ ಕರ್ತೃತ್ವರಹಿತನು, ೯೩೮ **ಕನಕಪ್ರಭಃ** – ಸುವರ್ಣದಂತೆ ಕಾಂತಿಯುಳ್ಳವನು, ೯೩೯ **ಸ್ವಭಾವಭದ್ರಃ** – ಸ್ವಭಾವತಃ ಕಲ್ಯಾಣಕಾರೀ, ೯೪೦ **ಮಧ್ಯಸ್ಥಃ** – ಉದಾಸೀನನು, ೯೪೧ **ಶತ್ರುಘ್ನಃ** – ಶತ್ರುನಾಶಕನು, ೯೪೨ **ವಿಘ್ನನಾಶನಃ** – ವಿಘ್ನಗಳನ್ನು ನಿವಾರಿಸುವವನು. ॥೧೨೩॥

ಶಿಖಿಂಡೀ ಕವಚೀ ಶೂಲೀ ಜಟೀ ಮುಂಡೀ ಚ ಕುಂಡಲೀ ।
ಅಮೃತ್ಯುಃ ಸರ್ವದೃಕ್ ಸಿಂಹಸ್ತೇಜೋರಾಶಿರ್ಮಹಾಮಣಿಃ ॥೧೨೪॥

೯೪೩ **ಶಿಖಿಂಡೀ ಕವಚೀ ಶೂಲೀ** – ನವಿಲುಗರಿ, ಕವಚ ಮತ್ತು ತ್ರಿಶೂಲಗಳನ್ನು ಧರಿಸುವವನು, ೯೪೪ **ಜಟೀ ಮುಂಡೀ ಚ ಕುಂಡಲೀ** – ಜಟಾ, ಮುಂಡಮಾಲಾ ಮತ್ತು ಕುಂಡಲಗಳನ್ನು ಧರಿಸುವವನು, ೯೪೫ **ಅಮೃತ್ಯುಃ** – ಮೃತ್ಯು ರಹಿತನು, ೯೪೬ **ಸರ್ವದೃಕ್ ಸಿಂಹಃ** – ಸರ್ವಜ್ಞರಲ್ಲಿ ಶ್ರೇಷ್ಠನು, ೯೪೭ **ತೇಜೋರಾಶಿರ್ಮಹಾಮಣಿಃ** – ತೇಜಃ ಪುಂಜ ಮಹಾಮಣಿ ಕೌಸ್ತುಭಾದಿರೂಪನು. ॥೧೨೪॥

ಅಸಂಖ್ಯೇಯೋಽಪ್ರಮೇಯಾತ್ಮಾ ವೀರ್ಯವಾನ್ ವೀರ್ಯಕೋವಿದಃ ।
ವೇದ್ಯಶ್ಚೈವ ವಿಯೋಗಾತ್ಮಾ ಪರಾವರಮುನೀಶ್ವರಃ ॥೧೨೫॥

೯೪೮ **ಅಸಂಖ್ಯೇಯೋಽಪ್ರಮೇಯಾತ್ಮಾ** – ಅಸಂಖ್ಯ ನಾಮ, ರೂಪ, ಗುಣಗಳಿಂದ ಕೂಡಿದ್ದರಿಂದ ಯಾರಿಂದಲೂ ಅಳೆಯಲು ಆಗದವನು, ೯೪೯ **ವೀರ್ಯವಾನ್ ವೀರ್ಯಕೋವಿದಃ** – ಪರಾಕ್ರಮೀ ಹಾಗೂ ಪರಾಕ್ರಮವನ್ನು ಬಲ್ಲವನು, ೯೫೦ **ವೇದ್ಯಃ** – ತಿಳಿಯಲು ಯೋಗ್ಯನು, ೯೫೧ **ವಿಯೋಗಾತ್ಮಾ**–ದೀರ್ಘಕಾಲದವರೆಗೆ ಸತಿಯ ವಿಯೋಗ ದಲ್ಲಿ ಅಥವಾ ವಿಶಿಷ್ಟ ಯೋಗದ ಸಾಧನೆಯಲ್ಲಿ ಮುಳುಗಿದ ಮನಸ್ಸುಳ್ಳವನು, ೯೫೨ **ಪರಾವರ ಮುನೀಶ್ವರಃ** – ಭೂತ, ಭವಿಷ್ಯಗಳನ್ನು ತಿಳಿದ ಮುನೀಶ್ವರ ರೂಪನು. ॥೧೨೫॥

ಅನುತ್ತಮೋ ದುರಾಧರ್ಷೋ ಮಧುರಪ್ರಿಯದರ್ಶನಃ ।
ಸುರೇಶಃ ಶರಣಂ ಸರ್ವಃ ಶಬ್ದಬ್ರಹ್ಮ ಸತಾಂ ಗತಿಃ ॥೧೨೬॥

೯೫೩ **ಅನುತ್ತಮೋ ದುರಾಧರ್ಷಃ** – ಸರ್ವೋತ್ತಮ ಹಾಗೂ ದುರ್ಜಯನು, ೯೫೪ **ಮಧುರಪ್ರಿಯದರ್ಶನಃ** –

ಮನೋಹರ ದರ್ಶನನು ಹಾಗೂ ಪ್ರಿಯನಾಗಿರುವವನು, ೯೫೫ **ಸುರೇಶಃ** – ದೇವತೆಗಳ ಈಶ್ವರನು, ೯೫೬ **ಶರಣಮ್** – ಆಶ್ರಯದಾತಾ, ೯೫೭ **ಸರ್ವಃ** – ಸರ್ವಸ್ವರೂಪನು, ೯೫೮ **ಶಬ್ದಬ್ರಹ್ಮ ಸತಾಂ ಗತಿಃ** – ಪ್ರಣವಸ್ವರೂಪೀ ಹಾಗೂ ಸತ್ಪುರುಷರ ಆಶ್ರಯನು. ॥೧೨೬॥

ಕಾಲಪಕ್ಷಃ ಕಾಲಕಾಲಃ ಕಂಕಣೀಕೃತವಾಸುಕಿಃ ।
ಮಹೇಷ್ವಾಸೋ ಮಹೀಭರ್ತಾ ನಿಷ್ಕಲಂಕೋ ವಿಶೃಂಖಿಲಃ ॥೧೨೭॥

೯೫೯ **ಕಾಲಪಕ್ಷಃ**–ಕಾಲನು ಸಹಾಯಕನಾಗಿರುವವನು, ೯೬೦ **ಕಾಲ ಕಾಲಃ** – ಕಾಲನಿಗೂ ಕಾಲನು, ೯೬೧ **ಕಂಕಣೀಕೃತವಾಸುಕಿಃ** – ವಾಸುಕಿಯನ್ನು ತನ್ನ ಕೈಯಲ್ಲಿ ಬಳೆಯಂತೆ ಧರಿಸುವವನು, ೯೬೨ **ಮಹೇಷ್ವಾಸಃ** – ಮಹಾಧನುರ್ಧರನು, ೯೬೩. **ಮಹೀಭರ್ತಾ** – ಪೃಥಿವೀಪಾಲಕನು, ೯೬೪ **ನಿಷ್ಕಲಂಕಃ** – ಕಲಂಕಶೂನ್ಯನು, ೯೬೫ **ವಿಶೃಂಖಿಲಃ** – ಬಂಧನರಹಿತನು. ॥೧೨೭॥

ದ್ಯುಮಣಿಸ್ತರಣಿರ್ಧನ್ಯಃ ಸಿದ್ಧಿದಃ ಸಿದ್ಧಿಸಾಧನಃ ।
ವಿಶ್ವತಃ ಸಂವೃತಃ ಸ್ತುತ್ಯೋ ವ್ಯೂಢೋರಸ್ಕೋ ಮಹಾಭುಜಃ ॥೧೨೮॥

೯೬೬ **ದ್ಯುಮಣಿಸ್ತರಣಿಃ** – ಆಕಾಶದಲ್ಲಿ ಮಣಿಯಂತೆ ಪ್ರಕಾಶಮಾನ ಹಾಗೂ ಭಕ್ತರನ್ನು ಭವಸಾಗರದಿಂದ ದಾಟಿಸಲು ಹಡಗಿನಂತಿರುವ ಸೂರ್ಯನು, ೯೬೭ **ಧನ್ಯಃ** – ಕೃತಕೃತ್ಯನು, ೯೬೮ **ಸಿದ್ಧಿದಃ ಸಿದ್ಧಿಸಾಧನಃ** – ಸಿದ್ಧಿದಾತನು ಮತ್ತು ಸಿದ್ಧಿಯ ಸಾಧಕನು, ೯೬೯ **ವಿಶ್ವತಃ ಸಂವೃತಃ** – ಸುತ್ತಲೂ ಮಾಯೆಯಿಂದ ಆವೃತನು, ೯೭೦ **ಸ್ತುತ್ಯಃ** – ಸ್ತುತಿಗೆ ಯೋಗ್ಯನು, ೯೭೧ **ವ್ಯೂಢೋರಸ್ಕಃ** – ಅಗಲವಾದ ವಕ್ಷಃಸ್ಥಳವುಳ್ಳವನು, ೯೭೨ **ಮಹಾಭುಜಃ** – ದೊಡ್ಡದಾದ ಭುಜಗಳುಳ್ಳವನು. ॥೧೨೮॥

ಸರ್ವಯೋನಿರ್ನಿರಾತಂಕೋ ನರನಾರಾಯಣಪ್ರಿಯಃ ।
ನಿರ್ಲೇಪೋ ನಿಷ್ಪಪಂಚಾತ್ಮಾ ನಿರ್ವ್ಯಂಗ್ಯೋ ವ್ಯಂಗನಾಶನಃ ॥೧೨೯॥

೯೭೩. **ಸರ್ವಯೋನಿಃ** –ಎಲ್ಲರ ಉತ್ಪತ್ತಿಗೆ ಕಾರಣನು, ೯೭೪ **ನಿರಾತಂಕಃ** – ನಿರ್ಭಯನು, ೯೭೫ **ನರನಾರಾಯಣಪ್ರಿಯಃ** – ನರ-ನಾರಾಯಣರ ಪ್ರೇಮಿ ಅಥವಾ ಪ್ರಿಯತಮನು, ೯೭೬ **ನಿರ್ಲೋಪೋ ನಿಷ್ಪಪಂಚಾತ್ಮಾ** – ದೋಷಸಂಪರ್ಕದಿಂದ ರಹಿತನು ಹಾಗೂ ಜಗತ್ ಪ್ರಪಂಚದಿಂದ ಅತೀತ ಸ್ವರೂಪನು, ೯೭೭ **ನಿರ್ವ್ಯಂಗಃ** – ವಿಶಿಷ್ಟ ಅಂಗವುಳ್ಳವನು, ಪ್ರಾಣಿಗಳ ಪ್ರಾಕಟ್ಯಕ್ಕೆ ಕಾರಣನು, ೯೭೮ **ವ್ಯಂಗನಾಶನಃ** – ಯಜ್ಞಾದಿ ಕರ್ಮಗಳಲ್ಲಿ ಆಗುವ ಅಂಗವೈಗುಣ್ಯವನ್ನು ನಾಶಮಾಡುವವನು. ॥೧೨೯॥

ಸ್ತವ್ಯಃ ಸ್ತವಪ್ರಿಯಃ ಸ್ತೋತಾ ವ್ಯಾಸಮೂರ್ತಿರ್ನಿರಂಕುಶಃ ।
ನಿರವದ್ಯಮಯೋಪಾಯೋ ವಿದ್ಯಾರಾಶೀ ರಸಪ್ರಿಯಃ ॥೧೩೦॥

೯೭೯ **ಸ್ತವ್ಯಃ** – ಸ್ತುತಿಗೆ ಯೋಗ್ಯನು, ೯೮೦ **ಸ್ತವಪ್ರಿಯಃ** – ಸ್ತುತಿಯ ಪ್ರೇಮಿ, ೯೮೧ **ಸ್ತೋತಾ** – ಸ್ತುತಿಯನ್ನು ಮಾಡುವವನು, ೯೮೨ **ವ್ಯಾಸಮೂರ್ತಿಃ** – ವ್ಯಾಸಸ್ವರೂಪನು, ೯೮೩. **ನಿರಂಕುಶಃ** – ಅಂಕುಶರಹಿತ ಸ್ವತಂತ್ರನು, ೯೮೪ **ನಿರವದ್ಯಮಯೋಪಾಯಃ** – ಮೋಕ್ಷಪ್ರಾಪ್ತಿಯ ನಿರ್ದೋಷ ಉಪಾಯನು, ೯೮೫ **ವಿದ್ಯಾರಾಶಿಃ** – ವಿದ್ಯೆಗಳ ಸಾಗರನು, ೯೮೬ **ರಸಪ್ರಿಯಃ** – ಬ್ರಹ್ಮಾನಂದರಸದ ಪ್ರೇಮಿ. ॥೧೩.೦॥

ಪ್ರಶಾಂತಬುದ್ಧಿರಕ್ಷುಣ್ಣಃ ಸಂಗ್ರಹೀ ನಿತ್ಯಸುಂದರಃ ।
ವೈಯಾಘ್ರಧುರ್ಯೋ ಧಾತ್ರೀಶಃ ಶಾಕಲ್ಯಃ ಶರ್ವರೀಪತಿಃ ॥೧೩.೧॥

೯೮೭ **ಪ್ರಶಾಂತಬುದ್ಧಿಃ** – ಶಾಂತಬುದ್ಧಿಯುಳ್ಳವನು, ೯೮೮ **ಅಕ್ಷುಣ್ಣಃ** – ಕ್ಷೋಭ ಅಥವಾ ನಾಶರಹಿತನು, ೯೮೯ **ಸಂಗ್ರಹೀ** – ಭಕ್ತರನ್ನು ಸಂಗ್ರಹಿಸುವವನು, ೯೯೦ **ನಿತ್ಯಸುಂದರಃ** – ಸತತ ಮೋಹನರೂಪನು, ೯೯೧ **ವೈಯಾಘ್ರಧುರ್ಯಃ** – ವ್ಯಾಘ್ರಚರ್ಮಧಾರೀ, ೯೯೨ **ಧಾತ್ರೀಶಃ** – ಬ್ರಹ್ಮದೇವರಿಗೆ ಸ್ವಾಮಿ, ೯೯೩. **ಶಾಕಲ್ಯಃ** – ಶಾಕಲ್ಯ ಋಷಿರೂಪನು, ೯೯೪ **ಶರ್ವರೀಪತಿಃ** – ರಾತ್ರಿಯ ಸ್ವಾಮಿ ಚಂದ್ರನು. ॥೧೩.೧॥

ಪರಮಾರ್ಥಗುರುರ್ದತ್ತಃ ಸೂರಿರಾಶ್ರಿತವತ್ಸಲಃ ।
ಸೋಮೋ ರಸಜ್ಞೋ ರಸದಃ ಸರ್ವಸತ್ತ್ವಾವಲಂಬನಃ ॥೧೩.೨॥

೯೯೫ **ಪರಮಾರ್ಥಗುರುರ್ದತ್ತಃ ಸೂರಿಃ** – ಪರಮಾರ್ಥ ತತ್ತ್ವವನ್ನು ಉಪದೇಶಿಸುವ ಜ್ಞಾನೀ ಗುರು ದತ್ತಾತ್ರೇಯರೂಪನು, ೯೯೬ **ಆಶ್ರಿತ ವತ್ಸಲಃ** – ಶರಣಾಗತರ ಮೇಲೆ ದಯೆ ಮಾಡುವವನು, ೯೯೭ **ಸೋಮಃ** – ಉಮಾಸಹಿತನು, ೯೯೮ **ರಸಜ್ಞಃ** – ಭಕ್ತಿರಸದ ಜ್ಞಾತಾ, ೯೯೯ **ರಸದಃ** – ಪ್ರೇಮರಸ ಪ್ರದಾನ ಮಾಡುವವನು. ೧೦೦೦ **ಸರ್ವಸತ್ತ್ವಾವಲಂಬನಃ** – ಎಲ್ಲ ಪ್ರಾಣಿಗಳಿಗೆ ಆಸರೆಯಾಗಿರುವವನು. ॥೧೩.೨॥

ಈ ಪ್ರಕಾರ ಶ್ರೀಹರಿಯು ಪ್ರತಿದಿನವೂ ಸಹಸ್ರನಾಮಗಳಿಂದ ಭಗವಾನ್ ಶಿವನನ್ನು ಸ್ತುತಿಸುತ್ತಾ, ಸಹಸ್ರ ಕಮಲಗಳಿಂದ ಅವನನ್ನು ಪೂಜಿಸಿ, ಪ್ರಾರ್ಥಿಸುತ್ತಿದ್ದನು. ಒಂದು ದಿನ ಭಗವಾನ್ ಶಿವನ ಲೀಲೆಯಿಂದ ಒಂದು ಕಮಲವು ಕಡಿಮೆಯಾದಾಗ ಭಗವಾನ್ ವಿಷ್ಣುವು ತನ್ನ ಕಮಲದಂತಿರುವ ಕಣ್ಣನ್ನೇ ಕಿತ್ತು ಏರಿಸಿದನು. ಹೀಗೆ ಅವನಿಂದ ಪೂಜಿತನಾಗಿ, ಪ್ರಸನ್ನಗೊಂಡು ಶಿವನು ವಿಷ್ಣುವಿಗೆ ಚಕ್ರವನ್ನು ಕೊಟ್ಟು ಹೀಗೆ ನುಡಿದನು – ಹರಿಯೇ ! ಎಲ್ಲ ಪ್ರಕಾರದ ಅನರ್ಥಗಳ ಶಾಂತಿಗಾಗಿ ನೀನು ನನ್ನ ಸ್ವರೂಪವನ್ನು ಧ್ಯಾನಿಸು. ಅನೇಕಾನೇಕ ದುಃಖಿಗಳನ್ನು

ನಾಶಗೊಳಿಸಲಿಕ್ಕಾಗಿ ಈ ಸಹಸ್ರನಾಮಗಳನ್ನು ಪಠಿಸುತ್ತಾ ಇರಬೇಕು. ಸಮಸ್ತ ಮನೋರಥಗಳ ಸಿದ್ಧಿಗಾಗಿ ಸದಾ ನನ್ನ ಈ ಚಕ್ರವನ್ನು ಪ್ರಯತ್ನಪೂರ್ವಕ ಧರಿಸಿರಬೇಕು, ಇದು ಎಲ್ಲ ಚಕ್ರಗಳಲ್ಲಿ ಉತ್ತಮವಾಗಿದೆ. ಇತರರೂ ಕೂಡ ಪ್ರತಿದಿನವೂ ಈ ಸಹಸ್ರನಾಮಗಳನ್ನು ಪಠಿಸುವನೋ, ಅಥವಾ ಪಾಠಮಾಡಿಸುವನೋ, ಅವನಿಗೆ ಸ್ವಪ್ನದಲ್ಲಿಯೂ ಯಾವುದೇ ದುಃಖಿಗಳು ಪ್ರಾಪ್ತವಾಗಲಾರವು. ರಾಜರಿಂದ ಸಂಕಟವು ಪ್ರಾಪ್ತವಾದಾಗ ಮನುಷ್ಯನು ಸಾಂಗೋಪಾಂಗ ವಿಧಿಪೂರ್ವಕ ಈ ಸಹಸ್ರನಾಮಸ್ತೋತ್ರವನ್ನು ನೂರು ಬಾರಿ ಪಠಿಸಿದರೆ ನಿಶ್ಚಯವಾಗಿಯೂ ಶ್ರೇಯಸ್ಸಿಗೆ ಭಾಗಿಯಾಗುವನು. ಈ ಉತ್ತಮ ಸ್ತೋತ್ರವು ರೋಗದ ನಾಶಕವೂ, ವಿದ್ಯಾ, ಧನಗಳನ್ನು ಕೊಡುವುದೂ, ಸಂಪೂರ್ಣ ಅಭೀಷ್ಟಗಳನ್ನು ದೊರಕಿಸಿಕೊಡುವುದೂ, ಪುಣ್ಯಪ್ರದವೂ, ಸದಾ ಶಿವಭಕ್ತಿಯನ್ನು ಉಂಟುಮಾಡುವುದೂ ಆಗಿದೆ. ಯಾವ ಫಲದ ಉದ್ದೇಶದಿಂದ ಮನುಷ್ಯನು ಈ ಶ್ರೇಷ್ಠ ಸ್ತೋತ್ರವನ್ನು ಪಠಿಸಿದರೆ, ಅವನಿಗೆ ಆ ಫಲವು ನಿಸ್ಸಂದೇಹವಾಗಿ ದೊರೆಯುವುದು. ಪ್ರತಿದಿನವು ಬೆಳಿಗ್ಗೆ ಎದ್ದು ನನ್ನ ಪೂಜೆಯ ಬಳಿಕ ನನ್ನ ಎದುರಿಗೆ ಇದನ್ನು ಪಠಿಸುವವನಿಗೆ ಸಿದ್ಧಿಯು ದೂರವಾಗಿರುವುದಿಲ್ಲ. ಅವನಿಗೆ ಈ ಲೋಕದಲ್ಲಿ ಸಂಪೂರ್ಣ ಅಭೀಷ್ಟವನ್ನು ಕೊಡುವಂತಹ, ಸಿದ್ಧಿಯು ಪೂರ್ಣವಾಗಿ ಪ್ರಾಪ್ತವಾಗುತ್ತದೆ ಮತ್ತು ಅಂತ್ಯದಲ್ಲಿ ಅವನು ಸಾಯುಜ್ಯ ಮೋಕ್ಷಕ್ಕೆ ಭಾಗಿಯಾಗುತ್ತಾನೆ, ಇದರಲ್ಲಿ ಸಂಶಯವೇ ಇಲ್ಲ.

ಸೂತಪುರಾಣಿಕರು ಹೇಳುತ್ತಾರೆ - ಮುನೀಶ್ವರರೇ ! ಹೀಗೆ ಹೇಳಿ ಸರ್ವದೇವೇಶ್ವರ ಭಗವಾನ್ ರುದ್ರನು ಶ್ರೀಹರಿಯನ್ನು ಸ್ಪರ್ಶಿಸಿ, ಅವನು ನೋಡು-ನೋಡುತ್ತಾ ಅಲ್ಲೇ ಅಂತರ್ಧಾನನಾದನು. ಭಗವಾನ್ ವಿಷ್ಣುವು ಶಂಕರನ ಮಾತಿನಿಂದ ಹಾಗೂ ಆ ಶುಭ ಚಕ್ರವನ್ನು ಪಡೆದು ಮನಸ್ಸಿನಲ್ಲೇ ಸಂತೋಷಗೊಂಡನು. ಮತ್ತೆ ಅವನು ಶಂಭುವಿನ ಧ್ಯಾನಪೂರ್ವಕ ಈ ಸ್ತೋತ್ರವನ್ನು ಪಠಿಸತೊಡಗಿದನು. ಅವನು ತನ್ನ ಭಕ್ತರಿಗೂ ಕೂಡ ಇದನ್ನು ಉಪದೇಶಿಸಿದನು. ನಿಮ್ಮ ಪ್ರಶ್ನೆಗನುಸಾರ ನಾನು ಈ ಪ್ರಸಂಗವನ್ನು ತಿಳಿಸಿದೆ. ಅದು ಶ್ರೋತೃಗಳ ಪಾಪವನ್ನು ಕಳೆಯುವಂತಹುದು. ಇನ್ನು ಏನನ್ನು ಕೇಳಲು ಬಯಸುವಿರಿ?

(ಅಧ್ಯಾಯ ೩೫-೩೬)

❑ ❑ ❑

ಭಗವಾನ್ ಶಿವನನ್ನು ಸಂತುಷ್ಟಗೊಳಿಸುವ ವ್ರತಗಳ ವರ್ಣನೆ, ಶಿವರಾತ್ರಿ ವ್ರತದ ವಿಧಿ ಹಾಗೂ ಮಹಿಮೆಯ ಕಥೆ

ಅನಂತರ ಋಷಿಗಳು ಕೇಳಿದಾಗ ಸೂತಪುರಾಣಿಕರು ಶಿವನ ಆರಾಧನೆಯಿಂದ ಉತ್ತಮ, ಮನೋವಾಂಛಿತ ಫಲವನ್ನು ಪಡೆದುಕೊಂಡ ಅನೇಕ ಮಹಾಪುರುಷರ-ಸ್ತ್ರೀಯರ ಹೆಸರುಗಳನ್ನು ತಿಳಿಸಿದರು. ಬಳಿಕ ಋಷಿಗಳು ಕೇಳಿದರು - 'ವ್ಯಾಸಶಿಷ್ಯರೇ ! ಯಾವ ವ್ರತದಿಂದ ಭಗವಾನ್ ಶಿವನು ಸಂತುಷ್ಟನಾಗಿ ಉತ್ತಮ ಸುಖವನ್ನು ಕರುಣಿಸುವನು? ಯಾವ ವ್ರತದ ಅನುಷ್ಠಾನದಿಂದ ಭಕ್ತರಿಗೆ ಭೋಗ ಮೋಕ್ಷ ದೊರೆಯುವುದೋ, ಅದನ್ನು ನೀವು ವಿಶೇಷವಾಗಿ ವರ್ಣಿಸಿರಿ.'

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ ! ನೀವು ಕೇಳಿದ ಮಾತನ್ನೇ ಹಿಂದೊಮ್ಮೆ ಬ್ರಹ್ಮಾ ವಿಷ್ಣು ಮತ್ತು ಪಾರ್ವತಿಯು ಭಗವಾನ್ ಶಿವನಲ್ಲಿ ಕೇಳಿದ್ದರು. ಇದರ ಉತ್ತರವಾಗಿ ಶಿವನು ಹೇಳಿದುದನ್ನೇ ನಾನು ನಿಮಗೆ ತಿಳಿಸುತ್ತೇನೆ.

ಭಗವಾನ್ ಶಿವನು ಹೇಳಿದನು - ಭೋಗ ಮತ್ತು ಮೋಕ್ಷಗಳನ್ನು ಕೊಡುವಂತಹ ನನ್ನ ಅನೇಕ ವ್ರತಗಳಿವೆ. ಅವುಗಳಲ್ಲಿ ಮುಖ್ಯವಾದುದು ಹತ್ತು. ಇವನ್ನು ಜಾಬಾಲ ಶ್ರುತಿಯ ವಿದ್ವಾಂಸರು 'ದಶ ಶೈವವ್ರತ ' ಎಂದು ಹೇಳುತ್ತಾರೆ. ದ್ವಿಜರು ಸದಾ ಪ್ರಯತ್ನಪೂರ್ವಕ ಈ ವ್ರತಗಳನ್ನು ಪಾಲಿಸಬೇಕು. ಹರಿಯೇ ! ಪ್ರತಿಯೊಂದು ಅಷ್ಟಮಿಯಂದು ಕೇವಲ ರಾತ್ರೆಯಲ್ಲೇ ಭೋಜನ ಮಾಡಬೇಕು. ವಿಶೇಷವಾಗಿ ಕೃಷ್ಣ ಅಷ್ಟಮಿಗೆ ಭೋಜನವನ್ನು ಸರ್ವಥಾ ತ್ಯಜಿಸಲಿ. ಶುಕ್ಲ ಪಕ್ಷದ ಏಕಾದಶಿಯಂದೂ ಕೂಡ ಭೋಜನವನ್ನು ಬಿಟ್ಟು ಬಿಡಬೇಕು. ಆದರೆ ಕೃಷ್ಣ ಪಕ್ಷದ ಏಕಾದಶಿಯಂದು ರಾತ್ರೆಯಲ್ಲಿ ನನ್ನ ಪೂಜೆ ಮಾಡಿದ ಬಳಿಕ ಭೋಜನ ಮಾಡಬಹುದು. ಶುಕ್ಲಪಕ್ಷದ ತ್ರಯೋದಶಿಯಂದಾದರೋ ರಾತ್ರೆ ಭೋಜನ ಮಾಡಬೇಕು. ಆದರೆ ಕೃಷ್ಣಪಕ್ಷದ ಚತುರ್ದಶಿಗೆ ಶಿವವ್ರತಧಾರಿಗೆ ಭೋಜನವು ಸರ್ವಥಾ ನಿಷೇಧವಾಗಿದೆ. ಎರಡೂ ಪಕ್ಷಗಳ ಪ್ರತಿಯೊಂದು ಸೋಮವಾರದ ದಿನ ಪ್ರಯತ್ನಪೂರ್ವಕ ಕೇವಲ

ರಾತ್ರೆಯಲ್ಲೇ ಭೋಜನಮಾಡಬೇಕು. ಶಿವವ್ರತದಲ್ಲಿ ತತ್ಪರರಾಗಿರುವ ಜನರಿಗಾಗಿ ಇದು ಅನಿವಾರ್ಯ ನಿಯಮವಾಗಿದೆ. ಇವೆಲ್ಲ ವ್ರತಗಳಲ್ಲಿ ವ್ರತದ ಪೂರ್ಣತೆಗಾಗಿ ತನ್ನ ಶಕ್ತ್ಯನುಸಾರವಾಗಿ ಶಿವಭಕ್ತ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು. ದ್ವಿಜರು ಇವೆಲ್ಲ ವ್ರತಗಳನ್ನು ನಿಯಮಪೂರ್ವಕ ಪಾಲಿಸಬೇಕು. ಇವುಗಳನ್ನು ತ್ಯಜಿಸಿದ ದ್ವಿಜರು ಕಳ್ಳರಾಗುತ್ತಾರೆ. ಮುಕ್ತಿ ಮಾರ್ಗದಲ್ಲಿ ಪ್ರವೀಣ ಪುರುಷರು ಮೋಕ್ಷದ ಪ್ರಾಪ್ತಿಯಾಗಿಸುವ ನಾಲ್ಕು ವ್ರತಗಳನ್ನು ನಿಯಮಪೂರ್ವಕ ಪಾಲಿಸಬೇಕು. ಆ ನಾಲ್ಕು ವ್ರತಗಳು ಹೀಗಿವೆ – ಭಗವಾನ್ ಶಿವನ ಪೂಜೆ, ರುದ್ರಮಂತ್ರಗಳ ಜಪ, ಶಿವಮಂದಿರದಲ್ಲಿ ಉಪವಾಸ ಹಾಗೂ ಕಾಶಿಯಲ್ಲಿ ಮರಣ. ಇವು ಮೋಕ್ಷದ ಸನಾತನ ಮಾರ್ಗಗಳು. ಸೋಮವಾರದ ಅಷ್ಟಮಿ ಮತ್ತು ಕೃಷ್ಣಪಕ್ಷದ ಚತುರ್ದಶಿ – ಈ ಎರಡು ತಿಥಿಗಳಲ್ಲಿ ಉಪವಾಸ ಪೂರ್ವಕ ವ್ರತವನ್ನು ಕೈಗೊಂಡರೆ ಭಗವಾನ್ ಶಿವನನ್ನು ಸಂತುಷ್ಟಗೊಳಿಸುವುದು ಇದರಲ್ಲಿ ಬೇರೇನೂ ವಿಚಾರ ಮಾಡುವ ಆವಶ್ಯಕತೆಯೇ ಇಲ್ಲ.

ಹರಿಯೇ ! ಈ ನಾಲ್ಕರಲ್ಲಿಯೂ ಶಿವರಾತ್ರಿಯ ವ್ರತವು ಎಲ್ಲಕ್ಕಿಂತ ಶ್ರೇಷ್ಠವಾದುದು. ಅದರಿಂದ ಭೋಗ ಮತ್ತು ಮೋಕ್ಷಗಳನ್ನು ಬಯಸುವವರು ಮುಖ್ಯವಾಗಿ ಅದನ್ನೇ ಪಾಲಿಸಬೇಕು. ಈ ವ್ರತವನ್ನು ಬಿಟ್ಟು ಇತರ ಯಾವುದೇ ವ್ರತವೂ ಮನುಷ್ಯನಿಗೆ ಹಿತಕರಕಾರಕವಾಗಿಲ್ಲ. ಈ ವ್ರತವು ಎಲ್ಲರಿಗಾಗಿ ಧರ್ಮದ ಉತ್ತಮ ಸಾಧನವಾಗಿದೆ. ನಿಷ್ಕಾಮ ಅಥವಾ ಸಕಾಮಭಾವವುಳ್ಳ ಎಲ್ಲ ಮನುಷ್ಯರಿಗೆ, ವರ್ಣಗಳಿಗೆ, ಆಶ್ರಮಗಳಿಗೆ, ಸ್ತ್ರೀಯರಿಗೆ, ಬಾಲಕರಿಗೆ, ದಾಸರಿಗೆ, ದಾಸಿಯರಿಗೆ ಹಾಗೂ ದೇವತೆಗಳೇ ಮೊದಲಾದ ಎಲ್ಲ ದೇಹಧಾರಿಗಳಿಗೆ ಈ ಶ್ರೇಷ್ಠ ವ್ರತವು ಹಿತಕಾರಕವೆಂದು ಹೇಳಲಾಗಿದೆ.

ಮಾಘಮಾಸದ ಕೃಷ್ಣಪಕ್ಷದಲ್ಲಿ ಶಿವರಾತ್ರಿ ತಿಥಿಯ ವಿಶೇಷ ಮಾಹಾತ್ಮ್ಯವನ್ನು ಹೇಳಲಾಗಿದೆ. ಅಂದು ಮಧ್ಯರಾತ್ರಿಯ ಸಮಯದವರೆಗೆ ಆ ತಿಥಿಯು ಇದ್ದರೆ ಅದೇ ದಿನ ಅದನ್ನು ವ್ರತಕ್ಕಾಗಿ ಸ್ವೀಕರಿಸಬೇಕು. ಶಿವರಾತ್ರಿಯು ಕೋಟಿ ಹತ್ಯೆಗಳ ಪಾಪಗಳನ್ನು ನಾಶಮಾಡುವಂತಹುದು. ಕೇಶವನೇ ! ಅಂದು ಬೆಳಗಿನಿಂದ ಮಾಡಬೇಕಾದ ಆವಶ್ಯಕ ಕಾರ್ಯಗಳನ್ನು ನಿನಗೆ ಹೇಳುತ್ತೇನೆ; ನೀನು ಗಮನವಿಟ್ಟು ಕೇಳು. ಬುದ್ಧಿವಂತ ಪುರುಷನು ಬೆಳಿಗ್ಗೆ ಎದ್ದು ಆಲಸ್ಯವಿಲ್ಲದೆ ಆನಂದದಿಂದ ಸ್ನಾನಾದಿ ನಿತ್ಯಕರ್ಮಗಳನ್ನು ಮಾಡಬೇಕು. ಮತ್ತೆ ಶಿವಾಲಯಕ್ಕೆ ಹೋಗಿ ಶಿವಲಿಂಗವನ್ನು ವಿಧಿವತ್ತಾಗಿ ಪೂಜಿಸಿ ಶಿವನಾದ ನನಗೆ ನಮಸ್ಕಾರ ಮಾಡಿ, ಬಳಿಕ ಉತ್ತಮ ರೀತಿಯಿಂದ ಸಂಕಲ್ಪವನ್ನು ಮಾಡಬೇಕು.

ಸಂಕಲ್ಪ

ದೇವದೇವ ಮಹಾದೇವ ನೀಲಕಂಠ ನಮೋಽಸ್ತು ತೇ ।
ಕರ್ತುಮಿಚ್ಛಾಮ್ಯಹಂ ದೇವ ಶಿವರಾತ್ರಿ ವ್ರತಂ ತವ ॥
ತವ ಪ್ರಭಾವಾದ್ದೇವೇಶ ನಿರ್ವಿಘ್ನೇನ ಭವೇದಿತಿ ।
ಕಾಮಾದ್ಯಾಃ ಶತ್ರವೋ ಮಾಂ ವೈ ಪೀಡಾಂ ಕುರ್ವಂತು ನೈವ ಹಿ ॥

'ದೇವದೇವ ಮಹಾದೇವ ! ನೀಲಕಂಠ ! ನಿನಗೆ ನಮಸ್ಕಾರವು. ದೇವಾ ! ನಾನು ನಿನ್ನ ಶಿವರಾತ್ರಿ – ವ್ರತದ ಅನುಷ್ಠಾನವನ್ನು ಮಾಡಲು ಬಯಸುವೆನು. ದೇವೇಶ್ವರನೇ ! ನಿನ್ನ ಪ್ರಭಾವದಿಂದ ಈ ವ್ರತವು ನಿರ್ವಿಘ್ನವಾಗಿ ಪೂರ್ಣವಾಗಲಿ ಹಾಗೂ ಕಾಮಾದಿ ಶತ್ರುಗಳು ನನ್ನನ್ನು ಪೀಡಿಸದಿರಲಿ.'

ಹೀಗೆ ಸಂಕಲ್ಪಮಾಡಿ ಪೂಜಾ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ಶಾಸ್ತ್ರಪ್ರಸಿದ್ಧ ಶಿವಲಿಂಗದ ಸ್ಥಾನಕ್ಕೆ ರಾತ್ರೆಯಲ್ಲಿ ಹೋಗಿ, ಉತ್ತಮ ವಿಧಿ-ವಿಧಾನಗಳನ್ನು ಸಂಪಾದಿಸಬೇಕು. ಶಿವನ ದಕ್ಷಿಣದ ಅಥವಾ ಪಶ್ಚಿಮದ ಸುಂದರವಾದ ಸ್ಥಾನದಲ್ಲಿ ಅವನ ಹತ್ತಿರದಲ್ಲೇ ಪೂಜೆಗಾಗಿ ಸಂಗ್ರಹಿಸಿದ ಸಾಮಗ್ರಿಗಳನ್ನು ಇರಿಸಬೇಕು. ಅನಂತರ ಪುನಃ ಅಲ್ಲಿ ಸ್ನಾನಮಾಡಿ, ಸುಂದರ ವಸ್ತ್ರ-ಉಪವಸ್ತ್ರ ಧರಿಸಿಕೊಂಡು ಆಚಮನಮಾಡಿ ಪೂಜೆಯನ್ನು ಪ್ರಾರಂಭಿಸಬೇಕು. ಯಾವ ದ್ರವ್ಯಕ್ಕೆ ಯಾವ ಮಂತ್ರವು ನಿಯತವಾಗಿದೆಯೋ ಅದನ್ನು ಉಚ್ಚರಿಸುತ್ತಾ ಆಯಾಯಾ ದ್ರವ್ಯಗಳಿಂದ ಪೂಜೆ ಮಾಡಬೇಕು. ಮಂತ್ರವಿಲ್ಲದೆ ಮಹಾದೇವನ ಪೂಜೆ ಮಾಡಬಾರದು. ಗೀತ, ವಾದ್ಯ, ನೃತ್ಯ ಇವುಗಳೊಂದಿಗೆ ಭಕ್ತಿಭಾವದಿಂದ ಕೂಡಿಕೊಂಡು ರಾತ್ರಿಯ ಪ್ರಥಮ ಪ್ರಹರದಲ್ಲಿ ಪೂಜೆ ಮಾಡಿ ವಿದ್ವಾಂಸನಾದವನು ಮಂತ್ರವನ್ನು ಜಪಿಸಬೇಕು. ಮಂತ್ರಜ್ಞನು ಶ್ರೇಷ್ಠ ಪಾರ್ಥಿವ ಲಿಂಗವನ್ನು ನಿರ್ಮಿಸುವವನಾದರೆ, ನಿತ್ಯಕರ್ಮ ಮಾಡಿದ ಬಳಿಕ ಪಾರ್ಥಿವ ಲಿಂಗವನ್ನು ಪೂಜಿಸಬೇಕು. ಮೊದಲಿಗೆ ಪಾರ್ಥಿವಲಿಂಗವನ್ನು ನಿರ್ಮಿಸಿ ಮತ್ತೆ ಅದನ್ನು ವಿಧಿವತ್ತಾಗಿ ಸ್ಥಾಪಿಸಬೇಕು. ಪೂಜೆಯನಂತರ ನಾನಾ ಪ್ರಕಾರದ ಸ್ತೋತ್ರಗಳಿಂದ ಭಗವಾನ್ ವೃಷಭಧ್ವಜನನ್ನು ಸಂತುಷ್ಟಗೊಳಿಸಬೇಕು. ಬುದ್ಧಿವಂತನಾದವನು ಆಗ ಶಿವರಾತ್ರಿ – ವ್ರತದ ಮಾಹಾತ್ಮ್ಯವನ್ನು ಓದಬೇಕು. ಶ್ರೇಷ್ಠ ಭಕ್ತನು ತನ್ನ ವ್ರತದ ಪೂರ್ಣತೆಗಾಗಿ ಆ ಮಾಹಾತ್ಮ್ಯವನ್ನು ಶ್ರದ್ಧೆಯಿಂದ ಕೇಳಬೇಕು. ರಾತ್ರಿಯ ನಾಲ್ಕು ಜಾವಗಳಲ್ಲಿಯೂ ನಾಲ್ಕು ಪಾರ್ಥಿವ ಲಿಂಗಗಳನ್ನು ನಿರ್ಮಿಸಿ, ಆವಾಹನೆಯಿಂದ ವಿಸರ್ಜನೆಯವರೆಗೆ ಕ್ರಮವಾಗಿ ಅದನ್ನು

ಪೂಜಿಸಿ, ಒಪಳ ಉತ್ಸವದೊಂದಿಗೆ ಜಾಗರಣೆಯನ್ನು ಮಾಡಬೇಕು. ಪ್ರಾತಃ ಕಾಲದಲ್ಲಿ ಸ್ನಾನಮಾಡಿ ಪುನಃ ಅಲ್ಲಿ ಪಾರ್ಥಿವ ಶಿವನನ್ನು ಸ್ಥಾಪಿಸಿ ಪೂಜಿಸಬೇಕು. ಈ ಪ್ರಕಾರ ವ್ರತವನ್ನು ಪೂರ್ಣಗೊಳಿಸಿ, ಕೈಜೋಡಿಸಿ, ನತಮಸ್ತಕನಾಗಿ ಪದೇ-ಪದೇ ನಮಸ್ಕಾರಗಳಿಂದೊಡಗೂಡಿ ಭಗವಾನ್ ಶಂಭುವಿನಲ್ಲಿ ಈ ಪ್ರಕಾರ ಪ್ರಾರ್ಥಿಸಬೇಕು.

ಪ್ರಾರ್ಥನೆ ಹಾಗೂ ವಿಸರ್ಜನೆ

ನಿಯಮೋ ಯೋ ಮಹಾದೇವ ಕೃತಶ್ಚೈವ ತ್ವದಾಜ್ಞಯಾ ।
ವಿಸೃಜ್ಯತೇ ಮಯಾ ಸ್ವಾಮಿನ್ ವ್ರತಂ ಜಾತಮನುತ್ತಮಮ್ ॥
ವ್ರತೇನಾನೇನ ದೇವೇಶ ಯಥಾಶಕ್ತಿಕೃತೇನ ಚ ।
ಸಂತುಷ್ಟೋ ಭವ ಶರ್ವಾದ್ಯ ಕೃಪಾಂ ಕುರುಮಮೋಪರಿ ॥

'ಮಹಾದೇವನೇ! ನಿನ್ನ ಆಜ್ಞೆಯಿಂದ ಕೈಗೊಂಡ ಉತ್ತಮ ವ್ರತವು ಪೂರ್ಣವಾಯಿತು. ಸ್ವಾಮಿ ! ಆದ್ದರಿಂದ ಈಗ ಅದನ್ನು ವಿಸರ್ಜಿಸುತ್ತಿದ್ದೇನೆ. ದೇವೇಶ್ವರ ಶರ್ವನೇ ! ಯಥಾಶಕ್ತಿಯಿಂದ ಮಾಡಿದ ಈ ವ್ರತದಿಂದ ನೀನು ಇಂದು ನನ್ನ ಮೇಲೆ ಸಂತುಷ್ಟನಾಗಿ ಕೃಪೆಮಾಡು. '

ಅನಂತರ ಶಿವನಿಗೆ ಪುಷ್ಪಾಂಜಲಿಯನ್ನು ಸಮರ್ಪಿಸಿ, ವಿಧಿವತ್ತಾಗಿ ದಾನ ಮಾಡಲಿ, ಮತ್ತೆ ಶಿವನಿಗೆ ನಮಸ್ಕಾರ ಮಾಡಿ ವ್ರತಸಂಬಂಧೀ ನಿಯಮಗಳನ್ನು ವಿಸರ್ಜಿಸಬೇಕು. ತನ್ನ ಶಕ್ತಿಗನುಸಾರವಾಗಿ ಶಿವಭಕ್ತ ಬ್ರಾಹ್ಮಣರಿಗೆ, ವಿಶೇಷವಾಗಿ ಸಂನ್ಯಾಸಿಗಳಿಗೆ ಭೋಜನ ನೀಡಿ ಪೂರ್ಣವಾಗಿ ಸಂತುಷ್ಟಗೊಳಿಸಿ, ಸ್ವತಃ ಭೋಜನ ಮಾಡಬೇಕು.

ಹರಿಯೇ! ಶಿವರಾತ್ರಿಯ ಪ್ರತಿಯೊಂದು ಜಾವದಲ್ಲಿಯೂ ಶಿವಭಕ್ತನು ವಿಶೇಷವಾಗಿ ಹೇಗೆ ಪೂಜಿಸಬೇಕೆಂಬುದನ್ನು ನಾನು ತಿಳಿಸುವೆನು ; ಕೇಳು. ಪ್ರಥಮ ಪ್ರಹರ (ಜಾವ)ದಲ್ಲಿ ಪಾರ್ಥಿವ ಲಿಂಗವನ್ನು ಸ್ಥಾಪಿಸಿ, ಅನೇಕ ಸುಂದರ ಉಪಚಾರಗಳಿಂದ ಉತ್ತಮ ಭಕ್ತಿ-ಭಾವದಿಂದ ಪೂಜಿಸಬೇಕು. ಮೊದಲಿಗೆ ಗಂಧ, ಪುಷ್ಪ ಮೊದಲಾದ ಐದು ದ್ರವ್ಯಗಳಿಂದ ಸದಾ ಮಹಾದೇವನನ್ನು ಪೂಜಿಸಬೇಕು. ಆಯಾಯಾ ದ್ರವ್ಯಗಳಿಗೆ ಹೇಳಿದ ಮಂತ್ರಗಳನ್ನು ಉಚ್ಚರಿಸಿ, ಬೇರೆ-ಬೇರೆಯಾಗಿ ಅವನ್ನು ಸಮರ್ಪಿಸಬೇಕು. ಹೀಗೆ ದ್ರವ್ಯ ಸಮರ್ಪಣೆಯ ನಂತರ ಭಗವಾನ್ ಶಿವನಿಗೆ ಜಲಧಾರೆಯನ್ನು ಅರ್ಪಿಸಬೇಕು. ವಿದ್ವಾಂಸನಾದವನು ಏರಿಸಿದ ದ್ರವ್ಯಗಳನ್ನು ಜಲಧಾರೆಯಿಂದಲೇ ತೊಳೆಯಬೇಕು. ಜಲಧಾರೆ (ಅಭಿಷೇಕ)ಯ ಜೊತೆ-ಜೊತೆಗೆ ಒಂದುನೂರ ಎಂಟು ಬಾರಿ ಮಂತ್ರವನ್ನು ಜಪಿಸಿ, ನಿರ್ಗುಣ-ಸಗುಣರೂಪೀ ಶಿವನನ್ನು ಪೂಜಿಸಬೇಕು. ಗುರುವಿನಿಂದ ಪಡೆದ ಮಂತ್ರದಿಂದ ಶಿವನನ್ನು ಪೂಜಿಸಬೇಕು. ಇಲ್ಲದಿದ್ದರೆ ನಾಮಮಂತ್ರದಿಂದ ಸದಾಶಿವನ ಪೂಜೆ ಮಾಡಬೇಕು. ವಿಚಿತ್ರ ಚಂದನ, ತುಂಡಾಗದ ಅಕ್ಷತೆ, ಕರಿಎಳ್ಳು ಇವುಗಳಿಂದ ಪರಮಾತ್ಮಾ ಶಿವನನ್ನು ಪೂಜಿಸಬೇಕು. ಕಮಲ ಮತ್ತು ಕಣಗಿಲೆ, ತುಂಬೆ ಹೂವುಗಳನ್ನು ಅರ್ಪಿಸಬೇಕು. ಎಂಟು ನಾಮಮಂತ್ರಗಳಿಂದ ಶಂಕರನಿಗೆ ಹೂವುಗಳನ್ನು ಏರಿಸಬೇಕು. ಆ ಎಂಟು ನಾಮಗಳು ಇಂತಿವೆ - ಭವ, ಶರ್ವ, ರುದ್ರ, ಪಶುಪತಿ, ಉಗ್ರ, ಮಹಾನ್, ಭೀಮ ಮತ್ತು ಈಶಾನ. ಇದರ ಮೊದಲಿಗೆ ಶ್ರೀ ಮತ್ತು ಕೊನೆಗೆ ಚತುರ್ಥಿವಿಭಕ್ತಿ ಜೋಡಿಸಿ 'ಶ್ರೀಭವಾಯನಮಃ' ಇತ್ಯಾದಿ ಮಂತ್ರಗಳಿಂದ ಶಿವನನ್ನು ಪೂಜಿಸಬೇಕು. ಪುಷ್ಪ ಸಮರ್ಪಣೆಯ ಬಳಿಕ ಧೂಪ, ದೀಪ, ನೈವೇದ್ಯಗಳನ್ನು ನಿವೇದಿಸಬೇಕು. ಮೊದಲನೆಯ ಜಾವದಲ್ಲಿ ನೈವೇದ್ಯಕ್ಕಾಗಿ ಪಕ್ವಾನ್ನಗಳನ್ನು ಇರಿಸಬೇಕು. ಮತ್ತೆ ಶ್ರೀಫಲದೊಂದಿಗೆ ವಿಶೇಷಾರ್ಘ್ಯವನ್ನು ಕೊಟ್ಟು ತಾಂಬೂಲವನ್ನು ಅರ್ಪಿಸಬೇಕು. ಅನಂತರ ನಮಸ್ಕಾರ ಮತ್ತು ಧ್ಯಾನ ಮಾಡಿ ಗುರುವು ಉಪದೇಶಿಸಿದ ಮಂತ್ರವನ್ನು ಜಪಿಸಬೇಕು. ಗುರು ಮಂತ್ರವಿಲ್ಲದಿದ್ದರೆ ಪಂಚಾಕ್ಷರ (ನಮಃ ಶಿವಾಯ) ಮಂತ್ರದ ಜಪದಿಂದ ಭಗವಾನ್ ಶಂಕರನನ್ನು ಸಂತುಷ್ಟಗೊಳಿಸಿ 'ಧೇನುಮುದ್ರೆ'* ಯನ್ನು ತೋರಿಸಿ ಉತ್ತಮ ಜಲದಿಂದ ತರ್ಪಣ ಮಾಡಬೇಕು. ಬಳಿಕ ತನ್ನ ಶಕ್ತಿಗನುಸಾರವಾಗಿ ಐದು ಬ್ರಾಹ್ಮಣರಿಗೆ ಭೋಜನ

---

* ಧೇನುಮುದ್ರೆಯ ಲಕ್ಷಣ ಇಂತಿದೆ - 'ವಾಮಾಂಗುಲೀನಾಂ ಮಧ್ಯೇಷು ದಕ್ಷಿಣಾಂಗುಲಿಕಾಸ್ತಥಾ । ಸಂಯೋಜ್ಯ ತರ್ಜನೀಂ ದಕ್ಷಾಂ ಮಧ್ಯಮಾನಾಮಯೋಸ್ತಥಾ ॥ ದಕ್ಷಮಧ್ಯಮಯೋರ್ವಾಮಾಂ ತರ್ಜನೀಂ ಚ ನಿಯೋಜಯೇತ್ । ವಾಮಯಾನಾಮಯಾ ದಕ್ಷಕನಿಷ್ಠಾಂ ಚ ನಿಯೋಜಯೇತ್ ॥ ದಕ್ಷಯಾನಾಮಯಾ ವಾಮಾಂ ಕನಿಷ್ಠಾಂ ಚ ನಿಯೋಜಯೇತ್ । ವಿಹಿತಾಧೋಮುಖೀ ಚೈಷಾ ಧೇನುಮುದ್ರಾ ಪ್ರಕೀರ್ತಿತಾ ॥'
ಬಲ ಕೈಯ ಬೆರಳುಗಳಲ್ಲಿ ಎಡ ಕೈಯ ಬೆರಳುಗಳನ್ನು ಸೇರಿಸಿ, ಬಲ ತರ್ಜನಿಯನ್ನು ಮಧ್ಯಮಾಗೆ ಜೋಡಿಸಬೇಕು. ಬಲ ಕೈಯ ಮಧ್ಯಮಾದಲ್ಲಿ ಎಡ ಕೈಯ ತರ್ಜನಿಯನ್ನು ಸೇರಿಸಬೇಕು. ಮತ್ತೆ ಬಲ ಕೈಯ ಅನಾಮಿಕೆಯಿಂದ ಎಡ ಕೈಯ ಕನಿಷ್ಠಿಕೆ ಮತ್ತು ಬಲ ಕೈಯ ಅನಾಮಿಕೆಯೊಂದಿಗೆ ಎಡ ಕೈಯ ಕನಿಷ್ಠಿಕೆಯನ್ನು ಜೋಡಿಸಬೇಕು. ಮತ್ತೆ ಇದೆಲ್ಲವನ್ನು ಕೆಳಮುಖವಾಗಿಸಬೇಕು. ಇದನ್ನು ಧೇನುಮುದ್ರೆ ಎಂದು ಹೇಳುತ್ತಾರೆ.

ಮಾಡಿಸುವ ಸಂಕಲ್ಪ ಮಾಡಬೇಕು. ಮತ್ತೆ ಮೊದಲನೆಯ ಜಾವ ಮುಗಿಯುವವರೆಗೆ ಮಹೋತ್ಸವವನ್ನು ಆಚರಿಸುತ್ತಾ ಇರಬೇಕು.

ಎರಡನೆಯ ಜಾವವು ಪ್ರಾರಂಭವಾದಾಗ ಪುನಃ ಪೂಜೆಗಾಗಿ ಸಂಕಲ್ಪಮಾಡಬೇಕು. ಅಥವಾ ಒಟ್ಟಿಗೆ ನಾಲ್ಕು ಜಾವಗಳ ಸಂಕಲ್ಪವನ್ನು ಮಾಡಿ, ಮೊದಲ ಜಾವದಂತೆಯೇ ಪೂಜೆ ಮಾಡಬೇಕು. ಮೊದಲಿಗೆ ಹಿಂದಿನಂತೆ ದ್ರವ್ಯಗಳಿಂದ ಪೂಜಿಸಿ ಮತ್ತೆ ಜಲಧಾರೆಯಿಂದ ಅಭಿಷೇಕ ಮಾಡಬೇಕು. ಮೊದಲನೆಯ ಜಾವಕ್ಕಿಂತ ಎರಡು ಪಟ್ಟು ಮಂತ್ರಗಳನ್ನು ಜಪಿಸಿ ಶಿವನ ಪೂಜೆ ಮಾಡಬೇಕು. ಹಿಂದೆ ಹೇಳಿದ ಎಳ್ಳು, ಜವೆಅಕ್ಕಿ, ಕಮಲಪುಷ್ಪಗಳಿಂದ ಶಿವನನ್ನು ಅರ್ಚಿಸಬೇಕು. ವಿಶೇಷವಾಗಿ ಬಿಲ್ವಪತ್ರೆಗಳಿಂದ ಶಿವನನ್ನು ಪೂಜಿಸಬೇಕು. ಎರಡನೆಯ ಜಾವದಲ್ಲಿ ಲಿಂಬೆಹಣ್ಣಿನೊಂದಿಗೆ ಅರ್ಘ್ಯವನ್ನು ಕೊಟ್ಟು ಪಾಯಸವನ್ನು ನಿವೇದಿಸಬೇಕು. ಜನಾರ್ದನನೇ ! ಇದರಲ್ಲಿ ಮೊದಲಿಗಿಂತ ಎರಡು ಪಟ್ಟು ಮಂತ್ರಗಳನ್ನು ಜಪಿಸಬೇಕು. ಮತ್ತೆ ಬ್ರಾಹ್ಮಣ ಭೋಜನದ ಸಂಕಲ್ಪ ಮಾಡಬೇಕು. ಉಳಿದೆಲ್ಲವೂ ಎರಡನೆಯ ಜಾವವು ಮುಗಿಯುವವರೆಗೆ ಮೊದಲನೆ ಜಾವದಂತೆ ಮಾಡುತ್ತಾ ಇರಬೇಕು. ಮೂರನೆಯ ಜಾವವು ಬಂದಾಗ ಪೂಜೆಯಾದರೋ ಮೊದಲಿನಂತೆಯೇ ಮಾಡಬೇಕು. ಅದರೆ ಜವೆ ಅಕ್ಕಿಯ ಬದಲಿಗೆ ಗೋದಿಯನ್ನು ಮತ್ತು ಎಕ್ಕದ ಹೂವುಗಳನ್ನು ಏರಿಸಬೇಕು. ಅನಂತರ ಧೂಪ, ದೀಪಗಳನ್ನು ಅರ್ಪಿಸಿ ಕಜ್ಜಾಯದ ನೈವೇದ್ಯವನ್ನು ಮಾಡಬೇಕು. ಜೊತೆಗೆ ಬಗೆ-ಬಗೆಯ ಶಾಕ-ಪಾಕಾದಿಗಳನ್ನು ಅರ್ಪಿಸಬೇಕು. ಹೀಗೆ ಪೂಜೆ ಮಾಡಿ ಕರ್ಪೂರದಾರತಿಯನ್ನು ಬೆಳಗಬೇಕು. ದಾಳಿಂಬೆ ಹಣ್ಣಿನಿಂದ ಅರ್ಘ್ಯವನ್ನು ಕೊಡಬೇಕು. ಎರಡನೇ ಜಾವಕ್ಕಿಂತ ಎರಡು ಪಟ್ಟು ಜಪಮಾಡಬೇಕು. ಅನಂತರ ದಕ್ಷಿಣೆಸಹಿತ ಬ್ರಾಹ್ಮಣ ಭೋಜನದ ಸಂಕಲ್ಪವನ್ನು ಮಾಡಬೇಕು. ಮೂರನೆಯ ಜಾವ ಮುಗಿಯುವವರೆಗೆ ಹಿಂದಿನಂತೆ ಉತ್ಸವವನ್ನು ಆಚರಿಸಬೇಕು. ನಾಲ್ಕನೆಯ ಜಾವವು ಬಂದಾಗ ಮೂರನೆಯ ಜಾವದ ಪೂಜೆಯನ್ನು ವಿಸರ್ಜಿಸಬೇಕು. ಪುನಃ ಆವಾಹನಾದಿ ವಿಧಿವತ್ತಾಗಿ ಪೂಜಿಸಬೇಕು. ಉದ್ದು, ನವಣೆ, ಹೆಸರು, ಸಪ್ತಧಾನ್ಯ, ಶಂಕಪುಷ್ಪ ಹಾಗೂ ಬಿಲ್ವಪತ್ರೆ ಇವುಗಳಿಂದ ಪರಮೇಶ್ವರ ಶಂಕರನನ್ನು ಪೂಜಿಸಬೇಕು. ಆ ಜಾವದಲ್ಲಿ ಬಗೆ-ಬಗೆಯ ಮಿಠಾಯಿಗಳನ್ನು ನೈವೇದ್ಯಮಾಡಬೇಕು. ಅಥವಾ ಉದ್ದಿನವಡೆಗಳನ್ನು ಮಾಡಿ ಅದರಿಂದ ಸದಾಶಿವನನ್ನು ಸಂತುಷ್ಟಗೊಳಿಸಬೇಕು. ಬಾಳೆಹಣ್ಣಿನೊಂದಿಗೆ ಅಥವಾ ಬೇರೆ ವಿಧದ ಫಲಗಳೊಂದಿಗೆ ಶಿವನಿಗೆ ಅರ್ಘ್ಯವನ್ನು ಕೊಡಬೇಕು. ಮೂರನೆಯ ಜಾವಕ್ಕಿಂತ ಎರಡರಷ್ಟು ಜಪವನ್ನು ಮಾಡಬೇಕು. ಹಾಗೂ ಯಥಾಶಕ್ತಿ ಬ್ರಾಹ್ಮಣ ಭೋಜನದ ಸಂಕಲ್ಪ ಮಾಡಬೇಕು. ಗೀತ, ವಾದ್ಯ, ನೃತ್ಯಗಳಿಂದ ಶಿವನ ಆರಾಧನಾಪೂರ್ವಕ ಸಮಯವನ್ನು ಕಳೆಯಬೇಕು. ಭಕ್ತರು ಅರುಣೋದಯವಾಗುವವರೆಗೆ ಉತ್ಸವವನ್ನು ಆಚರಿಸುತ್ತಾ ಇರಬೇಕು. ಅರುಣೋದಯವಾದಾಗ ಪುನಃ ಸ್ನಾನಮಾಡಿ ಬಗೆ-ಬಗೆಯ ಪೂಜೋಪಚಾರಗಳಿಂದ ಮತ್ತು ಉಪಹಾರಗಳಿಂದ ಶಿವನನ್ನು ಅರ್ಚಿಸಬೇಕು. ಅನಂತರ ಅಭಿಷೇಕ ಮಾಡಿಕೊಂಡು ನಾನಾ ವಿಧದ ದಾನಗಳನ್ನು ಕೊಟ್ಟು ಜಾವದ ಸಂಖ್ಯೆಗನುಸಾರ ಬ್ರಾಹ್ಮಣರಿಗೆ ಹಾಗೂ ಸಂನ್ಯಾಸಿಗಳಿಗೆ ಮೃಷ್ಟಾನ್ನ ಭೋಜನ ಮಾಡಿಸಬೇಕು ಮತ್ತೆ ಶಂಕರನಿಗೆ ನಮಸ್ಕರಿಸಿ ಪುಷ್ಪಾಂಜಲಿಯನ್ನು ಅರ್ಪಿಸಿ ಉತ್ತಮ ಸ್ತುತಿಗಳನ್ನೂ ಮಾಡಿ ಈ ಕೆಳಗಿನ ಮಂತ್ರಗಳಿಂದ ಪ್ರಾರ್ಥಿಸಬೇಕು-

ತಾವಕಸ್ತ್ವದ್‌ಗತ ಪ್ರಾಣ ಸ್ತ್ವಚ್ಚಿತ್ತೋಽಹಂ ಸದಾ ಮೃಡ ।
ಕೃಪಾನಿಧೇ ಇತಿ ಜ್ಞಾತ್ವಾ ಯಥಾ ಯೋಗ್ಯಂ ತಥಾ ಕುರು ॥
ಅಜ್ಞಾನಾದ್ಯದಿ ವಾ ಜ್ಞಾನಾದ್ಜಪಪೂಜಾದಿಕಂ ಮಯಾ ।
ಕೃಪಾನಿಧಿತ್ವಾಜ್ಜ್ಞಾತ್ವೈವ ಭೂತನಾಥ ಪ್ರಸೀದ ಮೇ ॥
ಅನೇನೈವೋಪವಾಸೇನ ಯಜ್ಜಾತಂ ಫಲಮೇವ ಚ ।
ತೇನೈವ ಪ್ರೀಯತಾಂ ದೇವಃ ಶಂಕರಃ ಸುಖದಾಯಕಃ ॥
ಕುಲೇ ಮಮ ಮಹಾದೇವ ಭಜನಂ ತೇಽಸ್ತು ಸರ್ವದಾ ।
ಮಾಭೂತ್ತಸ್ಯ ಕುಲೇ ಜನ್ಮ ಯತ್ರ ತ್ವಂ ನಹಿ ದೇವತಾ ॥

'ಸುಖದಾಯಕ ಕೃಪಾನಿಧಾನ ಶಿವನೇ ! ನಾನು ನಿನ್ನವನು. ನನ್ನ ಪ್ರಾಣಗಳು ಸದಾ ನಿನ್ನಲ್ಲೇ ತೊಡಗಿವೆ ಮತ್ತು ಚಿತ್ತವು ಸದಾ ನಿನ್ನನ್ನು ಚಿಂತಿಸುತ್ತಿದೆ. ಇದನ್ನು ತಿಳಿದು ನಿನಗೆ ಅನಿಸುವಂತೆಯೇ ಮಾಡು. ಭೂತನಾಥನೇ ! ನಾನು ತಿಳಿದೋ, ತಿಳಿಯದೆಯೋ ಮಾಡಿದ ಜಪ-ಪೂಜೆಯನ್ನು ಸ್ವೀಕರಿಸಿ ದಯಾಸಾಗರನಾದ ನೀನು ನನ್ನ ಮೇಲೆ ಪ್ರಸನ್ನನಾಗು. ಈ ಉಪವಾಸ ವ್ರತದಿಂದ ಉಂಟಾದ ಫಲದಿಂದ ಸುಖದಾಯಕನಾದ ಭಗವಾನ್ ಶಂಕರನೇ ನನ್ನ ಮೇಲೆ ಪ್ರಸನ್ನನಾಗು. ಮಹಾದೇವನೇ ! ನನ್ನ ಕುಲದಲ್ಲಿ ಸದಾ ನಿನ್ನ ಭಜನೆಯೇ ಆಗುತ್ತಿರಲಿ. ನೀನು ಇಷ್ಟದೇವರಲ್ಲದ ಕುಲದಲ್ಲಿ ನನ್ನ ಜನ್ಮವಾಗದೇ ಇರಲಿ.'

ಈ ಪ್ರಕಾರವಾಗಿ ಪ್ರಾರ್ಥನೆ ಮಾಡಿದ ಬಳಿಕ ಭಗವಾನ್ ಶಿವನಿಗೆ ಪುಷ್ಪಾಂಜಲಿಯನ್ನು ಸಮರ್ಪಿಸಿ ಬ್ರಾಹ್ಮಣರಿಂದ ಆಶೀರ್ವಾದವನ್ನು ಪಡೆಯಬೇಕು. ಅನಂತರ ಶಂಭುವನ್ನು ವಿಸರ್ಜಿಸಬೇಕು. ಈ ಪ್ರಕಾರ ವ್ರತ ಮಾಡಿದವನಿಂದ ನಾನು ದೂರವಿರುವುದಿಲ್ಲ. ಈ ವ್ರತದ ಫಲವನ್ನು

ವರ್ಣಿಸಲಾಗುವುದಿಲ್ಲ. ಶಿವರಾತ್ರಿ ವ್ರತವನ್ನು ಮಾಡಿದವನಿಗೆ ಕೊಡದಿರುವ ಯಾವ ವಸ್ತುವೂ ನನ್ನ ಬಳಿಯಲ್ಲಿ ಇಲ್ಲ. ಅಕಸ್ಮಾತ್ತಾಗಿ ಈ ವ್ರತದ ಪಾಲನೆ ನಡೆದರೂ ಅವನಿಗಾಗಿಯೂ ಅವಶ್ಯವಾಗಿ ಮುಕ್ತಿಯ ಬೀಜವನ್ನು ಬಿತ್ತಲ್ಪಟ್ಟಿದೆ. ಮನುಷ್ಯರು ಪ್ರತಿತಿಂಗಳೂ ಭಕ್ತಿಯಿಂದ ಶಿವರಾತ್ರಿ ವ್ರತವನ್ನು ಮಾಡಬೇಕು. ಅನಂತರ ಇದರ ಉದ್ಯಾಪನೆ ಮಾಡಿ ಮನುಷ್ಯನು ಸಾಂಗೋಪಾಂಗ ಫಲದ ಲಾಭವನ್ನು ಪಡೆಯುವನು. ಈ ವ್ರತವನ್ನು ಪಾಲಿಸುವುದರಿಂದ ಶಿವನಾದ ನಾನು ನಿಶ್ಚಯವಾಗಿಯೂ ಉಪಾಸಕನ ಸಮಸ್ತ ದುಃಖಿಗಳನ್ನು ನಾಶಮಾಡಿ ಬಿಡುವೆನು. ಅವನಿಗೆ ಭೋಗ-ಮೋಕ್ಷ ಮುಂತಾದ ಸಮಸ್ತ ಮನೋವಾಂಛಿತ ಫಲವನ್ನು ಕರುಣಿಸುವೆನು.

ಸೂತಪುರಾಣಿಕರು ಹೇಳುತ್ತಾರೆ – ಮಹರ್ಷಿಗಳೇ ! ಭಗವಾನ್ ಶಿವನ ಈ ಅತ್ಯಂತ ಹಿತಕಾರಕ ಮತ್ತು ಅದ್ಭುತ ಮಾತನ್ನು ಕೇಳಿ ಶ್ರೀವಿಷ್ಣು ತನ್ನ ಧಾಮಕ್ಕೆ ಮರಳಿದನು. ಅನಂತರ ಆ ಉತ್ತಮ ವ್ರತವು ತನ್ನ ಹಿತವನ್ನು ಬಯಸುವ ಜನರಲ್ಲಿ ಪ್ರಚಾರವಾಯಿತು. ಎಂದೋ ಕೇಶವನು ನಾರದರಲ್ಲಿ ಭೋಗ-ಮೋಕ್ಷಗಳನ್ನು ಕೊಡುವ ಈ ದಿವ್ಯ ಶಿವರಾತ್ರಿ-ವ್ರತದ ವರ್ಣನೆ ಮಾಡಿದ್ದನು.

(ಅಧ್ಯಾಯ ೩.೭-೩.೮)

❐ ❐ ❐

ಶಿವರಾತ್ರಿ - ವ್ರತದ ಉದ್ಯಾಪನೆಯ ವಿಧಿ

ಋಷಿಗಳು ಕೇಳಿದರು – ಸೂತಪುರಾಣಿಕರೇ ! ಇನ್ನು ನಮಗೆ ಯಾವುದರ ಅನುಷ್ಠಾನದಿಂದ ಸಾಕ್ಷಾತ್ ಭಗವಾನ್ ಶಂಕರನು ನಿಶ್ಚಯವಾಗಿ ಪ್ರಸನ್ನನಾಗುವನೋ ಆ ಶಿವರಾತ್ರಿ ವ್ರತದ ಉದ್ಯಾಪನೆಯ ವಿಧಿಯನ್ನು ತಿಳಿಸಿರಿ.

ಸೂತಪುರಾಣಿಕರು ಹೇಳುತ್ತಾರೆ – ಋಷಿಗಳೇ! ಭಕ್ತಿಯಿಂದ ಆದರಪೂರ್ವಕ ಶಿವರಾತ್ರಿ ವ್ರತದ ಉದ್ಯಾಪನೆಯ ವಿಧಿಯನ್ನು ಕೇಳಿರಿ. ಅದರ ಅನುಷ್ಠಾನ ಮಾಡುವುದರಿಂದ ಈ ವ್ರತವು ಅವಶ್ಯವಾಗಿಯೂ ಪೂರ್ಣಫಲವನ್ನು ಕೊಡುವುದು. ಸತತವಾಗಿ ಹದಿನಾಲ್ಕು ವರ್ಷಗಳವರೆಗೆ ಶಿವರಾತ್ರಿಯ ಶುಭವ್ರತವನ್ನು ಪಾಲಿಸಬೇಕು. ತ್ರಯೋದಶಿಗೆ ಒಪ್ಪೊತ್ತು ಊಟಮಾಡಿ, ಚತುರ್ದಶಿಯಂದು ಪೂರ್ಣ ಉಪವಾಸ ಮಾಡಬೇಕು. ಶಿವರಾತ್ರಿಯ ದಿನ ನಿತ್ಯಕರ್ಮಗಳು ಪೂರೈಸಿ ಶಿವಾಲಯಕ್ಕೆ ಹೋಗಿ ವಿಧಿವತ್ತಾಗಿ ಶಿವನ ಪೂಜೆ ಮಾಡಬೇಕು. ಅನಂತರ ಅಲ್ಲಿ ಪ್ರಯತ್ನಪೂರ್ವಕ ಮೂರು ಲೋಕಗಳಲ್ಲಿ ಗೌರೀತಿಲಕ ಎಂಬ ಹೆಸರಿನಿಂದ ಪ್ರಸಿದ್ಧವಾದ ಒಂದು ದಿವ್ಯ ಮಂಟಪವನ್ನು ನಿರ್ಮಿಸಬೇಕು. ಅದರ ಮಧ್ಯಭಾಗದಲ್ಲಿ ದಿವ್ಯ ಲಿಂಗತೋಭದ್ರ ಮಂಡಲವನ್ನು ರಚಿಸಬೇಕು, ಅಥವಾ ಮಂಟಪದಲ್ಲಿ ಸರ್ವತೋಭದ್ರ ಮಂಡಲವನ್ನು ನಿರ್ಮಿಸ ಬೇಕು. ಅಲ್ಲಿ ಪ್ರಾಜಾಪತ್ಯ ಎಂಬ ಕಲಶಗಳನ್ನು ಸ್ಥಾಪಿಸಬೇಕು. ಆ ಶುಭ ಕಲಶಗಳು ಮಸ್ತ್ರ ಫಲ, ದಕ್ಷಿಣೆಗಳಿಂದ ಕೂಡಿರಬೇಕು. ಅವೆಲ್ಲವನ್ನು ಮಂಟಪದ ಪಾರ್ಶ್ವದಲ್ಲಿ ಸ್ಥಾಪಿಸಬೇಕು. ಮಂಟಪದ ಮಧ್ಯದಲ್ಲಿ ಒಂದು ಚಿನ್ನದ ಅಥವಾ ತಾಮ್ರವೇ ಆದಿ ಇತರ ಧಾತುಗಳಿಂದ ಮಾಡಿದ ಕಲಶವನ್ನು ಸ್ಥಾಪಿಸಬೇಕು. ವ್ರತೀ ಪುರುಷನು ಆ ಕಲಶದಲ್ಲಿ ಪಾರ್ವತಿ ಸಹಿತ ಶಿವನ ಸುವರ್ಣಮಯ ಪ್ರತಿಮೆಯನ್ನು ಮಾಡಿಸಿ ಇಡಬೇಕು. ಆ ಪ್ರತಿಮೆಯು ಒಂದು ಪಲ (ತೊಲೆ) ಅಥವಾ ಅರ್ಧ ತೊಲೆಯದ್ದಾಗಿರಬೇಕು. ಅಥವಾ ತನ್ನ ಶಕ್ತಿಗನುಸಾರವಾಗಿ ಪ್ರತಿಮೆಯನ್ನು ಮಾಡಿಸಬೇಕು. ವಾಮ ಭಾಗದಲ್ಲಿ ಪಾರ್ವತಿಯ ಮತ್ತು ಬಲಭಾಗದಲ್ಲಿ ಶಿವನ ಪ್ರತಿಮೆಯನ್ನು ಸ್ಥಾಪಿಸಿ ರಾತ್ರಿಯಲ್ಲಿ ಅವನ್ನು ಪೂಜಿಸಬೇಕು. ಆಲಸ್ಯವನ್ನು ಬಿಟ್ಟು ಪೂಜೆಯ ಕೆಲಸ ಮಾಡಬೇಕು. ಆ ಕಾರ್ಯದಲ್ಲಿ ನಾಲ್ಕು ಋತ್ವಿಕರನ್ನು, ಜೊತೆಗೆ ಓರ್ವ ಪವಿತ್ರ ಆಚಾರ್ಯರನ್ನು ವರಣಮಾಡಬೇಕು. ಅವರೆಲ್ಲರ ಅಪ್ಪಣೆಯನ್ನು ಪಡೆದು ಭಕ್ತಿಯಿಂದ ಶಿವನನ್ನು ಪೂಜಿಸಬೇಕು. ರಾತ್ರಿಯ ಪ್ರತಿಯೊಂದು ಜಾವದಲ್ಲಿಯೂ ಬೇರೆ-ಬೇರೆ ಪೂಜೆ ಮಾಡುತ್ತಾ ಜಾಗರಣೆ ಮಾಡಬೇಕು. ವ್ರತಸ್ಥನಾದವನು ಭಗವತ್ಸಂಬಂಧೀ ಕೀರ್ತನೆ, ಗೀತ, ನೃತ್ಯಾದಿಗಳಿಂದ ಇಡೀ ರಾತ್ರಿಯನ್ನು ಕಳೆಯಬೇಕು. ಹೀಗೆ ವಿಧಿವತ್ತಾಗಿ ಪೂಜಿಸಿ ಶಿವನನ್ನು ಸಂತುಷ್ಟಗೊಳಿಸಿ, ಪ್ರಾತಃಕಾಲದಲ್ಲಿ ಪುನಃ ಪೂಜೆ ಮಾಡಿದ ಬಳಿಕ ವಿಧಿಯುಕ್ತ ಹೋಮವನ್ನು ಮಾಡಬೇಕು. ಮತ್ತೆ ಯಥಾಶಕ್ತಿ ಪ್ರಾಜಾಪತ್ಯ ವಿಧಾನವನ್ನು ಮಾಡಬೇಕು. ಮತ್ತೆ ಬ್ರಾಹ್ಮಣರನ್ನು ಭಕ್ತಿಯಿಂದ ಭೋಜನ ಮಾಡಿಸಿ, ಯಥಾಶಕ್ತಿ ದಾನವನ್ನು ಕೊಡಬೇಕು.

ಇದಾದ ಬಳಿಕ ವಸ್ತ್ರ, ಅಲಂಕಾರ, ಆಭೂಷಣಗಳಿಂದ ಪತ್ನೀಸಹಿತ ಋತ್ವಿಜರನ್ನು ಅಲಂಕೃತಗೊಳಿಸಿ ಅವರಿಗೆ ವಿಧಿವತ್ತಾಗಿ ಬೇರೆ-ಬೇರೆಯಾಗಿ ದಾನಗಳನ್ನು ಕೊಡಬೇಕು. ಮತ್ತೆ ಆವಶ್ಯಕ ಸಾಮಗ್ರಿಗಳಿಂದ ಕೂಡಿದ ಕರುವಿನ ಸಹಿತ

ಗೋವನ್ನು ಆಚಾರ್ಯರಿಗೆ – 'ಈ ದಾನದಿಂದ ಭಗವಾನ್ ಶಿವನು ನನ್ನ ಮೇಲೆ ಪ್ರಸನ್ನವಾಗಲಿ' ಎಂದು ಹೇಳುತ್ತಾ ವಿಧಿ ಪೂರ್ವಕ ದಾನ ಮಾಡಬೇಕು. ಅನಂತರ ಕಲಶಸಹಿತ ಆ ಮೂರ್ತಿಯನ್ನು ವಸ್ತ್ರಸಹಿತ ವೃಷಭನ ಬೆನ್ನಿನ ಮೇಲೆ ಇರಿಸಿ, ಎಲ್ಲ ಅಲಂಕಾರಗಳ ಸಹಿತ ಆಚಾರ್ಯರಿಗೆ ಅರ್ಪಿಸಬೇಕು. ಬಳಿಕ ಕೈಜೋಡಿಸಿ, ನತಮಸ್ತಕವಾಗಿ ತುಂಬು ಪ್ರೇಮಾದರಗಳಿಂದ ಗದ್ಗದಿತ ವಾಣಿಯಿಂದ ಮಹಾಪ್ರಭು ಮಹೇಶ್ವರನಲ್ಲಿ ಇಂತು ಪ್ರಾರ್ಥಿಸಬೇಕು –

ಪ್ರಾರ್ಥನೆ

ದೇವದೇವ ಮಹಾದೇವ ಶರಣಾಗತವತ್ಸಲ ।
ವ್ರತೇನಾನೇನ ದೇವೇಶ ಕೃಪಾಂ ಕುರು ಮಮೋಪರಿ ॥
ಮಯಾ ಭಕ್ತ್ಯನುಸಾರೇಣ ವ್ರತಮೇತತ್ ಕೃತಂ ಶಿವ ।
ನ್ಯೂನಂ ಸಂಪೂರ್ಣತಾಂ ಯಾತು ಪ್ರಸಾದಾತ್ತವ ಶಂಕರ ॥
ಅಜ್ಞಾನಾದ್ಯದಿ ವಾ ಜ್ಞಾನಾಜ್ಜಪ ಪೂಜಾದಿಕಂ ಮಯಾ ।
ಕೃತಂ ತದಸ್ತು ಕೃಪಯಾಸಫಲಂ ತವ ಶಂಕರ ॥

'ದೇವದೇವ ಮಹಾದೇವನೇ ! ಶರಣಾಗತ ವತ್ಸಲನೇ ! ದೇವೇಶ್ವರನೇ ! ಈ ವ್ರತದಿಂದ ಸಂತುಷ್ಟನಾಗಿ ನೀನು ನನ್ನ ಮೇಲೆ ಕೃಪೆದೋರು. ಶಿವಶಂಕರನೇ ! ನಾನು ಭಕ್ತಿಭಾವದಿಂದ ಈ ವ್ರತವನ್ನು ಪಾಲಿಸಿರುವೆನು. ಇದರಲ್ಲಿ ಆದ ಕೊರತೆಯು ನಿನ್ನ ಪ್ರಸಾದದಿಂದ ಪೂರ್ಣವಾಗಲಿ. ಶಂಕರನೇ ! ನಾನು ತಿಳಿದೋ, ತಿಳಿಯದೆಯೋ ಮಾಡಿದ ಜಪ, ಪೂಜೆ ಮುಂತಾದವುಗಳು ನಿನ್ನ ಕೃಪೆಯಿಂದ ಸಫಲವಾಗಲೀ.'

ಈ ಪ್ರಕಾರ ಪರಮಾತ್ಮಾ ಶಿವನಿಗೆ ಪುಷ್ಪಾಂಜಲಿಯನ್ನು ಅರ್ಪಿಸಿ, ನಮಸ್ಕಾರ – ಪ್ರಾರ್ಥನೆ ಮಾಡಬೇಕು. ಈ ಪ್ರಕಾರ ವ್ರತವನ್ನು ಪೂರ್ಣಗೊಳಿಸಿದರೆ ಆ ವ್ರತದಲ್ಲಿ ಯಾವುದೇ ನ್ಯೂನತೆ ಉಳಿಯುವುದಿಲ್ಲ. ಅದರಿಂದ ಅವನು ಮನೋವಾಂಛಿತ ಸಿದ್ಧಿಯನ್ನು ಪಡೆಯುವನು, ಇದರಲ್ಲಿ ಸಂಶಯವೇ ಇಲ್ಲ.

(ಅಧ್ಯಾಯ ೩೯)

❑ ❑ ❑

ತಿಳಿಯದೆಯೇ ಶಿವರಾತ್ರಿ ವ್ರತವನ್ನು ಮಾಡಿದ್ದರಿಂದ ಒಬ್ಬ ಬೇಡನಮೇಲೆ ಭಗವಾನ್ ಶಂಕರನ ಅದ್ಭುತ ಕೃಪೆ

ಋಷಿಗಳು ಕೇಳಿದರು – ಸೂತಪುರಾಣಿಕರೇ ! ಹಿಂದಿನ ಕಾಲದಲ್ಲಿ ಈ ಉತ್ತಮ ಶಿವರಾತ್ರಿ ವ್ರತವನ್ನು ಯಾರು ಪಾಲಿಸಿದ್ದರು. ತಿಳಿಯದೆಯೂ ಈ ವ್ರತವನ್ನು ಪಾಲಿಸಿದ್ದರಿಂದ ಯಾರು ಎಂತಹ ಫಲವನ್ನು ಪಡೆದಿದ್ದರು?

ಸೂತಪುರಾಣಿಕರು ಹೇಳುತ್ತಾರೆ – ಋಷಿಗಳೇ ! ನೀವೆಲ್ಲರೂ ಕೇಳಿರಿ. ನಾನು ಈ ವಿಷಯದಲ್ಲಿ ಎಲ್ಲ ಪಾಪಗಳನ್ನು ನಾಶಮಾಡುವಂತಹ ಒಬ್ಬ ನಿಷಾದನ ಪ್ರಾಚೀನ ಇತಿಹಾಸವನ್ನು ಹೇಳುವೆನು. ಹಿಂದೆ ಯಾವುದೋ ಕಾಡಿನಲ್ಲಿ ಗುರುದ್ರುಹ ಎಂಬ ಹೆಸರಿನ ಒಬ್ಬ ಬೇಡನು ಇರುತ್ತಿದ್ದನು. ಅವನ ಕುಟುಂಬವು ದೊಡ್ಡದಾಗಿತ್ತು. ಅವನು ಬಲಿಷ್ಠನೂ, ಕ್ರೂರಸ್ವಭಾವದವನೂ ಆಗಿದ್ದು ಕ್ರೂರತೆಯಲ್ಲೇ ತತ್ಪರನಾಗಿದ್ದನು. ಅವನು ಪ್ರತಿದಿನವು ವನಕ್ಕೆ ಹೋಗಿ ಮೃಗಗಳನ್ನು ಕೊಂದು, ಅಲ್ಲೇ ಇದ್ದು ನಾನಾ ಪ್ರಕಾರದ ಕಳ್ಳತನವನ್ನು ಮಾಡುತ್ತಿದ್ದನು. ಅವನು ಬಾಲ್ಯದಿಂದಲೂ ಎಂದಿಗೂ ಯಾವುದೇ ಶುಭಕರ್ಮವನ್ನು ಮಾಡಿರಲಿಲ್ಲ. ಹೀಗೆ ಕಾಡಿನಲ್ಲಿರುತ್ತಾ ಆ ದುರಾತ್ಮನ ಬಹಳ ಸಮಯವು ಕಳೆದುಹೋಯಿತು. ಅನಂತರ ಒಂದು ದಿನ ಶುಭಕಾರಕ ಶಿವರಾತ್ರಿಯು ಬಂತು. ಆದರೆ ಆ ದುರಾತ್ಮನು ನಿಬಿಡವಾದ ಕಾಡಿನಲ್ಲಿ ವಾಸಿಸುತ್ತಿದ್ದುದರಿಂದ ಅವನಿಗೆ ಆ ವ್ರತವೇ ತಿಳಿಯುತ್ತಿರಲಿಲ್ಲ. ಅದೇ ದಿನ ಬೇಡನ ತಂದೆ-ತಾಯಿ ಮತ್ತು ಪತ್ನಿಯು ಹಸಿವಿನಿಂದ ಪೀಡಿತರಾಗಿ – ಅಯ್ಯಾ ! 'ನಮಗೆ ತಿನ್ನಲು ಏನಾದರೂ ಕೊಡು' ಎಂದು ಕೇಳಿದರು.

ಅವರು ಹೀಗೆ ಯಾಚಿಸಿದಾಗ ಅವನು ಕೂಡಲೇ ಧನುಸ್ಸನ್ನೆತ್ತಿಕೊಂಡು ಹೊರಟು ಬಿಟ್ಟನು ಹಾಗೂ ಮೃಗಗಳ ಬೇಟೆಗಾಗಿ ಕಾಡಿನಲ್ಲಿ ಅಲೆಯತೊಡಗಿದನು. ದೈವಯೋಗದಿಂದ ಅವನಿಗೆ ಆ ದಿನ ಸೂರ್ಯಾಸ್ತವಾದರೂ ಏನೂ ಸಿಗಲಿಲ್ಲ. ಇದರಿಂದ ಅವನಿಗೆ ಭಾರೀ ದುಃಖವಾಗಿ ಯೋಚಿಸ ತೊಡಗಿದನು – 'ಈಗ ನಾನೇನು ಮಾಡಲಿ ? ಎಲ್ಲಿಗೆ ಹೋಗಲಿ ? ಇಂದು ಏನೂ ಸಿಗಲಿಲ್ಲ. ಮನೆಯಲ್ಲಿರುವ ತಂದೆ-ತಾಯಿಯರ, ಮಕ್ಕಳ ಗತಿ ಏನು? ಪತ್ನಿಯ ಸ್ಥಿತಿ ಏನಾದೀತು ? ಆದ್ದರಿಂದ ಏನಾದರೂ ತೆಗೆದುಕೊಂಡೇ ಮನೆಗೆ ಹೋಗಬೇಕು; ಇಲ್ಲದಿದ್ದರೆ ಆಗಲಾರದು'. ಎಂದು ಆಲೋಚಿಸಿ ಆ ವ್ಯಾಧನು ಒಂದು ಜಲಾಶಯದ ಸಮೀಪಕ್ಕೆ ತಲುಪಿದನು. ಅಲ್ಲಿ ನೀರಿಗೆ ಇಳಿಯಲು ಮೆಟ್ಟಿಲುಗಳಿದ್ದವು. ಅಲ್ಲಿಗೆ ಹೋಗಿ ನಿಂತುಕೊಂಡನು. ಇಲ್ಲಿಗೆ ನೀರು ಕುಡಿಯಲು

ಯಾವುದಾದರೂ ಪ್ರಾಣಿಯು ಬಂದೇ ಬರುವುದು ಅದನ್ನು ಕೊಂದು ಕೃತಕೃತ್ಯನಾಗಿ ಅದನ್ನು ಜೊತೆಗೆ ತೆಗೆದುಕೊಂಡು ಸಂತೋಷವಾಗಿ ಮನೆಗೆ ಹೋಗುವೆನು ಎಂದು ಮನಸ್ಸಿನಲ್ಲಿ ಅಂದುಕೊಂಡನು. ಹೀಗೆ ನಿಶ್ಚಯಿಸಿ ಆ ಬೇಡನು ಒಂದು ಬಿಲ್ವಪತ್ರೆ ಮರವನ್ನು ಹತ್ತಿ, ಒಂದು ಗಡಿಗೆಯಲ್ಲಿ ನೀರನ್ನು ತುಂಬಿಕೊಂಡು ಕುಳಿತುಬಿಟ್ಟನು. ಯಾವುದಾದರೂ ಪ್ರಾಣಿಯು ಯಾವಾಗ ಬಂದೀತು? ನಾನು ಯಾವಾಗ ಕೊಂದೆನು ಎಂದು ಅವನ ಮನಸ್ಸಿನಲ್ಲಿತ್ತು. ಹೀಗೆ ಪ್ರತೀಕ್ಷೆ ಮಾಡುತ್ತಾ ಹಸಿವು-ಬಾಯಾರಿಕೆಯಿಂದ ಪೀಡಿತನಾಗಿ ಅವನು ಕುಳಿತ್ತಿದ್ದನು. ಆ ರಾತ್ರಿಯ ಮೊದಲನೇ ಜಾವದಲ್ಲಿ ಒಂದು ಹೆಣ್ಣು ಜಿಂಕೆಯು ಅಲ್ಲಿಗೆ ಬಂತು. ಅದು ಚಕಿತವಾಗಿ ಜೋರಾಗಿ ನೆಗೆಯುತ್ತಿತ್ತು. ಬ್ರಾಹ್ಮಣರೇ ! ಆ ಹೆಣ್ಣು ಜಿಂಕೆಯನ್ನು ನೋಡಿ ವ್ಯಾಧನಿಗೆ ಬಹಳ ಹರ್ಷವಾಯಿತು. ಅವನು ಕೂಡಲೇ ಅದನ್ನು ಕೊಲ್ಲಲು ತನ್ನ ಧನುಸ್ಸಿಗೆ ಬಾಣವನ್ನು ಹೂಡಿದನು. ಹೀಗೆ ಮಾಡುತ್ತಿದ್ದಾಗ ಅವನ ಕೈಯು ತಗುಲಿ ಸ್ವಲ್ಪನೀರು ಮತ್ತು ಬಿಲ್ವಪತ್ರೆಯು ಕೆಳಗೆ ಬಿತ್ತು. ಆ ಮರದ ಕೆಳಗೆ ಒಂದು ಶಿವಲಿಂಗವಿತ್ತು. ಆ ನೀರು ಮತ್ತು ಬಿಲ್ವಪತ್ರೆಯಿಂದ ಶಿವನ ಪ್ರಥಮ ಜಾವದ ಪೂಜೆಯು ನಡೆಯಿತು. ಆ ಪೂಜೆಯ ಮಾಹಾತ್ಮ್ಯದಿಂದ ಆ ವ್ಯಾಧನ ಬಹಳಷ್ಟು ಪಾಪಗಳು ತತ್‌ಕಾಲದಲ್ಲೇ ನಾಶವಾಗಿ ಹೋಯಿತು. ಅಲ್ಲಿ ನಡೆದ ಸಪ್ಪಳದಿಂದ ಜಿಂಕೆಯು ಭಯದಿಂದ ಮೇಲೆ ನೋಡಿತು. ಬೇಡನನ್ನು ಕಂಡು ಅದು ವ್ಯಾಕುಲವಾಗಿ ಇಂತೆಂದಿತು –

ಹೆಣ್ಣು ಜಿಂಕೆಯು ಹೇಳಿತು – ವ್ಯಾಧನೇ ! ನೀನು ಏನನ್ನು ಮಾಡಬೇಕೆಂದಿರುವೆ? ನನ್ನಲ್ಲಿ ಸತ್ಯವಾಗಿ ಹೇಳು.

ಹೆಣ್ಣು ಜಿಂಕೆಯ ಮಾತನ್ನು ಕೇಳಿ ಬೇಡನು ಹೇಳಿದನು – ಇಂದು ನನ್ನ ಕುಟುಂಬದ ಜನರು ಹಸಿದಿರುವರು. ಆದ್ದರಿಂದ ನಿನ್ನನ್ನು ಕೊಂದು ಅವರ ಹಸಿವನ್ನು ಇಂಗಿಸುವೆನು, ಅವರನ್ನು ತೃಪ್ತಿಪಡಿಸುವೆನು.

ವ್ಯಾಧನ ಆ ದಾರುಣವಾದ ಮಾತನ್ನು ಕೇಳಿ, ತಡೆಯಲು ಕಷ್ಟವಾಗಿದ್ದ, ಬಾಣವನ್ನು ಹೂಡಿದ ಆ ದುಷ್ಟ ಬೇಡನನ್ನು ನೋಡಿ ಜಿಂಕೆಯು – 'ಈಗ ನಾನೇನು ಮಾಡಲಿ ? ಎಲ್ಲಿಗೆ ಹೋಗಲಿ? ಯಾವುದಾದರು ಒಳ್ಳೆಯ ಉಪಾಯವನ್ನು ರಚಿಸುವೆನು' ಎಂದು ಯೋಚಿಸಿ, ಅದು ಬೇಡನಲ್ಲಿ ಇಂತೆಂದಿತು.

ಹೆಣ್ಣುಜಿಂಕೆಯು ಹೇಳಿತು – ಎಲೈ ಬೇಡನೇ ! ನನ್ನ ಮಾಂಸದಿಂದ ನಿಮಗೆ ಸುಖವಾಗುವುದು. ಈ ಅನರ್ಥಕಾರಿ ಶರೀರಕ್ಕೆ ಇದಕ್ಕಿಂತ ಮಿಗಿಲಾದ ಮಹಾಪುಣ್ಯದ ಕಾರ್ಯ ಬೇರೆ ಏನಿರಬಹುದು? ಉಪಕಾರ ಮಾಡುವ ಪ್ರಾಣಿಗೆ ಈ ಲೋಕದಲ್ಲಿ ದೊರೆಯುವ ಪುಣ್ಯವನ್ನು ನೂರು ವರ್ಷಗಳಲ್ಲಿಯೂ ವರ್ಣಿಸಲಾಗದು.* ಆದರೆ ಈಗ ನನ್ನ ಎಲ್ಲ ಮರಿಗಳು ನನ್ನ ಆಶ್ರಯದಲ್ಲಿರುವವು. ನಾನು ಅವನ್ನು ನನ್ನ ತಂಗಿಗೆ ಅಥವಾ ನನ್ನ ಪತಿಗೆ ಒಪ್ಪಿಸಿ ಮರಳಿ ಬರುವೆನು. ವನಚರನೇ ! ನೀನು ನನ್ನ ಮಾತನ್ನು ಸುಳ್ಳೆಂದು ತಿಳಿಯಬೇಡ. ನಾನು ಪುನಃ ನಿನ್ನ ಬಳಿಗೆ ಮರಳಿ ಬರುವುದರಲ್ಲಿ ಸಂಶಯವೇ ಇಲ್ಲ. ಸತ್ಯದಿಂದಲೇ ಧರಣಿಯು ನಿಂತಿದೆ, ಸತ್ಯದಿಂದಲೇ ಸಮುದ್ರವು ತನ್ನ ಮೇರೆಯನ್ನು ಮೀರುವುದಿಲ್ಲ, ಸತ್ಯದಿಂದಲೇ ಜಲಪಾತಗಳಲ್ಲಿ ನೀರು ಧುಮುಕುತ್ತಿದೆ, ಸತ್ಯದಲ್ಲೇ ಎಲ್ಲವೂ ಪ್ರತಿಷ್ಠಿತವಾಗಿದೆ.*

ಸೂತಪುರಾಣಿಕರು ಹೇಳುತ್ತಾರೆ – ಹೆಣ್ಣು ಜಿಂಕೆಯು ಹೀಗೆ ಹೇಳಿದಾಗಲೂ ವ್ಯಾಧನು ಅದರ ಮಾತನ್ನು ಒಪ್ಪಿಕೊಳ್ಳಲಿಲ್ಲ. ಆಗ ಅದು ಅತ್ಯಂತ ವಿಸ್ಮಿತ ಹಾಗೂ ಭಯಗೊಂಡು ಪುನಃ ಹೀಗೆ ಹೇಳಲು ಪ್ರಾರಂಭಿಸಿತು.

ಹೆಣ್ಣು ಜಿಂಕೆಯು ಹೇಳಿತು – ವ್ಯಾಧನೇ – ನಾನು ನಿನ್ನ ಮುಂದೆ ಆಣೆಯಿಟ್ಟು ಹೇಳುತ್ತೇನೆ – ನಾನು ಮನೆಗೆ ಹೋಗಿ ಅವಶ್ಯವಾಗಿ ನಿನ್ನ ಬಳಿಗೆ ಮರಳುವೆನು. 'ಬ್ರಾಹ್ಮಣನು ವೇದವನ್ನು ಮಾರಿದರೆ, ಮೂರು ಕಾಲಗಳಲ್ಲಿಯೂ ಸಂಧ್ಯಾವಂದನೆ ಮಾಡದಿದ್ದರೆ ಉಂಟಾಗುವ ಪಾಪವು, ಪತಿಯ ಆಜ್ಞೆಯನ್ನು ಮೀರಿ ಸ್ವೇಚ್ಛಾನುಸಾರ ಕಾರ್ಯಮಾಡುವ ಸ್ತ್ರೀಗೆ ಯಾವ ಪಾಪ ತಗಲುವುದೋ, ಮಾಡಿದ ಉಪಕಾರವನ್ನು ಮನ್ನಿಸದವನಿಗೆ, ಭಗವಾನ್ ಶಂಕರನಿಂದ ವಿಮುಖನಾಗಿರುವವನಿಗೆ, ಬೇರೆಯವರಲ್ಲಿ ದ್ರೋಹ ಮಾಡುವವನಿಗೆ, ಧರ್ಮವನ್ನು ಅತಿಕ್ರಮಿಸುವವನಿಗೆ, ವಿಶ್ವಾಸಘಾತಿ ಮತ್ತು ಕಪಟ ಮಾಡುವವರಿಗೆ ತಗಲುವ ಪಾಪವು, ನಾನು ಮರಳಿ ಬಾರದಿದ್ದರೆ ನನಗೆ ತಟ್ಟಿಕೊಳ್ಳಲಿ.'

ಹೀಗೆ ಅನೇಕ ಆಣೆಯನ್ನಿಟ್ಟು ಜಿಂಕೆಯು ಸುಮ್ಮನೆ ನಿಂತುಕೊಂಡಾಗ ಆ ವ್ಯಾಧನು ಅದರ ಮೇಲೆ ವಿಶ್ವಾಸವಿಟ್ಟು

---

* ಉಪಕಾರಕರಸ್ಯೈವ ಯತ್ ಪುಣ್ಯಂ ಜಾಯತೇತ್ವಿಹ । ತತ್ ಪುಣ್ಯಂ ಶಕ್ಯತೇ ನೈವ ವಕ್ತುಂ ವರ್ಷಶತೈರಪಿ ॥
(ಶಿ - ಪು - ಕೋ - ರು - ಸಂ - ೪೦/೨೬)

* ಸ್ಥಿತಾ ಸತ್ಯೇನ ಧರಣೀ ಸತ್ಯೇನೈವ ಚ ವಾರಿಧಿಃ । ಸತ್ಯೇನ ಜಲಧಾರಾಶ್ಚ ಸತ್ಯೇ ಸರ್ವಂ ಪ್ರತಿಷ್ಠಿತಮ್ ॥
(ಶಿ - ಪು - ಕೋ - ರು - ಸಂ - ೪೦/೨೯)

– 'ಸರಿ, ಈಗ ನೀನು ಮನೆಗೆ ಹೋಗು' ಎಂದು ಹೇಳಿದನು. ಆಗ ಆ ಜಿಂಕೆಯು ಬಹಳ ಹರ್ಷಗೊಂಡು, ನೀರನ್ನು ಕುಡಿದು ತನ್ನ ಆಶ್ರಮ ಮಂಡಲಕ್ಕೆ ಹೋಯಿತು. ಇಷ್ಟರಲ್ಲಿ ರಾತ್ರಿಯ ಆ ಮೊದಲನೆಯ ಜಾವವು ವ್ಯಾಧನು ಎಚ್ಚರದಿಂದಿದ್ದು ಕಳೆದು ಹೋಯಿತು. ಆಗ ಆ ಮೊದಲಿನ ಜಿಂಕೆಯ ತಂಗಿಯು ಅಕ್ಕನನ್ನು ಹುಡುಕುತ್ತಾ ನೀರು ಕುಡಿಯಲು ಅಲ್ಲಿಗೆ ಬಂದಿತು. ಆ ಹೆಣ್ಣು ಜಿಂಕೆಯನ್ನು ನೋಡಿ ಬೇಡನು ಬಾಣವನ್ನು ಬತ್ತಳಿಕೆಯಿಂದ ತೆಗೆದನು. ಹೀಗೆ ಮಾಡುವಾಗ ಪುನಃ ಮೊದಲಿನಂತೆ ಭಗವಾನ್ ಶಿವನ ಮೇಲೆ ನೀರು ಮತ್ತು ಬಿಲ್ವಪತ್ರೆ ಬಿತ್ತು. ಅದರಿಂದ ಮಹಾತ್ಮಾ ಶಂಭುವಿನ ಎರಡನೆಯ ಜಾವದ ಪೂಜೆಯು ನೆರವೇರಿತು. ಅದು ಪ್ರಸಂಗವಶಾತ್ ಆಗಿದ್ದರೂ ವ್ಯಾಧನಿಗೆ ಸುಖಿದಾಯಕವಾಯಿತು. ಬಾಣವನ್ನು ಸೆಳೆಯುತ್ತಿರುವುದನ್ನು ನೋಡಿದ ಜಿಂಕೆಯು – ವನಚರನೇ! ಇದೇನು ನೀನು ಮಾಡುತ್ತಿರುವೆ? ಎಂದು ಕೇಳಿತು. ವ್ಯಾಧನು ಹಿಂದಿನಂತೆಯೇ – ನನ್ನ ಹಸಿದಿರುವ ಕುಟುಂಬವನ್ನು ತೃಪ್ತಿಪಡಿಸಲಿಕ್ಕಾಗಿ ನಿನ್ನನ್ನು ಕೊಲ್ಲುವೆನು ಎಂದು ಉತ್ತರಿಸಿದನು. ಇದನ್ನು ಕೇಳಿ ಆ ಹೆಣ್ಣು ಜಿಂಕೆಯು ನುಡಿಯಿತು.

ಹೆಣ್ಣು ಜಿಂಕೆಯು ಹೇಳಿತು – ವ್ಯಾಧನೇ! ನನ್ನ ಮಾತನ್ನು ಕೇಳು. ನಾನು ಧನ್ಯಳು. ನಾನು ದೇಹಧರಿಸಿದ್ದು ಸಫಲವಾಯಿತು. ಏಕೆಂದರೆ, ಈ ಅನಿತ್ಯ ಶರೀರದಿಂದ ಉಪಕಾರವಾಗುವುದು. ಆದರೆ ನನ್ನ ಪುಟ್ಟ-ಪುಟ್ಟ ಮರಿಗಳು ಮನೆಯಲ್ಲಿವೆ. ಆದ್ದರಿಂದ ನಾನೊಮ್ಮೆ ಮನೆಗೆ ಹೋಗಿ ಅವನ್ನು ನನ್ನ ಸ್ವಾಮಿಗೆ ಒಪ್ಪಿಸಿ ಮತ್ತೆ ನಿನ್ನ ಬಳಿಗೆ ಬರುವೆನು.

ವ್ಯಾಧನೆಂದನು – ನಿನ್ನ ಮಾತಿನ ಮೇಲೆ ನನಗೆ ವಿಶ್ವಾಸವಿಲ್ಲ. ನಾನು ನಿನ್ನನ್ನು ಕೊಲ್ಲುವೆನು. ಇದರಲ್ಲಿ ಸಂಶಯವೇ ಇಲ್ಲ.

ಇದನ್ನು ಕೇಳಿ ಆ ಜಿಂಕೆಯು ಭಗವಾನ್ ವಿಷ್ಣುವಿನ ಮೇಲೆ ಆಣೆಯಿಟ್ಟು ಹೇಳಿತು – ವ್ಯಾಧನೇ ! ನಾನು ಹೇಳುವುದನ್ನು ಕೇಳು. ನಾನು ಮರಳಿ ಬಾರದಿದ್ದರೆ, ನನ್ನ ಎಲ್ಲ ಪುಣ್ಯವನ್ನು ಕಳೆದುಕೊಳ್ಳುವೆನು. ಏಕೆಂದರೆ, ಮಾತನ್ನು ಕೊಟ್ಟು ತಪ್ಪುವವನು ತನ್ನ ಪುಣ್ಯವನ್ನು ಕಳೆದುಕೊಳ್ಳುವನು. ತನ್ನ ವಿವಾಹಿತ ಪತ್ನಿಯನ್ನು ತ್ಯಜಿಸಿ ಇನ್ನೊಬ್ಬಳ ಬಳಿಕೆ ಹೋಗುವ ಪುರುಷನಿಗೆ, ವೈದಿಕ ಧರ್ಮವನ್ನು ಉಲ್ಲಂಘಿಸಿ ಕಪೋಲಕಲ್ಪಿತ ಧರ್ಮದಲ್ಲಿ ನಡೆಯುವವನಿಗೆ, ಭಗವಾನ್ ವಿಷ್ಣುವಿನ ಭಕ್ತನಾಗಿ ಶಿವನನ್ನು ನಿಂದಿಸುವವನಿಗೆ, ತಂದೆ-ತಾಯಿಯರ ನಿಧನ ತಿಥಿಯಲ್ಲಿ ಶ್ರಾದ್ಧಾದಿಗಳನ್ನು ಮಾಡದೆ ಅದನ್ನು ಬರಿದಾಗಿ ಕಳೆಯುವವನಿಗೆ, ಮನಸ್ಸಿನಲ್ಲಿ ಸಂತಾಪಗೊಂಡು ತಾನು ಕೊಟ್ಟ ಮಾತನ್ನು ನಡೆಸುವವನಿಗೆ ತಗಲುವ ಪಾಪವು ನಾನು ಮರಳಿ ಬಾರದಿದ್ದರೆ ನನಗೂ ತಟ್ಟಲಿ.'

ಸೂತಪುರಾಣಿಕರು ಹೇಳುತ್ತಾರೆ – ಅದು ಹೀಗೆ ಹೇಳಿದಾಗ ವ್ಯಾಧನು ಆ ಜಿಂಕೆಯಲ್ಲಿ – 'ಹೋಗು' ಎಂದು ಹೇಳಿದನು. ಜಿಂಕೆಯು ನೀರನ್ನು ಕುಡಿದು ಹರ್ಷದಿಂದ ತನ್ನ ಆಶ್ರಮಕ್ಕೆ ಹೊರಟುಹೋಯಿತು. ಇಷ್ಟರಲ್ಲಿ ವ್ಯಾಧನು ಎಚ್ಚರವಾಗಿದ್ದೇ ಎರಡನೆಯ ಜಾವವು ಕಳೆದುಹೋಯಿತು. ಆಗ ಮೂರನೆಯ ಜಾವವು ಪ್ರಾರಂಭವಾದಾಗ ಜಿಂಕೆಯು ಮರಳಿ ಬರಲು ತಡವಾಯಿತೆಂದು ತಿಳಿದು ಚಕಿತನಾಗಿ ವ್ಯಾಧನು ಅದನ್ನು ಹುಡುಕತೊಡಗಿದನು. ಇಷ್ಟರಲ್ಲಿ ನೀರು ಕುಡಿಯಲು ಬಂದ ಒಂದು ಜಿಂಕೆಯನ್ನು ನೋಡಿದನು. ಅದು ಬಹಳ ಹೃಷ್ಟ-ಪುಷ್ಟವಾಗಿತ್ತು. ಅದನ್ನು ನೋಡಿದ ಬೇಡನಿಗೆ ಬಹಳ ಹರ್ಷವಾಯಿತು. ಅವನು ಧನುಸ್ಸಿಗೆ ಬಾಣವನ್ನು ತೊಟ್ಟು ಅದನ್ನು ಕೊಲ್ಲಲು ಉದ್ಯುಕ್ತನಾದನು. ಹೀಗೆ ಮಾಡುವಾಗ ಪ್ರಾರಬ್ಧವಶದಿಂದ ಸ್ವಲ್ಪ ನೀರು ಮತ್ತು ಬಿಲ್ವಪತ್ರೆಗಳು ಶಿವಲಿಂಗದ ಮೇಲೆ ಬಿತ್ತು. ಅದರಿಂದ ಅವನ ಸೌಭಾಗ್ಯದಿಂದ ಭಗವಾನ್ ಶಿವನ ಮೂರನೆಯ ಜಾವದ ಪೂಜೆಯು ನಡೆಯಿತು. ಹೀಗೆ ಭಗವಂತನು ಅವನ ಮೇಲೆ ದಯೆದೋರಿದನು. ಎಲೆಗಳು ಬೀಳುವ ಶಬ್ದವನ್ನು ಕೇಳಿ ಆ ಜಿಂಕೆಯು ವ್ಯಾಧನ ಕಡೆಗೆ ನೋಡಿತು ಮತ್ತು ಕೇಳಿತು – 'ಏನು ಮಾಡುತ್ತಿರುವೆ?' ವ್ಯಾಧನು – 'ನಾನು ನನ್ನ ಕುಟುಂಬಕ್ಕೆ ಭೋಜನವನ್ನು ಕೊಡಲು ನಿನ್ನನ್ನು ವಧಿಸುತ್ತಿದ್ದೇನೆ' ಎಂದು ಹೇಳಿದನು. ವ್ಯಾಧನ ಮಾತನ್ನು ಕೇಳಿ ಜಿಂಕೆಯ ಮನಸ್ಸಿಗೆ ಬಹಳ ಸಂತೋಷವಾಯಿತು ಹಾಗೂ ಕೂಡಲೇ ಇಂತೆಂದಿತು.

ಜಿಂಕೆಯು ಹೇಳಿತು – ನಾನು ಧನ್ಯನಾಗಿದ್ದೇನೆ. ನಾನು ಹೃಷ್ಟ – ಪುಷ್ಟವಾದುದು ಸಫಲವಾಯಿತು. ಏಕೆಂದರೆ, ನನ್ನ ಶರೀರದಿಂದ ನಿಮ್ಮ ತೃಪ್ತಿಯಾಗುವುದು. ಯಾರ ಶರೀರವು ಪರೋಪಕಾರದಲ್ಲಿ ಉಪಯೋಗವಾಗುವುದಿಲ್ಲವೋ, ಅವನಲ್ಲಿ ಇದ್ದುದು ಎಲ್ಲವೂ ವ್ಯರ್ಥವಾಗುತ್ತದೆ. ಸಾಮರ್ಥ್ಯವಿದ್ದರೂ ಯಾರಿಗೂ ಉಪಕಾರ ಮಾಡದವನ ಸಾಮರ್ಥ್ಯವು ವ್ಯರ್ಥವು ಹಾಗೂ ಅವನು ಪರಲೋಕದಲ್ಲಿ ನರಕಗಾಮಿಯಾಗುವನು.* ಆದರೆ ಒಮ್ಮೆ ನನಗೆ ಹೋಗಲು ಬಿಡು. ನಾನು ನನ್ನ ಮರಿಗಳನ್ನು ಅವುಗಳ ತಾಯಿಗೆ ಒಪ್ಪಿಸಿ,

★ ಯೋ ವೈ ಸಾಮರ್ಥ್ಯಯುಕ್ತಸ್ಯ ನೋಪಕಾರಂ ಕರೋತಿ ವೈ। ತತ್ಸಾಮರ್ಥ್ಯಂ ಭವೇದ್ ವ್ಯರ್ಥಂ ಪರತ್ರ ನರಕಂ ವ್ರಜೇತ್ ॥
(ಶಿ – ಪು – ಕೋ – ರು – ಸಂ – ೪೦/೫೭)

ಅವರೆಲ್ಲರಿಗೂ ಧೈರ್ಯವನ್ನು ಕೊಟ್ಟು ಮರಳಿ ಬರುವೆನು.

ಅದು ಹೀಗೆ ಹೇಳಿದಾಗ ವ್ಯಾಧನ ಮನಸ್ಸು ವಿಸ್ಮಿತವಾಯಿತು. ಅವನ ಹೃದಯ ಶುದ್ಧವಾಗಿತ್ತು. ಅವನ ಎಲ್ಲ ಪಾಪಪುಂಜಗಳು ನಾಶವಾಗಿ ಹೋಗಿದ್ದವು. ಅವನು ಇಂತೆಂದನು.

ವ್ಯಾಧನು ಹೇಳಿದನು – ಇಲ್ಲಿಗೆ ಬಂದವರೆಲ್ಲರೂ ನಿನ್ನಂತೆಯೇ ಮಾತುಗಳನ್ನು ಹೇಳಿ ಹೊರಟುಹೋದವು. ಆದರೆ ವಂಚಕರಾದ ಅವು ಇಷ್ಟರವರೆಗೆ ಮರಳಿ ಬಂದಿಲ್ಲ. ಮೃಗವೇ ! ನೀನೂ ಕೂಡ ಈಗ ಸಂಕಟದಲ್ಲಿ ಇರುವೆ. ಆದ್ದರಿಂದ ಸುಳ್ಳು ಹೇಳಿ ಹೊರಟುಹೋಗುವೆ. ಮತ್ತೆ ಇಂದು ನನ್ನ ಜೀವನ ನಿರ್ವಾಹ ಹೇಗೆ ನಡೆಯುವುದು ?

ಜಿಂಕೆಯು ಹೇಳಿತು – ವ್ಯಾಧನೇ ! ನಾನು ಹೇಳುವುದನ್ನು ಕೇಳು. ನನ್ನಲ್ಲಿ ಅಸತ್ಯವು ಇಲ್ಲ. ಇಡೀ ಚರಾಚರ ಬ್ರಹ್ಮಾಂಡವು ಸತ್ಯದಿಂದಲೇ ನೆಲೆಸಿದೆ. ಸುಳ್ಳು ಹೇಳುವವನ ಪುಣ್ಯವು ತಕ್ಷಣ ನಾಶವಾಗುತ್ತದೆ. ಆದರೂ ಬೇಡನೇ ! ನೀನು ನನ್ನ ಸತ್ಯ ಪ್ರತಿಜ್ಞೆಯನ್ನು ಕೇಳು – 'ಸಂಧ್ಯಾಕಾಲದಲ್ಲಿ ಮೈಥುನ ಹಾಗೂ ಶಿವರಾತ್ರಿಯಂದು ಭೋಜನ ಮಾಡುವವನಿಗೆ ಬರುವ ಪಾಪವು, ಸುಳ್ಳು ಸಾಕ್ಷಿ ಹೇಳುವವನಿಗೆ, ಒತ್ತೆಯಿಟ್ಟುದನ್ನು ನುಂಗಿ ಹಾಕುವವನಿಗೆ ಬರುವ ಪಾಪವು ಸಂಧ್ಯೆ ಮಾಡದಿರುವುದರಿಂದ ತಗಲುವ ಪಾಪವು, ನಾನು ಮರಳಿ ಬಾರದಿದ್ದರೆ ಆ ಪಾಪವು ನನಗೂ ಬರಲಿ. ಯಾರ ಮುಖದಿಂದ ಶಿವನ ನಾಮವು ಬರುವುದಿಲ್ಲವೋ, ಸಾಮರ್ಥ್ಯವಿದ್ದರೂ ಇತರರಿಗೆ ಉಪಕಾರ ಮಾಡುವುದಿಲ್ಲವೋ, ಪರ್ವದಿನಗಳಲ್ಲಿ ಶ್ರೀಫಲವನ್ನು ಕೀಳುವನೋ, ಅಭಕ್ಷ ಭಕ್ಷಣ ಮಾಡುವನೋ, ಶಿವಪೂಜೆ ಮಾಡದೆ, ಭಸ್ಮ ಹಚ್ಚಿಕೊಳ್ಳದೆ ಊಟಮಾಡುವನೋ, ಇವರಿಗೆಲ್ಲರಿಗೆ ತಗಲುವ ಆ ಪಾಪವು, ನಾನು ಮರಳಿ ಬಾರದಿದ್ದರೆ ನನಗೆ ತಟ್ಟಲಿ.'

ಸೂತಪುರಾಣಿಕರು ಹೇಳುತ್ತಾರೆ – ಅದರ ಮಾತನ್ನು ಕೇಳಿ ವ್ಯಾಧನು – 'ಹೋಗು, ಬೇಗನೆ ಮರಳಿ ಬಾ' ಎಂದು ಹೇಳಿದನು. ವ್ಯಾಧನು ಹೀಗೆ ಹೇಳಿದಾಗ ಜಿಂಕೆಯು ನೀರು ಕುಡಿದು ಹೊರಟುಹೋಯಿತು. ಅವೆಲ್ಲವೂ ತಮ್ಮ ಆಶ್ರಮದಲ್ಲಿ ಒಂದಾದವು. ಮೂರು ಪ್ರತಿಜ್ಞಾಬದ್ಧರಾಗಿದ್ದವು. ಪರಸ್ಪರ ತಮ್ಮ ವೃತ್ತಾಂತವನ್ನು ತಿಳಿಸಿಕೊಂಡು ಸತ್ಯಪಾಶದಿಂದ ಬಂಧಿತವಾದ ಅವೆಲ್ಲವೂ ನಾವು ಅಲ್ಲಿಗೆ ಅವಶ್ಯವಾಗಿ ಹೋಗಬೇಕೆಂದು ನಿಶ್ಚಯಿಸಿದವು. ಹೀಗೆ ನಿಶ್ಚಯಿಸಿ ಮರಿಗಳನ್ನು ಸಮಾಧಾನಪಡಿಸಿ, ಆಶ್ವಾಸನೆಯನ್ನಿತ್ತು ಅವೆಲ್ಲವೂ ಹೋಗಲು ಉತ್ಸುಕರಾದವು. ಆಗ ಹಿರಿಯ ಹೆಣ್ಣು ಜಿಂಕೆಯು ಪತಿಯಲ್ಲಿ – 'ಸ್ವಾಮಿ ! ನೀವಿಲ್ಲದೆ ಇಲ್ಲಿ ಮರಿಗಳು ಹೇಗಿರಬಲ್ಲವು? ಪ್ರಭೋ ! ನಾನೂ ಅಲ್ಲಿಗೆ ಹೋಗಿ ಮೊದಲಿಗೆ ಪ್ರತಿಜ್ಞೆ ಮಾಡಿರುವೆನು. ಆದಕ್ಕಾಗಿ ಕೇವಲ ನಾನೇ ಹೋಗಬೇಕು. ನೀವಿಬ್ಬರೂ ಇಲ್ಲೇ ಇರಿ;' ಎಂದು ನುಡಿಯಿತು. ಅದರ ಮಾತನ್ನು ಕೇಳಿ ಅದರ ತಂಗಿ – 'ಅಕ್ಕಾ ! ನಾನು ನಿನ್ನ ಸೇವಕಿಯಾಗಿರುವೆನು. ಆದ್ದರಿಂದ ಇಂದು ನಾನೇ ವ್ಯಾಧನ ಬಳಿಗೆ ಹೋಗುವೆನು. ನೀನು ಇಲ್ಲೇ ಇರು ಎಂದು ಹೇಳಿದಾಗ, ಜಿಂಕೆಯು – 'ನಾನೇ ಅಲ್ಲಿಗೆ ಹೋಗುವೆನು, ನೀವಿಬ್ಬರೂ ಇಲ್ಲೇ ಇರಿ. ಏಕೆಂದರೆ, ಮರಿಗಳ ರಕ್ಷಣೆ ತಾಯಿಯಿಂದಲೇ ಆಗುವುದು' ಎಂದು ಹೇಳಿತು. ಜಿಂಕೆಯ ಮಾತನ್ನು ಕೇಳಿ ಆ ಎರಡೂ ಹೆಣ್ಣು ಜಿಂಕೆಗಳು ಧರ್ಮದ ದೃಷ್ಟಿಯಿಂದ ಅದನ್ನು ಒಪ್ಪಿಕೊಳ್ಳಲಿಲ್ಲ. ಅವೆರಡೂ ತಮ್ಮ ಪತಿಯಲ್ಲಿ ಪ್ರೇಮದಿಂದ – 'ಸ್ವಾಮಿ ! ಪತಿಯಿಲ್ಲದ ಈ ಜೀವನಕ್ಕೆ ಧಿಕ್ಕಾರವಿರಲಿ' ಎಂದು ಹೇಳಿದಾಗ ಅವೆಲ್ಲವೂ ತಮ್ಮ ಮರಿಗಳಿಗೆ ಸ್ವಾಂತನ ಹೇಳಿ ನೆರೆ ಮೃಗಗಳಿಗೆ ತಮ್ಮ ಮರಿಗಳನ್ನು ಒಪ್ಪಿಸಿ, ಮೂವರೂ ವ್ಯಾಧ ಶಿರೋಮಣಿಯು ಪ್ರತೀಕ್ಷೆ ಮಾಡುತ್ತಾ ಕುಳಿತ್ತಿದ್ದಲ್ಲಿಗೆ ಹೊರಟವು. ಅವು ಹೋಗುತ್ತಿರುವುದನ್ನು ಕಂಡು ಆ ಎಲ್ಲ ಮರಿಗಳು ಅವುಗಳ ಹಿಂದೆ-ಹಿಂದೆಯೇ ಹೊರಟವು. ಇವು ತಂದೆ-ತಾಯಿಯವರಿಗೆ ಸಿಗುವ ಗತಿಯೇ ನಮಗೆ ಸಿಗಲಿ ಎಂದು ನಿಶ್ಚಯಿಸಿದವು. ಅವೆಲ್ಲವೂ ಒಟ್ಟಿಗೆ ಬಂದಿರುವುದನ್ನು ನೋಡಿ ವ್ಯಾಧನಿಗೆ ಬಹಳ ಹರ್ಷವಾಯಿತು. ಅವನು ಧನುಸ್ಸಿಗೆ ಬಾಣವನ್ನು ಹೂಡಿದನು. ಆಗಲೂ ಪುನಃ ನೀರು ಮತ್ತು ಬಿಲ್ವಪತ್ರೆಗಳು ಶಿವನ ಮೇಲೆ ಬಿತ್ತು. ಅದರಿಂದ ಶಿವನ ನಾಲ್ಕನೆಯ ಪ್ರಹರದ ಶುಭ ಪೂಜೆಯು ನಡೆದಂತಾಯಿತು. ಆಗ ವ್ಯಾಧನ ಎಲ್ಲ ಪಾಪಗಳು ಭಸ್ಮವಾಗಿ ಹೋದುವು. ಅಷ್ಟರಲ್ಲಿ ಎರಡು ಹೆಣ್ಣು ಜಿಂಕೆ ಮತ್ತು ಒಂದು ಗಂಡು ಜಿಂಕೆ ಹೇಳಿದವು – ವ್ಯಾಧ ಶಿರೋಮಣಿಯೇ ! ಬೇಗನೇ ದಯಮಾಡಿ ನಮ್ಮ ಶರೀರವನ್ನು ಸಾರ್ಥಕಗೊಳಿಸು.

ಅವುಗಳ ಮಾತನ್ನು ಕೇಳಿ ವ್ಯಾಧನಿಗೆ ಅತ್ಯಂತ ವಿಸ್ಮಯವಾಯಿತು. ಶಿವಪೂಜೆಯ ಪ್ರಭಾವದಿಂದ ಅವನಿಗೆ ದುರ್ಲಭ ಜ್ಞಾನಪ್ರಾಪ್ತವಾಯಿತು. 'ಈ ಮೃಗಗಳು ಜ್ಞಾನಹೀನವಾಗಿದ್ದರೂ ಧನ್ಯವಾಗಿವೆ. ಸರ್ವಥಾ ಆದರಣೀಯವಾಗಿದೆ. ಏಕೆಂದರೆ, ತಮ್ಮ ಶರೀರದಿಂದಲೇ ಪರೋಪಕಾರದಲ್ಲಿ ತೊಡಗಿರುವಿರಿ. ನಾನು ಈಗ ಮನುಷ್ಯ ಜನ್ಮ ಪಡೆದಿದ್ದರೂ ಯಾವ ಪುರುಷಾರ್ಥವನ್ನು ಸಾಧಿಸಿದೆ ? ಇತರರ ಶರೀರವನ್ನು ಪೀಡಿಸಿ ನನ್ನ ಶರೀರವನ್ನು ಸಾಕಿದೆ. ಪ್ರತಿದಿನವೂ ಅನೇಕ ಪ್ರಕಾರದ ಪಾಪಗಳನ್ನು ಮಾಡಿ ನನ್ನ

ಕುಟುಂಬವನ್ನು ಸಾಕಿದೆ. ಅಯ್ಯೋ ! ಇಂತಹ ಪಾಪಗಳನ್ನು ಮಾಡಿ ನನಗೆ ಯಾವ ಗತಿ ಉಂಟಾದೀತು ? ಅಥವಾ ನಾನು ಯಾವ ಗತಿಯನ್ನು ಹೊಂದುವೆನು ? ನಾನು ಹುಟ್ಟಿದಂದಿನಿಂದ ಇಷ್ಟರವರೆಗೆ ಮಾಡಿದ ಪಾಪಗಳೆಲ್ಲ ಈಗ ನನಗೆ ಸ್ಮರಣೆಗೆ ಬರುತ್ತಿವೆ. ನನ್ನ ಜೀವನಕ್ಕೆ ಧಿಕ್ಕಾರವಿರಲಿ' ಎಂದು ಯೋಚಿಸಿ ಜ್ಞಾನಸಂಪನ್ನ ವ್ಯಾಧನು ತನ್ನ ಬಾಣವನ್ನು ಮರಳಿ ಬತ್ತಳಿಕೆಗೆ ಸೇರಿಸಿ – ಶ್ರೇಷ್ಠ ಮೃಗಗಳೇ ! ನೀವು ಹೋಗಿರಿ. ನಿಮ್ಮ ಜೀವನ ಧನ್ಯವಾಗಿದೆ ಎಂದು ನುಡಿದನು.

ವ್ಯಾಧನು ಹೀಗೆ ಹೇಳಿದಾಗ ಭಗವಾನ್ ಶಂಕರನು ತತ್‌ಕಾಲವೇ ಪ್ರಸನ್ನನಾಗಿ, ವ್ಯಾಧನಿಗೆ ತನ್ನ ಸಮ್ಯಾನಿತ ಹಾಗೂ ಪೂಜಿತ ಸ್ವರೂಪವನ್ನು ತೋರಿಸಿ, ಕೃಪಾಪೂರ್ವಕ ಅವನ ಶರೀರವನ್ನು ಸ್ಪರ್ಶಿಸಿ ಅವನಲ್ಲಿ ಹೇಳಿದನು – 'ಬೇಡನೇ ! ನಾನು ನಿನ್ನ ವ್ರತದಿಂದ ಪ್ರಸನ್ನನಾಗಿರುವೆನು. ವರವನ್ನು ಕೇಳು.' ವ್ಯಾಧನೂ ಕೂಡ ಭಗವಾನ್ ಶಿವನ ಆ ರೂಪವನ್ನು ನೋಡಿ ಆಗಲೇ ಜೀವನ್ಮುಕ್ತನಾದನು. 'ನಾನು ಎಲ್ಲವನ್ನು ಪಡೆದೆ' ಎಂದು ಹೇಳುತ್ತಾ ಶಿವನ ಚರಣಗಳಲ್ಲಿ ಹೊರಳಾಡಿದನು. ಅವನ ಈ ಭಾವವನ್ನು ನೋಡಿ ಭಗವಾನ್ ಶಿವನು ಮನಸ್ಸಿನಲ್ಲೇ ಸಂತೋಷಗೊಂಡು ಅವನಿಗೆ-'ಗುಹ' ಎಂದು ನಾಮಕರಣಮಾಡಿ ಕೃಪಾದೃಷ್ಟಿಯಿಂದ ನೋಡುತ್ತಾ ಅವನಿಗೆ ದಿವ್ಯ ವರಗಳನ್ನು ಕೊಟ್ಟನು.

ಶಿವನು ಹೇಳಿದನು – ವ್ಯಾಧನೇ ! ಕೇಳು. ಇಂದಿನಿಂದ ನೀನು ಶೃಂಗವೇರ ಪುರದ ಉತ್ತಮ ರಾಜಧಾನಿಯನ್ನು ಆಶ್ರಯಿಸಿ ದಿವ್ಯ ಭೋಗಗಳನ್ನು ಅನುಭವಿಸು. ನಿನ್ನ ವಂಶದ ವೃದ್ಧಿಯು ನಿರ್ವಿಘ್ನವಾಗಿ ಆಗುತ್ತಾ ಇರುವುದು. ದೇವತೆಗಳೂ ನಿನ್ನನ್ನು ಪ್ರಶಂಸಿಸುವರು. ಬೇಡನೇ ! ನನ್ನ ಭಕ್ತರ ಮೇಲೆ ಸ್ನೇಹವನ್ನಿರಿಸುವ ಭಗವಾನ್ ಶ್ರೀರಾಮನು ಒಂದು ದಿನ ನಿಶ್ಚಯವಾಗಿಯೂ ನಿನ್ನಲ್ಲಿಗೆ ಆಗಮಿಸಿ ನಿನ್ನೊಂದಿಗೆ ಸ್ನೇಹ ಬೆಳೆಸುವನು. ನೀನು ನನ್ನ ಸೇವೆಯಲ್ಲಿ ಮನಸ್ಸನ್ನು ತೊಡಗಿಸಿ ದುರ್ಲಭವಾದ ಮೋಕ್ಷವನ್ನು ಹೊಂದುವೆ.

ಅದೇ ಸಮಯದಲ್ಲಿ ಆ ಎಲ್ಲ ಮೃಗಗಳು ಭಗವಾನ್ ಶಂಕರನ ದರ್ಶನಮಾಡಿ, ನಮಸ್ಕರಿಸಿ, ಮೃಗಯೋನಿಯಿಂದ ಮುಕ್ತರಾಗಿ, ದಿವ್ಯ ದೇಹಗಳನ್ನು ಧರಿಸಿ ವಿಮಾನವನ್ನು ಏರಿ ಶಿವನ ದರ್ಶನಮಾತ್ರದಿಂದ ಶಾಪಮುಕ್ತರಾಗಿ ದಿವ್ಯ ಧಾಮಕ್ಕೆ ತೆರಳಿದವು. ಅಂದಿನಿಂದ ಅರ್ಬುದ ಪರ್ವತದಲ್ಲಿ ಭಗವಾನ್ ಶಿವನು ವ್ಯಾಧೇಶ್ವರ ಹೆಸರಿನಿಂದ ಪ್ರಸಿದ್ಧನಾದನು. ಅವನ ದರ್ಶನ ಮತ್ತು ಪೂಜೆಯಿಂದ ತತ್‌ಕಾಲವೇ ಭೋಗ ಮತ್ತು ಮೋಕ್ಷಗಳು ದೊರೆಯುವವು. ಮಹರ್ಷಿಗಳೇ ! ಆ ವ್ಯಾಧನೂ ಕೂಡ ಅಂದಿನಿಂದ ದಿವ್ಯ ಭೋಗಗಳನ್ನು ಅನುಭವಿಸುತ್ತಾ ತನ್ನ ರಾಜಧಾನಿಯಲ್ಲಿ ಇರತೊಡಗಿದನು. ಅವನು ಭಗವಾನ್ ಶ್ರೀರಾಮನ ಕೃಪೆಯನ್ನು ಪಡೆದು ಶಿವನ ಸಾಯುಜ್ಯವನ್ನು ಹೊಂದಿದನು. ತಿಳಿಯದೆಯೇ ಮಾಡಿದ ಈ ವ್ರತದ ಅನುಷ್ಠಾನದಿಂದ ಅವನಿಗೆ ಸಾಯುಜ್ಯ ಮುಕ್ತಿಯು ದೊರೆತಿರುವಾಗ ಭಕ್ತಿಭಾವದಿಂದ ಸಂಪನ್ನನಾಗಿ ಈ ವ್ರತವನ್ನು ಆಚರಿಸುವವನಿಗೆ ಶಿವನ ಶುಭ ಸಾಯುಜ್ಯವು ಪ್ರಾಪ್ತವಾಗುವುದರಲ್ಲಿ ಹೇಳುವುದೇನಿದೆ ? ಸಮಸ್ತ ಶಾಸ್ತ್ರಗಳ ಹಾಗೂ ಅನೇಕ ರೀತಿಯ ಧರ್ಮಗಳ ವಿಷಯದಲ್ಲಿ ಚೆನ್ನಾಗಿ ವಿಚಾರಮಾಡಿ ಈ ಶಿವರಾತ್ರಿ ವ್ರತವನ್ನು ಎಲ್ಲಕ್ಕಿಂತ ಉತ್ತಮವೆಂದು ಹೇಳಲಾಗಿದೆ. ಈ ಲೋಕದಲ್ಲಿ ಮಾಡಲಾಗುವ ನಾನಾ ವಿಧದ ವ್ರತಗಳು, ವಿವಿಧ ತೀರ್ಥಗಳು, ಬಗೆ-ಬಗೆಯ ವಿಚಿತ್ರ ದಾನಗಳು, ಅನೇಕ ಪ್ರಕಾರದ ಯಜ್ಞಗಳು, ವಿವಿಧ ತಪಸ್ಸುಗಳು, ಬಹಳಷ್ಟು ಜಪಗಳು, ಇವೆಲ್ಲವೂ ಈ ಶಿವರಾತ್ರಿ ವ್ರತದ ಸಮಾನತೆ ಮಾಡಲಾರವು. ಅದಕ್ಕಾಗಿ ತನ್ನ ಹಿತವನ್ನು ಬಯಸುವವರು ಈ ಶುಭತರ ವ್ರತವನ್ನು ಅವಶ್ಯವಾಗಿ ಪಾಲಿಸಬೇಕು. ಈ ಶಿವರಾತ್ರಿ ವ್ರತವು ದಿವ್ಯವಾಗಿದೆ. ಇದರಿಂದ ಸದಾ ಭೋಗ ಮತ್ತು ಮೋಕ್ಷಗಳು ಪ್ರಾಪ್ತವಾಗುತ್ತವೆ. ಮಹರ್ಷಿಗಳೇ ! ಈ ಶುಭ ಶಿವರಾತ್ರಿ ವ್ರತವು ವ್ರತರಾಜ ಎಂಬ ಹೆಸರಿನಿಂದ ವಿಖ್ಯಾತವಾಗಿದೆ. ಇದರ ವಿಷಯದಲ್ಲಿ ಎಲ್ಲವನ್ನೂ ನಿಮಗೆ ತಿಳಿಸಿ ಬಿಟ್ಟಿರುವೆನು. ಇನ್ನು ಏನನ್ನು ಕೇಳ ಬಯಸುವಿರಿ?

(ಅಧ್ಯಾಯ ೪೦)

❐ ❐ ❐

ಮುಕ್ತಿ ಮತ್ತು ಭಕ್ತಿಯ ಸ್ವರೂಪದ ವಿವೇಚನೆ

ಋಷಿಗಳು ಕೇಳಿದರು – ಸೂತಪುರಾಣಿಕರೇ ! ನೀವು ಪದೇ-ಪದೇ ಮುಕ್ತಿಯ ಹೆಸರನ್ನು ಹೇಳಿರುವಿರಿ. ಇಲ್ಲಿ ಮುಕ್ತಿ ಸಿಕ್ಕಿದಮೇಲೆ ಏನಾಗುತ್ತದೆ? ಮುಕ್ತಿಯಲ್ಲಿ ಜೀವನಿಗೆ ಎಂತಹ ಸ್ಥಿತಿ ಉಂಟಾಗುತ್ತದೆ? ಇದನ್ನು ನಮಗೆ ಹೇಳಿರಿ.

ಸೂತಪುರಾಣಿಕರು ಹೇಳುತ್ತಾರೆ – ಮಹರ್ಷಿಗಳೇ ! ಕೇಳಿರಿ. ನಾನು ನಿಮಗೆ ಸಂಸಾರ ಕ್ಲೇಶದಿಂದ ನಿವಾರಿಸುವ ಹಾಗೂ ಪರಮಾನಂದವನ್ನು ಪ್ರದಾನ ಮಾಡುವ ಮುಕ್ತಿಯ ಸ್ವರೂಪವನ್ನು ಹೇಳುವೆನು. ಮುಕ್ತಿಗಳು – ಸಾರೂಪ್ಯ, ಸಾಲೋಕ್ಯ, ಸಾನ್ನಿಧ್ಯ ಹಾಗೂ ಸಾಯುಜ್ಯ ಎಂಬ ನಾಲ್ಕು ಪ್ರಕಾರದಿಂದ ಇವೆ. ಈ ಶಿವರಾತ್ರಿ ವ್ರತದಿಂದ ಎಲ್ಲ ರೀತಿಯ ಮುಕ್ತಿಗಳು ಸುಲಭವಾಗುತ್ತವೆ. ಜ್ಞಾನರೂಪ ಅವಿನಾಶಿಯೂ, ಸಾಕ್ಷಿಯೂ, ಜ್ಞಾನಗಮ್ಯನೂ, ದ್ವೈತರಹಿತನೂ ಆದ ಸಾಕ್ಷಾತ್ ಶಿವನೇ ಕೈವಲ್ಯ ಮೋಕ್ಷವನ್ನು ಹಾಗೂ ಧರ್ಮ, ಅರ್ಥ, ಕಾಮರೂಪೀ ತ್ರಿವರ್ಗವನ್ನೂ ಕೊಡುವವನಾಗುತ್ತಾನೆ. ಕೈವಲ್ಯವೆಂಬ ಐದನೆಯ ಮುಕ್ತಿಯು ಮನುಷ್ಯರಿಗೆ ಅತ್ಯಂತ ದುರ್ಲಭವಾಗಿದೆ. ಮುನಿವರ್ಯರೇ! ನಾನು ಅದರ ಲಕ್ಷಣವನ್ನು ತಿಳಿಸುವೆನು; ಕೇಳಿರಿ. ಈ ಸಮಸ್ತ ಜಗತ್ತು ಶಿವನಿಂದಲೇ ಉತ್ಪನ್ನವಾಗುತ್ತದೆ. ಅವನಿಂದಲೇ ಇದರ ಪಾಲನೆಯಾಗುತ್ತದೆ, ಕೊನೆಗೆ ಅವನಲ್ಲೇ ಇದು ಲೀನವಾಗುತ್ತದೆ. ಅವನಿಂದಲೇ ಈ ಸಮಸ್ತ ಜಗತ್ತು ವ್ಯಾಪ್ತವಾಗಿದೆ. ಮುನೀಶ್ವರರೇ ! ವೇದಗಳಲ್ಲಿ ಸಕಲ ಮತ್ತು ನಿಷ್ಕಲ ಎಂಬ ಶಿವನ ಎರಡು ರೂಪಗಳನ್ನು ತಿಳಿಸಿದೆ. ಶಿವತತ್ತ್ವವು ಸತ್ಯ, ಜ್ಞಾನ, ಅನಂತ ಹಾಗೂ ಸಚ್ಚಿದಾನಂದ ಹೆಸರಿನಿಂದ ಪ್ರಸಿದ್ಧವಾಗಿದೆ. ಅದು ನಿರ್ಗುಣ, ಉಪಾಧಿ ರಹಿತ, ಅವಿನಾಶೀ, ಶುದ್ಧ, ನಿರಂಜನ (ನಿರ್ಮಲ)ವಾಗಿದೆ. ಅದು ಕೆಂಪಾಗಲಿ, ಹಳದಿಯಾಗಲಿ, ಬಿಳಿಯಾಗಲೀ, ನೀಲಿಯಾಗಲೀ, ಸಣ್ಣದಾಗಲೀ, ದೊಡ್ಡದಾಗಲೀ, ದಪ್ಪವಾಗಲೀ, ತೆಳ್ಳಗೆಯಾಗಲೀ ಇಲ್ಲ. ಮನಸ್ಸು ಸಹಿತ ವಾಣಿಯು ಅವನನ್ನು ಪಡೆಯದೆ ಮರಳುತ್ತದೆ. ಆ ಪರಬ್ರಹ್ಮ ಪರಮಾತ್ಮನೇ ಶಿವನಾಗಿರುವನು. ಆಕಾಶವು ಸರ್ವತ್ರ ವ್ಯಾಪ್ತವಾಗಿರುವಂತೆಯೇ, ಈ ಶಿವ ತತ್ತ್ವವು ಸರ್ವವ್ಯಾಪಿಯಾಗಿದೆ. ಇದು ಮಾಯೆಯಿಂದ ಅತೀತವೂ, ಸಮಸ್ತ ದ್ವಂದ್ವಗಳಿಂದ ರಹಿತ ಹಾಗೂ ಮತ್ಸರಶೂನ್ಯವೂ ಆದ ಪರಮಾತ್ಮವೇ ಆಗಿರುವನು. ಶಿವಜ್ಞಾನದ ಉದಯವಾಗುವುದರಿಂದ ನಿಶ್ಚಯವಾಗಿಯೂ ಅವನ ಪ್ರಾಪ್ತಿಯಾಗುತ್ತದೆ, ಅಥವಾ ದ್ವಿಜರೇ ! ಸೂಕ್ಷ್ಮ ಬುದ್ಧಿಯ ಮೂಲಕ ಶಿವನ ಭಜನೆ, ಧ್ಯಾನ ಮಾಡುವುದರಿಂದ ಸತ್ಪುರುಷರಿಗೆ ಶಿವಪದದ ಪ್ರಾಪ್ತಿಯಾಗುತ್ತದೆ.*

ಪ್ರಪಂಚದಲ್ಲಿ ಜ್ಞಾನದ ಪ್ರಾಪ್ತಿಯು ಅತ್ಯಂತ ಕಠಿಣವಾಗಿದೆ. ಆದರೂ ಭಜನೆಯು ಅತ್ಯಂತ ಸುಲಭವೆಂದು ತಿಳಿಯಲಾಗಿದೆ. ಆದರಿಂದ ಸಂತ ಶಿರೋಮಣಿ ಪುರುಷರು ಮುಕ್ತಿಗಾಗಿ ಶಿವನನ್ನೇ ಭಜಿಸುತ್ತಾರೆ. ಜ್ಞಾನಸ್ವರೂಪೀ ಮೋಕ್ಷದಾತಾ ಪರಮಾತ್ಮ ಶಿವನು ಭಜನೆಯ ಅಧೀನನೇ ಆಗಿರುವನು. ಭಕ್ತಿಯಿಂದಲೇ ಬಹಳಷ್ಟು ಜನರು ಸಿದ್ಧಿಯನ್ನು ಪಡೆದು ಸಂತೋಷವಾಗಿ ಪರಮ ಮೋಕ್ಷವನ್ನು ಹೊಂದಿರುವರು. ಭಗವಾನ್ ಶಂಭುವಿನ ಭಕ್ತಿಯು ಜ್ಞಾನದ ಜನನೀ ಎಂದು ತಿಳಿಯಲಾಗಿದೆ ಮತ್ತು ಅದು ಭೋಗ, ಮೋಕ್ಷಗಳನ್ನು ಕೊಡುವುದಾಗಿದೆ. ಅದು ಸಾಧು-ಸತ್ಪುರುಷರ ಕೃಪಾಪ್ರಸಾದದಿಂದ ಸುಲಭವಾಗುತ್ತದೆ. ಉತ್ತಮ ಪ್ರೇಮದ ಅಂಕುರವೇ ಅದರ ಲಕ್ಷಣವಾಗಿದೆ. ದ್ವಿಜರೇ ! ಆ ಭಕ್ತಿಯೂ ಸಗುಣ ಮತ್ತು ನಿರ್ಗುಣ ಎಂಬ ಎರಡು ಭೇದದಿಂದ ಇದೆ ಎಂದು ತಿಳಿಯಬೇಕು. ಮತ್ತೆ ವೈಧೀ ಮತ್ತು ಸ್ವಾಭಾವಿಕೀ ಎಂಬ ಇನ್ನೂ ಎರಡು ಭೇದಗಳಾಗುತ್ತವೆ. ಇವುಗಳಲ್ಲಿ ವೈಧೀಗಿಂತಲೂ ಸ್ವಾಭಾವಿಕೀ ಶ್ರೇಷ್ಠವೆಂದು ತಿಳಿಯಲಾಗಿದೆ. ಇವುಗಳಲ್ಲದೆ ನೈಷ್ಠಿಕೀ ಮತ್ತು ಅನೈಷ್ಠಿಕೀ ಎಂಬ ಭಕ್ತಿಯ ಇನ್ನೂ ಎರಡು ಪ್ರಕಾರಗಳನ್ನು ಹೇಳಲಾಗಿದೆ. ನೈಷ್ಠಿಕೀ ಭಕ್ತಿಯ ಆರು ಪ್ರಕಾರಗಳನ್ನು ತಿಳಿಯಬೇಕು ಮತ್ತು ಅನೈಷ್ಠಿಕೀ ಒಂದೇ ಪ್ರಕಾರದಿಂದ ಇದೆ. ಪುನಃ ವಿಹಿತಾ ಮತ್ತು ಅವಿಹಿತಾ ಎಂಬ ಭೇದಗಳಿಂದ ವಿದ್ವಾಂಸರು ಅದರ ಅನೇಕ ಪ್ರಕಾರಗಳನ್ನು ಒಪ್ಪಿರುವರು. ಅದರ ಅನೇಕ ಭೇದಗಳಿರುವುದರಿಂದ ಇಲ್ಲಿ

---

* ಸತ್ಯಂ ಜ್ಞಾನಮನಂತಂ ಚ ಸಚ್ಚಿದಾನಂದಸಂಜ್ಞಿತಮ್ । ನಿರ್ಗುಣೋ ನಿರುಪಾಧಿಶ್ಚಾವ್ಯಯಃ ಶುದ್ಧೋ ನಿರಂಜನಃ ॥ ನ ರಕ್ತೋ ನೈವ ಪೀತಶ್ಚ ನಶ್ವೇತೋ ನೀಲ ಏವ ಚ । ನ ಹ್ರಸ್ವೋ ನ ಚ ದೀರ್ಘಶ್ಚ ನ ಸ್ಥೂಲಃ ಸೂಕ್ಷ್ಮ ಏವ ಚ ॥ ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ । ತದೇವ ಪರಮಂಪ್ರೋಕ್ತಂ ಬ್ರಹ್ಮೈವ ಶಿವಸಂಜ್ಞಕಮ್ ॥ ಆಕಾಶಂ ವ್ಯಾಪಕಂ ಯದ್ವತ್ ತಥೈವ ವ್ಯಾಪಕಂ ತ್ವಿದಮ್ । ಮಾಯಾತೀತಂ ಪರಾತ್ಮಾನಂ ದ್ವಂದ್ವಾತೀತಂ ವಿಮತ್ಸರಮ್ ॥ ತತ್‌ಪ್ರಾಪ್ತಿಶ್ಚ ಭವೇದತ್ರ ಶಿವಜ್ಞಾನೋದಯಾದ್ ಧ್ರುವಮ್ । ಭಜನಾದ್ವಾ ಶಿವಸ್ಯೈವ ಸೂಕ್ಷ್ಮಮತ್ಯಾ ಸತಾಂ ದ್ವಿಜಾಃ ॥

(ಶಿ - ಪು - ಕೋ - ರು - ಸಂ - ೪೧/೧೨-೧೬)

ವಿಸ್ತೃತವಾಗಿ ವರ್ಣಿಸಲಾಗುವುದಿಲ್ಲ. ಆ ಎರಡೂ ಪ್ರಕಾರದ ಭಕ್ತಿಗಳಿಂದ ಶ್ರವಣವೇ ಮೊದಲಾದ ಭೇದದಿಂದ ಒಂಭತ್ತು ಅಂಗಗಳನ್ನು ತಿಳಿದುಕೊಳ್ಳಬೇಕು. ಭಗವಂತನ ಕೃಪೆಯಿಲ್ಲದೆ ಈ ಭಕ್ತಿಗಳನ್ನು ಸಂಪಾದಿಸುವುದು ಕಠಿಣವಾಗಿದೆ. ಅವನ ಕೃಪೆಯಿಂದಲೇ ಸುಗಮತೆಯಿಂದ ಇವುಗಳ ಸಾಧನೆ ಆಗುತ್ತದೆ. ದ್ವಿಜರೇ ! ಭಕ್ತಿ ಮತ್ತು ಜ್ಞಾನವನ್ನು ಶಂಭುವು ಒಂದರಿಂದ ಒಂದು ಭಿನ್ನವೆಂದು ತಿಳಿಸಲೇ ಇಲ್ಲ. ಅದಕ್ಕಾಗಿ ಅವುಗಳಲ್ಲಿ ಭೇದವನ್ನು ಎಣಿಸಬಾರದು. ಜ್ಞಾನ ಮತ್ತು ಭಕ್ತಿ ಎರಡರ ಸಾಧಕರಿಗೂ ಸದಾ ಸುಖವು ದೊರೆಯುತ್ತದೆ. ಬ್ರಾಹ್ಮಣರೇ ! ಭಕ್ತಿಯ ವಿರೋಧಿಯಾದವನಿಗೆ ಜ್ಞಾನ ಪ್ರಾಪ್ತಿಯಾಗುವುದಿಲ್ಲ. ಭಗವಾನ್ ಶಿವನ ಭಕ್ತಿಯನ್ನು ಮಾಡುವವನಿಗೇ ಶೀಘ್ರವಾಗಿ ಜ್ಞಾನದ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಮುನೀಶ್ವರರೇ ! ಮಹೇಶ್ವರನ ಭಕ್ತಿಯ ಸಾಧನೆಯನ್ನು ಅವಶ್ಯವಾಗಿ ಮಾಡಬೇಕು. ಇದರಿಂದ ಎಲ್ಲದರ ಸಿದ್ಧಿಯಾಗಬಹುದು; ಇದರಲ್ಲಿ ಸಂಶಯವೇ ಇಲ್ಲ. ಮಹರ್ಷಿಗಳೇ ! ನೀವು ಕೇಳಿರುವುದನ್ನು ನಾನು ವರ್ಣಿಸಿರುವೆನು. ಈ ಪ್ರಸಂಗವನ್ನು ಕೇಳಿ ಮನುಷ್ಯರು ಎಲ್ಲ ಪಾಪಗಳಿಂದ ನಿಸ್ಸಂದೇಹವಾಗಿ ಮುಕ್ತರಾಗುವರು.

(ಅಧ್ಯಾಯ ೪೧)

❑ ❑ ❑

ಶಿವ, ವಿಷ್ಣು, ರುದ್ರ ಮತ್ತು ಬ್ರಹ್ಮದೇವರ ಸ್ವರೂಪದ ವಿವೇಚನೆ

ಋಷಿಗಳು ಕೇಳಿದರು – ಶಿವನು ಯಾರು ? ವಿಷ್ಣು ಯಾರಾಗಿದ್ದಾನೆ ? ರುದ್ರನು ಎಂತಹವನು ಮತ್ತು ಬ್ರಹ್ಮದೇವರು ಯಾರು ? ಇವರೆಲ್ಲರಲ್ಲಿ ನಿರ್ಗುಣನು ಯಾರು ? ನಮ್ಮ ಈ ಸಂದೇಹವನ್ನು ನಿವಾರಿಸುವವರಾಗಿರಿ.

ಸೂತಪುರಾಣಿಕರು ಹೇಳುತ್ತಾರೆ – ಮಹರ್ಷಿಗಳೇ ! ವೇದ ಮತ್ತು ವೇದಾಂತದ ವಿದ್ವಾಂಸರು – ನಿರ್ಗುಣ ಪರಮಾತ್ಮನಿಂದ ಮೊಟ್ಟಮೊದಲಿಗೆ ಪ್ರಕಟವಾದ ಸಗುಣರೂಪದ ಹೆಸರೇ 'ಶಿವ' ಎಂದು ತಿಳಿಯುತ್ತಾರೆ. ಶಿವನಿಂದ ಪುರುಷಸಹಿತ ಪ್ರಕೃತಿಯು ಉತ್ಪನ್ನವಾಯಿತು. ಅವರಿಬ್ಬರೂ ಮೂಲಸ್ಥಾನದಲ್ಲಿದ್ದ ನೀರಿನಲ್ಲಿ ತಪಸ್ಸು ಮಾಡಿದರು. ಆ ಸ್ಥಾನವು ಪಂಚಕ್ರೋಶೀ ಕಾಶಿಯೆಂದು ವಿಖ್ಯಾತವಾಗಿದೆ. ಅದು ಭಗವಾನ್ ಶಿವನಿಗೆ ಅತ್ಯಂತ ಪ್ರಿಯವಾಗಿದೆ. ಈ ಜಲವು ಸಂಪೂರ್ಣ ವಿಶ್ವದಲ್ಲಿ ವ್ಯಾಪ್ತವಾಗಿತ್ತು. ಆ ಜಲವನ್ನು ಆಶ್ರಯಿಸಿ ಯೋಗ ಮಾಯೆಯಿಂದ ಕೂಡಿ ಶ್ರೀಹರಿಯು ಅಲ್ಲಿ ಮಲಗಿದನು. ನಾರ ಅರ್ಥಾತ್ ಜಲವನ್ನು ಅಯನ (ನಿವಾಸಸ್ಥಾನ) ಮಾಡಿದ್ದರಿಂದ ಮತ್ತೆ 'ನಾರಾಯಣ' ಎಂಬ ಹೆಸರಿನಿಂದ ಪ್ರಸಿದ್ಧನಾದನು. ಪ್ರಕೃತಿಯನ್ನು 'ನಾರಾಯಣೀ' ಎಂದು ಕರೆಯುತ್ತಾರೆ. ನಾರಾಯಣನ ನಾಭಿಕಮಲದಿಂದ ಉತ್ಪತ್ತಿಯಾದವನನ್ನೇ ಬ್ರಹ್ಮಾ ಎಂದು ಕರೆಯುವರು. ಬ್ರಹ್ಮನು ತಪಸ್ಸು ಮಾಡಿ ಯಾರನ್ನು ಸಾಕ್ಷಾತ್ಕರಿಸಿಕೊಂಡರೋ ಅವನನ್ನು ವಿಷ್ಣು ಎಂದು ಹೇಳಲಾಗಿದೆ. ಬ್ರಹ್ಮಾ ಮತ್ತು ವಿಷ್ಣುವಿನ ವಿವಾದವನ್ನು ಶಾಂತಗೊಳಿಸಲು ನಿರ್ಗುಣ ಶಿವನು ಪ್ರಕಟಿಸಿದ ರೂಪದ ಹೆಸರು ಮಹಾದೇವ ಎಂದಾಗಿದೆ. ಅವನು ಹೇಳಿದನು – 'ಶಂಭುವಾದ ನಾನೇ ಬ್ರಹ್ಮದೇವರ ಹಣೆಯಿಂದ ಪ್ರಕಟನಾಗುವೆನು.' ಈ ಮಾತಿನಂತೆ ಸಮಸ್ತ ಲೋಕಗಳ ಮೇಲೆ ಅನುಗ್ರಹವನ್ನು ತೋರಲೆಂದೇ ಬ್ರಹ್ಮದೇವರ ಲಲಾಟದಿಂದ ಪ್ರಕಟನಾದವನ ಹೆಸರು ರುದ್ರವೆಂದಾಯಿತು. ಈ ಪ್ರಕಾರ ರೂಪರಹಿತ ಪರಮಾತ್ಮನು ಎಲ್ಲರ ಚಿಂತನೆಯ ವಿಷಯವಾಗಲಿಕ್ಕಾಗಿ ಸಾಕಾರರೂಪದಲ್ಲಿ ಪ್ರಕಟನಾದನು. ಅವನೇ ಸಾಕ್ಷಾತ್ ಭಕ್ತವತ್ಸಲ ಶಿವನಾಗಿರುವನು. ಮೂರು ಗುಣಗಳಿಂದ ಭಿನ್ನನಾದ ಶಿವನಲ್ಲಿ ಹಾಗೂ ಗುಣಗಳ ಧಾಮನಾದ ರುದ್ರನಲ್ಲಿ – ಸುವರ್ಣ ಮತ್ತು ಸುವರ್ಣದ ಒಡವೆಗಳಲ್ಲಿ ಭೇದವಿಲ್ಲದಂತೆ, ವಾಸ್ತವಿಕ ಭೇದವು ಇರುವುದಿಲ್ಲ. ಇಬ್ಬರ ರೂಪ ಮತ್ತು ಕರ್ಮಗಳು ಸಮಾನವಾಗಿವೆ. ಇಬ್ಬರೂ ಸಮಾನವಾಗಿ ಭಕ್ತರಿಗೆ ಉತ್ತಮ ಗತಿಯನ್ನು ಕರುಣಿಸುವರು. ಇಬ್ಬರೂ ಒಂದೇ ರೀತಿಯಿಂದ ಎಲ್ಲರಿಗೂ ಸೇವನೀಯರಾಗಿದ್ದಾರೆ. ನಾನಾ ಪ್ರಕಾರದ ಲೀಲಾ-ವಿಹಾರ ಮಾಡುವವರಾಗಿದ್ದಾರೆ. ಭಯಾನಕ ಪರಾಕ್ರಮಿ ರುದ್ರನು ಸರ್ವಥಾ ಶಿವರೂಪನಾಗಿರುವನು. ಅವನು ಭಕ್ತರ ಕಾರ್ಯವನ್ನು ಸಿದ್ಧಿಗೊಳಿಸಲು ವಿಷ್ಣು ಮತ್ತು ಬ್ರಹ್ಮ ಇವರಿಗೆ ಸಹಾಯ ಮಾಡಲೆಂದೇ ಪ್ರಕಟನಾಗಿರುವನು. ಇತರ ದೇವತೆಗಳು ಪ್ರಕಟರಾದ ಕ್ರಮದಂತೆಯೇ ಲಯವನ್ನು ಹೊಂದುವರು. ಆದರೆ ರುದ್ರದೇವನು ಹಾಗೆ ಲೀನವಾಗುವುದಿಲ್ಲ. ಅವನು ಸಾಕ್ಷಾತ್ ಶಿವನಲ್ಲೇ ಲಯವಾಗುತ್ತಾನೆ. ಈ ಪ್ರಾಕೃತ ಪ್ರಾಣಿಗಳು ರುದ್ರನಲ್ಲೇ ಸೇರಿಕೊಂಡು ಲಯವನ್ನು ಹೊಂದುವರು. ಆದರೆ ರುದ್ರನು ಇವರಲ್ಲಿ ಸೇರಿ ಲಯವನ್ನು ಹೊಂದುವುದಿಲ್ಲ. ಇದು ಭಗವತಿ

ಶ್ರುತಿಯ ಉಪದೇಶವಾಗಿದೆ. ಎಲ್ಲ ಜನರು ರುದ್ರನ ಭಜನೆ ಮಾಡುತ್ತಾರೆ. ಆದರೆ ರುದ್ರನು ಯಾರ ಭಜನೆಯೂ ಮಾಡುವುದಿಲ್ಲ. ಅವನು ಭಕ್ತವತ್ಸಲನಾದ ಕಾರಣ ಎಂದಾದರೂ ತನ್ನ ಭಕ್ತಜನರನ್ನು ಚಿಂತಿಸುವನು. ಇತರರು ಯಾವ ದೇವತೆಯ ಭಜನೆ ಮಾಡುವರೋ, ಅದರಲ್ಲೇ ಲೀನರಾಗುವರು. ಅದಕ್ಕಾಗಿ ಅವರು ದೀರ್ಘಕಾಲದ ಬಳಿಕ ರುದ್ರನಲ್ಲಿ ಲೀನವಾಗುವ ಅವಕಾಶ ಪಡೆಯುತ್ತಾರೆ. ಯಾರಾದರು ರುದ್ರನ ಭಕ್ತನಾಗಿದ್ದರೆ ತತ್ಕಾಲವೇ ಶಿವನಾಗಿ ಹೋಗುತ್ತಾನೆ. ಆದ್ದರಿಂದ ಅವರಿಗೆ ಇತರರ ಅಪೇಕ್ಷೆ ಇರುವುದಿಲ್ಲ. ಇದು ಸನಾತನ ಶ್ರುತಿಯ ಸಂದೇಶವಾಗಿದೆ.

ದ್ವಿಜರೇ ! ಅಜ್ಞಾನವು ಅನೇಕ ಪ್ರಕಾರದಿಂದ ಇರುತ್ತದೆ, ಆದರೆ ವಿಜ್ಞಾನದ ಒಂದೇ ಸ್ವರೂಪವಾಗಿದೆ. ಅದು ಅನೇಕ ಪ್ರಕಾರದಿಂದ ಇರುವುದಿಲ್ಲ. ಅದನ್ನು ತಿಳಿಯುವ ಪ್ರಕಾರವನ್ನು ನಾನು ತಿಳಿಸುವೆನು; ನೀವೆಲ್ಲರೂ ಆದರದಿಂದ ಕೇಳಿರಿ. ಬ್ರಹ್ಮನಿಂದ ತೃಣದವರೆಗೆ ಇಲ್ಲಿ ಕಂಡುಬರುವುದೆಲ್ಲವೂ ಶಿವರೂಪವೇ ಆಗಿದೆ. ಅದರ ನಾನಾತ್ವದ ಕಲ್ಪನೆ ಮಿಥ್ಯೆಯಾಗಿದೆ. ಸೃಷ್ಟಿಯ ಮೊದಲೂ ಶಿವನ ಸತ್ತೆ ಹೇಳಲಾಗಿದೆ, ಸೃಷ್ಟಿಯ ಸಮಯದಲ್ಲಿಯೂ ಶಿವನು ವಿರಾಜಮಾನನಾಗಿರುವನು. ಸೃಷ್ಟಿಯ ಅಂತ್ಯದಲ್ಲಿಯೂ ಶಿವನು ಇರುತ್ತಾನೆ. ಎಲ್ಲವೂ ಶೂನ್ಯತೆಯಲ್ಲಿ ಪರಿಣತವಾದಾಗಲೂ ಶಿವನ ಸತ್ತೆ (ಅಸ್ತಿತ್ವ) ಇದ್ದೇ ಇರುವುದು. ಆದ್ದರಿಂದ ಮುನೀಶ್ವರರೇ ! ಶಿವನನ್ನೇ ಚತುರ್ಗುಣವೆಂದು ಹೇಳಲಾಗಿದೆ. ಆ ಶಿವನೇ ಶಕ್ತಿವಂತನಾದ್ದರಿಂದಲೇ 'ಸಗುಣ' ನೆಂದು ತಿಳಿಯಲು ಯೋಗ್ಯನಾಗಿರುವನು. ಹೀಗೆ ಅವನು ಸಗುಣ – ನಿರ್ಗುಣ ಭೇದದಿಂದ ಎರಡು ಪ್ರಕಾರದಿಂದ ಇರುವನು. ಯಾವ ಶಿವನೇ ಭಗವಾನ್ ವಿಷ್ಣುವಿಗೆ ಸಂಪೂರ್ಣ ಸನಾತನ ವೇದಗಳನ್ನು, ಅನೇಕ ವರ್ಣ, ಅನೇಕ ಮಾತ್ರೆಗಳು ಹಾಗೂ ತನ್ನ ಧ್ಯಾನ-ಪೂಜೆಯನ್ನು ಕೊಟ್ಟಿರುವನೋ, ಅವನೇ ಸಂಪೂರ್ಣ ವಿದ್ಯೆಗಳ ಈಶ್ವರನಾಗಿರುವನೆಂಬುದು ಸನಾತನ ಶ್ರುತಿಯಾಗಿದೆ. ಆದ್ದರಿಂದ ಶಂಭುವನ್ನು 'ವೇದಗಳ ಪ್ರಾಕಟ್ಯಕರ್ತಾ' ಹಾಗೂ 'ವೇದಪತಿ' ಎಂದು ಹೇಳಲಾಗಿದೆ. ಅವನೇ ಎಲ್ಲರ ಮೇಲೆ ಅನುಗ್ರಹ ಮಾಡುವ ಸಾಕ್ಷಾತ್ ಶಂಕರನಾಗಿರುವನು. ಕರ್ತಾ, ಭರ್ತಾ, ಹರ್ತಾ, ಸಾಕ್ಷಿ ಹಾಗೂ ನಿರ್ಗುಣನೂ ಅವನೇ ಆಗಿರುವನು. ಇತರರಿಗೆ ಕಾಲದ ಮಾನ (ಅಳತೆ) ವಿದೆ, ಆದರೆ ಕಾಲಸ್ವರೂಪ ರುದ್ರನಿಗೆ ಕಾಲದ ಯಾವುದೇ ಗಣನೆಯಿಲ್ಲ. ಏಕೆಂದರೆ, ಅವನು ಸಾಕ್ಷಾತ್ ಮಹಾಕಾಲನಾಗಿರುವನು ಮತ್ತು ಮಹಾಕಾಳಿ ಅವನಲ್ಲಿ ಆಶ್ರಿತಳಾಗಿರುವಳು. ಬ್ರಾಹ್ಮಣರು ರುದ್ರ ಮತ್ತು ಕಾಳಿಯನ್ನು ಒಂದೇ ಎಂದು ತಿಳಿಸುತ್ತಾರೆ. ಅವರಿಬ್ಬರೂ ಸತ್ಯಲೀಲೆಯನ್ನು ಮಾಡುವ ತನ್ನ ಇಚ್ಛೆಯಿಂದಲೇ ಎಲ್ಲವನ್ನೂ ಪಡೆದುಕೊಂಡರು. ಶಿವನ ಉತ್ಪಾದಕನು ಯಾರೂ ಇಲ್ಲ, ಶಿವನ ಪಾಲಕರೂ ಯಾರೂ ಇಲ್ಲ, ಸಂಹಾರಕನೂ ಯಾರೂ ಇಲ್ಲ. ಅವನು ಎಲ್ಲರ ಕಾರಣನಾಗಿರುವನು. ಒಬ್ಬನಾಗಿದ್ದರೂ ಅನೇಕತೆಯನ್ನು ಪಡೆಯಬಲ್ಲನು ಮತ್ತು ಅನೇಕವಾಗಿದ್ದರೂ ಏಕತೆಯನ್ನು ಪಡೆಯಬಲ್ಲನು. ಒಂದೇ ಬೀಜವು ಹೊರಗಾಗಿ ವೃಕ್ಷ ಮತ್ತು ಫಲವೇ ಮೊದಲಾದ ರೂಪಗಳಲ್ಲಿ ಪರಿಣತವಾಯಿತು, ಪುನಃ ಬೀಜಭಾವವನ್ನು ಪಡೆದುಕೊಂಡಿತು. ಹೀಗೆಯೇ ಶಿವರೂಪೀ ಮಹೇಶ್ವರನು ಸ್ವತಃ ಒಂದರಿಂದ ಅನೇಕವಾಗುವುದರಲ್ಲಿ ಕಾರಣನಾಗಿರುವನು. ಈ ಉತ್ತಮ ಶಿವಜ್ಞಾನವು ತತ್ತ್ವತಃ ತಿಳಿಸಲಾಗಿದೆ. ಜ್ಞಾನವಂತನಾದವನೇ ಇದನ್ನು ತಿಳಿಯುತ್ತಾನೆ, ಇತರರು ಇಲ್ಲ.

ಮುನಿಗಳು ಕೇಳಿದರು – ಸೂತಪುರಾಣಿಕರೇ ! ಮನುಷ್ಯನು ಶಿವಭಾವವನ್ನು ಹೊಂದುವಂತಹ ಜ್ಞಾನವನ್ನು ಲಕ್ಷಣ ಸಹಿತ ತಾವು ವರ್ಣಿಸಿರಿ. ಇಡೀ ಜಗತ್ತು ಶಿವಮಯನು ಹೇಗಿರುವನು ಅಥವಾ ಶಿವನೇ ಸಂಪೂರ್ಣ ಜಗತ್ತಾಗಿ ಹೇಗಿರುವನು ?

ಋಷಿಗಳ ಈ ಪ್ರಶ್ನೆಯನ್ನು ಕೇಳಿ ಪೌರಾಣಿಕ ಶಿರೋಮಣಿ ಸೂತರು ಭಗವಾನ್ ಶಿವ ಚರಣಾರವಿಂದಗಳನ್ನು ಸ್ಮರಿಸಿ ಹೇಳತೊಡಗಿದರು.

(ಅಧ್ಯಾಯ ೪೨)

❐ ❐ ❐

ಶಿವಸಂಬಂಧೀ ತತ್ತ್ವಜ್ಞಾನದ ವರ್ಣನೆ ಮತ್ತು ಅದರ ಮಹಿಮೆ, ಕೋಟಿರುದ್ರ-ಸಂಹಿತೆಯ ಮಾಹಾತ್ಮ್ಯ ಹಾಗೂ ಉಪಸಂಹಾರ

ಸೂತಪುರಾಣಿಕರು ಹೇಳುತ್ತಾರೆ –ಋಷಿಗಳಿರಾ ! ಶಿವಜ್ಞಾನವನ್ನು ನಾನು ಕೇಳಿದಂತೆಯೇ ಹೇಳುತ್ತಿದ್ದೇನೆ. ಅದು ಅತ್ಯಂತ ಗುಹ್ಯವೂ, ಮೋಕ್ಷಸ್ವರೂಪವೂ ಆಗಿದೆ, ಅದನ್ನು ನೀವೆಲ್ಲರೂ ಕೇಳಿರಿ. ಬ್ರಹ್ಮಾ, ನಾರದ, ಸನಕಾದಿಗಳು ವ್ಯಾಸಮುನಿ ಹಾಗೂ ಕಪಿಲ ಇವರ ಸಮಾಜದಲ್ಲಿ ಇವರು ನಿಶ್ಚಯಿಸಿದ ಯಥಾರ್ಥ ಜ್ಞಾನವನ್ನೇ ತಿಳಿದುಕೊಳ್ಳಬೇಕು. ಸಂಪೂರ್ಣ ಜಗತ್ತು ಶಿವಮಯವಾಗಿದೆ ಈ ಜ್ಞಾನವನ್ನೇ ಸದಾ ಅನುಸಂಧಾನ ಮಾಡಲು ಯೋಗ್ಯವಾಗಿದೆ. ಶಿವನು ಸರ್ವಮಯನಾಗಿರುವನು ಎಂಬುದನ್ನು ಸರ್ವಜ್ಞ ವಿದ್ವಾಂಸರು ನಿಶ್ಚಿತವಾಗಿ ತಿಳಿದುಕೊಳ್ಳಬೇಕು. ಬ್ರಹ್ಮನಿಂದ ಹಿಡಿದು ತೃಣದವರೆಗೆ ಕಂಡುಬರುವ ಜಗತ್ತೆಲ್ಲವೂ ಶಿವಮಯವೇ ಆಗಿದೆ. ಆ ಮಹಾದೇವನನ್ನೇ ಶಿವನೆಂದು ಹೇಳುವರು. ಅವನಿಗೆ ಇಚ್ಛೆ ಉಂಟಾದಾಗ ಅವನು ಈ ಜಗತ್ತನ್ನು ರಚಿಸುವನು. ಅವನು ಎಲ್ಲರನ್ನು ತಿಳಿಯುತ್ತಾನೆ, ಅವನನ್ನು ಯಾರೂ ತಿಳಿಯಲಾರರು. ಅವನು ಈ ಜಗತ್ತನ್ನು ರಚಿಸಿ ಸ್ವಯಂ ತಾನೇ ಇದರೊಳಗೆ ಪ್ರವಿಷ್ಟನಾಗಿಯೂ ಇದರಿಂದ ದೂರವಾಗಿದ್ದಾನೆ. ವಾಸ್ತವವಾಗಿ ಅವನು ಇದರಲ್ಲಿ ಪ್ರವೇಶವೇ ಆಗುವುದಿಲ್ಲ, ಏಕೆಂದರೆ ಅವನು ನಿರ್ಲಿಪ್ತ, ಸಚ್ಚಿದಾನಂದ ಸ್ವರೂಪನಾಗಿರುವನು. ಸೂರ್ಯಾದಿ ಜ್ಯೋತಿಗಳ ಪ್ರತಿಬಿಂಬಗಳು ನೀರಿನಲ್ಲಿ ಕಂಡುಬಂದರೂ ವಾಸ್ತವವಾಗಿ ನೀರಿನೊಳಗೆ ಪ್ರವೇಶಿಸುವುದಿಲ್ಲ, ಹಾಗೆಯೇ ಸಾಕ್ಷಾತ್ ಶಿವನ ವಿಷಯದಲ್ಲಿ ತಿಳಿದುಕೊಳ್ಳಬೇಕು. ವಾಸ್ತವವಾಗಿಯಾದರೋ ಅವನೇ ಎಲ್ಲವೂ ಆಗಿರುವನು. ಮತಭೇದವೂ ಅಜ್ಞಾನವೇ ಆಗಿದೆ. ಏಕೆಂದರೆ, ಶಿವನಿಂದ ಹೊರತಾದ ಯಾವುದೇ ದ್ವೈತ ವಸ್ತುವಿನ ಅಸ್ತಿತ್ವವೇ ಇಲ್ಲ. ಎಲ್ಲ ದರ್ಶನಗಳಲ್ಲಿ ಮತಭೇದವೇ ತೋರಿಸಲಾಗಿದೆ. ಆದರೆ ವೇದಾಂತಿಗಳು ನಿತ್ಯವೂ ಅದ್ವೈತ ತತ್ತ್ವವನ್ನೇ ವರ್ಣಿಸುತ್ತಾ ಇರುವರು. ಜೀವನು ಪರಮಾತ್ಮಾ ಶಿವನ ಅಂಶವೇ ಆಗಿದೆ; ಆದರೆ ಅವಿದ್ಯೆಯಿಂದ ಮೋಹಿತರಾಗಿ ಪರವಶನಾಗಿ ತನ್ನನ್ನು ಶಿವನಿಂದ ಭಿನ್ನವೆಂದು ತಿಳಿಯುತ್ತಾನೆ. ಅವಿದ್ಯೆಯಿಂದ ಮುಕ್ತನಾದಾಗ ಅವನು ಶಿವನೇ ಆಗಿ ಹೋಗುವನು. ಶಿವನು ಎಲ್ಲವನ್ನು ವ್ಯಾಪಿಸಿ ಸ್ಥಿತನಾಗಿರುವನು ಮತ್ತು ಸಮಸ್ತ ಜಂತುಗಳಲ್ಲಿಯೂ ವ್ಯಾಪಕನಾಗಿದ್ದಾನೆ. ಅವನು ಜಡ-ಚೇತನಗಳೆಲ್ಲದರ ಈಶ್ವರನಾಗಿದ್ದರೂ ಎಲ್ಲರ ಶ್ರೇಯಸ್ಸನ್ನೇ ಮಾಡುವನು. ವೇದಾಂತ ಮಾರ್ಗವನ್ನು ಆಶ್ರಯಿಸಿದ ವಿದ್ವಾಂಸನು ಅವನ ಸಾಕ್ಷಾತ್ಕಾರಕ್ಕಾಗಿ ಸಾಧನೆ ಮಾಡುವನೋ ಅವನಿಗೆ ಆ ಸಾಕ್ಷಾತ್ಕಾರರೂಪೀ ಫಲವು ಅವಶ್ಯವಾಗಿ ದೊರೆಯುವುದು. ವ್ಯಾಪಕವಾದ ಅಗ್ನಿತತ್ತ್ವವು ಪ್ರತಿಯೊಂದು ಕಟ್ಟಿಗೆಯಲ್ಲೂ ಸ್ಥಿತವಾಗಿದೆ, ಆದರೆ ಆ ಕಟ್ಟಿಗೆಯನ್ನು ಮಂಥನ ಮಾಡುವವನೇ ಅಸಂದಿಗ್ಧ ರೂಪದಿಂದ ಅಗ್ನಿಯನ್ನು ಪ್ರಕಟಿಸಿ ನೋಡುತ್ತಾನೆ. ಹೀಗೆಯೇ ಇಲ್ಲಿ ಭಕ್ತ್ಯಾದಿಸಾಧನೆಗಳಿಂದ ಅನುಷ್ಠಾನ ಮಾಡುವ ಬುದ್ಧಿವಂತನಿಗೆ ಅವಶ್ಯವಾಗಿ ಶಿವನ ದರ್ಶನ ದೊರೆಯುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಎಲ್ಲೆಡೆ ಕೇವಲ ಶಿವನೇ ಇರುವನು, ಶಿವನೇ ಇರುವನು, ಶಿವನೇ ಇರುವನು; ಬೇರೆ ಯಾವುದೇ ವಸ್ತುವೂ ಇಲ್ಲ. ಆ ಶಿವನೇ ಭ್ರಮೆಯಿಂದಲೇ ಸದಾ ನಾನಾ ರೂಪಗಳಲ್ಲಿ ಗೋಚರಿಸುತ್ತಿರುವನು.

ಸಮುದ್ರ, ಮಣ್ಣು, ಅಥವಾ ಸುವರ್ಣ – ಇವು ಉಪಾಧಿಭೇದದಿಂದ ನಾನಾತ್ವವನ್ನು ಹೊಂದುವುದೋ ಹಾಗೆಯೇ ಭಗವಾನ್ ಶಂಕರನೂ ಕೂಡ ಉಪಾಧಿಗಳಿಂದಲೇ ಅನೇಕ ರೂಪಗಳಲ್ಲಿ ಕಂಡುಬರುವನು. ಕಾರ್ಯ ಮತ್ತು ಕಾರಣಗಳಲ್ಲಿ ವಾಸ್ತವಿಕ ಭೇದವಿರುವುದಿಲ್ಲ. ಕೇವಲ ಭ್ರಮೆಯಿಂದ ತುಂಬಿದ ಬುದ್ಧಿಯ ಮೂಲಕವೇ ಅವನಲ್ಲಿ ಭೇದದ ಪ್ರತೀತಿಯಾಗುತ್ತದೆ. ಭ್ರಮೆಯು ದೂರವಾಗುತ್ತಲೇ ಭೇದಬುದ್ಧಿಯು ನಾಶವಾಗುತ್ತದೆ. ಬೀಜದಿಂದ ಅಂಕುರವು ಉತ್ಪನ್ನವಾದಾಗ ಅದು ನಾನಾತ್ವವನ್ನು ಪ್ರಕಟಿಸುತ್ತದೆ. ಕೊನೆಗೆ ಅದು ಬೀಜರೂಪದಲ್ಲೇ ಸ್ಥಿತವಾಗುತ್ತದೆ ಮತ್ತು ಅಂಕುರವು ನಾಶವಾಗುತ್ತದೆ. ಜ್ಞಾನವು ಬೀಜರೂಪದಲ್ಲಿ ಸ್ಥಿತವಾಗಿದೆ ಮತ್ತು ನಾನಾ ಪ್ರಕಾರದ ವಿಕಾರಗಳು ಅಂಕುರರೂಪವಾಗಿವೆ. ಆ ವಿಕಾರರೂಪೀ ಅಂಕುರಗಳ ನಿವೃತ್ತಿಯಾದಾಗ ಪುರುಷನು ಮತ್ತೆ ಜ್ಞಾನ ರೂಪದಲ್ಲೇ ಸ್ಥಿತನಾಗುವನು. ಇದರಲ್ಲಿ ಬೇರೆ ಯಾವ ವಿಚಾರವನ್ನೂ ಮಾಡಬಾರದು. ಎಲ್ಲವೂ ಶಿವನೇ ಆಗಿದ್ದಾನೆ ಮತ್ತು ಶಿವನೇ ಎಲ್ಲವೂ ಆಗಿದ್ದಾನೆ. ಶಿವ ಮತ್ತು ಸಂಪೂರ್ಣ ಜಗತ್ತು ಇದರಲ್ಲಿ ಯಾವುದೇ ಭೇದವಿಲ್ಲ. ಹಾಗಿರುವಾಗ ಅನೇಕತೆಯನ್ನು ಏಕೆ ನೋಡುತ್ತಾನೆ ಮತ್ತು ಏಕತೆಯನ್ನು ಏಕೆ ಹುಡುಕುತ್ತಾನೆ ? ಒಂದೇ ಸೂರ್ಯನೆಂಬ ಜ್ಯೋತಿಯು ಜಲವೇ ಮುಂತಾದ ಉಪಾಧಿಗಳಲ್ಲಿ ವಿಶೇಷವಾಗಿ ನಾನಾ ಪ್ರಕಾರದಿಂದ ಕಂಡು ಬರುವುದು. ಹಾಗೆಯೇ ಶಿವನೂ ಆಗಿರುವನು. ಆಕಾಶವು ಸರ್ವತ್ರ ವ್ಯಾಪಕವಾಗಿದ್ದರೂ ಸ್ಪರ್ಶಾದಿ ಬಂಧನಕ್ಕೆ ಬರುವುದಿಲ್ಲ. ಅದೇ

ಪ್ರಕಾರದಿಂದ ವ್ಯಾಪಕನಾದ ಶಿವನು ಎಲ್ಲಿಯೂ ಬಂಧಿತನಾಗುವುದಿಲ್ಲ. ಅಹಂಕಾರದಿಂದ ಕೂಡಿಕೊಂಡ ಕಾರಣ ಶಿವನ ಅಂಶವನ್ನು ಜೀವನೆಂದು ಹೇಳುವರು. ಅವನು ಅಹಂಕಾರದಿಂದ ಮುಕ್ತನಾದಾಗ ಸಾಕ್ಷಾತ್ ಶಿವನೇ ಆಗಿರುವನು. ಕರ್ಮಗಳ ಭೋಗಗಳಲ್ಲಿ ಲಿಪ್ತನಾದ್ದರಿಂದ ಜೀವನು ತುಚ್ಛನಾಗಿದ್ದಾನೆ ಮತ್ತು ನಿರ್ಲಿಪ್ತವಾದ ಕಾರಣ ಶಿವನು ಮಹಾನ್ ಆಗಿದ್ದಾನೆ. ಒಂದೇ ಚಿನ್ನವು ಬೆಳ್ಳಿಯೇ ಮೊದಲಾದವುಗಳೊಂದಿಗೆ ಬೆರೆತಾಗ ಕಡಿಮೆ ದರ್ಜೆಯವಾಗುವಂತೆಯೇ ಅಹಂಕಾರಯುಕ್ತ ಜೀವನು ತನ್ನ ಮಹತ್ವವನ್ನು ಕಳೆದುಕೊಳ್ಳುವನು. ಕ್ಷಾರಾದಿಗಳಿಂದ ಶುದ್ಧಮಾಡಿದ ಉತ್ತಮ ಸುವರ್ಣವು ಹಿಂದಿನಂತೆ ಬೆಲೆ ಬಾಳುವುದೋ, ಅಂತೆಯೇ ಸಂಸ್ಕಾರ ವಿಶೇಷದಿಂದ ಶುದ್ಧನಾದ ಜೀವಿಯು ಶುದ್ಧನಾಗುತ್ತಾನೆ.

ಮೊದಲಿಗೆ ಗುರುವನ್ನು ಪಡೆದು ಭಕ್ತಿಭಾವದಿಂದ ಯುಕ್ತನಾಗಿ ಶಿವಬುದ್ಧಿಯಿಂದ ಶಿವನ ಪೂಜೆ, ಸ್ಮರಣೆ ಮುಂತಾದುವನ್ನು ಮಾಡಬೇಕು. ಗುರುವಿನಲ್ಲಿ ಶಿವಬುದ್ಧಿ ಇರಿಸುವುದರಿಂದ ಎಲ್ಲ ಪಾಪಾದಿ ಮಲಗಳು ಶರೀರದಿಂದ ಹೊರಟುಹೋಗುತ್ತವೆ. ಆಗ ಅಜ್ಞಾನವು ನಾಶವಾಗುತ್ತದೆ ಮತ್ತು ಮನುಷ್ಯನು ಜ್ಞಾನವಂತನಾಗುತ್ತಾನೆ. ಆ ಸ್ಥಿತಿಯಲ್ಲಿ ಅಹಂಕಾರಮುಕ್ತ ನಿರ್ಮಲ ಬುದ್ಧಿಯುಳ್ಳ ಜೀವನು ಭಗವಾನ್ ಶಂಕರ ಪ್ರಸಾದದಿಂದ ಪುನಃ ಶಿವರೂಪನೇ ಆಗುವನು. ಕನ್ನಡಿಯಲ್ಲಿ ತನ್ನದೇ ರೂಪವು ಕಂಡುಬರುವಂತೆಯೇ ಅವನಿಗೆ ಎಲ್ಲೆಡೆ ಶಂಭುವಿನ ಸಾಕ್ಷಾತ್ಕಾರವಾಗತೊಡಗುತ್ತದೆ. ಅದನ್ನೇ ಜೀವನ್ಮುಕ್ತಿ ಎಂದು ಹೇಳುವರು. ಶರೀರವು ಬಿದ್ದು ಹೋದಾಗ ಆ ಜೀವನ್ಮುಕ್ತ ಜ್ಞಾನಿಯು ಶಿವನಲ್ಲಿ ಒಂದಾಗಿ ಹೋಗುವನು. ಶರೀರವು ಪ್ರಾರಬ್ಧಕ್ಕಧೀನವಾಗಿದೆ. ದೇಹದ ಅಭಿಮಾನದಿಂದ ರಹಿತನಾದವನು ಜ್ಞಾನೀ ಎಂದು ತಿಳಿಯಲಾಗಿದೆ. ಶುಭ ವಸ್ತುವನ್ನು ಪಡೆದು ಹರ್ಷ ಪಡುವುದಿಲ್ಲವೋ, ಅಶುಭವನ್ನು ಪಡೆದು ಕ್ರೋಧ ಅಥವಾ ಶೋಕ ಪಡುವುದಿಲ್ಲವೋ ಹಾಗೂ ಸುಖ-ದುಃಖಾದಿ ಎಲ್ಲ ದ್ವಂದ್ವಗಳಲ್ಲಿ ಸಮಭಾವವನ್ನಿರಿಸುವನೋ ಅವನನ್ನು ಜ್ಞಾನವಂತ ಎಂದು ಹೇಳುವರು.* ಆತ್ಮಚಿಂತನೆಯಿಂದ ಹಾಗೂ ತತ್ತ್ವದ ವಿವೇಕದಿಂದ ಶರೀರದಿಂದ ತಾನು ಬೇರೆ ಎಂಬ ಬೋಧ ಉಂಟಾಗುವಂತೆ ಪ್ರಯತ್ನಿಸಬೇಕು. ಮುಕ್ತಿಯನ್ನು ಇಚ್ಛಿಸುವ ಪುರುಷನು ಶರೀರ ಹಾಗೂ ಅದರ ಅಭಿಮಾನವನ್ನು ತ್ಯಜಿಸಿ, ಅಹಂಕಾರ ಶೂನ್ಯ ಹಾಗೂ ಮುಕ್ತನಾಗಿ ಸದಾಶಿವನಲ್ಲಿ ವಿಲೀನನಾಗುವನು. ಅಧ್ಯಾತ್ಮಚಿಂತನೆ ಹಾಗೂ ಭಗವಾನ್ ಶಿವನ ಭಕ್ತಿ ಇವು ಜ್ಞಾನದ ಮೂಲ ಕಾರಣಗಳಾಗಿವೆ. ಭಕ್ತಿಯಿಂದ ಸಾಧನವಿಷಯಕ ಪ್ರೇಮವು ದೊರೆಯುವುದೆಂದು ಹೇಳಲಾಗಿದೆ. ಪ್ರೇಮದಿಂದ ಶ್ರವಣವಾಗುತ್ತದೆ, ಶ್ರವಣದಿಂದ ಸತ್ಸಂಗ ಪ್ರಾಪ್ತವಾಗುತ್ತದೆ, ಸತ್ಸಂಗದಿಂದ ಜ್ಞಾನೀ ಗುರುವು ದೊರೆಯುವನು. ಗುರುವಿನ ಕೃಪೆಯಿಂದ ಜ್ಞಾನವು ಪ್ರಾಪ್ತವಾದ ಮೇಲೆ ಮನುಷ್ಯನು ನಿಶ್ಚಯವಾಗಿಯೂ ಮುಕ್ತನಾಗುತ್ತಾನೆ. ಅದಕ್ಕಾಗಿ ತಿಳಿವಳಿಕೆಯುಳ್ಳವನು ಸದಾ ಶಂಭುವಿನ ಭಜನೆಯನ್ನೇ ಮಾಡಬೇಕು. ಅನನ್ಯ ಭಕ್ತಿಯಿಂದಯುಕ್ತನಾಗಿ ಶಂಭುವಿನ ಭಜನೆಯನ್ನು ಮಾಡುವವನಿಗೆ ಅಂತ್ಯದಲ್ಲಿ ಅವಶ್ಯವಾಗಿ ಮೋಕ್ಷವು ದೊರೆಯುತ್ತದೆ. ಆದ್ದರಿಂದ ಮುಕ್ತಿಯ ಪ್ರಾಪ್ತಿಗಾಗಿ ಭಗವಾನ್ ಶಂಕರನಿಂದ ಮಿಗಿಲಾದ ಬೇರೆ ಯಾವುದೇ ದೇವತೆ ಇಲ್ಲ. ಅವನಿಗೆ ಶರಣಾಗಿ ಜೀವಿಯು ಸಂಸಾರಬಂಧನದಿಂದ ಬಿಡುಗಡೆ ಹೊಂದುವನು.

ಬ್ರಾಹ್ಮಣರೇ ! ಈ ಪ್ರಕಾರ ಅಲ್ಲಿ ನೆರೆದ ಋಷಿಗಳು ಪರಸ್ಪರ ನಿಶ್ಚಯಮಾಡಿ ಈ ಜ್ಞಾನದ ಮಾತನ್ನು ತಿಳಿಸಿರುವರೋ ಅದನ್ನು ತನ್ನ ಬುದ್ಧಿಯ ಮೂಲಕ ಪ್ರಯತ್ನಪೂರ್ವಕ ಧರಿಸಿಕೊಳ್ಳಬೇಕು. ಮುನೀಶ್ವರರೇ ! ನೀವು ಕೇಳಿರುವುದೆಲ್ಲವನ್ನೂ ನಾನು ನಿಮಗೆ ತಿಳಿಸಿರುವೆನು. ಇದನ್ನು ನೀವು ಪ್ರಯತ್ನಪೂರ್ವಕ ಗುಪ್ತವಾಗಿಡಬೇಕು. ಹೇಳಿ, ಇನ್ನೇನು ಕೇಳಲು ಬಯಸುವಿರಿ?

ಋಷಿಗಳು ಕೇಳಿದರು – ವ್ಯಾಸಶಿಷ್ಯರೇ ! ನಿಮಗೆ ನಮಸ್ಕಾರವು. ನೀವು ಧನ್ಯರಾಗಿರುವಿರಿ. ಶಿವ ಭಕ್ತರಲ್ಲಿ ಶ್ರೇಷ್ಠರಾಗಿರುವಿ. ತಾವು ನಮಗೆ ಶಿವತತ್ತ್ವಸಂಬಂಧೀ ಪರಮೋತ್ತಮ ಜ್ಞಾನವನ್ನು ಶ್ರವಣ ಮಾಡಿಸಿದಿರಿ. ನಿಮ್ಮ ಕೃಪೆಯಿಂದ ನಮ್ಮ ಮನಸ್ಸಿನ ಭ್ರಾಂತಿಯು ಅಳಿದುಹೋಯಿತು. ನಾವು ತಮ್ಮಿಂದ ಮೋಕ್ಷದಾಯಕ ಶಿವತತ್ತ್ವದ ಜ್ಞಾನವನ್ನು ಪಡೆದು ಬಹಳ ಸಂತುಷ್ಟರಾಗಿರುವೆವು.

ಸೂತಪುರಾಣಿಕರು ಹೇಳುತ್ತಾರೆ – ದ್ವಿಜರೇ ! ನಾಸ್ತಿಕನಿಗೆ, ಶ್ರದ್ಧಾಹೀನನಿಗೆ, ಶಠನಿಗೆ, ಭಗವಾನ್ ಶಿವನ ಭಕ್ತನಲ್ಲದವನಿಗೆ, ಈ ವಿಷಯವನ್ನು ಕೇಳಲು ರುಚಿಸದವನಿಗೆ,

---

* ಶುಭಂ ಲಬ್ಧ್ವಾನ ಹೃಷ್ಯೇತ ಕುಪ್ಯೇಲ್ಲಬ್ಧ್ವಾಶುಭಂ ನ ಹಿ । ದ್ವಂದ್ವೇಷು ಸಮತಾಯಸ್ಯ ಜ್ಞಾನವಾನುಚ್ಯತೇ ಹಿ ಸಃ ॥
(ಶಿ - ಪು - ಕೋ - ರು - ಸಂ - ೪೩/೩೧)

ಈ ತತ್ತ್ವಜ್ಞಾನವನ್ನು ಉಪದೇಶಿಸಬಾರದು. ವೇದವ್ಯಾಸರು ಇತಿಹಾಸ, ಪುರಾಣಗಳನ್ನು ವೇದಗಳನ್ನು ಮತ್ತು ಶಾಸ್ತ್ರಗಳನ್ನು ಪದೇ-ಪದೇ ವಿಚಾರ ಮಾಡಿ ಅವುಗಳ ಸಾರವನ್ನು ತೆಗೆದು ನನಗೆ ಉಪದೇಶಿಸಿರುವರು. ಇದನ್ನು ಒಂದು ಬಾರಿ ಶ್ರವಣ ಮಾಡಿದ ಮಾತ್ರದಿಂದ ಎಲ್ಲ ಪಾಪಗಳು ಭಸ್ಮವಾಗಿ ಹೋಗುವವು. ಅಭಕ್ತನಿಗೆ ಭಕ್ತಿ ಪ್ರಾಪ್ತವಾಗುತ್ತದೆ ಮತ್ತು ಭಕ್ತರ ಭಕ್ತಿಯು ಬೆಳೆಯುವುದು. ಎರಡು ಬಾರಿ ಕೇಳಿದರೆ ಉತ್ತಮ ಭಕ್ತಿಯು ಪ್ರಾಪ್ತವಾಗುತ್ತದೆ. ಮೂರು ಬಾರಿ ಶ್ರವಣಿಸಿದರೆ ಮೋಕ್ಷವು ಪ್ರಾಪ್ತವಾಗುತ್ತದೆ. ಆದ್ದರಿಂದ ಭೋಗ ಮತ್ತು ಮೋಕ್ಷರೂಪೀ ಫಲವನ್ನು ಬಯಸುವ ಜನರು ಇದನ್ನು ಪುನಃ-ಪುನಃ ಶ್ರವಣಿಸಬೇಕು. ಉತ್ತಮ ಫಲವನ್ನು ಪಡೆಯುವ ಉದ್ದೇಶದಿಂದ ಈ ಪುರಾಣದ ಐದು ಆವೃತ್ತಿಗಳನ್ನು ಮಾಡಬೇಕು. ಹೀಗೆ ಮಾಡುವುದರಿಂದ ಮನುಷ್ಯನು ಅದನ್ನು ಅವಶ್ಯವಾಗಿ ಪಡೆದುಕೊಳ್ಳುವನು; ಇದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ, ಇದು ವ್ಯಾಸರ ವಚನವಾಗಿದೆ. ಈ ಉತ್ತಮ ಪುರಾಣವನ್ನು ಕೇಳಿರುವವನಿಗೆ ಯಾವುದೂ ದುರ್ಲಭವಿಲ್ಲ.

ಈ ಶಿವವಿಜ್ಞಾನವು ಭಗವಾನ್ ಶಂಕರನಿಗೆ ಅತ್ಯಂತ ಪ್ರಿಯವಾಗಿದೆ. ಇದು ಭೋಗ, ಮೋಕ್ಷಗಳನ್ನು ಕೊಡುವುದು ಹಾಗೂ ಶಿವಭಕ್ತಿಯನ್ನು ಹೆಚ್ಚಿಸುವುದು. ಈ ಪ್ರಕಾರ ನಾನು ಶಿವಪುರಾಣದ ಈ ನಾಲ್ಕನೆಯ ಆನಂದದಾಯಿನಿ ಹಾಗೂ ಪರಮ ಪುಣ್ಯಮಯಿ ಸಂಹಿತೆಯನ್ನು ಹೇಳಿರುವೆನು. ಇದು ಕೋಟಿರುದ್ರಸಂಹಿತೆಯ ಹೆಸರಿನಿಂದ ವಿಖ್ಯಾತವಾಗಿದೆ. ಏಕಾಗ್ರ ಚಿತ್ತನಾಗಿ ಭಕ್ತಿಭಾವದಿಂದ ಈ ಸಂಹಿತೆಯನ್ನು ಕೇಳುವವನು ಅಥವಾ ಹೇಳುವವನು ಸಮಸ್ತ ಭೋಗಗಳನ್ನು ಅನುಭವಿಸಿ ಅಂತ್ಯದಲ್ಲಿ ಪರಮಗತಿಯನ್ನು ಹೊಂದುವನು.

(ಅಧ್ಯಾಯ ೪೩.)

॥ ಕೋಟಿರುದ್ರಸಂಹಿತೆಯು ಮುಗಿದುದು ॥

❐ ❐ ❐

ಉಮಾಸಂಹಿತೆ

ಭಗವಾನ್ ಶ್ರೀಕೃಷ್ಣನ ತಪಸ್ಸಿನಿಂದ ಸಂತುಷ್ಟರಾದ ಶಿವ-ಪಾರ್ವತಿಯರು ಅವನಿಗೆ ಅಭೀಷ್ಟ ವರವನ್ನು ಕೊಡುವುದು, ಹಾಗೂ ಶಿವನ ಮಹಿಮೆ

ಯೋ ಧತ್ತೇ ಭುವನಾನಿ ಸಪ್ತ ಗುಣವಾನ್ ಸ್ರಷ್ಟಾ ರಜಃ ಸಂಶ್ರಯಃ
ಸಂಹರ್ತಾ ತಮಸಾನ್ವಿತೋ ಗುಣಮತೀಂ ಮಾಯಾಮತೀತ್ಯ ಸ್ಥಿತಃ ।
ಸತ್ಯಾನಂದಮನಂತಬೋಧಮಮಲಂ ಬ್ರಹ್ಮಾದಿಸಂಜ್ಞಾಸ್ಪದಂ
ನಿತ್ಯಂ ಸತ್ತ್ವಸಮನ್ವಯಾದಧಿಗತಂ ಪೂರ್ಣಂ ಶಿವಂ ಧೀಮಹಿ ॥

ರಜೋಗುಣವನ್ನು ಆಶ್ರಯಿಸಿ ಪ್ರಪಂಚವನ್ನು ಸೃಷ್ಟಿಸುವವನೂ, ಸತ್ವಗುಣದಿಂದ ಸಂಪನ್ನನಾಗಿ ಏಳು ಭುವನಗಳನ್ನೂ ಧರಿಸಿ, ಪೋಷಿಸುವವನೂ, ತಮೋಗುಣದಿಂದ ಕೂಡಿ ಎಲ್ಲರ ಸಂಹಾರ ಮಾಡುವವನೂ, ತ್ರಿಗುಣಮಯ ಮಾಯೆಯನ್ನು ದಾಟಿ ತನ್ನ ಶುದ್ಧ ಸ್ವರೂಪದಲ್ಲಿ ಸ್ಥಿತನಾಗಿರುವವನೂ, ಸತ್ಯಾನಂದಸ್ವರೂಪನೂ, ಅನಂತ ಬೋಧಮಯನೂ, ನಿರ್ಮಲನೂ ಆದ ಪೂರ್ಣಬ್ರಹ್ಮ ಶಿವನನ್ನು ನಾವು ಧ್ಯಾನಿಸುತ್ತೇವೆ. ಅವನೇ ಸೃಷ್ಟಿಕಾಲದಲ್ಲಿ ಬ್ರಹ್ಮನೆಂದೂ, ಪಾಲಿಸುವಾಗ ವಿಷ್ಣುವೆಂದೂ, ಸಂಹಾರ ಕಾಲದಲ್ಲಿ ರುದ್ರನೆಂದೂ ಹೆಸರುಗಳನ್ನು ಪಡೆಯುವನು. ಸದಾಕಾಲ ಸಾತ್ವಿಕಭಾವವನ್ನು ತನ್ನದಾಗಿಸಿಕೊಂಡಾಗಲೇ ಅವನ ಪ್ರಾಪ್ತಿಯಾಗುತ್ತದೆ.

ಋಷಿಗಳು ಕೇಳಿದರು – ಮಹಾಜ್ಞಾನಿಗಳಾದ ವ್ಯಾಸಶಿಷ್ಯ ಸೂತಪುರಾಣಿಕರೇ ! ನಿಮಗೆ ನಮಸ್ಕಾರವು. ತಾವು ನಾಲ್ಕನೆಯದಾದ ಕೋಟಿರುದ್ರ ಸಂಹಿತೆಯನ್ನು ನಮಗೆ ತಿಳಿಸಿದಿರಿ. ಇನ್ನು ಉಮಾಸಂಹಿತೆಯ ಅಂತರ್ಗತ ನಾನಾ ಪ್ರಕಾರದ ಉಪಾಖ್ಯಾನಗಳಿಂದ ಕೂಡಿದ ಪರಮಾತ್ಮಾ ಸಾಂಬಸದಾಶಿವನ ಚರಿತ್ರೆಯನ್ನು ವರ್ಣಿಸಿರಿ.

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಮಹರ್ಷಿಗಳೇ ! ಭಗವಾನ್ ಶಂಕರನ ಮಂಗಲಮಯ ಚರಿತ್ರವು ಪರಮ ದಿವ್ಯ ಹಾಗೂ ಭೋಗ, ಮೋಕ್ಷಗಳನ್ನು ಕೊಡುವುದಾಗಿದೆ. ನೀವು ಭಕ್ತಿಯಿಂದ ಇದನ್ನು ಶ್ರವಣಿಸಿರಿ. ಹಿಂದೆ ಮುನಿವರ್ಯ ವ್ಯಾಸರು ಸನತ್ಕುಮಾರರಲ್ಲಿ ಇಂತಹ ಪವಿತ್ರ ಪ್ರಶ್ನೆಯನ್ನೇ ಕೇಳಿದ್ದರು. ಇದರ ಉತ್ತರವಾಗಿ ಅವರು ಭಗವಾನ್ ಶಿವನ ಉತ್ತಮ ಚರಿತ್ರವನ್ನು ಕೊಂಡಾಡಿದ್ದರು.

ಒಮ್ಮೆ ಪುತ್ರ ಪ್ರಾಪ್ತಿಗಾಗಿ ಶ್ರೀಕೃಷ್ಣನು ಹಿಮಾಚಲ ಪರ್ವತಕ್ಕೆ ಹೋಗಿ ಮಹರ್ಷಿ ಉಪಮನ್ಯುವನ್ನು ಭೇಟಿಯಾಗಿ, ಅವರು ತಿಳಿಸಿದ ಪದ್ಧತಿಗನುಸಾರವಾಗಿ ಭಗವಾನ್ ಶಿವನ ಪ್ರಸನ್ನತೆಗಾಗಿ ತಪಸ್ಸು ಮಾಡಿದನು. ಅವನ ತಪಸ್ಸಿನಿಂದ ಸಂತುಷ್ಟನಾಗಿ ಪಾರ್ವತಿ, ಕಾರ್ತಿಕೇಯ, ಗಣೇಶಸಹಿತ ಶಿವನು ಪ್ರಕಟನಾದನು. ಶ್ರೀಕೃಷ್ಣನ ಮೂಲಕ ಅವನ ಸ್ತುತಿಪೂರ್ವಕ ವರದಾನವನ್ನು ಕೇಳಿದ ಕಥೆಯನ್ನು ತಿಳಿಸಿ, ಸನತ್ಕುಮಾರರು ಹೇಳುತ್ತಾರೆ–ಶ್ರೀಕೃಷ್ಣನ ವಚನಗಳನ್ನು ಕೇಳಿ ಭಗವಾನ್ ಶಿವನು ಹೇಳಿದನು – 'ವಾಸುದೇವನೇ ! ನಿನ್ನ ಮನೋರಥವೆಲ್ಲವೂ ಪೂರ್ಣವಾಗುವುದು'. ಇಷ್ಟು ಹೇಳಿ ತ್ರಿಶೂಲಧಾರೀ ಭಗವಾನ್ ಶಿವನು ಪುನಃ ಇಂತೆಂದನು – 'ಯಾದವೇಂದ್ರನೇ ! ನಿನಗೆ ಸಾಂಬ ಎಂಬ ಹೆಸರಿನ ಪ್ರಸಿದ್ಧ ಒಬ್ಬ ಮಹಾ ಪರಾಕ್ರಮಿ, ಬಲವಂತ ಪುತ್ರನು ಪ್ರಾಪ್ತವಾಗುವನು. ಒಮ್ಮೆ ಭಯಾನಕ ಸಂವರ್ತಕ (ಪ್ರಳಯಂಕರ) ಸೂರ್ಯನಿಗೆ ಮುನಿಗಳು ನೀನು ಮನುಷ್ಯ ಯೋನಿಯಲ್ಲಿ ಹುಟ್ಟು ಎಂದು ಶಾಪವನ್ನು ಕೊಟ್ಟಿದ್ದರು. ಅದ್ದರಿಂದ ಆ ಸಂವರ್ತಕ ಸೂರ್ಯನೇ ನಿನಗೆ ಪುತ್ರನಾಗುವನು. ಇದಲ್ಲದೆ ನಿನಗೆ ಅಭೀಷ್ಟವಾದ ಎಲ್ಲ ವಸ್ತುಗಳು ದೊರೆಯುವುದು.'

ಸನತ್ಕುಮಾರರು ಹೇಳುತ್ತಾರೆ – ಈ ಪ್ರಕಾರ ಪರಮೇಶ್ವರ ಶಿವನಿಂದ ಎಲ್ಲ ವರಗಳನ್ನು ಪಡೆದುಕೊಂಡು ಶ್ರೀಕೃಷ್ಣನು ವಿಧ-ವಿಧ ಸ್ತುತಿಗಳಿಂದ ಶಿವನನ್ನು ಸಂತುಷ್ಟಗೊಳಿಸಿದನು. ಅನಂತರ ಭಕ್ತವತ್ಸಲೆ ಗಿರಿರಾಜ ಕುಮಾರಿ ಶಿವೆಯು ಪ್ರಸನ್ನಳಾಗಿ ಆ ತಪಸ್ವೀ ಶಿವಭಕ್ತ ಮಹಾತ್ಮಾ ವಾಸುದೇವನಲ್ಲಿ ನುಡಿದಳು.

ಪಾರ್ವತಿಯು ಹೇಳಿದಳು – ಪರಮ ಬುದ್ಧಿವಂತ ವಸುದೇವನಂದನ ಶ್ರೀಕೃಷ್ಣನೇ ! ನಾನು ನಿನ್ನ ಮೇಲೆ ಬಹಳ ಸಂತುಷ್ಟಳಾಗಿರುವೆನು. ಪುಣ್ಯಾತ್ಮನೇ ! ಭೂತಲದಲ್ಲಿ ದುರ್ಲಭವಾದ ಮನೋವಾಂಛಿತ ವರವನ್ನು ನನ್ನಿಂದ ಪಡೆದುಕೋ.

ಶ್ರೀ ಕೃಷ್ಣನು ಹೇಳಿದನು –'ದೇವಿ ! ನೀನು ನನ್ನ ಸತ್ಯತಪಸ್ಸಿನಿಂದ ಸಂತುಷ್ಟಳಾಗಿರುವೆಯಾದರೆ, ನನಗೆ ವರವನ್ನು ಕೊಡುವೆಯಾದರೆ – ಬ್ರಾಹ್ಮಣರ ಕುರಿತು ಎಂದೂ ನನ್ನ ಮನಸ್ಸಿನಲ್ಲಿ ದ್ವೇಷವಿಲ್ಲದಿರಲಿ. ನಾನು ಸದಾ ದ್ವಿಜರನ್ನು ಪೂಜಿಸುತ್ತಾ ಇರುವಂತಾಗಲಿ. ನನ್ನ ತಂದೆ-ತಾಯಿಯರು

ಸದಾ ಸಂತುಷ್ಟರಾಗಿರಲಿ. ನಾನು ಎಲ್ಲಿಗೆ ಹೋದರೂ ಸಮಸ್ತ ಪ್ರಾಣಿಗಳ ಕುರಿತು ನನ್ನ ಹೃದಯದಲ್ಲಿ ಅನುಕೂಲವಾದ ಭಾವವು ಇರಲಿ. ನಿನ್ನ ದರ್ಶನದಿಂದ ನನ್ನ ಸಂತತಿಯು ಉತ್ತಮವಾಗಲಿ. ನಾನು ನೂರಾರು ಯಜ್ಞಗಳನ್ನು ಮಾಡಿ ಇಂದ್ರಾದಿ ದೇವತೆಗಳನ್ನು ತೃಪ್ತಿಪಡಿಸುವಂತಾಗಲಿ. ಸಾವಿರಾರು ಸಾಧು - ಸಂನ್ಯಾಸಿಗಳಿಗೆ ಮತ್ತು ಅತಿಥಿಗಳಿಗೆ ಸದಾ ಮನೆಯಲ್ಲಿ ಶ್ರದ್ಧೆಯಿಂದ ಅನ್ನದಾನ ನಡೆಯುತ್ತಿರಲಿ. ಬಂಧು-ಬಾಂಧವರಲ್ಲಿ ಸದಾ ನನ್ನಲ್ಲಿ ಪ್ರೇಮವಿರಲಿ ಹಾಗೂ ನಾನು ಸದಾ ಸಂತುಷ್ಟನಾಗಿರುವಂತೆ ವರವನ್ನು ಕರುಣಿಸು.'

ಸನತ್ಕುಮಾರರು ಹೇಳುತ್ತಾರೆ - ಶ್ರೀಕೃಷ್ಣನ ಈ ವಚನವನ್ನು ಕೇಳಿ ಸಂಪೂರ್ಣ ಅಭೀಷ್ಟಗಳನ್ನು ಕೊಡುವ ಸನಾತನೀ ದೇವಿ ಪಾರ್ವತಿಯು ವಿಸ್ಮಿತಳಾಗಿ ಇಂತೆಂದಳು - ವಾಸುದೇವನೇ ! 'ಹಾಗೆಯೇ ಆಗಲಿ, ನಿನ್ನ ಕಲ್ಯಾಣವಾಗಲಿ' ಹೀಗೆ ಶ್ರೀಕೃಷ್ಣನ ಮೇಲೆ ಕೃಪೆಮಾಡಿ, ಅವನಿಗೆ ಆ ವರಗಳನ್ನು ಕೊಟ್ಟು ಪಾರ್ವತಿದೇವಿಯು ಮತ್ತು ಶಿವನು ಅಲ್ಲೇ ಅಂತರ್ಧಾನರಾದರು. ಅನಂತರ ಕೇಶಿಹಂತಾ ಶ್ರೀಕೃಷ್ಣನು ಮುನಿವರ ಉಪಮನ್ಯುವಿಗೆ ನಮಸ್ಕರಿಸಿ ಅವರಲ್ಲಿ ವರಪ್ರಾಪ್ತಿಯ ಎಲ್ಲ ವೃತ್ತಾಂತವನ್ನು ತಿಳಿಸಿದನು. ಆಗ ಆ ಮುನಿಯು ಹೇಳಿದರು - ಜನಾರ್ದನನೇ ! ಜಗತ್ತಿನಲ್ಲಿ ಭಗವಾನ್ ಶಿವನಲ್ಲದೆ ಬೇರೆ ಯಾರು ಮಹಾದಾನಿ ಈಶ್ವರನು ಇರುವನು? ಹಾಗೂ ಕ್ರೋಧಗೊಂಡಾಗ ಬೇರೆ ಯಾರು ದುಸ್ಸಹನಾಗಬಲ್ಲನು? ಮಹಾಯಶಸ್ವೀ ಗೋವಿಂದನೇ ! ದಾನ, ತಪಸ್ಸು, ಶೌರ್ಯ, ಸ್ಥಿರತೆಯಲ್ಲಿ ಶಿವನಿಂದ ಮಿಗಿಲಾದವರು ಯಾರಿದ್ದಾರೆ? ಆದ್ದರಿಂದ ನೀನು ಶಂಭುವಿನ ದಿವ್ಯ ಐಶ್ವರ್ಯವನ್ನು ಸದಾ ಶ್ರವಣಿಸುತ್ತಿರು.*

ಅನಂತರ ಉಪಮನ್ಯುವಿನಿಂದ ಶಿವನ ಮಹಿಮೆಯನ್ನು ಕೇಳಿ, ಆ ಮುನೀಶ್ವರನಿಗೆ ವಂದಿಸಿ ವಸುದೇವನಂದನ ಕೇಶವನು ಮನಸ್ಸಿನಲ್ಲೇ ಶಂಭುವನ್ನು ಸ್ಮರಿಸುತ್ತಾ ದ್ವಾರಕೆಗೆ ಹೊರಟುಹೋದನು.

(ಅಧ್ಯಾಯ ೧-೩)

❐ ❐ ❐

ನರಕದಲ್ಲಿ ಕೆಡಹುವ ಪಾಪಗಳ ಸಂಕ್ಷಿಪ್ತ ಪರಿಚಯ

ಸನತ್ಕುಮಾರರು ಹೇಳುತ್ತಾರೆ-ವ್ಯಾಸರೇ ! ಮಹಾ ನರಕದ ಅಧಿಕಾರಿಯಾದ ಪಾಪ ಪರಾಯಣ ಜೀವಿಯ ಪರಿಚಯವನ್ನು ಸಾವಧಾನವಾಗಿ ಕೇಳಿರಿ. ಪರಸ್ತ್ರೀಯನ್ನು ಪಡೆದುಕೊಳ್ಳುವ ಸಂಕಲ್ಪ, ಪರರ ಧನವನ್ನು ಅಪಹರಿಸುವ ಇಚ್ಛೆ ಚಿತ್ತದಿಂದ ಅನಿಷ್ಟ ಚಿಂತನೆ, ಮಾಡಬಾರದ ಕರ್ಮಗಳಲ್ಲಿ ಪ್ರವೃತ್ತನಾಗುವುದು - ಇವು ನಾಲ್ಕು ಪ್ರಕಾರದ ಮಾನಸಿಕ ಪಾಪಗಳಾಗಿವೆ. ಅಸಂಗತ ಪ್ರಲಾಪ (ತಲೆ ಬುಡವಿಲ್ಲದ ಮಾತು), ಅಸತ್ಯ ಭಾಷಣ, ಅಪ್ರಿಯವಾಗಿ ಮಾತನಾಡುವುದು, ಬೆನ್ನ ಹಿಂದೆ ಚಾಡಿ ಹೇಳುವುದು - ಇವು ನಾಲ್ಕು ವಾಚಿಕ (ಮಾತಿನಿಂದ ಆಗುವ) ಪಾಪಕರ್ಮಗಳು. ಅಭಕ್ಷ-ಭಕ್ಷಣ, ಪ್ರಾಣಿಗಳ ಹಿಂಸೆ, ವ್ಯರ್ಥವಾದ ಕಾರ್ಯದಲ್ಲಿ ತೊಡಗುವುದು, ಬೇರೆಯವರ ಧನವನ್ನು ಕಬಳಿಸುವುದು - ಇವು ನಾಲ್ಕು ಶಾರೀರಿಕ ಪಾಪಕರ್ಮಗಳು. ಈ ಪ್ರಕಾರ ಮನ, ವಾಣಿ, ಶರೀರಗಳಿಂದ ಉಂಟಾಗುವ ಹನ್ನೆರಡು ಪಾಪಕರ್ಮಗಳನ್ನು ಹೇಳಲಾಗಿದೆ. ಸಂಸಾರ ಸಾಗರದಿಂದ ದಾಟಿಸುವ ಮಹಾದೇವನಲ್ಲಿ ದ್ವೇಷ ಮಾಡುವವರು ಎಲ್ಲ ನರಕಗಳ ಸಮುದ್ರದಲ್ಲಿ ಬೀಳುವವರಾಗುತ್ತಾರೆ. ಅವರಿಗೆ ದೊಡ್ಡ ಪಾತಕವೇ ತಟ್ಟಿಕೊಳ್ಳುತ್ತದೆ. ಶಿವಜ್ಞಾನವನ್ನು ಉಪದೇಶಿಸುವ ತಪಸ್ವಿಗಳನ್ನು, ಗುರು - ಹಿರಿಯರನ್ನು, ತಂದೆ -ಚಿಕ್ಕಪ್ಪಂದಿರನ್ನು ನಿಂದಿಸುವ ಉನ್ಮತ್ತ ಮನುಷ್ಯನು ನರಕ ಸಮುದ್ರದಲ್ಲಿ ಮುಳುಗುವನು. ಬ್ರಹ್ಮಹತ್ಯೆ ಮಾಡಿದವನು, ಹೆಂಡ ಕುಡಿಯುವವನು, ಬಂಗಾರದ ಕಳ್ಳನು, ಗುರು ಪತ್ನಿಯಲ್ಲಿ ರಮಿಸುವವನು ಹಾಗೂ ಈ ನಾಲ್ವರೊಂದಿಗೆ ಸಂಪರ್ಕವಿಟ್ಟುಕೊಂಡವನು ಐದನೆ ಶ್ರೇಣಿಯ ಪಾಪಿಯು; ಇವರೆಲ್ಲರೂ ಮಹಾಪಾತಕೀ ಎಂದು ಹೇಳಲಾಗಿದೆ.

ಕ್ರೋಧದಿಂದ, ಲೋಭದಿಂದ, ಭಯದಿಂದ, ದ್ವೇಷದಿಂದ ಬ್ರಾಹ್ಮಣನ ವಧೆಗಾಗಿ ಅತ್ಯಂತ ಮರ್ಮಭೇದಿ ದೋಷಗಳನ್ನು ವರ್ಣಿಸುವವನು ಬ್ರಹ್ಮಹತ್ಯೆ ಮಾಡಿದವನಾಗುತ್ತಾನೆ. ಬ್ರಾಹ್ಮಣನನ್ನು ಕರೆದು ಅವನಿಗೆ ಯಾವುದಾದರೂ ವಸ್ತುವನ್ನು ಕೊಟ್ಟು ಪುನಃ ತೆಗೆದುಕೊಳ್ಳುವವನು, ನಿರ್ದೋಷ ಪುರುಷನ ಮೇಲೆ ದೋಷಾರೋಪಣೆ ಮಾಡುವವನೂ ಕೂಡ ಬ್ರಹ್ಮಹತ್ಯೆ ಮಾಡುವವನಾಗುತ್ತಾನೆ. ತುಂಬಿದ ಸಭೆಯಲ್ಲಿ ಉದಾಸೀನ

---

* ಮಹರ್ಷಿ ಉಪಮನ್ಯುವಿನಿಂದ ಶ್ರೀಕೃಷ್ಣನಿಗೆ ಶಿವತತ್ತ್ವದ ಉಪದೇಶ ಹಾಗೂ ಉಪಮನ್ಯುವಿನ ಕಥೆ ವಾಯವೀಯ ಸಂಹಿತೆಯಲ್ಲಿ ವಿಸ್ತಾರವಾಗಿ ಹೇಳಲಾಗಿದೆ.

ಭಾವದಿಂದ ಕುಳಿತಿರುವ ಶ್ರೇಷ್ಠ ದ್ವಿಜನನ್ನು ತನ್ನ ವಿದ್ಯೆಯ ಅಭಿಮಾನದಿಂದ ಅಪಮಾನಿತಗೊಳಿಸಿ, ಅವನನ್ನು ನಿಸ್ತೇಜವಾಗಿ ಮಾಡುವವನನ್ನೂ ಕೂಡ ಬ್ರಹ್ಮಹತ್ಯೆ ಮಾಡಿದವನೆಂದು ಹೇಳಲಾಗಿದೆ. ಬೇರೆಯವರ ಯಥಾರ್ಥ ಗುಣಗಳನ್ನು ಕೂಡ ಬಲವಂತವಾಗಿ ಖಂಡಿಸಿ, ಸುಳ್ಳು ಗುಣಗಳಿಂದ ತನ್ನನ್ನು ಉತ್ತಮನೆಂದು ಸಿದ್ಧಮಾಡುವವನೂ ನಿಶ್ಚಯವಾಗಿ ಬ್ರಹ್ಮಹತ್ಯೆ ಮಾಡಿದವನೇ. ಗೂಳಿಗಳೊಂದಿಗೆ ಎಡಕ್ಕೆ ಹೋಗುತ್ತಿರುವ ಹಸುಗಳನ್ನು ಹಾಗೂ ಗುರುವಿನಿಂದ ಉಪದೇಶ ಪಡೆಯುವ ದ್ವಿಜರ ಕಾರ್ಯದಲ್ಲಿ ವಿಘ್ನವನ್ನೊಡ್ಡುವವನನ್ನೂ ಬ್ರಹ್ಮಹತ್ಯೆ ಮಾಡಿದವನೆಂದು ಹೇಳುತ್ತಾರೆ. ದೇವತೆಗಳಿಗೆ, ಬ್ರಾಹ್ಮಣರಿಗೆ, ಗೋವುಗಳಿಗೆ ಉಪಯೋಗಕ್ಕಾಗಿ ಕೊಟ್ಟಿರುವ ಭೂಮಿಯನ್ನು ಕಬಳಿಸುವವನನ್ನು ಬ್ರಹ್ಮಹತ್ಯೆ ಮಾಡಿದವನೆಂದು ಹೇಳುತ್ತಾರೆ. ದೇವರು ಮತ್ತು ಬ್ರಾಹ್ಮಣರ ಧನವನ್ನು ಕದಿಯುವುದು ಹಾಗೂ ಅನ್ಯಾಯದಿಂದ ಹಣವನ್ನು ಗಳಿಸುವುದು ಬ್ರಹ್ಮಹತ್ಯೆಯಂತೆಯೇ ಪಾತಕವೆಂದು ತಿಳಿಯಬೇಕು. ಯಾವುದಾದರೂ ವ್ರತವನ್ನು ಕೈಗೊಂಡು, ಯಜ್ಞದೀಕ್ಷಿತನಾಗಿ ಅವುಗಳನ್ನು ತ್ಯಜಿಸುವುದು, ಪಂಚಮಹಾಯಜ್ಞಗಳ ಅನುಷ್ಠಾನವನ್ನು ಮಾಡದಿರುವುದು ಮದ್ಯಪಾನದಂತೆ ಪಾತಕವೆಂದು ತಿಳಿಸಲಾಗಿದೆ. ತಂದೆ-ತಾಯಿಯರನ್ನು ತ್ಯಜಿಸುವುದು, ಸುಳ್ಳು ಸಾಕ್ಷಿ ಹೇಳುವುದು, ಬ್ರಾಹ್ಮಣನಿಗೆ ಸುಳ್ಳು ಆಶ್ವಾಸನೆ ಕೊಡುವುದು, ಶಿವಭಕ್ತರಿಗೆ ಮಾಂಸವನ್ನು ತಿನ್ನಿಸುವುದು, ಅಭಕ್ಷ್ಯ ವಸ್ತುವನ್ನು ಭಕ್ಷಿಸುವುದು ಬ್ರಹ್ಮಹತ್ಯೆಗೆ ಸಮಾನವಾದುದು ಎಂದು ಹೇಳಲಾಗಿದೆ. ಕಾಡಿನ ನಿರಪರಾಧೀ ಪ್ರಾಣಿಗಳನ್ನು ಕೊಲ್ಲುವುದೂ ಕೂಡ ಬ್ರಹ್ಮಹತ್ಯೆಯಂತೆಯೇ ಆಗಿದೆ. ಸಾಧು ಪುರುಷನು ಬ್ರಾಹ್ಮಣನ ಧನವನ್ನೂ ತ್ಯಜಿಸಬೇಕು. ಅದನ್ನು ಧರ್ಮಕಾರ್ಯದಲ್ಲಿಯೂ ತೊಡಗಿಸಬಾರದು; ಇಲ್ಲದಿದ್ದರೆ ಬ್ರಹ್ಮಹತ್ಯೆಯ ದೋಷ ತಗಲುವುದು. ಗೋವುಗಳ ಮಾರ್ಗದಲ್ಲಿ, ವನದಲ್ಲಿ, ಊರಿನಲ್ಲಿ ಬೆಂಕಿ ಹಚ್ಚುವವನೂ ಬ್ರಹ್ಮಹತ್ಯೆಯನ್ನೇ ಮಾಡಿದವನು. ಈ ರೀತಿಯ ಭಯಾನಕ ಪಾಪಗಳು ಬ್ರಹ್ಮಹತ್ಯೆಗೆ ಸಮಾನವೆಂದು ತಿಳಿಯಲಾಗಿದೆ.

ಬ್ರಾಹ್ಮಣನ ದ್ರವ್ಯವನ್ನು ಅಪಹರಿಸುವುದು, ಪಿತ್ರಾರ್ಜಿತ ಸಂಪತ್ತಿಯ ಪಾಲಿನಲ್ಲಿ ಮೋಸಮಾಡುವುದು, ಅತ್ಯಂತ ಅಭಿಮಾನಪಡುವುದು, ಹೆಚ್ಚು ಕ್ರೋಧಗೊಳ್ಳುವುದು, ಪಾಖಂಡತೆಯನ್ನು ಹರಡುವುದು, ಕೃತಘ್ನನಾಗುವುದು, ವಿಷಯಗಳಲ್ಲಿ ಹೆಚ್ಚು ಆಸಕ್ತನಾಗುವುದು, ಲೋಭಿಯಾಗಿರುವುದು, ಸತ್ಪುರುಷರನ್ನು ದ್ವೇಷಿಸುವುದು, ಪರಸ್ತ್ರೀಯಲ್ಲಿ ಸಮಾಗಮ ಮಾಡುವುದು, ಶ್ರೇಷ್ಠ ಕುಲದ ಕನ್ಯೆಯರನ್ನು ಕಲಂಕಿತಗೊಳಿಸುವುದು, ಯಜ್ಞ-ಉದ್ಯಾನ ವನ - ಸರೋವರ - ಸ್ತ್ರೀ - ಪುರುಷರನ್ನು ಮಾರಾಟ ಮಾಡುವುದು, ತೀರ್ಥಯಾತ್ರೆ, ಉಪವಾಸ, ವ್ರತ, ಉಪನಯನ ಇತ್ಯಾದಿಗಳ ವ್ಯಾಪಾರ ಮಾಡುವುದು. ಹೆಂಡತಿಯ ಹಣದಲ್ಲಿ ಜೀವನ ನಡೆಸುವುದು, ಸ್ತ್ರೀಯರಿಗೆ ಅತ್ಯಂತ ಅಧೀನನಾಗುವುದು, ಸ್ತ್ರೀಯರನ್ನು ರಕ್ಷಿಸದಿರುವುದು, ಕಪಟದಿಂದ ಪರರ ಹೆಂಡತಿಯನ್ನು ಸೇವಿಸುವುದು, ಬ್ರಹ್ಮಚರ್ಯಾದಿ ವ್ರತಗಳನ್ನು ತ್ಯಜಿಸುವುದು, ಇತರರ ಆಚಾರವನ್ನು ಅನುಸರಿಸುವುದು, ಅಸತ್ ಶಾಸ್ತ್ರಗಳನ್ನು ಅಧ್ಯಯನ ಮಾಡುವುದು, ಒಣ ತರ್ಕದ ಸಹಾಯ ಪಡೆಯುವುದು, ದೇವತೆ-ಅಗ್ನಿ-ಗುರು-ಸಾಧು-ಬ್ರಾಹ್ಮಣ ಇವರನ್ನು ನಿಂದಿಸುವುದು, ಪಿತೃಯಜ್ಞ ಮತ್ತು ದೇವಯಜ್ಞಗಳನ್ನು ತ್ಯಜಿಸುವುದು, ತನ್ನ ಕರ್ಮಗಳನ್ನು ಬಿಡುವುದು, ಕೆಟ್ಟ ಸ್ವಭಾವವನ್ನು ತನ್ನದಾಗಿಸಿಕೊಳ್ಳುವುದು, ನಾಸ್ತಿಕವಾಗುವುದು, ಪಾಪಗಳಲ್ಲಿ ತೊಡಗುವುದು, ಯಾವಾಗಲೂ ಸುಳ್ಳು ಹೇಳುವುದು - ಇಂತಹ ಪಾಪಗಳಿಂದ ಕೂಡಿದ ಸ್ತ್ರೀ-ಪುರುಷರನ್ನು ಉಪಪಾತಕೀ ಎಂದು ಹೇಳಲಾಗಿದೆ.

ಗೋವುಗಳ, ಬ್ರಾಹ್ಮಣ ಕನ್ಯೆಯರ, ಒಡೆಯನ, ಮಿತ್ರನ, ತಪಸ್ವಿ ಮಹಾತ್ಮರ ಕಾರ್ಯಗಳನ್ನು ನಾಶಮಾಡುವವರು, ನರಕಗಾಮಿ ಎಂದು ತಿಳಿಯಲಾಗಿದೆ ಬ್ರಾಹ್ಮಣರಿಗೆ ದುಃಖ ಕೊಡುವವನು, ಅವರನ್ನು ಕೊಲ್ಲಲು ಆಯುಧವನ್ನು ಎತ್ತುವವನು, ದ್ವಿಜನಾಗಿದ್ದು ಶೂದ್ರರ ಸೇವೆ ಮಾಡುವವನು, ಕಾಮವಶನಾಗಿ ಮದ್ಯವನ್ನು ಸೇವಿಸುವವನು, ಪಾಪಪರಾಯಣನು, ಕ್ರೂರನು, ಹಿಂಸೆಯ ಪ್ರಿಯನು, ಗೋಶಾಲೆಯಲ್ಲಿ - ಅಗ್ನಿಯಲ್ಲಿ - ನೀರಿನಲ್ಲಿ - ರಸ್ತೆಯಲ್ಲಿ - ಮರಗಳ ನೆರಳಲ್ಲಿ - ಪರ್ವತದಲ್ಲಿ - ಉದ್ಯಾನದಲ್ಲಿ - ದೇವಮಂದಿರಗಳ ಬಳಿಯಲ್ಲಿ ಮಲಮೂತ್ರಗಳನ್ನು ತ್ಯಜಿಸುವವನು, ಬಿದಿರು, ಇಟ್ಟಿಗೆ, ಕಲ್ಲು, ಮರ, ಕೊಂಬು, ಮುಳ್ಳುಗಳಿಂದ ದಾರಿಯನ್ನು ತಡೆಯುವವನು ಅಥವಾ ಮುಚ್ಚುವವನು, ಬೇರೆಯವರ ಹೊಲದ ಗಡಿಯನ್ನು (ಬೇಲಿಯನ್ನು) ಮುರಿಯುವವನು, ಕಪಟದಿಂದ ಶಾಸನ ಮಾಡುವವನು, ಛಲ-ಕಪಟದ ಕಾರ್ಯಗಳಲ್ಲೇ ತೊಡಗಿರುವವನು, ಯಾರನ್ನಾದರೂ ಮೋಸಗೊಳಿಸಿ ತಂದಿರುವ ಆಹಾರ-ಅನ್ನ-ವಸ್ತ್ರಗಳನ್ನು ಹಟದಿಂದ ಉಪಯೋಗಿಸುವವನು, ಪತ್ನೀ - ಪುತ್ರ - ಮಿತ್ರ - ಬಾಲಕ - ವೃದ್ಧ - ದುರ್ಬಲ - ಆತುರ (ಹಸಿದಿರುವವನು) - ಅಳು

– ಅತಿಥಿ – ಬಂಧುಗಳು – ಇವರು ಹಸಿದಿರುವಾಗ ಇವರನ್ನು ಬಿಟ್ಟು ಸ್ವತಃ ಉಣ್ಣುವವನು, ಇಂದ್ರಿಯಗಳನ್ನು ಗೆಲ್ಲದವನು, ಸ್ವತಃ ನಿಯಮಗಳನ್ನು ಕೈಗೊಂಡು ಮತ್ತೆ ಅವನ್ನು ತ್ಯಜಿಸುವವನು, ಸಂನ್ಯಾಸ ಸ್ವೀಕರಿಸಿಯೂ ಪುನಃ ಸಂಸಾರಿಯಾದವನು, ಶಿವಪ್ರತಿಮೆಯನ್ನು ಒಡೆಯುವವನು, ಹಸುಗಳನ್ನು ಕ್ರೂರವಾಗಿ ಹೊಡೆಯುವವನು, ಪದೇ-ಪದೇ ಅವನ್ನು ನಿಯಂತ್ರಿಸುವವನು, ದುರ್ಬಲ ಪಶುಗಳನ್ನು ಸಾಕದವನು, ಸದಾ ಅವನ್ನು ಅಟ್ಟಿ ಬಿಡುವವನು, ಹೆಚ್ಚು ಭಾರವನ್ನು ಹೇರಿ ಅವುಗಳನ್ನು ಪೀಡಿಸುವವನು, ಸಾಮರ್ಥ್ಯವಿಲ್ಲದಿದ್ದರೂ ನೇಗಿಲಿಗೆ, ಬಂಡಿಗೆ ಹೂಡುವವನು, ಅಥವಾ ಅವುಗಳಿಂದ ಸಹಿಸಲಾರದಷ್ಟು ಭಾರವನ್ನು ಎಳೆಸುವವನು, ಪಶುಗಳಿಗೆ ಆಹಾರ ಕೊಡದೆಯೇ ಅವುಗಳನ್ನು ನೇಗಿಲಿಗೆ ಕಟ್ಟುವವನು, ಕಟ್ಟಿಹಾಕಿದ ಪಶುಗಳನ್ನು ಮೇಯಲು ಬಿಡದವನು, ಭಾರದಿಂದ ಬಳಲಿದ, ರೋಗದಿಂದ ಪೀಡಿತವಾದ, ಹಸಿವೆಯಿಂದ ಕಂಗೆಟ್ಟ ಹಸು-ಎತ್ತುಗಳನ್ನು ಸಾಕದೆ ಇರುವವನು – ಇವರೆಲ್ಲರು ಗೋಹತ್ಯೆ ಮಾಡಿದವರು ಹಾಗೂ ನರಕಗಾಮಿ ಎಂದು ತಿಳಿಯಲಾಗಿದೆ.

ಎತ್ತುಗಳ ಅಂಡಕೋಶಗಳನ್ನು ತೆಗೆಸುವ ಮತ್ತು ಗೊಡ್ಡು ಹಸುವನ್ನು ನೇಗಿಲಿಗೆ ಕಟ್ಟುವ ಪಾಪಿಷ್ಠ ಮನುಷ್ಯನು ಮಹಾನಾರಕಿಯಾಗಿರುವನು. ಹಸಿವು – ಬಾಯಾರಿಕೆಯುಳ್ಳವನು, ಪರಿಶ್ರಮಪಟ್ಟವನು, ಅನ್ನದ ಇಚ್ಛೆಯಿಂದ ಮನೆಗೆ ಬಂದಿರುವ ಅತಿಥಿಗಳ ಮೇಲೆ, ಅನಾಥ, ದೀನ, ಬಾಲ, ವೃದ್ಧ ದುರ್ಬಲ ಹಾಗೂ ರೋಗಿಗಳ ಮೇಲೆ ದಯೆ ಮಾಡದಿರುವ ಮೂಢನು ನರಕ ಸಮುದ್ರದಲ್ಲಿ ಬೀಳುವನು. ಮನುಷ್ಯನು ಸತ್ತು ಹೋದಾಗ ಅವನು ಗಳಿಸಿದ ಧನವು ಮನೆಯಲ್ಲೇ ಉಳಿದು ಬಿಡುತ್ತದೆ. ಬಂಧು – ಬಾಂಧವರು ಶ್ಮಶಾನದವರೆಗೆ ಬರುತ್ತಾರೆ. ಕೇವಲ ಅವನು ಮಾಡಿದ ಪಾಪ, ಪುಣ್ಯಗಳು ಪರಲೋಕಕ್ಕೆ ಹೋಗುವ ಜೀವಿಯೊಂದಿಗೆ ಹೋಗುತ್ತವೆ.

ಔಚಿತ್ಯದ ಸೀಮೆಯನ್ನು ಮೀರಿ ಮನ ಬಂದಂತೆ ಕರವನ್ನು ವಸೂಲಿ ಮಾಡುವ ಹಾಗೂ ಬೇರೆಯವರನ್ನು ದಂಡಿಸುವುದರಲ್ಲೇ ರುಚಿಯುಳ್ಳ ರಾಜನನ್ನು ನರಕದಲ್ಲಿ ಬೇಯಿಸಲಾಗುವುದು. ಯಾವ ರಾಜನ ರಾಜ್ಯದಲ್ಲಿ ಪ್ರಜೆ ಲಂಚಕೋರರಾಗಿರುವರೋ, ತಮ್ಮ ರುಚಿಗನುಸಾರ ಕಡಿಮೆ ಹಣಕೊಟ್ಟು ಹೆಚ್ಚು ಬೆಲೆಬಾಳುವ ವಸ್ತುವನ್ನು ಕೊಂಡುಕೊಳ್ಳುವ ಅಧಿಕಾರಿಗಳಿರುವರೋ, ದರೋಡೆ ಕೋರರಿಂದ, ಕಳ್ಳರಿಂದ ಪ್ರಜೆ ಪೀಡಿತವಾಗುವುದೋ ಆ ರಾಜನನ್ನೂ ಕೂಡ ನರಕಗಳಲ್ಲಿ ಬೇಯಿಸಲಾಗುವುದು. ಪರರ ಸ್ತ್ರೀಯರೊಡನೆ ವ್ಯಭಿಚಾರ ಮತ್ತು ಕಳ್ಳತನ ಮಾಡುವ ಪ್ರಚಂಡ ಪುರುಷನಿಗೆ ತಗಲುವ ಪಾಪವೇ ಪರಸ್ತ್ರೀಗಾಮಿ ರಾಜನಿಗೂ ತಗಲುವುದು. ಸಾಧುವನ್ನು ಕಳ್ಳನೆಂದೂ, ಕಳ್ಳನನ್ನು ಸಾಧುವೆಂದೂ ತಿಳಿಯುವ, ವಿಚಾರವಿಲ್ಲದೆ ನಿರಪರಾಧಿಗೆ ದಂಡ ಕೊಡುವ ರಾಜನೂ ಕೂಡ ನರಕಕ್ಕೆ ಹೋಗುತ್ತಾನೆ. ಪರರ ದ್ರವ್ಯವನ್ನು ಸಾಸಿವೆಯಷ್ಟಾದರೂ ಕಳ್ಳತನ ಮಾಡುವ ಮನುಷ್ಯನು ನರಕಕ್ಕೆ ಹೋಗುತ್ತಾನೆ; ಇದರಲ್ಲಿ ಸಂಶಯವೇ ಇಲ್ಲ. ಈ ರೀತಿಯ ಪಾಪಗಳಿಂದ ಕೂಡಿದ ಮನುಷ್ಯರು ಸತ್ತಬಳಿಕ ಯಾತನೆಯನ್ನು ಭೋಗಿಸಲಿಕ್ಕಾಗಿ ನೂತನ ಶರೀರವನ್ನು ಪಡೆಯುತ್ತಾರೆ. ಅದರಲ್ಲಿ ಎಲ್ಲ ಅವಯವಗಳೂ ಇರುತ್ತವೆ. ಅದಕ್ಕಾಗಿ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ನೂರು ಕೋಟಿ ಕಲ್ಪಗಳಲ್ಲಿಯೂ ಭೋಗಿಸದೆ ಪಾಪಗಳು ನಾಶವಾಗಲಾರವು. ಮನಸ್ಸು, ವಾಣಿ, ಶರೀರದ ಮೂಲಕ ಸ್ವತಃ ಪಾಪಮಾಡುವವನು, ಬೇರೆಯವರಿಂದ ಮಾಡಿಸುವವನು, ಇತರ ದುಷ್ಕರ್ಮವನ್ನು ಅನುಮೋದಿಸುವವನು ಇವರಿಗೆ ಪಾಪದಗತಿ ನರಕವೇ ಫಲವಾಗಿದೆ.

(ಅಧ್ಯಾಯ ೪-೫)

❐ ❐ ❐

ಪಾಪಿಗಳ ಮತ್ತು ಪುಣ್ಯಾತ್ಮರ ಯಮಲೋಕಯಾತ್ರೆ

ಸನತ್ಕುಮಾರರು ಹೇಳುತ್ತಾರೆ – ವ್ಯಾಸರೇ! ಮನುಷ್ಯರು ನಾಲ್ಕು ಪ್ರಕಾರದ ಪಾಪಗಳಿಂದ ಯಮಲೋಕಕ್ಕೆ ಹೋಗುತ್ತಾರೆ. ಯಮ ಲೋಕವು ಅತ್ಯಂತ ಭಯಾನಕ ಮತ್ತು ಭಯಂಕರವಾಗಿದೆ. ಸಮಸ್ತ ದೇಹಧಾರಿಗಳು ವಿವಶರಾಗಿ ಅಲ್ಲಿಗೆ ಹೋಗಬೇಕಾಗುತ್ತದೆ. ಯಮಲೋಕಕ್ಕೆ ಹೋಗದಿರುವ ಯಾವ ಪ್ರಾಣಿಯೂ ಇಲ್ಲ ಮಾಡಿದ ಕರ್ಮದ ಫಲವನ್ನು ಕರ್ತಾನು ಅವಶ್ಯವಾಗಿ ಅನುಭವಿಸಬೇಕಾಗುತ್ತದೆ, ಇದನ್ನು ವಿಚಾರ ಮಾಡಿರಿ. ಶುಭಕರ್ಮಗಳನ್ನು ಮಾಡುವ ಸೌಮ್ಯಚಿತ್ತ, ದಯಾಳು ಜೀವರು ಸೌಮ್ಯ ಮಾರ್ಗದಿಂದ ಯಮಪುರಿಯ ಪೂರ್ವದ್ವಾರದಿಂದ ಹೋಗುತ್ತಾರೆ. ಪಾಪಕರ್ಮ ಪರಾಯಣ ಹಾಗೂ ದಾನರಹಿತರಾದ ಪಾಪಿಗಳು ಭಯಾನಕ ದಕ್ಷಿಣ ಮಾರ್ಗದಿಂದ ಯಮಲೋಕವನ್ನು ಪ್ರವೇಶಿಸುತ್ತಾರೆ. ಮರ್ತ್ಯಲೋಕದಿಂದ ಎಂಭತ್ತಾರು ಸಾವಿರ ಯೋಜನ ದೂರವನ್ನು ದಾಟಿದಾಗ ನಾನಾರೂಪವುಳ್ಳ ಯಮಲೋಕದ ಸ್ಥಿತಿಯಾಗಿದೆ; ಇದನ್ನು ತಿಳಿದುಕೊಳ್ಳಬೇಕು. ಪುಣ್ಯಕರ್ಮ ಮಾಡುವವರಿಗೆ ಆ ನಗರವು ಹತ್ತಿರವಿರುವಂತೆ ಕಾಣುತ್ತದೆ. ಆದರೆ ಭಯಾನಕ ಮಾರ್ಗದಿಂದ ಪ್ರಯಾಣಿಸುವ ಪಾಪಿಗಳಿಗೆ ಅದು ಬಹಳ ದೂರವಾಗಿ ಕಾಣುತ್ತದೆ. ಅಲ್ಲಿಯ ದಾರಿಯು ಕೆಲವೆಡೆ ಮೊನಚಾದ ಮುಳ್ಳುಗಳಿಂದ, ಕೆಲವೆಡೆ ಕಲ್ಲುಗಳಿಂದ ಕೂಡಿರುತ್ತದೆ. ಕೆಲವೆಡೆ ಕತ್ತಿಯಂತೆ ಹರಿತವಾದ ಕಲ್ಲುಗಳು ಆ ಮಾರ್ಗದಲ್ಲಿ ನೆಟ್ಟಿರುವರು. ಕೆಲವೆಡೆ ಭಾರೀ ಕೆಸರು ಹರಡಿಕೊಂಡಿದೆ. ಸಣ್ಣ-ದೊಡ್ಡ ಪಾತಕಗಳಿಗನುಸಾರವಾಗಿ ಅಲ್ಲಿಯ ಕಠಿಣತೆಗಳಲ್ಲಿಯೂ ಹೆಚ್ಚು -ಕಡಿಮೆ ಇರುತ್ತದೆ. ಕೆಲವೆಡೆ ಯಮಪುರಿಯ ದಾರಿಯಲ್ಲಿ ಕಬ್ಬಿಣದ ಸೂಜಿಗಳಂತೆ ಮೊನಚಾದ ಹುಲ್ಲುಗಳು ನಿಬಿಡವಾಗಿವೆ.

ಅನಂತರ ಯಮಪುರಿಯ ಮಾರ್ಗದ ಭೀಷಣ ಯಾತನೆಗಳನ್ನು, ಕಷ್ಟಗಳನ್ನು ವರ್ಣಿಸಿ ಸನತ್ಕುಮಾರರು ಹೇಳುತ್ತಾರೆ – ವ್ಯಾಸರೇ! ಎಂದಿಗೂ ದಾನ ಮಾಡದ ಜನರೇ ಈ ಪ್ರಕಾರ ದುಃಖವನ್ನು ಅನುಭವಿಸುತ್ತಾ ಸುಖವನ್ನು ಬೇಡುತ್ತಾ ಆ ಮಾರ್ಗದಿಂದ ಹೋಗುತ್ತಾರೆ. ಯಾರು ಮೊದಲೇ ದಾನರೂಪೀ ದಾರಿಯ ಬುತ್ತಿಯನ್ನು ಕಟ್ಟಿಕೊಂಡಿರುವರೋ ಅವರು ಸುಖವಾಗಿ ಯಮಲೋಕದ ಯಾತ್ರೆಯನ್ನು ಮಾಡುವರು. ಈ ರೀತಿಯಿಂದ ಕಷ್ಟಗಳನ್ನು ಅನುಭವಿಸುತ್ತಾ ಪಾಪೀ ಜೀವಿಗಳು ಪ್ರೇತಪುರಿಯನ್ನು ತಲುಪುವರೋ ಆಗ ಅವರ ವಿಷಯದಲ್ಲಿ ಯಮರಾಜನಿಗೆ ಸೂಚಿಸಲಾಗುವುದು. ಯಮನ ಅಪ್ಪಣೆ ಪಡೆದ ದೂತರು ಆ ಪಾಪಿಗಳನ್ನು ಯಮರಾಜನ ಮುಂದೆ ತಂದು ನಿಲ್ಲಿಸುವರು. ಅಲ್ಲಿ ಶುಭಕರ್ಮವನ್ನು ಮಾಡುವ ಜನರಿಗೆ ಯಮರಾಜನು ಸ್ವಾಗತಪೂರ್ವಕ ಆಸನವನ್ನಿತ್ತು ಅರ್ಘ್ಯ-ಪಾದ್ಯಾದಿಗಳನ್ನು ನಿವೇದಿಸುತ್ತಾ ಪ್ರೀತಿಯಿಂದ ವರ್ತಿಸುತ್ತಾ ಸಮ್ಮಾನಿಸಿ ಹೇಳುತ್ತಾನೆ – ವೇದೋಕ್ತ ಕರ್ಮವನ್ನು ಮಾಡುವ ಮಹಾತ್ಮರೇ! ನೀವು ಧನ್ಯರಾಗಿರುವಿರಿ. ನೀವು ದಿವ್ಯ ಸುಖದ ಪ್ರಾಪ್ತಿಗಾಗಿ ಪುಣ್ಯಕರ್ಮವನ್ನು ಮಾಡಿರುವಿರಿ. ಆದ್ದರಿಂದ ನೀವು ದಿವ್ಯಾಂಗನೆಯರ ಭೋಗದಿಂದ ಭೂಷಿತ ಹಾಗೂ ಸಮಸ್ತ ಮನೋವಾಂಛಿತ ಪದಾರ್ಥಗಳಿಂದ ಸಂಪನ್ನ ನಿರ್ಮಲ ಸ್ವರ್ಗಲೋಕಕ್ಕೆ ಹೋಗಿರಿ. ಅಲ್ಲಿ ಮಹಾನ್ ಭೋಗಗಳನ್ನು ಅನುಭವಿಸಿ ಕೊನೆಗೆ ಪುಣ್ಯವು ಕ್ಷೀಣವಾದಾಗ, ಉಳಿದಿರುವ ಸ್ವಲ್ಪ ಅಶುಭ ಕರ್ಮವನ್ನು ಮತ್ತೆ ಇಲ್ಲಿಗೆ ಬಂದು ಅನುಭವಿಸಿರಿ. ಧರ್ಮಾತ್ಮಾ ಮನುಷ್ಯರು ಯಮರಾಜನಿಗೆ ಮಿತ್ರರಂತೆ ಇರುತ್ತಾರೆ. ಅವರು ಯಮರಾಜನನ್ನು ಸುಖಪೂರ್ವಕ ಸೌಮ್ಯ ಧರ್ಮರಾಜ ರೂಪದಲ್ಲಿ ನೋಡುತ್ತಾರೆ.

ಆದರೆ ಕ್ರೂರಕರ್ಮವನ್ನು ಮಾಡಿದವರು ಯಮರಾಜನನ್ನು ಭಯಾನಕ ರೂಪದಿಂದ ನೋಡುತ್ತಾರೆ. ಅವರ ದೃಷ್ಟಿಯಲ್ಲಿ ಯಮನ ಮುಖವು ದಾಡೆಗಳಿಂದಾಗಿ ವಿಕರಾಳವಾಗಿ ಕಾಣುತ್ತದೆ. ಕಣ್ಣುಗಳು ಹುಬ್ಬೇರಿಸಿದಂತೆ ಕಂಡು ಬರುತ್ತವೆ. ಅವನ ಕೂದಲು ನೆಟ್ಟಗೆ ನಿಂತಂತೆ ಕಾಣುತ್ತದೆ. ಗಡ್ಡ-ಮೀಸೆಗಳು ದೊಡ್ಡದಾಗಿರುತ್ತವೆ. ತುಟಿಗಳು ನಡುಗುತ್ತಾ ಇರುತ್ತದೆ. ಅವನಿಗೆ ಹದಿನೆಂಟು ಭುಜಗಳಿದ್ದು, ಕುಪಿತನಾಗಿ ಇದ್ದಲಿನ ಬೆಟ್ಟದಂತೆ ಕಪ್ಪಾಗಿ ಕಾಣುವನು. ಅವನ ಕೈಗಳಲ್ಲಿ ಎಲ್ಲ ರೀತಿಯ ಅಸ್ತ್ರ-ಶಸ್ತ್ರಗಳು ಸಜ್ಜಾಗಿರುತ್ತವೆ. ಅವನು ಎಲ್ಲ ಪ್ರಾಕಾರದ ದಂಡನೆಯ ಭಯವನ್ನು ತೋರಿಸಿ ಪಾಪಿಗಳನ್ನು ಗದರಿಸುತ್ತಾ ಇರುತ್ತಾನೆ. ದೊಡ್ಡದಾದ ಕೋಣನ ಮೇಲೆ ಆರೂಢನಾಗಿ, ಕೆಂಪು ವಸ್ತ್ರಮಾಲೆಗಳನ್ನು ಧರಿಸಿ ಎತ್ತರವಾದ ಮಹಾಮೇರುವಿನಂತೆ ಕಣ್ಣಿಗೆ ಬೀಳುವನು. ಅವನ ಕಣ್ಣುಗಳು ಉರಿಯುವ ಬೆಂಕಿಯಂತೆ ಹೊಳೆಯುತ್ತಿರುತ್ತವೆ. ಅವನ ಶಬ್ದವು ಪ್ರಳಯ ಕಾಲದ ಮೇಘ ಗರ್ಜನೆಯಂತೆ ಗಂಭೀರವಾಗಿರುತ್ತದೆ. ಅವನು ಸಾಗರವನ್ನು ಕುಡಿಯುವನೋ, ಗಿರಿರಾಜನನ್ನು ನುಂಗುತ್ತಿರುವನೋ, ಬಾಯಿಯಿಂದ ಬೆಂಕಿಯನ್ನು

ಉಗುಳುತ್ತಿರುವನೋ ಎಂಬಂತೆ ಕಾಣುತ್ತದೆ.

ಅವನ ಸಮೀಪದಲ್ಲಿ ಪ್ರಳಯಾಗ್ನಿಯಂತೆ ಪ್ರಭಾವವುಳ್ಳ ಮೃತ್ಯು ದೇವತೆ ನಿಂತಿರುವನು. ಕಾಡಿಗೆಯಂತೆ ಕಪ್ಪಾದ ಕಾಲದೇವತೆ ಮತ್ತು ಭಯಾನಕ ಕೃತಾಂತ ದೇವತೆಗಳೂ ಇರುತ್ತಾರೆ. ಇವರಲ್ಲದೆ, ಮಾರಿ, ಉಗ್ರ ಮಹಾಮಾರಿ, ಭಯಂಕರ ಕಾಲರಾತ್ರಿ, ಅನೇಕ ಪ್ರಕಾರದ ರೋಗಗಳು ಹಾಗೂ ಬಗೆ-ಬಗೆಯ ಭಯಾವಹ ಕುಷ್ಮವು ಮೂರ್ತಿಮಂತನಾಗಿ ಕೈಗಳಲ್ಲಿ ಶಕ್ತಿ, ಶೂಲ, ಅಂಕುಶ, ಪಾಶ, ಚಕ್ರ, ಖಡ್ಗ ಮುಂತಾದುವನ್ನು ಧರಿಸಿ ನಿಂತಿರುತ್ತಾರೆ.

ವಜ್ರದಂತೆ ಮುಖವನ್ನು ಧರಿಸಿಕೊಂಡು ರುದ್ರಗಣರು ಕತ್ತಿ, ಬತ್ತಳಿಕೆ, ಧನುಸ್ಸು ಹಿಡಿದುಕೊಂಡು ಅಲ್ಲಿ ಉಪಸ್ಥಿತರಾಗಿರುತ್ತಾರೆ. ಅವರೆಲ್ಲರೂ ನಾನಾ ರೀತಿಯ ಆಯುಧಗಳನ್ನು ಧರಿಸಿದ ವೀರರು ಮತ್ತು ಭಯಂಕರರಾಗಿದ್ದಾರೆ. ಇವರಲ್ಲದೆ ಅಸಂಖ್ಯ ಮಹಾವೀರ ಯಮದೂತರು ಇದ್ದಲಿನಂತೆ ಕಪ್ಪಾದ ಅಂಗಕಾಂತಿಯಿಂದ ಕೂಡಿ ಸಮಸ್ತ ಅಸ್ತ್ರ-ಶಸ್ತ್ರಗಳನ್ನು ಧರಿಸಿ ಭಯಂಕರರಾಗಿರುವರು. ಇಂತಹ ಪರಿವಾರದಿಂದ ಸುತ್ತುವರಿದ ಘೋರ ಯಮರಾಜನನ್ನು ಹಾಗೂ ಭೀಷಣ ಚಿತ್ರಗುಪ್ತನನ್ನು ಪಾಪಿಷ್ಠ ಪ್ರಾಣಿಗಳು ನೋಡುತ್ತಾರೆ. ಯಮರಾಜನು ಆ ಪಾಪಕರ್ಮಿಗಳನ್ನು ಬಹಳವಾಗಿ ಗದರಿಸುತ್ತಾನೆ. ಭಗವಾನ್ ಚಿತ್ರಗುಪ್ತನು ಧರ್ಮಯುಕ್ತ ವಚನಗಳಿಂದ ಅವನಿಗೆ ಸಮಜಾಯಿಸುತ್ತಾನೆ.

(ಅಧ್ಯಾಯ ೭)

❐ ❐ ❐

ನರಕಗಳ ಇಪ್ಪತ್ತೆಂಟು ಕೋಟಿಗಳು ಹಾಗೂ ಪ್ರತಿಯೊಂದರ ಐದು-ಐದು ನಾಯಕರ ಕ್ರಮದಿಂದ ಒಂದು ನೂರ ನಲವತ್ತು ರೌರವಾದಿ ನರಕಗಳ ನಾಮಾವಳಿ

ಸನತ್ಕುಮಾರರು ಹೇಳುತ್ತಾರೆ – ವ್ಯಾಸರೇ ! ಅನಂತರ ಯಮದೂತರು ಪಾಪಿಗಳನ್ನು ಅತ್ಯಂತ ಕಾದಕಲ್ಲಿನ ಮೇಲೆ - ವಜ್ರದಿಂದ ದೊಡ್ಡ-ದೊಡ್ಡ ವೃಕ್ಷಗಳನ್ನು ನೆಲಕ್ಕುರುಳಿಸುವಂತೆ ವೇಗದಿಂದ ಅಪ್ಪಳಿಸುವರು. ಆಗ ಶರೀರದಿಂದ ಜರ್ಜರಿತನಾದ ದೇಹಧಾರಿ ಜೀವಿಯು ಕಿವಿಗಳಿಂದ ರಕ್ತವನ್ನು ಹರಿಸುತ್ತಾ, ಪ್ರಜ್ಞೆ ತಪ್ಪಿ ನಿಶ್ಚೇಷ್ಟಿತನಾಗುತ್ತಾನೆ. ಆಗ ವಾಯುವನ್ನು ಸ್ಪರ್ಶಿಸಿ ಯಮದೂತರು ಪುನಃ ಅವನನ್ನು ಎಚ್ಚರಗೊಳಿಸಿ, ಅವನ ಪಾಪಗಳ ಶುದ್ಧಿಗಾಗಿ ಅವನನ್ನು ನರಕ ಸಮುದ್ರದಲ್ಲಿ ಮುಳುಗಿಸುವರು. ಪೃಥಿವಿಯ ಕೆಳಗೆ ನರಕದ ಏಳು ಶ್ರೇಣಿಗಳಿವೆ. ಅವು ಏಳನೆಯ ತಳದ ಕೊನೆಯಲ್ಲಿ ಘೋರ ಅಂಧಕಾರದಲ್ಲಿ ಸ್ಥಿತವಾಗಿವೆ. ಅದೆಲ್ಲದರ ಇಪ್ಪತ್ತೆಂಟು ಶ್ರೇಣಿಗಳಿವೆ. ಮೊದಲನೆಯ ಶ್ರೇಣಿ ಘೋರಾ ಎಂದು ಹೇಳುತ್ತಾರೆ. ಎರಡನೆಯದು ಸುಘೋರಾ, ಇದು ಅದರ ಕೆಳಗೆ ಇದೆ. ಮೂರನೆಯದು ಅತಿಘೋರಾ, ನಾಲ್ಕನೆಯದು ಮಹಾಘೋರಾ, ಐದನೆಯದು ಘೋರರೂಪಾ, ಆರನೆಯದು ತಲಾತಲಾ, ಏಳನೆಯದು ಭಯಾನಕಾ, ಎಂಟನೆಯದು ಕಾಲರಾತ್ರಿ, ಒಂಭತ್ತನೆಯದು ಭಯೋತ್ಕಟಾ, ಅದರ ಕೆಳಗೆ ಹತ್ತನೆಯದು ಚಂಡಾ, ಅದರ ಕೆಳಗೆ ಮಹಾಚಂಡಾ, ಮತ್ತೆ ಚಂಡ-ಕೋಲಾಹಲಾ, ಅದರಿಂದ ಬೇರೆಯಾದುದು ಪ್ರಚಂಡಾ ಇದೆ. ಅದು ಚಂಡಗಳ ನಾಯಿಕಾ ಎಂದು ಹೇಳಲಾಗಿದೆ. ಅನಂತರ ಪದ್ಮಾ, ಪದ್ಮಾವತಿ, ಭೀತಾ, ಭೀಮಾ. ಅದು ಭೀಷಣ ನರಕಗಳ ನಾಯಿಕೆ ಎಂದು ತಿಳಿಯಲಾಗಿದೆ. ಹದಿನೆಂಟನೆಯದು ಕರಾಳಾ, ಹತ್ತೊಂಭತ್ತನೆಯ ವಿಕರಾಳಾ, ಇಪ್ಪತ್ತನೆಯ ನರಕ ಶ್ರೇಣಿಯು ವಜ್ರಾ ಎಂದು ಹೇಳಲಾಗಿದೆ. ಬಳಿಕ ತ್ರಿಕೋಣಾ, ಪಂಚಕೋಣಾ, ಸುದೀರ್ಘಾ, ಅಖಿಲಾರ್ತಿದಾ, ಸಮಾ, ಭೀಮಬಲಾ, ಭೀಮಾ ಹಾಗೂ ಇಪ್ಪತ್ತೆಂಟನೆಯದು ದೀಪ್ತಪ್ರಾಯಾ ಆಗಿದೆ. ಹೀಗೆ ನಾನು ನಿಮಗೆ ಭಯಾನಕ ನರಕಗಳ ಶ್ರೇಣಿಗಳ ಹೆಸರುಗಳನ್ನು ತಿಳಿಸಿದೆ. ಇವುಗಳ ಸಂಖ್ಯೆ ಇಪ್ಪತ್ತೆಂಟೇ ಆಗಿದೆ. ಇವು ಪಾಪಿಗಳಿಗೆ ಕಷ್ಟಕೊಡುವಂತಹುಗಳು. ಈ ಶ್ರೇಣಿಗಳ ಐದು-ಐದು ನಾಯಕರೆಂದು ತಿಳಿಯಬೇಕು.

ಇನ್ನು ಅವೆಲ್ಲ ಶ್ರೇಣಿಗಳ ಹೆಸರುಗಳನ್ನು ತಿಳಿಸಲಾಗುತ್ತದೆ, ಕೇಳಿರಿ. ಅವುಗಳಲ್ಲಿ ಮೊದಲನೆಯದು ರೌರವ ನರಕವಾಗಿದೆ. ಅಲ್ಲಿಗೆ ಹೋದ ದೇಹಧಾರೀ ಜೀವನು ಅಳತೊಡಗುವನು. ಮಹಾರೌರವದ ಪೀಡೆಯಿಂದ ಮಹಾನ್ ಪುರುಷನೂ ಅತ್ತು ಬಿಡುವನು. ಇದಾದ ಬಳಿಕ ಶೀತ ಮತ್ತು ಉಷ್ಣ ಎಂಬ ನರಕಗಳಿವೆ. ಮತ್ತೆ ಸುಘೋರವಿದೆ. ರೌರವದಿಂದ ಸುಘೋರದ ತನಕ ಐದು ನರಕ ನಾಯಕರೆಂದು ತಿಳಿಯಲಾಗಿದೆ. ಇದಾದ ಬಳಿಕ ಸುಮಹಾತೀಕ್ಷ್ಣ ಸಂಜೀವನ, ಮಹಾತಮ, ವಿಲೋಮ, ವಿಲೋಪ, ಕಂಟಕ, ತೀವ್ರವೇಗ, ಕರಾಳ, ವಿಕರಾಳ, ಪ್ರಕಂಪನ, ಮಹಾವಕ್ರ, ಕಾಲ, ಕಾಲಸೂತ್ರ,

ಪ್ರಗರ್ಜನ, ಸೂಚೀಮುಖಿ, ಸುನೇತಿ, ಖಾದಕ, ಸುಪ್ರಪೀಡನ, ಕುಂಭೀಪಾಕ, ಸುಪಾಕ, ಕ್ರಕಚ, ಅತಿದಾರುಣ, ಅಂಗಾರರಾಶಿ ಭವನ, ಮೇರು, ಅಸೃಕ್‌ಪ್ರಹಿತ, ತೀಕ್ಷ್ಣತುಂಡ, ಶಕುನಿ, ಮಹಾಸಂವರ್ತಕ, ಕ್ರತು, ತಪ್ತಜಂತು, ಪಂಕಲೇಪ, ಪ್ರತಿಮಾಂಸ, ತ್ರಪೂದ್ಭವ, ಉಚ್ಛ್ವಾಸ, ನಿರುಚ್ಛ್ವಾಸ, ಸುದೀರ್ಘ, ಕೂಟಶಾಲ್ಮಲಿ, ದುರಿಷ್ಟ, ಸುಮಹಾವಾದ, ಪ್ರವಾದ, ಸುಪ್ರತಾಪನ, ಮೇಘ, ವೃಷ, ಶಾಲ್ಮ, ಸಿಂಹಮುಖಿ, ವ್ಯಾಘ್ರಮುಖಿ, ಗಜಮುಖಿ, ಕುಕ್ಕುರಮುಖಿ, ಸೂಕರಮುಖಿ, ಅಜಮುಖಿ, ಮಹಿಷಮುಖಿ, ಘೂಕಮುಖಿ, ಕೋಕಮುಖಿ, ವೃಕಮುಖಿ, ಗ್ರಾಹ, ಕುಂಭೀನಸ, ನಕ್ರ, ಸರ್ಪ, ಕೂರ್ಮ, ಕಾಕ, ಗೃಧ್ರ, ಉಲೂಕ, ಹಲೌಕ, ಶಾರ್ದೂಲ, ಕ್ರಥ, ಕರ್ಕಟ, ಮಂಡೂಕ, ಪೂತಿಮುಖಿ, ರಕ್ತಾಕ್ಷ, ಪೂತಿಮೃತ್ತಿಕಾ, ಕಣಧೂಮ್ರ, ಅಗ್ನಿ, ಕೃಮಿ, ಗಂಧಿವಪು, ಅಗ್ನೀಧ್ರ, ಅಪ್ರತಿಷ್ಠ, ರುಧಿರಾಭ, ಶ್ವಭೋಜನ, ಲಾಲಾಭಕ್ಷ, ಅಂತ್ರಭಕ್ಷ, ಸರ್ವಭಕ್ಷ, ಸುದಾರುಣ, ಕಂಟಕ, ಸುವಿಶಾಲ, ವಿಕಟ, ಕಟಪೂತನ, ಅಂಬರೀಷ, ಕಟಾಹ, ಕಷ್ಟದಾಯಿನೀ, ವೈತರಣೀನದಿ, ಸುತಪ್ತ ಲೋಹಶಯನ, ವಿಕಾಪಾದ, ಪ್ರಪೂರಣ, ಘೋರ ಅಸಿತಾಲವನ, ಅಸ್ಥಿಭಂಗ, ಸುಪೂರಣ, ವಿಲಾತಸ, ಅಸುಯಂತ್ರ, ಕೂಟಪಾಶ, ಪ್ರಮರ್ದನ, ಮಹಾಚೂರ್ಣ, ಅಸುಚೂರ್ಮ, ತಪ್ತಲೋಹಮಯ, ಪರ್ವತ, ಕ್ಷುರಧಾರಾ, ಯಮಲಪರ್ವತ, ಮೂತ್ರಕೂಪ, ವಿಷ್ಠಾಕೂಪ, ಅಶ್ರುಕೂಪ, ಶೀತಲ ಕ್ಷಾರಕೂಪ, ಮುಸಲೋಲೂಖಿಲ, ಯಂತ್ರ, ಶಿಲಾ, ಶಕಟ, ಲಾಂಗಲ, ತಾಲಪತ್ರವನ, ಅಸಿಪತ್ರವನ, ಮಹಾಶಕಟಮಂಡಪ, ಸಮ್ಮೋಹ, ಅಸ್ಥಿಭಂಗ, ತಪ್ತ, ಚಂಚಲ, ಅಯೋಗುಡ (ಕಬ್ಬಿಣದ ಗುಂಡು) ಬಹುದುಃಖಿ, ಮಹಾಕ್ಲೇಶ, ಕಶ್ಮಲ, ಶಮಲ, ಮಾಲಾತ್, ಹಾಲಾಹಲ, ವಿರೂಪ, ಸ್ವರೂಪ, ಯಮಾನುಗ, ವಿಕಪಾದ, ತ್ರಿಪಾದ, ತೀವ್ರ, ಅಚೀವರ ಮತ್ತು ತಮ.

ಈ ಪ್ರಕಾರ ಇವು ಇಪ್ಪತ್ತೆಂಟು ನರಕ ಮತ್ತು ಕ್ರಮವಾಗಿ ಅವುಗಳ ಐದೈದು ನಾಯಕರನ್ನು ಹೇಳಲಾಗಿದೆ. ಇಪ್ಪತ್ತೆಂಟು ಶ್ರೇಣಿಗಳ ಕ್ರಮವಾಗಿ ರೌರವ ಮುಂತಾದ ಐದೈದೇ ನಾಯಕರನ್ನು ಹೇಳಲಾಗುತ್ತದೆ. ಮೇಲೆ ಹೇಳಿದ ೨೮ ಶ್ರೇಣಿಗಳನ್ನು ಬಿಟ್ಟು ಅಂದಾಜು ನೂರು ನರಕಗಳನ್ನು ತಿಳಿಯಲಾಗಿದೆ. ಮಹಾನರಕಮಂಡಲ ಒಂದು ನೂರ ನಲವತ್ತು ನರಕಗಳನ್ನು ಹೇಳಲಾಗಿದೆ.*

(ಅಧ್ಯಾಯ ೮)

❐ ❐ ❐

ಬೇರೆ-ಬೇರೆ ಪಾಪಗಳಿಂದ ದೊರೆಯುವ ನರಕಯಾತನೆಯ ವರ್ಣನೆ ಹಾಗೂ ಶ್ವಾನಬಲಿ, ಕಾಕಬಲಿ ಮತ್ತು ದೇವತೆಗಳಿಗೆ ಮುಂತಾದವರಿಗೆ ಕೊಟ್ಟಿರುವ ಬಲಿಯ ಅವಶ್ಯಕತೆ ಹಾಗೂ ಮಹತ್ವದ ಪ್ರತಿಪಾದನೆ

ಸನತ್ಕುಮಾರರು ಹೇಳುತ್ತಾರೆ – ವ್ಯಾಸರೇ ! ಇವೆಲ್ಲ ಭಯಾನಕ ಕಷ್ಟದಾಯಕ ನರಕಗಳಲ್ಲಿ ಪಾಪೀ ಜೀವರಿಗೆ ಅತ್ಯಂತ ಭೀಷಣ ನರಕಯಾತನೆ ಅನುಭವಿಸಬೇಕಾಗುತ್ತದೆ. ಮಿಥ್ಯಾ ಆಗಮ (ಪಾಖಿಂಡರ ಶಾಸ್ತ್ರ) ದಲ್ಲಿ ಪ್ರವೃತ್ತನಾಗುವವನು ದ್ವಿಜಿಹ್ವ ಹೆಸರಿನ ನರಕಕ್ಕೆ ಹೋಗುತ್ತಾನೆ. ಜಿಹ್ವೆಯ ಆಕಾರದ ಅರ್ಧ ಗಾವುದ ಹರಡಿದ ತೀಕ್ಷ್ಣ ನೇಗಿಲುಗಳಿಂದ ಅವನಿಗೆ ವಿಶೇಷ ಕಷ್ಟಗಳನ್ನು ಕೊಡಲಾಗುತ್ತದೆ. ತಂದೆ-ತಾಯಿಯರನ್ನು ಮತ್ತು ಗುರುವನ್ನು ಗದರಿಸುವ ಕ್ರೂರ ಮನುಷ್ಯನ ಬಾಯಿಯಲ್ಲಿ ಕ್ರಿಮಿಗಳಿಂದ ಕೂಡಿದ ವಿಷ್ಠೆ (ಮಲ)ಯನ್ನು ತುರುಕಿ ಅವನನ್ನು ತುಂಬಾ ಬಡಿಯಲಾಗುತ್ತದೆ. ಶಿವಮಂದಿರ, ಉದ್ಯಾನ, ಬಾವಿ, ಕೆರೆ, ಸರೋವರ ಹಾಗೂ ಬ್ರಾಹ್ಮಣರ ಸ್ಥಾನಗಳನ್ನು ನಷ್ಟ-ಭ್ರಷ್ಟ ಮಾಡಿ, ಅಲ್ಲಿ ಸ್ವೇಚ್ಛಾನುಸಾರವಾಗಿ ರಮಣ ಮಾಡುವ ಮನುಷ್ಯರು ನಾನಾ ಪ್ರಕಾರದ ಭಯಂಕರವಾದ ಭಟ್ಟಿಯಲ್ಲಿ ಬೇಯಿಸಲಾಗುತ್ತದೆ ಹಾಗೂ ಪ್ರಳಯಕಾಲದವರೆಗೆ ನರಕಾಗ್ನಿಗಳಲ್ಲಿ ಬೇಯುತ್ತಾ ಇರುತ್ತಾರೆ. ಪರಸ್ತ್ರೀಗಾಮಿ ಪುರುಷನಿಗೆ ಅಯಾಯಾ ರೂಪದಿಂದಲೇ ವ್ಯಭಿಚಾರ ಮಾಡಿಸುತ್ತಾ ಹೊಡೆದು - ಬಡಿಯಲಾಗುತ್ತದೆ. ಪುರುಷನು ತನ್ನ ಮೊದಲಿನಂತಹ ಶರೀರವನ್ನು ಧರಿಸಿ ಕಬ್ಬಿಣದಿಂದ ಮಾಡಿದ ತುಂಬಾ ಕಾದ ನಾರಿಯನ್ನು ಗಾಢವಾಗಿ ಆಲಿಂಗಿಸಿ ಎಲ್ಲ ಕಡೆಯಿಂದ ಉರಿಯುತ್ತಾ ಇರುತ್ತಾನೆ. ಅವನು ಆ ದುರಾಚಾರಿಣಿ

* ಇಲ್ಲಿ ಇಪ್ಪತ್ತೆಂಟು ಶ್ರೇಣಿಗಳನ್ನು ಮೊದಲಿಗೆ ಬೇರೆ-ಬೇರೆಯಾಗಿ ವರ್ಣಿಸಿದೆ. ಮತ್ತೆ ಪ್ರತಿಯೊಂದರ ಐದೈದು ನಾಯಕರನ್ನು ಹೇಳಿ ಸರಿಯಾಗಿ ಒಂದು ನೂರ ನಲವತ್ತು ನರಕಗಳ ನಾಮೋಲ್ಲೇಖ ಮಾಡಲಾಗಿದೆ. ಶ್ರೇಣಿಗಳ ಸಂಖ್ಯೆ ಸೇರಿಸಿದರೆ ಒಂದು ನೂರಾ ಅರವತ್ತೆಂಟಾಗುತ್ತವೆ.

ಸ್ತ್ರೀಯನ್ನು ಗಾಢವಾಗಿ ಆಲಿಂಗಿಸುತ್ತಾ, ಅಳುತ್ತಾ ಇರುತ್ತಾನೆ. ಸತ್ಪುರುಷರ ನಿಂದೆಯನ್ನು ಕೇಳುವವನ ಕಿವಿಗಳಲ್ಲಿ ಕಬ್ಬಿಣದ ಅಥವಾ ತಾಮ್ರದ ಕೀಲುಗಳನ್ನು ತುಂಬಾ ಕಾಯಿಸಿ ತುಂಬಲಾಗುತ್ತದೆ. ಇದಲ್ಲದೆ ಸೀಸ ಮತ್ತು ಹಿತ್ತಾಳೆ ಇವನ್ನು ಕರಗಿಸಿ ನೀರಿನಂತೆ ಮಾಡಿ ಅವನ ಕಿವಿಗಳಲ್ಲಿ ಸುರಿಯಲಾಗುತ್ತದೆ. ಮತ್ತೆ ಪದೇ-ಪದೇ ಬಿಸಿಯಾದ ಹಾಲು ಬಹಳ ಕಾಯಿಸಿದ ಎಣ್ಣೆಯನ್ನು ಅವನ ಕಿವಿಗಳಲ್ಲಿ ಹಾಕಲಾಗುತ್ತದೆ. ಪುನಃ ಆ ಕಿವಿಗಳ ಮೇಲೆ ವಜ್ರಲೇಪವನ್ನು ಮಾಡಲಾಗುತ್ತದೆ. ಈ ರೀತಿಯಾಗಿ ಕ್ರಮವಾಗಿ ಅವನ ಕಿವಿಗಳಲ್ಲಿ ಮೇಲೆ ಹೇಳಿದ ವಸ್ತುಗಳನ್ನು ತುಂಬಿ, ಅವನಿಗೆ ನರಕದ ಕಷ್ಟಗಳನ್ನು ಕೊಡಲಾಗುತ್ತದೆ. ಕ್ರಮವಾಗಿ ಎಲ್ಲ ನರಕಗಳಲ್ಲಿ ಇಂತಹ ಕಷ್ಟಗಳು ಪ್ರಾಪ್ತವಾಗುತ್ತವೆ. ಎಲ್ಲ ನರಕಗಳ ಯಾತನೆಗಳು ಬಹಳ ಕಷ್ಟಗಳನ್ನು ಕೊಡುವಂತಹುಗಳು. ತಂದೆ-ತಾಯಿಯರ ಕುರಿತು ಹುಬ್ಬೇರಿಸುವವನ ಅಥವಾ ಅವರ ಕಡೆಗೆ ಉದ್ಧಟತನದಿಂದ ನೋಡುವವನ, ಅಥವಾ ಅವರ ಮೇಲೆ ಕೈಯೆತ್ತುವವನ ಬಾಯನ್ನು ಒಳಗಿನವರೆಗೆ ಕಬ್ಬಿಣದ ಮೊಳೆಗಳಿಂದ ಗಟ್ಟಿಯಾಗಿ ತುಂಬಲಾಗುತ್ತದೆ. ಮರುಳುಗೊಳಿಸಿ ಸ್ತ್ರೀಯರ ಕಡೆಗೆ ರೆಪ್ಪೆ ಮಿಟುಕಿಸದೆ ನೋಡುವ ಮನುಷ್ಯನ ಕಣ್ಣುಗಳಲ್ಲಿ ಬೆಂಕಿಯಂತೆ ಕಾಯಿಸಿದ ಕೆಂಪಾದ ಸೂಜಿಗಳನ್ನು ಚುಚ್ಚಲಾಗುತ್ತದೆ.

ದೇವತೆಗಳಿಗೆ, ಅಗ್ನಿಗೆ, ಗುರುವಿಗೆ, ಬ್ರಾಹ್ಮಣರಿಗೆ ಮೊದಲ ಭಾಗವನ್ನು ನಿವೇದಿಸದೆಯೇ ಭೋಜನ ಮಾಡುವವನ ನಾಲಿಗೆಗೆ ಮತ್ತು ಬಾಯಿಗೆ ಕಬ್ಬಿಣದ ನೂರಾರು ಮೊಳೆಗಳನ್ನು ಕಾಯಿಸಿ ಜಡಿಯಲಾಗುತ್ತದೆ. ಧರ್ಮವನ್ನು ಉಪದೇಶಿಸುವ ಮಹಾತ್ಮಾ, ಕಥಾವಾಚಕ (ಕೀರ್ತನಕಾರನ) ನನ್ನು ನಿಂದಿಸುವವನ, ದೇವತೆ, ಅಗ್ನಿ, ಗುರು ಭಕ್ತರನ್ನು, ಸನಾತನ ಧರ್ಮವನ್ನು ನಿಂದಿಸಿ, ಅಪಹಾಸ್ಯ ಮಾಡುವವನ ಎದೆಗೆ, ಕತ್ತಿಗೆ, ನಾಲಿಗೆಗೆ, ಹಲ್ಲುಗಳ ಸಂದಿಯಲ್ಲಿ, ಕಿರುನಾಲಿಗೆಗೆ, ತುಟಿಗಳಿಗೆ, ಮೂಗಿಗೆ, ತಲೆಗೆ ಹಾಗೂ ಶರೀರದ ಎಲ್ಲ ಸಂದುಗಳಿಗೆ ಬೆಂಕಿಯಂತೆ ಕಾಯಿಸಿದ ತ್ರಿಶೂಲದಂತಿರುವ ಕಬ್ಬಿಣದ ಮೊಳೆಗಳನ್ನು ಮುದ್ಗರದಿಂದ ಜಡಿಯಲಾಗುತ್ತದೆ. ಆಗ ಅವನಿಗೆ ಬಹಳ ಕಷ್ಟವಾಗುತ್ತದೆ. ಬಳಿಕ ಎಲ್ಲ ಗಾಯಗಳಮೇಲೆ ಕಾಯಿಸಿದ ಉಪ್ಪನ್ನು ಚಿಮುಕಿಸುತ್ತಾರೆ. ಅದರಿಂದ ಶರೀರದಲೆಲ್ಲ ಭಾರೀ ಯಾತನೆಗಳಾಗುತ್ತವೆ. ಶಿವ ಮಂದಿರದ ಬಳಿ ಅಥವಾ ಹೂದೋಟದಲ್ಲಿ ಮಲ-ಮೂತ್ರಗಳನ್ನು ತ್ಯಜಿಸುವ ಪಾಪಿಯ ಲಿಂಗ ಮತ್ತು ಅಂಡಕೋಶಗಳನ್ನು ಕಬ್ಬಿಣದ ಮುದ್ಗರಗಳಿಂದ ನುಚ್ಚುನೂರಾಗಿಸಲಾಗುವುದು ಹಾಗೂ ಬೆಂಕಿಯಲ್ಲಿ ಕಾಯಿಸಿದ ಸೂಜಿಗಳನ್ನು ಅದರಲ್ಲಿ ತುಂಬಲಾಗುತ್ತದೆ. ಅದರಿಂದ ಮನಸ್ಸಿಗೆ ಮತ್ತು ಇಂದ್ರಿಯಗಳಿಗೆ ಮಹಾ ದುಃಖವಾಗುತ್ತದೆ. ಧನವಿದ್ದರೂ ತೃಷ್ಣೆಯಕಾರಣ ಅದನ್ನು ದಾನಮಾಡದವರ, ಊಟದ ಸಮಯಕ್ಕೆ ಮನೆಗೆ ಬಂದ ಅತಿಥಿಯನ್ನು ಆದರಿಸದಿರುವವರ ಪಾಪದ ಫಲವಾಗಿ ಅಪವಿತ್ರ ನರಕದಲ್ಲಿ ಬೀಳುವರು.* ನಾಯಿಗಳ ಮತ್ತು ಹಸುಗಳ ಭಾಗವನ್ನು ಅರ್ಥಾತ್ ಬಲಿಯನ್ನು ಕೊಡದೆ ಸ್ವತಃ ತಿನ್ನುವವನ ತೆರೆದ ಬಾಯಿಯಲ್ಲಿ ಎರಡು ಮೊಳೆಗಳನ್ನು ಹೊಡೆಯಲಾಗುತ್ತದೆ. 'ಯಮರಾಜನ ಮಾರ್ಗವನ್ನು ಅನುಸರಿಸುವ ಶ್ಯಾಮ ಮತ್ತು ಶಬಲ (ಕಪ್ಪಾದ ಹಾಗೂ ಬಣ್ಣಬಣ್ಣದ) ಎರಡು ನಾಯಿಗಳಿವೆ, ನಾನು ಅದಕ್ಕೆ ಅನ್ನದ ಭಾಗವನ್ನು ಕೊಡುತ್ತಿದ್ದೇನೆ. ಈ ಬಲಿಯನ್ನು ಸ್ವೀಕರಿಸಿರಿ.' 'ಪಶ್ಚಿಮ, ವಾಯವ್ಯ, ದಕ್ಷಿಣ ಮತ್ತು ನೈಋತ್ಯ ದಿಕ್ಕುಗಳಲ್ಲಿರುವ ಪುಣ್ಯಕರ್ಮಾ ಕಾಗೆಗಳು ನಾನು ಕೊಟ್ಟ ಈ ಬಲಿಯನ್ನು ಸ್ವೀಕರಿಸಲಿ'* ಈ ಅಭಿಪ್ರಾಯದ ಎರಡು ಮಂತ್ರಗಳಿಂದ ಕ್ರಮವಾಗಿ ನಾಯಿಗಳಿಗೆ ಮತ್ತು ಕಾಗೆಗಳಿಗೆ ಬಲಿಯನ್ನು ಕೊಡಬೇಕು. ಪ್ರಯತ್ನಪೂರ್ವಕ ಭಗವಾನ್ ಶಂಕರನನ್ನು ಪೂಜಿಸಿ, ವಿಧಿವತ್ತಾಗಿ ಅಗ್ನಿಯಲ್ಲಿ ಆಹುತಿಯನ್ನು ಕೊಟ್ಟು, ಶಿವಸಂಬಂಧೀ ಮಂತ್ರಗಳಿಂದ ಬಲಿಯನ್ನು ಅರ್ಪಿಸುವವರು ಯಮರಾಜನನ್ನು ನೋಡಲಾರರು ಹಾಗೂ ಸ್ವರ್ಗಕ್ಕೆ ಹೋಗುತ್ತಾರೆ. ಅದಕ್ಕಾಗಿ ಪ್ರತಿದಿನವೂ ಬಲಿಯನ್ನು (ಅನ್ನವನ್ನು) ಕೊಡಬೇಕು.

ಒಂದು ಚೌಕಾಕಾರದ ಮಂಡಲವನ್ನು ರಚಿಸಿ, ಅದನ್ನು ಗಂಧ-ಧೂಪಾದಿಗಳಿಂದ ಅಧಿವಾಸಿತ ಮಾಡಬೇಕು. ಮತ್ತೆ

---

* ಧನೇ ಸತ್ಯಪಿ ಯೇ ದಾನಂ ನ ಪ್ರಯಚ್ಛಂತಿ ತೃಷ್ಣಯಾ ॥ ಅತಿಥಿಂ ಚಾವಮನ್ಯಂತೇ ಕಾಲೇ ಪ್ರಾಪ್ತೇ ಗೃಹಾಶ್ರಮೇ ।
ತಸ್ಮಾತ್ ತೇ ದುಷ್ಕೃತಂ ಪ್ರಾಪ್ಯ ಗಚ್ಛಂತಿ ನಿರಯೇಽಶುಚೌ ॥
(ಶಿ - ಪು - ಉ - ಸಂ - ೧೦/೩೧-೩೨)

* ದ್ವೌ ಶ್ವಾನೌ ಶ್ಯಾಮಶಬಲೌ ಯಮಮಾರ್ಗಾನುರೋಧಕೌ । ಯೌ ತಸ್ತಾಭ್ಯಾಂ ಪ್ರಯಚ್ಛಾಮಿ ತೌ ಗೃಹ್ಣೀತಾಮಿವಂ ಬಲಿಮ್ ॥
ಐಂದ್ರವಾರುಣವಾಯವ್ಯಾ ಯಾಮ್ಯಾ ನೈರ್ಋತ್ಯಕಾಸ್ತಥಾ । ವಾಯಸಾಃ ಪುಣ್ಯಕರ್ಮಾಣಸ್ತೇ ಪ್ರಗೃಹ್ಣಂತು ಮೇ ಬಲಿಮ್ ॥
(ಶಿ - ಪು - ಉ - ಸಂ - ೧೦/೩೫/೩೬)

ಈಶಾನ ಕೋಣದಲ್ಲಿ ಧನ್ವಂತರಿಗಾಗಿ, ಪೂರ್ವದಲ್ಲಿ ಇಂದ್ರನಿಗಾಗಿ ಬಲಿಯನ್ನು ಅರ್ಪಿಸಬೇಕು. ದಕ್ಷಿಣ ದಿಕ್ಕಿನಲ್ಲಿ ಯಮನಿಗಾಗಿ, ಪಶ್ಚಿಮದಲ್ಲಿ ಸುದಕ್ಷೋಮಕ್ಕಾಗಿ ಮತ್ತು ದಕ್ಷಿಣದಲ್ಲಿ ಪಿತೃಗಳಿಗಾಗಿ ಬಲಿಯನ್ನು ಕೊಟ್ಟು ಪುನಃ ಪೂರ್ವ ದಿಕ್ಕಿನಲ್ಲಿ ಅರ್ಯಮಾನಿಗೆ ಅನ್ನದ ಭಾಗವನ್ನು ಅರ್ಪಿಸಬೇಕು. ದ್ವಾರದಲ್ಲಿ ಧಾತಾ ಮತ್ತು ವಿಧಾತಾಗಳಿಗಾಗಿ ಬಲಿಯನ್ನು ನಿವೇದಿಸಬೇಕು. ಅನಂತರ ನಾಯಿಗಳಿಗೆ, ನಾಯಿಗಳ ಒಡೆಯನಿಗೆ ಹಾಗೂ ಪಕ್ಷಿಗಳಿಗಾಗಿ ನೆಲದ ಮೇಲೆ ಅನ್ನವನ್ನು ಹಾಕಬೇಕು. ದೇವತೆಗಳು, ಪಿತೃಗಳು, ಮನುಷ್ಯರು, ಭೂತ, ಪ್ರೇತ, ಗುಹ್ಯಕ, ಪಕ್ಷಿ, ಕ್ರಿಮಿ, ಕೀಟ ಇವರೆಲ್ಲರೂ ಗೃಹಸ್ಥನಿಂದ ತಮ್ಮ ಜೀವನ ನಡೆಸುತ್ತಾರೆ. ಸ್ವಾಹಾಕಾರ, ಸ್ವಧಾಕಾರ, ವಷಟ್‌ಕಾರ ಹಾಗೂ ಹಂತಕಾರ–ಇವು ಧರ್ಮಮಯ ಧೇನುವಿನ ನಾಲ್ಕು ಸ್ತನಗಳಾಗಿವೆ. ಸ್ವಾಹಾಕಾರವೆಂಬ ಸ್ತನವನ್ನು ದೇವತೆಗಳು ಪಾನ ಮಾಡುತ್ತಾರೆ, ಸ್ವಧಾಕಾರವನ್ನು ಪಿತೃಗಳು, ವಷಟ್‌ಕಾರವನ್ನು ಬೇರೆ ಇತರ ದೇವತೆಗಳು ಮತ್ತು ಭೂತೇಶ್ವರ ಹಾಗೂ ಹಂತಕಾರ ಹೆಸರಿನ ಸ್ತನವನ್ನು ಸದಾ ಮನುಷ್ಯರು ಪಾನ ಮಾಡುತ್ತಾರೆ. ಶ್ರದ್ಧೆಯಿಂದ ಈ ಧರ್ಮಮಯ ಧೇನುವನ್ನು ಸದಾ ಸರಿಯಾದ ಸಮಯದಲ್ಲಿ ಪಾಲಿಸುವವನು ಅಗ್ನಿಹೋತ್ರಿಯಾಗುತ್ತಾನೆ. ಸ್ವಸ್ಥವಾಗಿರುವಾಗಲೂ ಅದನ್ನು ತ್ಯಜಿಸುವವರು ಅಂಧಕಾರ ಪೂರ್ಣ ನರಕದಲ್ಲಿ ಮುಳುಗುತ್ತಾರೆ. ಅದಕ್ಕಾಗಿ ಅವರೆಲ್ಲರಿಗೂ ಬಲಿಯನ್ನು ಕೊಟ್ಟು, ಬಾಗಿಲಲ್ಲಿ ಕ್ಷಣಕಾಲ ನಿಂತು ಅತಿಥಿಯ ಪ್ರತೀಕ್ಷೆ ಮಾಡಬೇಕು. ಯಾರಾದರು ಹಸಿವೆಯಿಂದ ಪೀಡಿತ ಅತಿಥಿ ಅಥವಾ ಅದೇ ಊರಿನ ನಿವಾಸಿಯು ಸಿಕ್ಕಿದರೆ, ಅವನಿಗೆ ತನ್ನ ಭೋಜನದ ಮೊದಲು ಶಕ್ತ್ಯಾನುಸಾರ ಅನ್ನವನ್ನು ಕೊಡಬೇಕು. ಯಾವನ ಮನೆಯಿಂದ ಅತಿಥಿಯು ನಿರಾಶನಾಗಿ ಮರಳುವನೋ ಅವನು ತನ್ನ ಪಾಪವನ್ನು ಕೊಟ್ಟು ಬದಲಿಗೆ ಅವನ ಪುಣ್ಯವನ್ನು ಕೊಂಡುಹೋಗುವನು.*

(ಅಧ್ಯಾಯ ೯-೧೦)

❐ ❐ ❐

ಯಮಲೋಕದ ಮಾರ್ಗದಲ್ಲಿ ಅನುಕೂಲತೆಯನ್ನು ಒದಗಿಸುವಂತಹ ವಿವಿಧ ದಾನಗಳ ವರ್ಣನೆ

ವ್ಯಾಸರು ಕೇಳಿದರು – ಸ್ವಾಮಿ ! ಪಾಪೀ ಮನುಷ್ಯರು ಬಹಳ ದುಃಖದಿಂದ ಯಮಲೋಕದ ದಾರಿಯಿಂದ ಹೋಗುತ್ತಾರೆ. ಇನ್ನು ನೀವು ಜೀವನು ಸುಖವಾಗಿ ಯಮಮಾರ್ಗದಲ್ಲಿ ಪ್ರಯಾಣಿಸಲು ಅನುಕೂಲವಾಗುವ ಧರ್ಮವನ್ನು ನಮಗೆ ಪರಿಚಯಿಸಿರಿ.

ಸನತ್ಕುಮಾರರು ಹೇಳುತ್ತಾರೆ – ಮುನಿಗಳೇ ! ತಾನು ಮಾಡಿದ ಶುಭಾಶುಭ ಕರ್ಮಗಳ ಕುರಿತು ವಿಚಾರಮಾಡದೆ ವಿವಶರಾಗಿ ಅನುಭವಿಸಬೇಕಾಗುತ್ತದೆ. ಈಗ ಸುಖವನ್ನು ಕೊಡುವಂತಹ ಧರ್ಮಗಳನ್ನು ನಾನು ವರ್ಣಿಸುವೆನು. ಈ ಲೋಕದಲ್ಲಿ ಶ್ರೇಷ್ಠ ಕರ್ಮಗಳನ್ನು ಮಾಡುವ ಕೋಮಲ ಚಿತ್ತ ದಯಾಳು ಪುರುಷರು ಭಯಂಕರ ಯಮ ಮಾರ್ಗದಲ್ಲಿ ಸುಖವಾಗಿ ಪ್ರಯಾಣಿಸುತ್ತಾರೆ. ಶ್ರೇಷ್ಠ ಬ್ರಾಹ್ಮಣರಿಗೆ ಪಾದರಕ್ಷೆ, ಏಡಾವುಗಳನ್ನು ದಾನ ಮಾಡುವ ಮನುಷ್ಯನು ಕುದುರೆಯನ್ನು ಹತ್ತಿ ಬಹಳ ಸುಖವಾಗಿ ಯಮಲೋಕಕ್ಕೆ ಹೋಗುತ್ತಾನೆ. ಛತ್ರಿಯನ್ನು ದಾನಮಾಡುವುದರಿಂದ ಮನುಷ್ಯನು ಆ ಮಾರ್ಗದಲ್ಲಿ ಕೊಡೆ ಬಿಡಿಸಿಕೊಂಡು ಹೋಗುತ್ತಾನೆ. ಪಲ್ಲಕ್ಕಿಯನ್ನು ದಾನ ಮಾಡುವುದರಿಂದ ರಥದ ಮೂಲಕ ಪ್ರಯಾಣಿಸುವನು. ಶಯ್ಯೆ ಮತ್ತು ಆಸನವನ್ನು ದಾನ ಮಾಡುವುದರಿಂದ ದಾತನು ಯಮಲೋಕದ ಮಾರ್ಗದಲ್ಲಿ ವಿಶ್ರಾಂತಿ ಪಡೆಯುತ್ತಾ ಸುಖವಾಗಿ ಹೋಗುತ್ತಾನೆ. ಹೂದೋಟವನ್ನು ರಚಿಸುವವರು, ನೆರಳುಳ್ಳ ಮರಗಳನ್ನು ನೆಡುವವರು, ಅಥವಾ ದಾರಿ ಬದಿಯಲ್ಲಿ ಸಾಲು ಮರಗಳನ್ನು ನೆಡುವವರು, ಬಿಸಿಲಲ್ಲಿಯೂ ಕೂಡ ಕಷ್ಟವಿಲ್ಲದೆ ಯಮಲೋಕಕ್ಕೆ ಹೋಗುವರು, ಅವರು ಪುಷ್ಪಕ ವಿಮಾನದಲ್ಲಿ ಪ್ರಯಾಣಿಸುವರು. ದೇವಮಂದಿರವನ್ನು ರಚಿಸುವವನು. ಆ ಮಾರ್ಗದಲ್ಲಿ ಮನೆಯೊಳಗೆ ಕ್ರೀಡಿಸುವಂತೆ ಆನಂದವಾಗಿರುತ್ತಾನೆ. ಯತಿಗಳಿಗೆ ಆಶ್ರಮವನ್ನು ನಿರ್ಮಿಸಿ ಕೊಡುವವರು, ಅನಾಥರಿಗೆ ಮನೆಗಳನ್ನು ಕಟ್ಟಿಕೊಡುವವರು. ಮನೆಯೊಳಗೆ ಕ್ರೀಡಿಸುತ್ತಿರುತ್ತಾರೆ. ದೇವತೆ, ಅಗ್ನಿ, ಗುರು, ಬ್ರಾಹ್ಮಣ, ತಂದೆ – ತಾಯಿ – ಇವರನ್ನು ಪೂಜಿಸುವ ಮನುಷ್ಯರು ಸ್ವತಃ ಪೂಜಿತರಾಗಿ ತನ್ನ ಇಚ್ಛೆಗನುಕೂಲ ಮಾರ್ಗದ ಮೂಲಕ ಸುಖವಾಗಿ ಪ್ರಯಾಣಿಸುತ್ತಾರೆ. ದೀಪದಾನ ಮಾಡುವವರು ಎಲ್ಲ ದಿಕ್ಕುಗಳನ್ನು ಬೆಳಗುತ್ತಾ ಹೋಗುತ್ತಾರೆ. ಗೃಹವನ್ನು ದಾನ ಮಾಡಿದವರು ರೋಗ-ಶೋಕಗಳಿಂದ ರಹಿತರಾಗಿ ಸುಖವಾಗಿ ಹೋಗುತ್ತಾರೆ. ಗುರು-ಹಿರಿಯರನ್ನು ಸೇವೆ ಮಾಡಿದವರು ವಿಶ್ರಾಂತಿ ಪಡೆಯುತ್ತಾ ಹೋಗುತ್ತಾರೆ. ವಾದ್ಯಗಳನ್ನು ದಾನ ಮಾಡುವವರು ತನ್ನ ಮನೆಗೆ ಹೋಗುವಂತೆ

---

* ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪತ್ತಿ ನಿವರ್ತತೇ । ಸ ತಸ್ಮೈ ದುಷ್ಕೃತಂ ದತ್ತ್ವಾ ಪುಣ್ಯಮಾದಾಯ ಗಚ್ಛತಿ ॥
(ಶಿ -ಪು - ಉ - ಸಂ - ೧೦/೪೮)

ಸುಖವಾಗಿ ಪ್ರಯಾಣಿಸುವರು, ಗೋದಾನ ಮಾಡುವವರು ಸಮಸ್ತ ಮನೋವಾಂಛಿತ ವಸ್ತುಗಳಿಂದ ತುಂಬಿದ ದಾರಿಯಾಗಿ ಹೋಗುತ್ತಾರೆ. ಈ ಲೋಕದಲ್ಲಿ ಕೊಟ್ಟಿರುವ ಅನ್ನ- ಪಾನಾದಿಗಳು ಅವನಿಗೆ ಆ ಮಾರ್ಗದಲ್ಲಿ ದೊರೆಯುವುದು. ಯಾರಿಗಾದರೂ ಕಾಲು ತೊಳೆಯಲು ನೀರು ಕೊಟ್ಟರೆ ಅವನು ನೀರಿನ ವ್ಯವಸ್ಥೆ ಇರುವ ಮಾರ್ಗದಿಂದ ಹೋಗುತ್ತಾನೆ. ಆದರಣೀಯ ಪುರುಷರ ಕಾಲುಗಳಿಗೆ ಗಂಧಾದಿಗಳನ್ನು ಹಚ್ಚುವನು ಕುದುರೆಯ ಮೇಲೆ ಪ್ರಯಾಣಿಸುವನು.

ವ್ಯಾಸರೇ ! ಪಾದ್ಯ, ಅಭ್ಯಂಗ (ಅಂಗರಾಗ), ದೀಪ, ಅನ್ನ ಮನೆ, ಇವುಗಳನ್ನು ದಾನ ಮಾಡುವವನ ಬಳಿಗೆ ಯಮರಾಜನು ಎಂದೂ ಬರುವುದಿಲ್ಲ. ಸುವರ್ಣ ಮತ್ತು ರತ್ನಗಳನ್ನು ದಾನ ಮಾಡುವವನು ದುರ್ಗಮ ಸಂಕಟಗಳನ್ನು ಮತ್ತು ಸ್ಥಾನಗಳನ್ನು ನೆಗೆಯುತ್ತಾ ಹೋಗುವನು. ಬೆಳ್ಳಿ , ಗಾಡಿ ಎಳೆಯುವ ಎತ್ತುಗಳನ್ನು, ಹೂವಿನ ಮಾಲೆಯನ್ನು ದಾನ ಮಾಡುವುದರಿಂದ ದಾತನು ಸುಖವಾಗಿ ಯಮಲೋಕಕ್ಕೆ ಪ್ರಯಾಣಿಸುವನು ಹಾಗೂ ಸ್ವರ್ಗದಲ್ಲಿ ಬಗೆ-ಬಗೆಯ ಭೋಗಗಳನ್ನು ಪಡೆಯುತ್ತಾನೆ. ಎಲ್ಲ ದಾನಗಳಲ್ಲಿ ಅನ್ನದಾನವನ್ನೇ ಪರಮೋತ್ತಮವೆಂದು ಹೇಳಲಾಗಿದೆ. ಏಕೆಂದರೆ, ಇದು ತತ್ಕಾಲದಲ್ಲಿ ತೃಪ್ತಿಯನ್ನು ಕೊಡುವುದು, ಮನಸ್ಸಿಗೆ ಪ್ರಿಯವಾಗುತ್ತದೆ, ಬಲ ಮತ್ತು ಬುದ್ಧಿಯನ್ನು ಬೆಳೆಸುತ್ತದೆ. ಮುನಿಶ್ರೇಷ್ಠರೇ ! ಅನ್ನದಾನಕ್ಕೆ ಸಮಾನವಾದ ಇನ್ನೊಂದು ದಾನವಿಲ್ಲ. ಏಕೆಂದರೆ, ಅನ್ನದಿಂದಲೇ ಪ್ರಾಣಿಗಳು ಉತ್ಪನ್ನರಾಗುತ್ತಾರೆ ಮತ್ತು ಅನ್ನದ ಅಭಾವದಲ್ಲಿ ಸತ್ತು ಹೋಗುತ್ತಾರೆ. ಆದ್ದರಿಂದ ಅನ್ನದಾನದಿಂದ ಮಹಾಪುಣ್ಯವನ್ನು ಹೇಳಲಾಗಿದೆ. ಏಕೆಂದರೆ, ಅನ್ನವಿಲ್ಲದೆ ಹಸಿವೆಯ ಬೇಗೆಯಿಂದ ಬೆಂದಿರುವ ಸಮಸ್ತ ಪ್ರಾಣಿಗಳು ಸತ್ತು ಹೋಗುತ್ತಾರೆ. ಆದ್ದರಿಂದ ಅನ್ನವನ್ನೇ ಎಲ್ಲ ಜನರು ಪ್ರಶಂಸಿಸುತ್ತಾರೆ. ಏಕೆಂದರೆ, ಅನ್ನದಲ್ಲೇ ಎಲ್ಲವೂ ಪ್ರತಿಷ್ಠಿತವಾಗಿದೆ. ಅನ್ನದಾನಕ್ಕೆ ಸಮಾನವಾದ ದಾನವು ಹಿಂದೆ ಇರಲಿಲ್ಲ ಮುಂದೆ ಇರಲಾರದು. ಮುನಿಯೇ ! ಈ ಸಮಸ್ತ ಜಗತ್ತು ಅನ್ನದಿಂದಲೇ ನಿಂತಿದೆ. ಲೋಕದಲ್ಲಿ ಅನ್ನವನ್ನು ಬಲಕಾರಕವೆಂದು ಹೇಳಲಾಗಿದೆ. ಏಕೆಂದರೆ, ಅನ್ನದಲ್ಲೇ ಪ್ರಾಣವು ಪ್ರತಿಷ್ಠಿತವಾಗಿದೆ.*

ದೊರಕಿದ ಅನ್ನವನ್ನು ಎಂದೂ ನಿಂದಿಸಬಾರದು. ಯಾವ ರೀತಿಯಿಂದಲೂ ಎಸೆಯಬಾರದು. ಚಾಂಡಾಲರಿಗೆ, ನಾಯಿಗಳಿಗೆ ನೀಡಿದ ಅನ್ನದಾನವು ಎಂದೂ ನಾಶವಾಗುವುದಿಲ್ಲ. ಬಳಲಿ ಬೆಂಡಾದ ಮತ್ತು ಅಪರಿಚಿತ ದಾರಿಹೋಕರಿಗೆ ಅನ್ನ ಕೊಡುವವನು ಹಾಗೂ ಕೊಡುವಾಗ ಕಷ್ಟವನ್ನು ಅನುಭವಿಸುವುದಿಲ್ಲವೋ ಅವನು ಸಮೃದ್ಧಿಗೆ ಭಾಗಿಯಾಗುತ್ತಾನೆ. ಮಹಾಮುನಿಯೇ ! ದೇವತೆಗಳನ್ನು, ಪಿತೃಗಳನ್ನು, ಬ್ರಾಹ್ಮಣರನ್ನು, ಅತಿಥಿಗಳನ್ನು ಅನ್ನದಿಂದ ತೃಪ್ತಿಪಡಿಸುವವನಿಗೆ ಮಹಾನ್ ಪುಣ್ಯಫಲದ ಪ್ರಾಪ್ತಿಯಾಗುತ್ತದೆ. ಅನ್ನ ಮತ್ತು ನೀರಿನ ದಾನವು ಶೂದ್ರ ಮತ್ತು ಬ್ರಾಹ್ಮಣರಿಗೆ ಸಮಾನವಾದ ಮಹತ್ವವಿರಿಸುತ್ತದೆ. ಅನ್ನವನ್ನು ಬಯಸುವವನ ಬಳಿ ಅವನ ಗೋತ್ರ, ಶಾಖೆ, ಸ್ವಾಧ್ಯಾಯ, ದೇಶ ಇವುಗಳನ್ನು ಕೇಳಬಾರದು.

ಅನ್ನವು ಸಾಕ್ಷಾತ್ ಬ್ರಹ್ಮವಾಗಿದೆ. ಅನ್ನವು ಸಾಕ್ಷಾತ್ ವಿಷ್ಣು ಹಾಗೂ ಶಿವನಾಗಿರುವುದು. ಅದಕ್ಕಾಗಿ ಅನ್ನಕ್ಕೆ ಸಮಾನ ದಾನ ಹಿಂದೆ ಆಗಲಿಲ್ಲ ಮುಂದೆ ಆಗಲಾರದು. ಮೊದಲು ದೊಡ್ಡ ಪಾಪಿಯಾಗಿದ್ದರೂ ಅನಂತರ ಅನ್ನದಾನಮಾಡುವವನು ಎಲ್ಲ ಪಾಪಗಳಿಂದ ಮುಕ್ತನಾಗಿ ಸ್ವರ್ಗಕ್ಕೆ ಹೋಗುತ್ತಾನೆ. ಅನ್ನ, ಜಲ, ಕುದುರೆ, ಗೋವು, ವಸ್ತ್ರ, ಶಯ್ಯೆ, ಛತ್ರ, ಆಸನ - ಈ ಎಂಟು ವಸ್ತುಗಳ ದಾನವು ಯಮಲೋಕಕ್ಕಾಗಿ ಉತ್ತಮವೆಂದು ತಿಳಿಯಲಾಗಿದೆ. ಈ ಪ್ರಕಾರ ದಾನ ವಿಶೇಷತೆಯಿಂದ ಮನುಷ್ಯರು ವಿಮಾನದಲ್ಲಿ ಕುಳಿತು ಧರ್ಮರಾಜನ ನಗರಕ್ಕೆ ಹೋಗುತ್ತಾರೆ. ಅದಕ್ಕಾಗಿ ಎಲ್ಲರೂ ದಾನ ಮಾಡಬೇಕು. ಮಹಾಮುನಿಯೇ ! ಈ ಪ್ರಸಂಗವನ್ನು ಕೇಳುವ ಅಥವಾ ಶ್ರಾದ್ಧದಲ್ಲಿ ಪಠಿಸುವವನ ಪಿತೃಗಳಿಗೆ ಅಕ್ಷಯ ಅನ್ನದಾನವು ಲಭಿಸುವುದು.

(ಅಧ್ಯಾಯ ೧೧)

❐ ❐ ❐

*ಸರ್ವೇಷಾಮೇವ ದಾನಾನಾಮನ್ನದಾನಂ ಪರಂ ಸ್ಮೃತಮ್ । ಸದ್ಯಃ ಪ್ರೀತಿಕರಂ ಹ್ಯದ್ಯಂ ಬಲಬುದ್ಧಿವಿವರ್ಧನಮ್ ॥ ನಾನ್ನದಾನಸಮಂ ದಾನಂ ವಿದ್ಯತೇ ಮುನಿಸತ್ತಮ । ಅನ್ನಾದ್ಭವಂತಿ ಭೂತಾನಿ ತದಭಾವೇ ಮ್ರಿಯಂತಿ ಚ ॥ಅತಏವ ಮಹತ್ಪುಣ್ಯಮನ್ನದಾನೇ ಪ್ರಕೀರ್ತಿತಮ್ । ತಥಾ ಕ್ಷುಧಾಗ್ನಿನಾ ತಪ್ತಾ ಮ್ರಿಯಂತೇ ಸರ್ವದೇಹಿನಃ ॥ ಅನ್ನಮೇವ ಪ್ರಶಂಸಂತಿ ಸರ್ವಮನ್ನೇ ಪ್ರತಿಷ್ಠಿತಮ್ । ಅನ್ನೇನ ಸದೃಶಂ ದಾನಂ ನ ಭೂತಂ ನ ಭವಿಷ್ಯತಿ ॥ ಅನ್ನೇನ ಧಾರ್ಯತೇ ಸರ್ವಂ ವಿಶ್ವಂ ಜಗದಿದಂ ಮುನೇ । ಅನ್ನಮೂರ್ಜಸ್ಕರಂ ಲೋಕೇ ಪ್ರಾಣಾ ಹ್ಯನ್ನೇ ಪ್ರತಿಷ್ಠಿತಾಃ ॥

(ಶ್ರೀ - ಪು - ಉ - ಸಂ - ೧೧/೧೭-೧೮, ೨೪, ೨೯-೩೦)

ಜಲದಾನ, ಜಲಾಶಯದ ನಿರ್ಮಾಣ, ವೃಕ್ಷಾರೋಪಣ, ಸತ್ಯಭಾಷಣ ಮತ್ತು ತಪಸ್ಸಿನ ಮಹಿಮೆ

ಸನತ್ಕುಮಾರರು ಹೇಳುತ್ತಾರೆ – ವ್ಯಾಸ ಮುನಿಗಳೇ ! ಜಲದಾನವು ಎಲ್ಲಕ್ಕಿಂತ ಶ್ರೇಷ್ಠವಾಗಿದೆ. ಅದು ಎಲ್ಲ ದಾನಗಳಲ್ಲಿ ಸದಾ ಉತ್ತಮವಾಗಿದೆ. ಏಕೆಂದರೆ, ಜಲವು ಎಲ್ಲ ಜೀವಸಮುದಾಯಕ್ಕೆ ತೃಪ್ತಿಗೊಳಿಸುವ ಜೀವನ ಎಂದು ಹೇಳಲಾಗಿದೆ.* ಅದಕ್ಕಾಗಿ ತುಂಬು ಸ್ನೇಹದಿಂದ ಅನಿವಾರ್ಯವಾಗಿ ಅರವಟ್ಟಿಗೆಯನ್ನಿಟ್ಟು ಇತರರಿಗೆ ನೀರು ಕುಡಿಸಬೇಕು. ಜಲಾಶಯದ ನಿರ್ಮಾಣವು ಈ ಲೋಕ ಮತ್ತು ಪರಲೋಕದಲ್ಲಿಯೂ ಮಹಾ ಆನಂದದ ಪ್ರಾಪ್ತಿಮಾಡಿಸುವುದಾಗಿದೆ. ಇದು ತ್ರಿವಾರ ಸತ್ಯವಾಗಿದೆ. ಇದರಲ್ಲಿ ಸಂಶಯವೇ ಇಲ್ಲ. ಅದಕ್ಕಾಗಿ ಮನುಷ್ಯರು ಬಾವಿ, ಕೆರೆಗಳನ್ನು ನಿರ್ಮಿಸಬೇಕು. ಬಾವಿಯಲ್ಲಿ ನೀರು ಬಂದಾಗ ಪಾಪೀ ಪುರುಷರ ಪಾಪಕರ್ಮದ ಅರ್ಧಭಾಗವು ಕಳೆದು ಬಿಡುತ್ತದೆ. ಸತ್ಕರ್ಮದಲ್ಲಿ ತೊಡಗಿರುವ ಮನುಷ್ಯರ ಸಮಸ್ತ ಪಾಪಗಳನ್ನು ಪರಿಹರಿಸುತ್ತದೆ.

ಆಗೆಸಿದ ಜಲಾಶಯದಲ್ಲಿ ಗೋವು, ಬ್ರಾಹ್ಮಣರು, ಸಾಧುಸತ್ಪುರುಷರು ಸದಾ ನೀರು ಕುಡಿಯುತ್ತಾರಾದರೆ ಅವನು ತನ್ನ ಇಡೀ ವಂಶವನ್ನೇ ಉದ್ಧರಿಸಿ ಬಿಡುತ್ತಾನೆ. ಯಾರ ಜಲಾಶಯದಲ್ಲಿ ಬೇಸಿಗೆಯಲ್ಲಿಯೂ ನೀರು ಆರುವುದಿಲ್ಲವೋ ಅವನು ಎಂದಿಗೂ ದುರ್ಗಮ ಹಾಗೂ ವಿಷಮ ಸಂಕಟದಲ್ಲಿ ಬೀಳುವುದಿಲ್ಲ. ಯಾರ ಕೊಳದಲ್ಲಿ ಕೇವಲ ಮಳೆಗಾಲದಲ್ಲೇ ನೀರು ಇರುವುದೋ, ಅವನಿಗೆ ಪ್ರತಿದಿನ ಅಗ್ನಿಹೋತ್ರ ಮಾಡಿದ ಫಲವು ದೊರೆಯುತ್ತದೆ – ಎಂಬುದು ಬ್ರಹ್ಮದೇವರ ಮಾತಾಗಿದೆ. ಯಾರ ಕೆರೆಯಲ್ಲಿ ಶರತ್ಕಾಲದವರೆಗೆ ನೀರು ನಿಂತರೆ, ಅವನಿಗೆ ಸಾವಿರ ಗೋದಾನದ ಫಲವು ಸಿಗುವುದು – ಇದರಲ್ಲಿ ಸಂಶಯವೇ ಇಲ್ಲ. ಯಾರ ಕೆರೆಯಲ್ಲಿ ಹೇಮಂತ-ಶಿಶಿರದವರೆಗೆ ನೀರು ಇದ್ದರೆ, ಅವನು ಬಹಳಷ್ಟು ಸುವರ್ಣ ಮುದ್ರೆಗಳ ದಕ್ಷಿಣೆಯಿಂದ ಕೂಡಿದ ಯಜ್ಞದ ಫಲವನ್ನು ಹೊಂದುವನು. ಯಾರ ಸರೋವರದಲ್ಲಿ ವಸಂತ ಮತ್ತು ಗ್ರೀಷ್ಮಕಾಲದವರೆಗೆ ನೀರು ಉಳಿಯುವುದಾದರೆ ಅವನಿಗೆ ಅತಿರಾತ್ರ ಮತ್ತು ಅಶ್ವಮೇಧ ಯಜ್ಞಗಳ ಫಲವು ಸಿಗುವುದು. ಹೀಗೆ ಜ್ಞಾನಿಗಳಾದ ಮಹಾತ್ಮರ ವಚನವಾಗಿದೆ.

ಮುನಿವರ್ಯ ವ್ಯಾಸರೇ ! ಜೀವಿಗಳಿಗೆ ತೃಪ್ತಿಯನ್ನು ಕೊಡುವ ಜಲಾಶಯದ ನಿರ್ಮಾಣದ ಫಲವನ್ನು ವರ್ಣಿಸಲಾಯಿತು. ಇನ್ನು ಮರಗಳನ್ನು ನೆಡುವುದರಲ್ಲಿರುವ ಗುಣ, ಫಲವನ್ನು ವರ್ಣಿಸುವೆನು; ಕೇಳಿರಿ. ಯಾರು ಬರಡಾದ ಭೂಮಿಯಲ್ಲಿ, ದುರ್ಗಮ ಸ್ಥಾನಗಳಲ್ಲಿ ಮರಗಳನ್ನು ನೆಡುವನೋ, ಅವನು ತನ್ನ ಕಳೆದು ಹೋದ ಹಾಗೂ ಮುಂದೆ ಆಗುವ ತಲೆಮಾರುಗಳನ್ನು ಉದ್ಧರಿಸಿಬಿಡುವನು. ಅದಕ್ಕಾಗಿ ಅವಶ್ಯವಾಗಿ ವೃಕ್ಷಗಳನ್ನು ಬೆಳೆಸಬೇಕು.* ಇವು ವೃಕ್ಷಗಳನ್ನು ಬೆಳೆಸುವವನ ಪುತ್ರರಾಗುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ. ಮರಗಳನ್ನು ನೆಡುವ ಮನುಷ್ಯರು ಪರಲೋಕಕ್ಕೆ ಹೋದಾಗ ಅಕ್ಷಯ ಲೋಕಗಳನ್ನು ಪಡೆಯುತ್ತಾರೆ. ಕೊಳವನ್ನು ಅಗೆಸುವ, ವೃಕ್ಷಗಳನ್ನು ನೆಡುವ, ಯಜ್ಞಮಾಡುವ ದ್ವಿಜರು ಹಾಗೂ ಇತರ ಸತ್ಯವಾದಿ ಪುರುಷರು ಸ್ವರ್ಗದಿಂದ ಎಂದೂ ಪತನರಾಗುವುದಿಲ್ಲ.

ಸತ್ಯವೇ ಪರಬ್ರಹ್ಮವಾಗಿದೆ, ಸತ್ಯವೇ ಪರಮ ತಪಸ್ಸಾಗಿದೆ, ಸತ್ಯವೇ ಶ್ರೇಷ್ಠಯಜ್ಞವಾಗಿದೆ. ಸತ್ಯವೇ ಪರಮೋತ್ತಮ ಶಾಸ್ತ್ರಜ್ಞಾನವಾಗಿದೆ. ಮಲಗಿರುವ ಪುರುಷನಲ್ಲಿ ಸತ್ಯವೇ ಎಚ್ಚರವಾಗಿರುತ್ತದೆ. ಸತ್ಯವೇ ಪರಮಪದವಾಗಿದ್ದು ಸತ್ಯದಿಂದಲೇ ಪೃಥಿವಿಯು ನಿಂತಿದೆ. ಸತ್ಯದಲ್ಲೇ ಎಲ್ಲವೂ ಪ್ರತಿಷ್ಠಿತವಾಗಿದೆ. ತಪಸ್ಸು, ಯಜ್ಞ, ಪುಣ್ಯ, ದೇವತೆ, ಋಷಿ, ಪಿತೃಗಳ ಪೂಜೆ, ಜಲ, ವಿದ್ಯೆ – ಇವೆಲ್ಲವೂ ಸತ್ಯವನ್ನೇ ಅವಲಂಬಿಸಿವೆ. ಎಲ್ಲರ ಆಧಾರ ಸತ್ಯವೇ ಆಗಿದೆ. ಸತ್ಯವೇ ಯಜ್ಞ, ತಪಸ್ಸು, ದಾನ, ಮಂತ್ರ, ಸರಸ್ವತಿದೇವೀ ಹಾಗೂ ಬ್ರಹ್ಮಚರ್ಯವಾಗಿದೆ. ಓಂಕಾರವೂ ಸತ್ಯರೂಪವೇ ಆಗಿದೆ. ಸತ್ಯದಿಂದಲೇ ಗಾಳಿ ಬೀಸುತ್ತಿದೆ, ಸತ್ಯದಿಂದಲೇ ಸೂರ್ಯನು ಬೆಳಗುತ್ತಾನೆ, ಸತ್ಯದಿಂದಲೇ ಬೆಂಕಿಯು ಉರಿಯುತ್ತದೆ ಹಾಗೂ ಸತ್ಯದಿಂದಲೇ ಸ್ವರ್ಗವು ನೆಲೆನಿಂತಿದೆ. ಲೋಕದಲ್ಲಿ ಸಮಸ್ತ ವೇದಗಳ ಪಾಲನೆ ಹಾಗೂ ಸಂಪೂರ್ಣ ತೀರ್ಥಗಳ ಸ್ನಾನ ಕೇವಲ ಸತ್ಯದಿಂದಲೇ ಸುಲಭವಾಗುತ್ತದೆ.

---

* ಪಾನೀಯದಾನಂ ಪರಮಂ ದಾನಾನಾಮುತ್ತಮಂ ತದಾ । ಸರ್ವೇಷಾಂ ಜೀವ ಪುಂಜಾನಾಂ ತರ್ಪಣಂ ಜೀವನಂ ಸ್ಮೃತಮ್।
(ಶಿ – ಪು – ಉ– ಸಂ – ೧೨/೧)

* ಅತೀತಾನಾಗತಾನ್ ಸರ್ವಾನ್ ಪಿತೃವಂಶಾಂಸ್ತು ತಾರಯೇತ್ । ಕಾಂತಾರೇ ವೃಕ್ಷರೋಪೀ ಯಸ್ತಸ್ಮಾದ್ ವೃಕ್ಷಾಂಸ್ತು ರೋಪಯೇತ್ ॥
(ಶಿ – ಪು – ಉ – ಸಂ – ೧೨/೧೭)

ಸತ್ಯದಿಂದಲೇ ಎಲ್ಲವೂ ಪ್ರಾಪ್ತವಾಗುತ್ತದೆ, ಇದರಲ್ಲಿ ಸಂಶಯವೇ ಇಲ್ಲ. ಒಂದು ಸಾವಿರ ಅಶ್ವಮೇಧಗಳನ್ನು ಮತ್ತು ಲಕ್ಷಾವಧಿ ಯಜ್ಞಗಳನ್ನು ತಕ್ಕಡಿಯಲ್ಲಿ ಒಂದೆಡೆ ಇಟ್ಟು, ಇನ್ನೊಂದೆಡೆ ಸತ್ಯವಿರಿಸಿದರೆ ಸತ್ಯವೇ ಭಾರವಾಗುವುದು. ದೇವತೆಗಳು ಪಿತೃಗಳು, ಮನುಷ್ಯರು, ನಾಗ, ರಾಕ್ಷಸ ಹಾಗೂ ಚರಾಚರ ಪ್ರಾಣಿಗಳಸಹಿತ ಸಮಸ್ತ ಲೋಕಗಳು ಸತ್ಯದಿಂದಲೇ ಸಂತೋಷಗೊಳ್ಳುವವು. ಸತ್ಯವನ್ನೇ ಪರಮ ಧರ್ಮವೆಂದು ಹೇಳಲಾಗಿದೆ. ಸತ್ಯವನ್ನೇ ಪರಮಪದವೆಂದು ಹೇಳಲಾಗಿದೆ ಮತ್ತು ಸತ್ಯವನ್ನೇ ಪರಬ್ರಹ್ಮ ಪರಮಾತ್ಮಾ ಎಂದು ಹೇಳಲಾಗಿದೆ. ಅದಕ್ಕಾಗಿ ಸದಾ ಸತ್ಯವನ್ನೇ ಹೇಳಬೇಕು.ಈ ಸತ್ಯಪರಾಯಣ ಮುನಿಗಳು ಅತ್ಯಂತ ದುಷ್ಕರ ತಪಸ್ಸು ಮಾಡಿ ಸ್ವರ್ಗವನ್ನು ಪಡೆದಿರುವರು. ಸತ್ಯಧರ್ಮದಲ್ಲಿ ಅನುರಕ್ತರಾದ ಸಿದ್ಧ ಪುರುಷರೂ ಕೂಡ ಸತ್ಯದಿಂದಲೇ ಸ್ವರ್ಗದ ನಿವಾಸಿಗಳಾಗಿದ್ದಾರೆ. ಆದ್ದರಿಂದ ಸದಾ ಸತ್ಯವನ್ನೇ ಮಾತನಾಡಬೇಕು. ಸತ್ಯಕ್ಕಿಂತ ಮಿಗಿಲಾದ ಬೇರೆ ಯಾವುದೇ ಧರ್ಮವಿಲ್ಲ. ಸತ್ಯರೂಪೀ ತೀರ್ಥವು ಅಗಾಧ, ವಿಶಾಲ, ಸಿದ್ಧ ಹಾಗೂ ಪವಿತ್ರ ಜಲಾಶಯವಾಗಿದೆ. ಅದರಲ್ಲಿ ಯೋಗಯುಕ್ತನಾಗಿ ಮನಸ್ಸಿನ ಮೂಲಕ ಸ್ನಾನ ಮಾಡಬೇಕು. ಸತ್ಯವನ್ನು ಪರಮಪದವೆಂದು ಹೇಳಲಾಗಿದೆ. ಯಾವ ಮನುಷ್ಯರು ತನಗಾಗಿ, ಬೇರೆಯವರಿಗಾಗಿ, ಅಥವಾ ತನ್ನ ಮಗನಿಗಾಗಿಯಾದರೂ ಸುಳ್ಳು ಹೇಳುವುದಿಲ್ಲವೋ, ಅವರೇ ಸ್ವರ್ಗಗಾಮಿಯಾಗುತ್ತಾರೆ. ವೇದ, ಯಜ್ಞ ಹಾಗೂ ಮಂತ್ರ - ಇವು ಬ್ರಾಹ್ಮಣನಲ್ಲಿ ಸದಾ ವಾಸಿಸುತ್ತವೆ. ಆದರೆ ಅಸತ್ಯವಾದೀ ಬ್ರಾಹ್ಮಣರಲ್ಲಿ ಇವುಗಳು ಕಂಡು ಬರುವುದಿಲ್ಲ. ಆದ್ದರಿಂದ ಸದಾ ಸತ್ಯವನ್ನೇ ಮಾತನಾಡಬೇಕು.

ಅನಂತರ ತಪಸ್ಸಿನ ಭಾರೀ ಮಹಿಮೆಯನ್ನು ತಿಳಿಸುತ್ತಾ ಸನತ್ಕುಮಾರರು ಹೇಳುತ್ತಾರೆ - ಮುನಿಗಳೇ ! ಪ್ರಪಂಚದಲ್ಲಿ ತಪಸ್ಸಿಲ್ಲದೆ ಯಾವುದೇ ಸುಖವು ಸುಲಭವಾಗುವುದಿಲ್ಲ. ತಪಸ್ಸಿನಿಂದಲೇ ಎಲ್ಲ ಸುಖಗಳು ದೊರೆಯುತ್ತವೆ, ಎಂಬುದನ್ನು ವೇದವೇತ್ತರಾದ ಪುರುಷರು ತಿಳಿಯುತ್ತಾರೆ. ಜ್ಞಾನ, ವಿಜ್ಞಾನ, ಆರೋಗ್ಯ, ಸುಂದರ ರೂಪ, ಸೌಭಾಗ್ಯ, ಶಾಶ್ವತಸುಖವು ತಪಸ್ಸಿನಿಂದಲೇ ದೊರೆಯುತ್ತದೆ. ತಪಸ್ಸಿನಿಂದಲೇ ಬ್ರಹ್ಮದೇವರು ಪರಿಶ್ರಮವಿಲ್ಲದೆ ಸಂಪೂರ್ಣ ವಿಶ್ವವನ್ನು ಸೃಷ್ಟಿಸುವರು. ತಪಸ್ಸಿನಿಂದಲೇ ವಿಷ್ಣುವು ಇದನ್ನು ಪಾಲಿಸುತ್ತಿರುವನು. ತಪಸ್ಸಿನ ಬಲದಿಂದಲೇ ರುದ್ರದೇವರು ಸಂಹಾರ ಮಾಡುವನು. ತಪಸ್ಸಿನ ಪ್ರಭಾವದಿಂದಲೇ ಮಹಾ ಶೇಷನು ಇಡೀ ಬ್ರಹ್ಮಾಂಡವನ್ನು ಧರಿಸಿರುವನು.

(ಅಧ್ಯಾಯ ೧೨)

❐ ❐ ❐

ವೇದ-ಪುರಾಣಗಳ ಸ್ವಾಧ್ಯಾಯ ಹಾಗೂ ವಿವಿಧ ಪ್ರಕಾರದ ದಾನದ ಮಹಿಮೆ, ನರಕಗಳ ವರ್ಣನೆ ಮತ್ತು ಅದರಲ್ಲಿ ಬೀಳಿಸುವ ಪಾಪಗಳ ದಿಗ್ದರ್ಶನ, ಪಾಪಗಳ ಸರ್ವೋತ್ತಮ ಪ್ರಾಯಶ್ಚಿತ್ತವು ಶಿವಸ್ಮರಣೆ ಹಾಗೂ ಜ್ಞಾನದ ಮಹತ್ವದ ಪ್ರತಿಪಾದನೆ

ಸನತ್ಕುಮಾರರು ಹೇಳುತ್ತಾರೆ - ಮುನಿಯೇ ! ಒಬ್ಬನು ಋಚೆಯಾದರೂ ಸ್ವಾಧ್ಯಾಯ ಮಾಡುವನು. ಇಬ್ಬರಿಗೂ ಅರಣ್ಯದಲ್ಲಿ ಕಾಡು ಫಲ-ಮೂಲಗಳನ್ನು ತಿಂದು ತಪಸ್ಸು ಫಲವು ಸಮಾನವಾಗಿ ದೊರೆಯುತ್ತದೆ. ಶ್ರೇಷ್ಠದ್ವಿಜನು ಮಾಡುವನು, ಇನ್ನೊಬ್ಬನು ವೇದದ ಒಂದು ವೇದಾಧ್ಯಯನದಿಂದ ಪಡೆಯುವ ಫಲಕ್ಕಿಂತ

ಈ ಸತ್ಯಮೇವ ಪರಂ ಬ್ರಹ್ಮ ಸತ್ಯಮೇವ ಪರಂ ತಪಃ । ಸತ್ಯಮೇವ ಪರೋಯಜ್ಞಃ ಸತ್ಯಮೇವ ಪರಂ ಶ್ರುತಮ್ ॥
ಸತ್ಯಂ ಸುಪ್ತೇಷು ಜಾಗರ್ತಿ ಸತ್ಯಂ ಚ ಪರಮಂ ಪದಮ್ । ಸತ್ಯೇನೈವ ಧೃತಾ ಪೃಥ್ವೀ ಸತ್ಯೇ ಸರ್ವಂ ಪ್ರತಿಷ್ಠಿತಮ್ ॥
ತಪೋ ಯಜ್ಞಶ್ಚ ಪುಣ್ಯಂ ಚ ದೇವರ್ಷಿಪಿತೃಪೂಜನೇ । ಆಪೋ ವಿದ್ಯಾ ಚ ತೇ ಸರ್ವೇ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥
ಸತ್ಯಂ ಯಜ್ಞಸ್ತಪೋ ದಾನಂ ಮಂತ್ರಾ ದೇವೀ ಸರಸ್ವತೀ । ಬ್ರಹ್ಮಚರ್ಯಂ ತಥಾ ಸತ್ಯಮೋಂಕಾರಃ ಸತ್ಯಮೇವ ಚ ॥
ಸತ್ಯೇನ ವಾಯುರಭ್ಯೇತಿ ಸತ್ಯೇನ ತಪತೇ ರವಿಃ । ಸತ್ಯೇನಾಗ್ನಿರ್ದಹತಿ ಸ್ವರ್ಗಃ ಸತ್ಯೇನ ತಿಷ್ಠತಿ ॥
ಪಾಲನಂ ಸರ್ವವೇದಾನಾಂ ಸರ್ವತೀರ್ಥಾವಗಾಹನಮ್ । ಸತ್ಯೇನ ವಹತೇ ಲೋಕೇ ಸರ್ವಮಾಪ್ನೋತ್ಯಸಂಶಯಮ್ ॥
ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ । ಲಕ್ಷಾಣಿ ಕ್ರತವಶ್ಚೈವ ಸತ್ಯಮೇವ ವಿಶಿಷ್ಯತೇ ॥
ಸತ್ಯೇನ ದೇವಾಃ ಪಿತರೋ ಮಾನವೋರಗ ರಾಕ್ಷಸಾಃ । ಪ್ರೀಯಂತೇ ಸತ್ಯತಃ ಸರ್ವೇ ಲೋಕಾಶ್ಚ ಸಚರಾಚರಾಃ ॥
ಸತ್ಯಮಾಹುಃ ಪರಂ ಧರ್ಮಂ ಸತ್ಯಮಾಹುಃ ಪರಂ ಪದಮ್ । ಸತ್ಯಮಾಹುಃ ಪರಂ ಬ್ರಹ್ಮ ತಸ್ಮಾತ್ಸತ್ಯಂಸದಾ ವದೇತ ॥
(ಶಿ - ಪು - ಉ - ಸಂ - ೧೨/೨೩-೩೨)

ಇಮ್ಮಡಿಯಾದ ಫಲವು ವೇದವನ್ನು ಕಲಿಸುವವನಿಗೆ ಸಿಗುತ್ತದೆ. ಮುನಿಯೇ! ಸೂರ್ಯ-ಚಂದ್ರರಿಲ್ಲದೆ ಜಗತ್ತಿನಲ್ಲಿ ಅಂಧಕಾರವು ಹರಡುವಂತೆ ಪುರಾಣಗಳಿಲ್ಲದೆ ಜ್ಞಾನದ ಬೆಳಕು ಇರುವುದಿಲ್ಲ - ಅಜ್ಞಾನದ ಅಂಧಕಾರವೇ ಆವರಿಸಿರುತ್ತದೆ. ಅದಕ್ಕಾಗಿ ಸದಾ ಪುರಾಣವನ್ನು ಅಧ್ಯಯನ ಮಾಡಬೇಕು. ಅಜ್ಞಾನದಿಂದ ನರಕದಲ್ಲಿ ಬಿದ್ದು ಸದಾ ಸಂತಪ್ತರಾಗುವ ಜನರಿಗೆ ಶಾಸ್ತ್ರದ ಜ್ಞಾನವನ್ನು ತಿಳಿಸುವ ಆ ಪುರಾಣವಕ್ತಾ (ಪ್ರವಚನಕಾರ) ಇದೇ ಮಹತ್ವದಿಂದ ಸದಾ ಪೂಜನೀಯನಾಗುತ್ತಾನೆ. ಪುರಾಣವಕ್ತಾ ವಿದ್ವಾಂಸರನ್ನು ದಾನದ ಪಾತ್ರವೆಂದು ತಿಳಿದು ತುಂಬಾ ಸಂತೋಷದಿಂದ ಅವರಿಗೆ ಉತ್ತಮೋತ್ತಮ ವಸ್ತುಗಳನ್ನು ಕೊಡುವ ಸಾಧುವು ಪರಮ ಗತಿಯನ್ನು ಪಡೆಯುವನು. ಸತ್ಪಾತ್ರ ಬ್ರಾಹ್ಮಣನಿಗೆ ಭೂಮಿ, ಗೋವು, ರಥ, ಆನೆ, ಸುಂದರ ಕುದುರೆಗಳು ಇವುಗಳನ್ನು ಕೊಡುವವನ ಪುಣ್ಯಫಲದ ವರ್ಣನೆಯನ್ನು ಕೇಳಿರಿ. ಅವನು ಈ ಲೋಕದಲ್ಲಿ ಮತ್ತು ಪರಲೋಕ ದಲ್ಲಿಯೂ ಸಂಪೂರ್ಣ ಅಕ್ಷಯ ಮನೋರಥ ಗಳನ್ನು ಪಡೆದುಕೊಳ್ಳುವನು ಹಾಗೂ ಅಶ್ವಮೇಧಯಜ್ಞದ ಫಲಕ್ಕೆ ಭಾಗಿಯಾಗುತ್ತಾನೆ.

ಮುನೀಶ್ವರರೇ ! ಭಗವಾನ್ ಶಿವನ ಕಥೆಯನ್ನು ಕೇಳುವವನು ಕರ್ಮಗಳ ವಿಶಾಲ ವನವನ್ನು ಸುಟ್ಟು ಸಂಸಾರದಿಂದ ದಾಟಿ ಹೋಗುತ್ತಾನೆ. ಎರಡು ಗಳಿಗೆ, ಒಂದು ಗಳಿಗೆ, ಅಥವಾ ಒಂದು ಕ್ಷಣವಾದರೂ ಭಕ್ತಿಭಾವದಿಂದ ಭಗವಾನ್ ಶಿವನ ಕಥೆಯನ್ನು ಕೇಳುವವನ ದುರ್ಗತಿಯು ಎಂದಿಗೂ ಆಗುವುದಿಲ್ಲ. ಮುನಿಯೇ! ಸಮಸ್ತ ದಾನಗಳಿಂದ ಅಥವಾ ಸಂಪೂರ್ಣ ಯಜ್ಞಗಳಿಂದ ಉಂಟಾಗುವ ಪುಣ್ಯಫಲವೇ ಶಿವಪುರಾಣವನ್ನು ಕೇಳುವುದರಿಂದ ಅವಿಚಲರೂಪದಿಂದ ಪ್ರಾಪ್ತವಾಗುತ್ತದೆ. ವ್ಯಾಸರೇ ! ವಿಶೇಷವಾಗಿ ಕಲಿಯುಗದಲ್ಲಿ ಪುರಾಣಶ್ರವಣವಲ್ಲದೆ ಮನುಷ್ಯನಿಗೆ ಬೇರೆ ಯಾವುದೇ ಶ್ರೇಷ್ಠ ಧರ್ಮವಿಲ್ಲ. ಅದೇ ಅವನಿಗೆ ಮೋಕ್ಷ ಹಾಗೂ ಧ್ಯಾನರೂಪೀ ಫಲವನ್ನು ಕೊಡುವುದು ಎಂದು ತಿಳಿಸಲಾಗಿದೆ. ಶಿವಪುರಾಣದ ಶ್ರವಣ ಮತ್ತು ಶಿವನಾಮ ಕೀರ್ತನೆ ಮನುಷ್ಯರಿಗೆ ಕಲ್ಪವೃಕ್ಷದ ರಮಣೀಯ ಫಲವಾಗಿದೆ; ಇದರಲ್ಲಿ ಸಂಶಯವಿಲ್ಲ. ಯಜ್ಞ, ದಾನ, ತಪಸ್ಸು, ತೀರ್ಥಸೇವನ - ಇವುಗಳಿಂದ ದೊರೆಯುವ ಫಲವು ಪುರಾಣಗಳ ಶ್ರವಣಮಾತ್ರದಿಂದಲೇ ಸಿಗುವುದು.

ಪ್ರತಿದಿನವೂ ಸತ್ಪಾತ್ರ ಜನರಿಗೆ ದೊಡ್ಡ ದೊಡ್ಡ ದಾನಗಳನ್ನು ಕೊಡಬೇಕು. ಆ ದಾನಗಳು ದಾತೃವಿನ ಉದ್ಧಾರಕವಾಗುತ್ತವೆ. ವಿಪ್ರವರ್ಯರೇ ! ಸುವರ್ಣದಾನ, ಗೋದಾನ ಮತ್ತು ಭೂಮಿದಾನ - ಇವು ಪವಿತ್ರದಾನಗಳಾಗಿವೆ. ಅವು ದಾತೃವನ್ನು ಉದ್ಧರಿಸುತ್ತವೆ, ಜೊತೆಗೆ ಪಡೆದುಕೊಂಡವರನ್ನು ಉದ್ಧರಿಸುವುದು. ಸುವರ್ಣದಾನ, ಗೋದಾನ, ಪೃಥಿವಿದಾನ - ಇಂತಹ ಶ್ರೇಷ್ಠ ದಾನಗಳನ್ನು ಮಾಡಿ ಮನುಷ್ಯನು ಎಲ್ಲ ಪಾಪಗಳಿಂದ ಮುಕ್ತನಾಗಿ ಹೋಗುತ್ತಾನೆ. ತುಲಾದಾನದ (ತುಲಾಭಾರ) ಪ್ರಶಂಸೆ ತುಂಬಾ ಮಾಡಲಾಗಿದೆ. ಗೋವು ಮತ್ತು ಪೃಥಿವಿಯ ದಾನಗಳೂ ಕೂಡ ಪ್ರಶಸ್ತ ಮತ್ತು ಸಮಾನ ಶಕ್ತಿಶಾಲಿಯಾಗಿವೆ. ಆದರೆ ಸರಸ್ವತಿಯ (ವಿದ್ಯೆಯ) ದಾನವು ಇವೆಲ್ಲಕ್ಕಿಂತ ಹೆಚ್ಚು ಉತ್ತಮವಾಗಿದೆ. ಪ್ರತಿದಿನ ಕರೆಯುವ ಹಸು, ಛತ್ರ, ವಸ್ತ್ರ, ಪಾದರಕ್ಷೆ, ಅನ್ನ ಮತ್ತು ನೀರು - ಇವೆಲ್ಲ ವಸ್ತುಗಳನ್ನು ಯಾಚಕರಿಗೆ ದಾನ ಮಾಡಬೇಕು. ಬ್ರಾಹ್ಮಣರಿಗೆ ಹಾಗೂ ಪೀಡಿತವಲ್ಲದ ಯಾಚಕರಿಗೂ ಸಂಕಲ್ಪಪೂರ್ವಕ ದಾನ ಮಾಡಿದ ಧನಾದಿ ವಸ್ತುಗಳಿಂದ ದಾತೃನು ಮನಸ್ವೀ (ಉತ್ತಮ ಮನಸ್ಸುಳ್ಳ)ಯಾಗುತ್ತಾನೆ. ಮನೆಯಲ್ಲಿ ಏನೇನು ಅತ್ಯಂತ ಅಭೀಷ್ಟ ಮತ್ತು ಪ್ರಿಯ ವಸ್ತುಗಳು ಮನೆಯಲ್ಲಿದ್ದರೆ ಅವನ್ನು ಅಕ್ಷಯವಾಗಿಸುವ ಇಚ್ಛೆಯುಳ್ಳವರು ಗುಣವಂತ ಪುರುಷ ರಿಗೆ ದಾನ ಮಾಡಬೇಕು. ತುಲಾ-ಪುರುಷನ ದಾನವು ಎಲ್ಲ ದಾನಗಳಲ್ಲಿ ಉತ್ತಮವಾಗಿದೆ. ತನ್ನ ಶ್ರೇಯಸ್ಸನ್ನು ಬಯಸು ವವನು ತಕ್ಕಡಿಯಲ್ಲಿ ಕುಳಿತು, ತನ್ನ ಶರೀರದ ತೂಕದ ವಸ್ತುಗಳನ್ನು ದಾನಮಾಡಬೇಕು. ಹಗಲಿನಲ್ಲಿ, ರಾತ್ರಿಯಲ್ಲಿ, ಎರಡೂ ಸಂಧ್ಯೆಗಳಲ್ಲಿ, ಮಧ್ಯಾಹ್ನ, ಅರ್ಧ ರಾತ್ರಿಯಲ್ಲಿ ಹಾಗೂ ಭೂತ, ವರ್ತಮಾನ, ಭವಿಷ್ಯ-ಮೂರೂ ಕಾಲಗಳಲ್ಲಿ ಮನಸ್ಸು, ವಾಣಿ, ಶರೀರದಿಂದ ಮಾಡಿದ ಎಲ್ಲ ಪಾಪಗಳನ್ನು ತುಲಾ ಪುರುಷ ದಾನವು ದೂರ ಮಾಡುತ್ತದೆ.

ಅನಂತರ ಬ್ರಹ್ಮಾಂಡದಾನದ ಮಾಹಾತ್ಮ್ಯ ಹಾಗೂ ಬ್ರಹ್ಮಾಂಡದ ವರ್ಣನೆ ಮಾಡಿ ಸನತ್ಕುಮಾರರು ಹೇಳುತ್ತಾರೆ - ಮುನಿವರರಲ್ಲಿ ಶ್ರೇಷ್ಠರಾದ ವ್ಯಾಸರೇ ! ಪಾತಾಳ ಲೋಕದಿಂದ ಮೇಲಕ್ಕೆ ಇರುವ ನರಕಗಳ ವರ್ಣನೆಯನ್ನು ನನ್ನಿಂದ ಕೇಳಿರಿ. ಪಾಪೀ ಪುರುಷರು ಅವುಗಳಲ್ಲೇ ಕಷ್ಟಗಳನ್ನು ಅನುಭವಿಸುತ್ತಾರೆ. ರೌರವ, ಶೂಕರ, ರೋಧ, ತಾಲ, ವಿಸನ ಅಥವಾ ವಿಶಸನ, ಮಹಾಜ್ವಾಲ, ತಪ್ತಕುಂಭ, ಲವಣ, ವಿಲೋಹಿತ, ಕೀವು ಹರಿಯುತ್ತಿರುವ ವೈತರಿಣೀ, ಕೃಮಿ ಅಥವಾ ಕೃಮೀಶ, ಕೃಮಿಭೋಜನ, ಕೃಷ್ಣ, ಅಸಿಪತ್ರವನ, ದಾರುಣ ಲಾಲಾಭಕ್ಷ, ಪೂಯವಹ, ಪಾಪ, ವಹ್ನಿಜ್ವಾಲ, ಅಧಃಶಿರಾ ಸಂದಂಶ, ಕಾಲಸೂತ್ರ, ತಮಸ, ಅವೀಚಿ, ರೋಧನ, ಶ್ವಭೋಜನ, ಅಪ್ರತಿಷ್ಠ ಮಹಾರೌರವ ಮತ್ತು ಶಾಲ್ಮಲಿ ಇತ್ಯಾದಿ ಬಹಳಷ್ಟು ದುಃಖದಾಯಕ

ನರಕಗಳು ಅಲ್ಲಿ ಇವೆ. ವ್ಯಾಸರೇ ! ಅವುಗಳಲ್ಲಿ ಪಾಪಕರ್ಮ – ಪರಾಯಣ ಪುರುಷರನ್ನು ಬೇಯಿಸಲಾಗುವುದು. ಅದನ್ನು ಕ್ರಮವಾಗಿ ವರ್ಣಿಸುವೆನು; ಸಾವಧಾನಧಾನನಾಗಿ ಕೇಳಿರಿ. ಬ್ರಾಹ್ಮಣರಿಗೆ, ದೇವತೆಗಳಿಗೆ, ಗೋವುಗಳಿಗೆ ಹಿತಕರ ಕಾರ್ಯಗಳಲ್ಲದೆ ಇತರ ಯಾವುದೇ ಕಾರ್ಯಕ್ಕಾಗಿ ಸುಳ್ಳು ಸಾಕ್ಷಿ ಹೇಳುವವನು ಅಥವಾ ಸದಾಕಾಲ ಸುಳ್ಳನ್ನೇ ಹೇಳುವವನು ರೌರವ ನರಕಕ್ಕೆ ಹೋಗುತ್ತಾನೆ.

ಭ್ರೂಣ (ಗರ್ಭಸ್ಥ ಶಿಶು) ಹತ್ಯೆ, ಸುರ್ಣದ ಕಳ್ಳತನ, ಗೋವನ್ನು ಕಟುಕರ ಮನೆಯಲ್ಲಿ ಬಂಧಿಸುವುದು, ವಿಶ್ವಾಸಘಾತ ಮಾಡುವವನು, ಹೆಂಡಕುಡುಕ, ಬ್ರಹ್ಮಹತ್ಯೆ ಮಾಡಿದವ, ಬೇರೆಯವರ ದ್ರವ್ಯವನ್ನು ಅಪಹರಿಸಿದವ, ಹಾಗೂ ಇವರೆಲ್ಲರ ಸಂಗಾತಿಯು ಸತ್ತ ಬಳಿಕ ತಪ್ತಕುಂಭ ಎಂಬ ನರಕಕ್ಕೆ ಹೋಗುತ್ತಾನೆ. ಗುರುವನ್ನು ಕೊಂದರೂ ಇದೇ ನರಕದ ಪ್ರಾಪ್ತಿಯಾಗುತ್ತದೆ. ತಂಗಿ, ತಾಯಿ, ಗೋವು, ಮಗಳು ಇವರನ್ನು ವಧಿಸುವುದರಿಂದಲೂ ತಪ್ತಕುಂಭದಲ್ಲಿ ಬೀಳಬೇಕಾಗುತ್ತದೆ. ಸಾಧ್ವೀ ಸ್ತ್ರೀಯನ್ನು ಮಾರುವವನು, ಹೆಚ್ಚು ಬಡ್ಡಿ ತೆಗೆದುಕೊಳ್ಳುವವನು, ಕೂದಲನ್ನು ಮಾರುವವನು, ತನ್ನ ಭಕ್ತರನ್ನು ತ್ಯಜಿಸುವವನು – ಇವರೆಲ್ಲ ಪಾಪಿಗಳನ್ನು ತಪ್ತಲೋಹವೆಂಬ ನರಕದಲ್ಲಿ ಬೇಯಿಸಲಾಗುವುದು. ಗುರು-ಹಿರಿಯರನ್ನು ಅಪಮಾನ ಮಾಡುವವನು, ಅವರ ಕುರಿತು ದುರ್ವಚನ ಆಡುವವನು, ವೇದವನ್ನು ನಿಂದಿಸುವವನು, ವೇದವನ್ನು ಮಾರಾಟ ಮಾಡುವವನು, ಸೇರಬಾರದ ಸ್ತ್ರೀಯಳೊಡನೆ ಸಂಭೋಗ ಮಾಡುವವನು – ಇವರೆಲ್ಲರೂ ಲವಣವೆಂಬ ನರಕಕ್ಕೆ ಹೋಗುತ್ತಾರೆ. ಕಳ್ಳನು ವಿಲೋಹಿತ ಎಂಬ ನರಕದಲ್ಲಿ ಬೀಳುತ್ತಾನೆ. ಮೇರೆ ಮೀರುವ ಪುರುಷರಿಗೂ ಇದೇ ಗತಿಯಾಗುತ್ತದೆ. ಯಾವ ಮನುಷ್ಯನು ದೇವತೆ, ಬ್ರಾಹ್ಮಣ, ಪಿತೃಗಳಲ್ಲಿ ದ್ವೇಷ ಮಾಡುವನೋ, ರತ್ನಗಳನ್ನು ದೂಷಿತ (ಬೆರಕೆ)ಗೊಳಿಸುವನೋ, ಅವನು ಕೃಮಿ ಭಕ್ಷವೆಂಬ ನರಕದಲ್ಲಿ ಬೀಳುವನು. ದೂಷಿತ ಯಜ್ಞ (ಬೇರೆಯವರಿಗೆ ಹಾನಿಯನ್ನುಂಟುಮಾಡಲು ಅಭಿಚಾರಿಕ ಪ್ರಯೋಗ ಅಥವಾ ಹಿಂಸಾಪ್ರಧಾನ ತಾಮಸ ಯಜ್ಞ) ಮಾಡುವವನು ಕ್ರವೀಶ ಎಂಬ ನರಕದಲ್ಲಿ ಬೀಳುವನು. ಪಿತೃಗಳಿಗೆ, ದೇವತೆಗಳಿಗೆ, ಅತಿಥಿಗೆ ಬಿಟ್ಟು (ಬಲಿ-ವೈಶ್ವದೇವದ ಮೂಲಕ ದೇವತೆಗಳೆ ಮುಂತಾದವರ ಭಾಗವನ್ನು ಅರ್ಪಿಸದೆ) ಭೋಜನ ಮಾಡುವವನು. ಉಗ್ರಲಾಲಾ ಭಕ್ಷ ನರಕದಲ್ಲಿ ಬೀಳುವನು. ಶಸ್ತ್ರಗಳನ್ನು ನಿರ್ಮಿಸುವವನೂ ಕೂಡ ಅದರಲ್ಲೇ ಬೀಳುವನು. ಅಂತ್ಯಜನಿಂದ ಸೇವೆಯನ್ನು ಪಡೆಯುವ ದ್ವಿಜನು, ಅಸತ್ ದಾನವನ್ನು ಸ್ವೀಕರಿಸುವವನು, ಯಜ್ಞಕ್ಕೆ ಅನಧಿಕಾರಿಗಳಾದವರಿಂದ ಯಜ್ಞವನ್ನು ಮಾಡಿಸುವವನು, ಅಭಕ್ಷ-ಭಕ್ಷಣ ಮಾಡುವವನು – ಇವರೆಲ್ಲ ದ್ವಿಜರು ರುಧಿರೌಘ (ಪೂಯವಹ) ಎಂಬ ನರಕದಲ್ಲಿ ಬೀಳುವರು. ಸೋಮರಸವನ್ನು ಮಾರುವವನ ಗತಿಯೂ ಇದೇ ಆಗುವುದು. ಯಜ್ಞ ಮತ್ತು ಗ್ರಾಮವನ್ನು ನಾಶಮಾಡುವವನು ಘೋರ ವೈತರಣೀ ನದಿಯಲ್ಲಿ ಬೀಳುವನು.

ತಾರುಣ್ಯದಿಂದ ಮತ್ತನಾಗಿ ಧರ್ಮದ ಮೇರೆಯನ್ನು ಮೀರಿದವನು, ಅಪವಿತ್ರ ಆಚಾರ-ವಿಚಾರವುಳ್ಳವನು, ಮೋಸ-ಕಪಟದಿಂದ ಜೀವನ ನಡೆಸುವವನು, ಕೃತ್ಯ ಎಂಬ ನರಕಕ್ಕೆ ಹೋಗುತ್ತಾನೆ. ಕಾರಣವಿಲ್ಲದೆ ಮರಗಳನ್ನು ಕಡಿಯುವವನು ಅಸಿಪತ್ರವನ ಎಂಬ ನರಕಕ್ಕೆ ಹೋಗುವನು. ಆಡುಗಳನ್ನು ಮಾರಿ ಜೀವನ ನಡೆಸುವವನು ಹಾಗೂ ಪಶುಗಳನ್ನು ಹಿಂಸಿಸುವ ಕಟುಕನು ವಹ್ನಿಜ್ವಾಲ ಎಂಬ ನರಕದಲ್ಲಿ ಬೀಳುವರು. ಭ್ರಷ್ಟಾಚಾರೀ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಹಾಗೂ ಹಸಿ ಮಡಕೆ ಅಥವಾ ಇಟ್ಟಿಗೆಗಳನ್ನು ಸುಡಲು ಭಟ್ಟಿಗೆ ಬೆಂಕಿಯಿಡುವರೆಲ್ಲರೂ ಅದೇ ವಹ್ನಿ ಜ್ವಾಲ ನರಕದಲ್ಲಿ ಬೀಳುತ್ತಾರೆ. ವ್ರತಗಳನ್ನು ಲೋಪಗೊಳಿಸುವವನು ಮತ್ತು ತನ್ನ ವರ್ಣಾಶ್ರಮದಿಂದ ಪತಿತನಾದವನು – ಇವರಿಬ್ಬರೂ ಅತ್ಯಂತ ದಾರುಣ ಸಂದಂಶ ಎಂಬ ನರಕಯಾತನೆಯಲ್ಲಿ ಬೀಳುತ್ತಾರೆ. ಬ್ರಹ್ಮಚಾರಿಯಾಗಿದ್ದರೂ ಸ್ವಪ್ನದಲ್ಲಿ ವೀರ್ಯಸ್ಖಲನ ಮಾಡುವವನು ಶ್ವಭೋಜನ ಎಂಬ ನರಕದಲ್ಲಿ ಬೀಳುವರು. ಈ ಪ್ರಕಾರ ಇವು ಹಾಗೂ ಇನ್ನೂ ನೂರಾರು, ಸಾವಿರಾರು ನರಕಗಳಿವೆ. ಅದರಲ್ಲಿ ಪಾಪಕರ್ಮಿ ಪ್ರಾಣಿಗಳು ಯಾತನೆಯ ಬೆಂಕಿಯಲ್ಲಿ ಬಿದ್ದು ಬೇಯುತ್ತಾ ಇರುತ್ತಾರೆ. ಮೇಲೆ ಹೇಳಿದ ಪಾಪಗಳಂತೆ ಇನ್ನೂ ಸಾವಿರಾರು ಪಾಪಕರ್ಮಗಳಿವೆ. ಅದರಿಂದ ಮನುಷ್ಯರು ನರಕದಲ್ಲಿ ಬಿದ್ದು ಕಷ್ಟಗಳನ್ನು ಅನುಭವಿಸುತ್ತಾರೆ. ಮನ, ಪಾಣಿ, ಕ್ರಿಯೆಗಳಿಂದ ತಮ್ಮ ವರ್ಣ ಮತ್ತು ಆಶ್ರಮದ ವಿರುದ್ಧ ಕರ್ಮ ಮಾಡುವವರು ನರಕದಲ್ಲಿ ಬೀಳುತ್ತಾರೆ. ನರಕದಲ್ಲಿ ತಲೆಕೆಳಗಾಗಿ ನೇತು ಹಾಕಿದ ಪ್ರಾಣಿಗಳು ಸ್ವರ್ಗದಲ್ಲಿ ವಾಸಿಸುವ ದೇವತೆಗಳನ್ನು ನೋಡುತ್ತಾರೆ ಮತ್ತು ದೇವತೆಗಳೂ ಕೆಳಗೆ ನೋಡಿದಾಗ ಅವೆಲ್ಲ ಅಧೋಮುಖಿ ನಾರಕೀ ಜೀವರನ್ನು ನೋಡುತ್ತಾರೆ. ಪಾಪಿಜನರು ನರಕವನ್ನು ಅನುಭವಿಸಿ ಅನಂತರ ಕ್ರಮವಾಗಿ ಉನ್ನತಿ ಪಡೆಯುತ್ತಾ ಸ್ಥಾವರ, ಕೃಮಿ, ಜಲಚರ, ಪಕ್ಷಿ, ಪಶು, ಮನುಷ್ಯ, ಧರ್ಮಾತ್ಮಾ ಮಾನವ ದೇವತೆ ಹಾಗೂ ಮುಮುಕ್ಷುಗಳಾಗಿ ಕೊನೆಯಲ್ಲಿ ಮೋಕ್ಷವನ್ನು ಹೊಂದುವರು. ಸ್ವರ್ಗದಲ್ಲಿರುವಷ್ಟೇ ಜೀವಿಗಳು

ನರಕದಲ್ಲಿದ್ದಾರೆ. ಪಾಪೀ ಪುರುಷನು ತನ್ನ ಪಾಪದ ಪ್ರಾಯಶ್ಚಿತ್ತವನ್ನು ಮಾಡದವನು ನರಕಕ್ಕೆ ಹೋಗುತ್ತಾನೆ.

ಕಾಲೀನಂದನನೇ ! ಮನುವು ಮಹಾಪಾಪಗಳಿಗೆ ಮಹತ್ತರವಾದ ಮತ್ತು ಲಘುಪಾಪಗಳಿಗೆ ಲಘು ಪ್ರಾಯಶ್ಚಿತ್ತಗಳನ್ನು ಹೇಳಿರುವನು. ಆ ಎಲ್ಲ ಪಾಪಕರ್ಮಗಳಿಗೆ ಯಾವ ಯಾವ ಪ್ರಾಯಶ್ಚಿತ್ತ ಸಂಬಂಧೀ ಕರ್ಮಗಳನ್ನು ಹೇಳಲಾಗಿವೆಯೋ, ಅವೆಲ್ಲದರಲ್ಲಿ ಭಗವಾನ್ ಶಂಕರನ ಸ್ಮರಣೆಯೇ ಸರ್ವಶ್ರೇಷ್ಠ ಪ್ರಾಯಶ್ಚಿತ್ತವಾಗಿದೆ. ಪಾಪಕರ್ಮಗಳನ್ನು ಮಾಡಿದ ನಂತರ ಚಿತ್ತದಲ್ಲಿ ಪಶ್ಚಾತ್ತಾಪ ಉಂಟಾಗುವ ಪುರುಷನಿಗಾದರೋ ಏಕಮಾತ್ರ ಭಗವಾನ್ ಶಿವನ ಸ್ಮರಣೆಯೇ ಸರ್ವೋತ್ತಮ ಪ್ರಾಯಶ್ಚಿತ್ತವಾಗಿದೆ. ಪ್ರಾತಃಕಾಲ, ಸಾಯಂಕಾಲ, ರಾತ್ರಿಯಲ್ಲಿ, ಮಧ್ಯಾಹ್ನಗಳಲ್ಲಿ ಭಗವಾನ್ ಶಿವನನ್ನು ಸ್ಮರಿಸಿದರೆ ಪಾಪರಹಿತನಾದ ಮನುಷ್ಯನು ಮಹೇಶ್ವರನ ಧಾಮವನ್ನು ಪಡೆದು ಕೊಳ್ಳುವನು. ಭಗವಾನ್ ಶಿವನ ಸ್ಮರಣೆಯಿಂದ ಸಮಸ್ತ ಪಾಪಳು, ಕ್ಲೇಶಗಳು ಕ್ಷಯವಾಗಿ ಮನುಷ್ಯನು ಸ್ವರ್ಗ ಅಥವಾ ಮೋಕ್ಷವನ್ನು ಹೊಂದುವನು. ಜಪ, ಹೋಮ, ಪೂಜೆ ಮುಂತಾದುವನ್ನು ಮಾಡುವಾಗ ನಿರಂತರ ಭಗವಾನ್ ಶಿವನಲ್ಲಿ ಚಿತ್ತವು ನೆಟ್ಟಿರುತ್ತದೋ, ಅವನಿಗೆ ಇಂದ್ರಾದಿ ಪದದ ಪ್ರಾಪ್ತಿಯಾದರೋ ಅಂತರಾಯ (ವಿಘ್ನ)ವೇ ಆಗಿದೆ. ಮುನಿಯೇ ! ಭಕ್ತಿ-ಭಾವದಿಂದ ಹಗಲು-ರಾತ್ರಿ ಭಗವಾನ್ ಶಿವನನ್ನು ಸ್ಮರಿಸುವವನ ಎಲ್ಲ ಪಾತಕಗಳು ನಾಶವಾಗುತ್ತವೆ. ಆದಕ್ಕಾಗಿ ಅವನು ಎಂದಿಗೂ ನರಕಕ್ಕೆ ಹೋಗುವುದಿಲ್ಲ. ನರಕ ಮತ್ತು ಸ್ವರ್ಗ - ಇವು ಪಾಪ ಹಾಗೂ ಪುಣ್ಯಗಳದ್ದೇ ಇನ್ನೊಂದು ಹೆಸರಾಗಿದೆ. ಇವುಗಳಲ್ಲಿ ಒಂದು ದುಃಖಿಕೊಡುವುದು, ಇನ್ನೊಂದು ಸುಖ ಕೊಡುವುದು. ಒಂದೇ ವಸ್ತುವು ಕೆಲವೊಮ್ಮೆ ಪ್ರಿಯವಾಗುತ್ತದೆ, ಕೆಲವೊಮ್ಮೆ ಅಪ್ರಿಯವಾಗುತ್ತದೆ, ಆಗ ಯಾವುದೇ ಪದಾರ್ಥವು ದುಃಖಿಮಯವಾಗಿಲ್ಲ ಮತ್ತು ಸುಖಿಮಯವೂ ಇಲ್ಲ ಎಂಬುದು ನಿಶ್ಚಯವಾಗುತ್ತದೆ. ಈ ಸುಖಿ-ದುಃಖಿಗಳಾದರೋ ಮನಸ್ಸಿನ ವಿಕಾರಗಳಾಗಿವೆ. ಜ್ಞಾನವೇ ಪರಬ್ರಹ್ಮವಾಗಿದೆ. ಜ್ಞಾನವೇ ತಾತ್ತ್ವಿಕ ಬೋಧದ ಕಾರಣವಾಗಿದೆ. ಇವೆಲ್ಲ ಚರಾಚರ ವಿಶ್ವವು ಜ್ಞಾನಮಯವೇ ಆಗಿದೆ. ಆ ಪರಮ ವಿಜ್ಞಾನದಿಂದ ಬೇರೆಯಾದ ಇನ್ನೊಂದು ಯಾವ ವಸ್ತುವೂ ಇಲ್ಲ.

(ಅಧ್ಯಾಯ ೧೩-೧೬)

❐ ❐ ❐

ಮೃತ್ಯುಕಾಲವು ಸಮೀಪಿಸಿದಾಗ ಉಂಟಾಗುವ ಲಕ್ಷಣಗಳ ವರ್ಣನೆ

ಇದಾದ ಬಳಿಕ ದ್ವೀಪಗಳ, ಲೋಕಗಳ, ಮನುಗಳ, ಪರಿಚಯ ಮಾಡಿಸಿ, ಸಂಗ್ರಾಮದ ಫಲ, ಶರೀರ ಹಾಗೂ ಸ್ತ್ರೀ ಸ್ವಭಾವಾದಿಗಳನ್ನು ವರ್ಣಿಸಲಾಯಿತು. ಅನಂತರ ಕಾಲದ ವಿಷಯದಲ್ಲಿ ವ್ಯಾಸರು ಕೇಳಿದಾಗ ಸನತ್ಕುಮಾರರು ಹೇಳುತ್ತಾರೆ - ಮುನಿಶ್ರೇಷ್ಠರೇ ! ಹಿಂದಿನ ಕಾಲದಲ್ಲಿ ಪಾರ್ವತಿಯು ನಾನಾ ಪ್ರಕಾರದ ದಿವ್ಯ ಕಥೆಗಳನ್ನು ಕೇಳಿ, ಪರಮೇಶ್ವರ ಶಿವನಿಗೆ ನಮಸ್ಕರಿಸಿ ಅವನಲ್ಲಿ ಇದೇ ಮಾತನ್ನು ಕೇಳಿದ್ದಳು.

ಪಾರ್ವತಿಯು ಹೇಳಿದಳು - ಭಗವಂತನೇ ! ನಾನು ತಮ್ಮ ಕೃಪೆಯಿಂದ ಸಂಪೂರ್ಣ ಮತಗಳನ್ನು ತಿಳಿದುಕೊಂಡೆ. ದೇವಾ ! ಯಾವ ಮಂತ್ರಗಳಿಂದ, ಯಾವ ವಿಧಿಯಿಂದ, ಹೇಗೆ ತಮ್ಮ ಪೂಜೆ ನಡೆಯುವುದೋ ಅದೂ ನನಗೆ ತಿಳಿಯಿತು. ಆದರೆ ಪ್ರಭೋ ! ಈಗಲೂ ಒಂದು ಸಂಶಯ ಉಳಿದಿದೆ. ಆ ಸಂಶಯವು ಕಾಲಚಕ್ರದ ಸಂಬಂಧದಲ್ಲಿ . ದೇವಾ ! ಮೃತ್ಯುವಿನ ಚಿಹ್ನೆಗಳಾವುವು? ಆಯುಸ್ಸಿನ ಪ್ರಮಾಣ ಏನು? ಸ್ವಾಮಿ ! ನಾನು ನಿಮ್ಮ ಪ್ರಿಯೆಯಾಗಿರುವೆನು, ಆದ್ದರಿಂದ ಇದೆಲ್ಲವನ್ನು ನನಗೆ ತಿಳಿಸಿರಿ.

ಮಹಾದೇವನು ಹೇಳಿದನು - ಪ್ರಿಯೇ ! ಅಕಸ್ಮಾತ್ ಶರೀರವೆಲ್ಲವು ಬಿಳಿ ಅಥವಾ ಹಳದಿಯಾದಾಗ ಮತ್ತು ಮೇಲ್ಮೈ ಸ್ವಲ್ಪ ಕೆಂಪಾಗಿ ಕಂಡರೆ, ಆ ಮನುಷ್ಯನ ಮೃತ್ಯುವು ಆರು ತಿಂಗಳೊಳಗಾಗಿ ಆಗಬಹುದು ಎಂದು ತಿಳಿಯಬೇಕು. ಶಿವೇ ! ಬಾಯಿ, ಕಿವಿ, ಕಣ್ಣು, ನಾಲಿಗೆ - ಇವು ಸ್ತಂಭಿತವಾದಾಗಲೂ ಆರು ತಿಂಗಳೊಳಗೆ ಮೃತ್ಯುವು ಆಗಬಹುದೆಂದು ತಿಳಿಯಬೇಕು. ಭದ್ರೆ ! ರುರು ಮೃಗದ ಹಿಂದೆ ಆಗುವ ಬೇಟೆಯ ಭಯಾನಕ ಶಬ್ದವೂ ಕೇಳಿಸದಿದ್ದಾಗ ಆರು ತಿಂಗಳೊಳಗಾಗಿಯೇ ಮೃತ್ಯುವೆಂದು ತಿಳಿಯಬೇಕು. ಸೂರ್ಯ, ಚಂದ್ರ, ಅಗ್ನಿ, ಇವರ ಸಾನ್ನಿಧ್ಯದಿಂದ ಪ್ರಕಟವಾಗುವ ಪ್ರಕಾಶವನ್ನು ನೋಡದವನಿಗೆ ಎಲ್ಲವೂ ಕಪ್ಪಾಗಿ ಅಂಧಕಾರಮಯವಾಗಿ ಕಂಡುಬಂದಾಗ ಅವನ ಜೀವನ ಆರು ತಿಂಗಳಿಗಿಂತ ಹೆಚ್ಚಾಗಿರುವುದಿಲ್ಲ. ದೇವಿ ! ಪ್ರಿಯೆ ! ಮನುಷ್ಯನ ಎಡಕೈಯು ಒಂದೆಸವನೆ ಒಂದು ವಾರದವರೆಗೆ ಹಾರುತ್ತಿದ್ದರೆ (ಸ್ಫುರಣಗೊಂಡರೆ) ಅವನ

ಜೀವನವು ಒಂದು ತಿಂಗಳೇ ಉಳಿದಿದೆ ಎಂದು ತಿಳಿಯಬೇಕು; ಇದರಲ್ಲಿ ಸಂಶಯವಿಲ್ಲ. ಇಡೀ ಶರೀರದಲ್ಲಿ ಆಲಸ್ಯವು ತುಂಬಿದಾಗ, ಗಂಟಲು ಒಣಗಿ ಬಂದಾಗ ಆ ಮನುಷ್ಯನು ಒಂದು ತಿಂಗಳವರೆಗೆ ಬದುಕುತ್ತಾನೆ; ಇದರಲ್ಲಿ ಸಂಶಯವಿಲ್ಲ. ತ್ರಿದೋಷಗಳಿಂದ ಮೂಗು ಸುರಿಯತೊಡಗಿದಾಗ ಅವನ ಜೀವನ ಹದಿನೈದು ದಿನಗಳಿಗಿಂತ ಹೆಚ್ಚಿರುವುದಿಲ್ಲ. ಬಾಯಿ, ಗಂಟಲು ಒಣಗ ತೊಡಗಿದಾಗ ಆರು ತಿಂಗಳು ಕಳೆಯುವಷ್ಟರಲ್ಲಿ ಆಯುಸ್ಸು ತೀರುವುದು. ಭಾಮಿನಿ ! ನಾಲಿಗೆ ಊದಿಕೊಂಡು, ಹಲ್ಲುಗಳಿಂದ ಕೀವು ಸುರಿಯತೊಡಗಿದಾಗ ಆರು ತಿಂಗಳೊಳಗೆ ಅವನ ಮೃತ್ಯುವಾಗುವುದು. ಈ ಚಿಹ್ನೆಗಳಿಂದ ಮೃತ್ಯುಕಾಲವನ್ನು ತಿಳಿದುಕೊಳ್ಳಬೇಕು. ಸುಂದರೀ! ನೀರು, ಎಣ್ಣೆ, ತುಪ್ಪ, ಕನ್ನಡಿ ಇವುಗಳಲ್ಲಿ ಪ್ರತಿಬಿಂಬವು ಕಾಣಿಸದಿದ್ದಾಗ, ಅಥವಾ ವಿಕೃತವಾಗಿ ಕಂಡರೆ, ಕಾಲಚಕ್ರವನ್ನು ತಿಳಿದ ಪುರುಷನು ಅವನ ಆಯುಸ್ಸು ಆರುತಿಂಗಳು ಉಳಿದಿದೆ ಎಂದು ತಿಳಿಯಬೇಕು. ದೇವೇಶ್ವರೀ ! ಈಗ ಇನ್ನೊಂದು ಮಾತನ್ನು ಕೇಳು. ಅದರಿಂದ ಮೃತ್ಯುವಿನ ಜ್ಞಾನ ಉಂಟಾಗುತ್ತದೆ. ತಲೆಯಿಲ್ಲದೆ ತನ್ನ ನೆರಳನ್ನು ಕಂಡರೆ ಅಥವಾ ನೆರಳೇ ಕಾಣದಾದರೆ ಆ ಮನುಷ್ಯನು ಒಂದು ತಿಂಗಳೂ ಬದುಕಿರುವುದಿಲ್ಲ.

ಪಾರ್ವತೀ ! ಇವು ಶರೀರದಲ್ಲಿ ಕಂಡುಬರುವ ಮೃತ್ಯುವಿನ ಲಕ್ಷಣಗಳನ್ನು ನಾನು ತಿಳಿಸಿದೆ. ಭದ್ರೇ ! ಇನ್ನು ಹೊರಗೆ ಪ್ರಕಟವಾಗುವ ಲಕ್ಷಣಗಳನ್ನು ವರ್ಣಿಸುವೆನು ; ಕೇಳು. ದೇವಿ ! ಚಂದ್ರಮಂಡಲ ಅಥವಾ ಸೂರ್ಯ ಮಂಡಲವು ಪ್ರಭಾಹೀನ ಹಾಗೂ ಕೆಂಪಾಗಿ ಕಂಡು ಬಂದಾಗ ಹದಿನೈದು ದಿನಗಳಲ್ಲೇ ಮನುಷ್ಯನ ಮೃತ್ಯು ಆಗುವುದು. ಅರುಂಧತಿ, ಮಹಾಯಾನ, ಚಂದ್ರ-ಇವುಗಳು ಕಾಣದಿದ್ದಾಗ ಅಥವಾ ನಕ್ಷತ್ರಗಳು ಕಾಣಿಸದಿದ್ದಾಗ, ಇಂತಹ ಪುರುಷನು ಒಂದು ತಿಂಗಳು ಮಾತ್ರ ಬದುಕಿರುತ್ತಾನೆ. ಗ್ರಹಗಳ ದರ್ಶನವಾದರೂ ದಿಕ್ಕುಗಳ ಅರಿವು ಆಗದಿದ್ದಾಗ, ಮನಸ್ಸಿನಲ್ಲಿ ಮೂಢತೆ ಆವರಿಸಿದಾಗ ಆರು ತಿಂಗಳೊಳಗೆ ಖಂಡಿತವಾಗಿ ಮೃತ್ಯುವಾಗುವುದು. ಉತಥ್ಯ ಎಂಬ ನಕ್ಷತ್ರ, ಧ್ರುವದ ಅಥವಾ ಸೂರ್ಯಮಂಡಲದ ದರ್ಶನವೂ ಆಗದಿದ್ದಾಗ, ರಾತ್ರಿಯಲ್ಲಿ ಕಾಮನಬಿಲ್ಲು ಮತ್ತು ಮಧ್ಯಾಹ್ನದಲ್ಲಿ ಉಲ್ಕಾಪಾತವಾಗುವಂತೆ ಕಂಡರೆ, ಗಿಡುಗ, ಕಾಗೆಗಳು ಸುತ್ತುವರಿದಂತೆ ಕಂಡರೆ ಆ ಮನುಷ್ಯನ ಆಯುಸ್ಸು ಆರುತಿಂಗಳಿಗಿಂತ ಹೆಚ್ಚಾಗಿರುವುದಿಲ್ಲ. ಆಕಾಶದಲ್ಲಿ ಸಪ್ತರ್ಷಿಗಳು ಹಾಗೂ ಸ್ವರ್ಗಮಾರ್ಗ (ಛಾಯಾಪಥ) ಕಂಡುಬಾರದಿದ್ದರೆ ಕಾಲಜ್ಞ ಪುರುಷನು ಅವನ ಆಯುಸ್ಸು ಆರು ತಿಂಗಳು ಉಳಿದಿದೆ ಎಂದು ತಿಳಿಯಬೇಕು. ಅಕಸ್ಮಾತ್ತಾಗಿ ಸೂರ್ಯ ಮತ್ತು ಚಂದ್ರರನ್ನು ರಾಹುಗ್ರಸ್ತರಾಗಿ ನೋಡಿದರೆ, ಎಲ್ಲ ದಿಕ್ಕುಗಳು ಹೊಗೆ ತುಂಬಿದಂತೆ ಕಂಡುಬಂದರೆ, ಅವನು ಖಂಡಿತವಾಗಿ ಆರು ತಿಂಗಳಲ್ಲಿ ಸತ್ತು ಹೋಗುವನು. ಅಕಸ್ಮಾತ್ತಾಗಿ ನೀಲಿ ನೊಣಗಳು ಬಂದು ಮನುಷ್ಯನನ್ನು ಮುತ್ತಿಕೊಂಡರೆ, ವಾಸ್ತವವಾಗಿ ಅವನ ಆಯುಸ್ಸು ಒಂದೇ ತಿಂಗಳು ಉಳಿದಿದೆ ಎಂದು ತಿಳಿಯಬೇಕು. ಗಿಡುಗ, ಕಾಗೆ, ಪಾರಿವಾಳ ತಲೆಯಮೇಲೆ ಬಂದು ಕುಳಿತರೆ ಅವನು ಒಂದು ತಿಂಗಳೊಳಗೆ ಸತ್ತು ಹೋಗುವನು. ಇದರಲ್ಲಿ ಸಂಶಯವೇ ಇಲ್ಲ.

(ಅಧ್ಯಾಯ ೧೭-೨೫)

❐ ❐ ❐

ಕಾಲವನ್ನು ಗೆಲ್ಲುವ ಉಪಾಯ, ನವಧಾ ಶಬ್ದಬ್ರಹ್ಮ ಹಾಗೂ ತುಂಕಾರದ ಅನುಸಂಧಾನ, ಅದರಿಂದ ದೊರೆಯುವ ಸಿದ್ಧಿಗಳ ವರ್ಣನೆ

ಪಾರ್ವತಿಯು ಹೇಳಿದಳು – ಸ್ವಾಮಿ ! ಕಾಲದಿಂದ ಆಕಾಶವೂ ನಾಶವಾಗುತ್ತದೆ. ಆ ಭಯಂಕರ ಕಾಲವು ಬಹಳ ವಿಕರಾಳವಾಗಿದೆ. ಅದು ಸ್ವರ್ಗದ ಏಕಮಾತ್ರ ಸ್ವಾಮಿಯಾಗಿದೆ. ನೀವು ಅದನ್ನು ಸುಟ್ಟುಬಿಟ್ಟಿದ್ದೀರಿ. ಆದರೆ ಅನೇಕ ಸ್ತೋತ್ರಗಳಿಂದ ಅದು ನಿಮ್ಮನ್ನು ಸ್ತುತಿಸಿದಾಗ, ನೀವು ಸಂತುಷ್ಟರಾಗಿರಿ ಹಾಗೂ ಆ ಕಾಲವು ಪುನಃ ತನ್ನ ಪ್ರಕೃತಿಯನ್ನು ಪಡೆದುಕೊಂಡಿತು. ಪೂರ್ಣವಾಗಿ ಸ್ವಸ್ಥವಾಗಿತ್ತು. ನೀವು ಅದಕ್ಕೆ ಹೇಳಿದಿರಿ – 'ಕಾಲನೇ ! ನೀನು ಸರ್ವತ್ರ ಸಂಚರಿಸುವೆ, ಆದರೆ ಜನರು ನಿನ್ನನ್ನು ನೋಡಲಾರರು.' ಪ್ರಭುಗಳಾದ ನಿಮ್ಮ ಕೃಪಾದೃಷ್ಟಿಯಿಂದ ವರವು ದೊರೆತಾಗ ಆ ಕಾಲವು ಜೀವಂತವಾಗಿ, ಅದರ ಪ್ರಭಾವ ಬಹಳ ಬೆಳೆಯಿತು. ಆದ್ದರಿಂದ ಮಹೇಶ್ವರರೇ ! ಆ ಕಾಲನನ್ನು ನಾಶಗೊಳಿಸುವಂತ ಯಾವುದಾದರೂ ಸಾಧನವಿದೆಯೇ? ಇದ್ದರೆ ನನಗೆ ತಿಳಿಸಿರಿ. ಏಕೆಂದರೆ, ನೀವು ಯೋಗಿಗಳ ಶಿರೋಮಣಿಗಳಾಗಿರುವಿರಿ ಹಾಗೂ ಸ್ವತಂತ್ರ ಪ್ರಭುಗಳಾಗುವಿರಿ. ತಾವು ಪರೋಪಕಾರಕ್ಕಾಗಿಯೇ ಶರೀರವನ್ನು ಧರಿಸಿರುವಿರಿ.

ಶಿವನು ಹೇಳಿದನು – ದೇವಿ ! ಶ್ರೇಷ್ಠ ದೇವತೆಗಳು, ದೈತ್ಯರು, ಯಕ್ಷರು, ರಾಕ್ಷಸರು, ನಾಗರು, ಮನುಷ್ಯರು ಇವರಾರೂ ಕಾಲವನ್ನು ನಾಶಮಾಡಲಾರರು ಆದರೆ ಧ್ಯಾನ ಪರಾಯಣ ಯೋಗಿಯು ಶರೀರಧಾರಿಯಾಗಿದ್ದರೂ ಸುಖವಾಗಿ ಕಾಲವನ್ನು ನಾಶಮಾಡಬಲ್ಲರು. ವರಾರೋಹೇ ! ಈ ಪಾಂಚಭೌತಿಕ ಶರೀರವು ಸದಾ ಆ ಪಂಚಭೂತಗಳ ಗುಣಗಳಿಂದಲೇ ಕೂಡಿ ಉತ್ಪನ್ನವಾಗುತ್ತದೆ ಮತ್ತು ಅದರಲ್ಲೇ ಲಯಹೊಂದುವುದು. ಮಣ್ಣಿನ ದೇಹವು ಮಣ್ಣಿನಲ್ಲೇ ಸೇರಿಹೋಗುತ್ತದೆ. ಆಕಾಶದಿಂದ ವಾಯು, ವಾಯುವಿನಿಂದ ತೇಜ, ತೇಜದಿಂದ ಜಲವು ಪ್ರಕಟವಾಗುತ್ತದೆಂದು ತಿಳಿಸಲಾಗಿದೆ. ಜಲದಿಂದ ಪೃಥಿವಿಯು ಆವಿರ್ಭಾವಿಸುತ್ತದೆ. ಪೃಥಿವಿಯೇಆದಿ ಭೂತಗಳು ಕ್ರಮಶಃ ತಮ್ಮ ಕಾರಣದಲ್ಲಿ ಲಯ ಹೊಂದುವವು. ಪೃಥಿವಿಯ ಐದು, ಜಲದ ನಾಲ್ಕು ತೇಜದ ಮೂರು, ವಾಯುವಿನ ಎರಡು ಗುಣಗಳಿರುತ್ತವೆ. ಪೃಥಿವಿಯೇ ಮುಂತಾದವುಗಳಲ್ಲಿ ಇರುವ ಗುಣಗಳ ಹೆಸರುಗಳು ಇಂತಿದೆ – ಶಬ್ದ, ಸ್ಪರ್ಶ, ರೂಪ, ರಸ, ಗಂಧ. ಭೂತವು ತನ್ನ ಗುಣವನ್ನು ತ್ಯಜಿಸಿದಾಗ ನಾಶವಾಗುತ್ತದೆ ಮತ್ತು ಗುಣವನ್ನು ಸ್ವೀಕರಿಸಿದಾಗ ಅದರ ಪ್ರಾದುರ್ಭಾವ ವಾಯಿತೆಂದು ಹೇಳಲಾಗಿದೆ. ದೇವೇಶ್ವರಿಯೇ! ಹೀಗೆ ನೀನು ಐದು ಭೂತಗಳ ಯಥಾರ್ಥ ಸ್ವರೂಪವನ್ನು ತಿಳಿ. ದೇವಿ ! ಅದಕ್ಕಾಗಿ ಕಾಲವನ್ನು ಗೆಲ್ಲಬೇಕೆಂಬ ಇಚ್ಛೆಯುಳ್ಳ ಯೋಗಿಯು ಪ್ರತಿದಿನವೂ ಪ್ರಯತ್ನಪೂರ್ವಕ ತಮ್ಮ-ತಮ್ಮ ಕಾಲದಲ್ಲಿ ಅವುಗಳ ಅಂಶಭೂತ ಗುಣಗಳನ್ನು ಚಿಂತಿಸಬೇಕು.

ಯೋಗವನ್ನು ತಿಳಿದ ಪುರುಷನು ಸುಖಪ್ರದ ಆಸನದಲ್ಲಿ ಕುಳಿತು ವಿಶುದ್ಧ ಶ್ವಾಸ (ಪ್ರಾಣಾಯಾಮ)ದಿಂದ ಯೋಗಾಭ್ಯಾಸವನ್ನು ಮಾಡಬೇಕು. ರಾತ್ರಿಯಲ್ಲಿ ಎಲ್ಲ ಜನರು ಮಲಗಿದ್ದಾಗ ದೀಪವನ್ನು ಆರಿಸಿ ಅಂಧಕಾರದಲ್ಲಿ ಯೋಗಧಾರಣೆ ಮಾಡಬೇಕು. ತೋರುಬೆರಳುಗಳಿಂದ ಎರಡೂ ಕಿವಿಗಳನ್ನು ಮುಚ್ಚಿ ಎರಡು ಗಳಿಗೆಗಳವರೆಗೆ ಒತ್ತಿಹಿಡಿಯಬೇಕು. ಆ ಸ್ಥಿತಿಯಲ್ಲಿ ಅಗ್ನಿಪ್ರೇರಿತ ಶಬ್ದವು ಕೇಳಿಬರುವುದು. ಇದರಿಂದ ಸಂಧ್ಯೆಯನಂತರ ತಿಂದ ಅನ್ನವು ಕ್ಷಣದಲ್ಲಿ ಪಚನವಾಗುತ್ತದೆ ಮತ್ತು ಸಮಸ್ತ ರೋಗಗಳು,ಜ್ವರಾದಿ ಅನೇಕ ಉಪದ್ರವಗಳು ಶೀಘ್ರವಾಗಿ ನಾಶಮಾಡಿಬಿಡುತ್ತವೆ. ಸಾಧಕನು ಪ್ರತಿದಿನವೂ ಹೀಗೆ ಎರಡು ಗಳಿಗೆ ಶಬ್ದಬ್ರಹ್ಮನ ಸಾಕ್ಷಾತ್ಕಾರ ಮಾಡಿಕೊಂಡವನು ಮೃತ್ಯು ಮತ್ತು ಕಾಲವನ್ನು ಗೆದ್ದು ಈ ಜಗತ್ತಿನಲ್ಲಿ ಸ್ವಚ್ಛಂದವಾಗಿ ಸಂಚರಿಸುವನು. ಸರ್ವಜ್ಞನೂ, ಸಮದರ್ಶಿಯೂ ಆಗಿ ಸಮಸ್ತ ಸಿದ್ಧಿಗಳನ್ನು ಪಡೆದುಕೊಳ್ಳುವನು. ಆಕಾಶದಲ್ಲಿ ಮಳೆಯಿಂದ ಕೂಡಿದ ಮೇಘಗರ್ಜನೆಯಂತೆ ಆ ಶಬ್ದವನ್ನು ಕೇಳಿ ಯೋಗಿಯು ತತ್ಕಾಲದಲ್ಲಿ ಸಂಸಾರ ಬಂಧನದಿಂದ ಮುಕ್ತನಾಗುವನು. ಅನಂತರ ಯೋಗಿಗಳು ಪ್ರತಿದಿನವೂ ಚಿಂತಿಸುವ ಆ ಶಬ್ದವು ಕ್ರಮವಾಗಿ ಸೂಕ್ಷ್ಮದಿಂದ ಸೂಕ್ಷ್ಮತರ ವಾಗುತ್ತವೆ. ದೇವಿ ! ಹೀಗೆ ನಾನು ನಿನಗೆ ಶಬ್ದಬ್ರಹ್ಮನ ಚಿಂತನೆಯ ಕ್ರಮವನ್ನು ತಿಳಿಸಿರುವೆನು. ಭತ್ತವನ್ನು ಬಯಸುವ ಮನುಷ್ಯನು ಹುಲ್ಲನ್ನು ತ್ಯಜಿಸುವಂತೆಯೇ ಮೋಕ್ಷದ ಇಚ್ಛೆಯುಳ್ಳ ಯೋಗಿಯು ಎಲ್ಲ ಬಂಧನಗಳನ್ನು ತ್ಯಜಿಸಿವನು.

ಶಬ್ದಬ್ರಹ್ಮವನ್ನು ಪಡೆದುಕೊಂಡರೂ ಇತರ ವಸ್ತುವಿನ ಅಭಿಲಾಷೆಯುಳ್ಳವನು ಆಕಾಶವನ್ನು ಗುದ್ದುತ್ತಾ, ಹಸಿವು-ಬಾಯಾರಿಕೆಯಿಂದ ಬಳಲುತ್ತಾನೆ. ಈ ಶಬ್ದಬ್ರಹ್ಮವೇ ಸುಖದ, ಮೋಕ್ಷದ ಕಾರಣ, ಒಳ-ಹೊರಗಿನ ಭೇದದಿಂದ ರಹಿತ ಅವಿನಾಶಿ ಮತ್ತು ಸಮಸ್ತ ಉಪಾಧಿಗಳಿಂದ ರಹಿತ ಪರಬ್ರಹ್ಮವಾಗಿದೆ. ಇದನ್ನು ತಿಳಿದು ಮನುಷ್ಯನು ಮುಕ್ತನಾಗುತ್ತಾನೆ. ಕಾಲಪಾಶದಿಂದ ಮೋಹಿತರಾದ ಜನರು ಶಬ್ದಬ್ರಹ್ಮವನ್ನು ತಿಳಿಯದ ಪಾಪೀ ಹಾಗೂ ಕೆಟ್ಟ ಬುದ್ಧಿಯುಳ್ಳವರು ಮೃತ್ಯುಪಾಶದಲ್ಲಿ ಸಿಲುಕಿಕೊಳ್ಳುವರು. ಎಲ್ಲರ ಆಶ್ರಯಭೂತ ಪರಮತತ್ತ್ವ (ಪರಬ್ರಹ್ಮ ಪರಮಾತ್ಮಾ)ದ ಪ್ರಾಪ್ತಿಯಾಗುವ ತನಕ ಮನುಷ್ಯನು ಪ್ರಪಂಚದಲ್ಲಿ ಹುಟ್ಟುತ್ತಾ ಇರುತ್ತಾನೆ. ಪರಮ ತತ್ತ್ವದ ಜ್ಞಾನವುಂಟಾದಾಗ ಮನುಷ್ಯನು ಜನ್ಮ-ಮೃತ್ಯುವಿನ ಬಂಧನದಿಂದ ಮುಕ್ತನಾಗುತ್ತಾನೆ. ನಿದ್ದೆ ಮತ್ತು ಆಲಸ್ಯಗಳು ಸಾಧಕನಿಗೆ ದೊಡ್ಡ ವಿಘ್ನಗಳಾಗಿವೆ. ಈ ಶತ್ರುಗಳನ್ನು ಪ್ರಯತ್ನಪೂರ್ವಕ ಗೆದ್ದು ಸುಖಕರ ಆಸನದಲ್ಲಿ ಕುಳಿತು ಪ್ರತಿದಿನವೂ ಶಬ್ದ ಬ್ರಹ್ಮನ ಅಭ್ಯಾಸಮಾಡಬೇಕು. ನೂರು ವರ್ಷ ಆಯುಸ್ಸುಳ್ಳ ವೃದ್ಧ ಪುರುಷನು ಆಜೀವನ ಇದನ್ನು ಅಭ್ಯಾಸ ಮಾಡಿದರೆ ಅವನ ಶರೀರರೂಪೀ ಸ್ತಂಭವು ಮೃತ್ಯುವನ್ನು ಗೆಲ್ಲುವುದು ಮತ್ತು ಅವನಿಗೆ ಪ್ರಾಣವಾಯುವಿನ ಶಕ್ತಿಯನ್ನು ಹೆಚ್ಚಿಸುವ ಆರೋಗ್ಯವು ದೊರೆಯುತ್ತದೆ. ವೃದ್ಧನಾದ ಪುರುಷನಲ್ಲಿಯೂ ಬ್ರಹ್ಮನ ಅಭ್ಯಾಸದಿಂದ ಉಂಟಾಗುವ ಲಾಭದ ವಿಶ್ವಾಸವನ್ನು ನೋಡಲಾಗುವುದಾದರೆ, ತರುಣ ಮನುಷ್ಯನಿಗೆ ಈ ಸಾಧನೆಯಿಂದ ಲಾಭವಾಗುವುದರಲ್ಲಿ ಹೇಳುವುದೇನಿದೆ ? ಈ ಶಬ್ದಬ್ರಹ್ಮವು ಓಂಕಾರವಲ್ಲ, ಮಂತ್ರವಲ್ಲ, ಬೀಜವಲ್ಲ, ಅಕ್ಷರವೂ ಅಲ್ಲದ ಈ ಅನಾಹತ ನಾದ (ಆಘಾತವಿಲ್ಲದೆ, ನುಡಿಸದೇ ಪ್ರಕಟವಾಗುವ ಶಬ್ದ)ವಾಗಿದೆ. ಇದನ್ನು ಉಚ್ಚರಿಸದೆಯೇ ಚಿಂತನೆಯಾಗುತ್ತದೆ. ಈ ಶಬ್ದ ಬ್ರಹ್ಮವು ಪರಮ ಕಲ್ಯಾಣಮಯವಾಗಿದೆ. ಪ್ರಿಯೇ ! ಶುದ್ಧ

ಬುದ್ಧಿಯುಳ್ಳ ಪುರುಷನು ಪ್ರಯತ್ನಪೂರ್ವಕ ನಿರಂತರ ಇದರ ಅನುಸಂಧಾನ ಮಾಡುವನು. ಆದ್ದರಿಂದ ಒಂಭತ್ತು ಪ್ರಕಾರದ ಶಬ್ದಗಳನ್ನು ತಿಳಿಸಲಾಗಿದೆ. ಅದನ್ನು ಪ್ರಾಣವೇತ್ತಾ ಪುರುಷರು ಗುರುತಿಸಿರುವರು. ನಾನು ಅವನ್ನು ತಿಳಿಸುತ್ತಿದ್ದೇನೆ. ಆ ಶಬ್ದಗಳನ್ನು ನಾದಸಿದ್ಧಿ ಎಂದೂ ಹೇಳುತ್ತಾರೆ. ಈ ಶಬ್ದಗಳು ಕ್ರಮವಾಗಿ ಈ ಪ್ರಕಾರವಿದೆ –

ಘೋಷ, ಕಾಂಸ್ಯ (ಕಂಚಿನ ತಾಳ), ಶೃಂಗ (ಕೊಂಬು ಇತ್ಯಾದಿ), ಗಂಟೆ, ವೀಣೆ ಆದಿ, ಕೊಳಲು, ದುಂದುಭಿ, ಶಂಖ ಮತ್ತು ಒಂಭತ್ತನೆಯದು ಮೇಘ ಗರ್ಜನೆ. ಈ ಒಂಭತ್ತು ಪ್ರಕಾರದ ಶಬ್ದಗಳನ್ನು ತ್ಯಜಿಸಿ ತುಂಕಾರದ ಅಭ್ಯಾಸ ಮಾಡಬೇಕು. ಹೀಗೆ ಸದಾಕಾಲ ಧ್ಯಾನ ಮಾಡುವ ಯೋಗಿಯು ಪುಣ್ಯ ಮತ್ತು ಪಾಪಗಳಿಂದ ಲಿಪ್ತನಾಗುವುದಿಲ್ಲ. ದೇವಿ ! ಯೋಗಾಭ್ಯಾಸದಿಂದ ಕೇಳಲು ಪ್ರಯತ್ನಿಸಿದರೂ ಯೋಗಿಯು ಆ ಶಬ್ದವನ್ನು ಕೇಳದೆ ಅಭ್ಯಾಸ ಮಾಡುತ್ತಾ-ಮಾಡುತ್ತಾ ಮರಣಾಸನ್ನನಾದಾಗಲೂ ಅವನು ಹಗಲು-ರಾತ್ರಿ ಆ ಅಭ್ಯಾಸದಲ್ಲೇ ತೊಡಗಿರಬೇಕು ಹೀಗೆ ಮಾಡುವುದರಿಂದ ಏಳು ದಿವಸಗಳಲ್ಲಿ ಜನ್ಮ-ಮೃತ್ಯುವನ್ನು ಗೆಲ್ಲುವಂತಹ ಆ ಶಬ್ದವು ಪ್ರಕಟವಾಗುತ್ತದೆ. ದೇವಿ! ಆ ಶಬ್ದವು ಒಂಭತ್ತು ಪ್ರಕಾರದ್ದಾಗಿದೆ. ಅದನ್ನು ನಾನು ಯಥಾರ್ಥವಾಗಿ ವರ್ಣಿಸುವೆನು. ಮೊದಲು ಪ್ರಕಟವಾದ ಘೋಷಾತ್ಮಕ ನಾದವು ಆತ್ಮಶುದ್ಧಿಯ ಉತ್ತಮ ಸಾಧನವಾಗಿದೆ. ಆ ಉತ್ತಮ ನಾದವು ಎಲ್ಲ ರೋಗಗಳನ್ನು ಕಳೆದು, ಮನಸ್ಸನ್ನು ವಶೀಭೂತಗೊಳಿಸಿ ತನ್ನತ್ತ ಸೆಳೆದುಕೊಳ್ಳುವುದಾಗಿದೆ. ಎರಡನೆಯ ಕಾಂಸ್ಯನಾದವು ಪ್ರಾಣಿಗಳ ಗತಿಯನ್ನು ಸ್ತಂಭಿತಗೊಳಿಸುತ್ತದೆ. ಅದು ವಿಷ, ಭೂತ, ಗ್ರಹ ಮುಂತಾದುವನ್ನು ಬಂಧಿಸುವುದು; ಇದರಲ್ಲಿ ಸಂಶಯವಿಲ್ಲ. ಮೂರನೆಯದು ಶೃಂಗನಾದವು ಅಭಿಚಾರದಿಂದ ಸಂಬಂಧವಿರಿಸುತ್ತದೆ. ಅದನ್ನು ಶತ್ರುವಿನ ಉಚ್ಚಾಟನೆ ಮತ್ತು ಮಾರಣದಲ್ಲಿ ವಿನಿಯೋಗಿಸಬೇಕು. ನಾಲ್ಕನೇಯದು ಘಂಟಾನಾದವನ್ನು ಸಾಕ್ಷಾತ್ ಪರಮೇಶ್ವರನು ಉಚ್ಚರಿಸುವನು. ಆ ನಾದವು ಸಮಸ್ತ ದೇವತೆಗಳನ್ನು ಆಕರ್ಷಿಸುತ್ತದೆ. ಹಾಗಿರುವಾಗ ಭೂತಳದ ಜನರ ಮಾತಾದರೂ ಏನು? ಯಕ್ಷರ ಮತ್ತು ಗಂಧರ್ವರ ಕನ್ಯೆಯರು ಆ ನಾದದಿಂದ ಆಕೃಷ್ಟರಾಗಿ ಯೋಗಿಗೆ ಅವನ ಇಚ್ಛಾನುಸಾರ ಮಹಾಸಿದ್ಧಿಯನ್ನು ಕರುಣಿಸುತ್ತಾರೆ ಹಾಗೂ ಇತರ ಕಾಮನೆಗಳೂ ಪೂರ್ಣಗೊಳಿಸುವರು. ಐದನೆಯ ವೀಣಾನಾದವನ್ನು ಯೋಗಿಗಳೇ ಸದಾ ಕೇಳುತ್ತಾರೆ. ದೇವಿ ! ಆ ವೀಣಾ ನಾದದಿಂದ ದೂರ-ದರ್ಶನದ ಶಕ್ತಿ ಪ್ರಾಪ್ತವಾಗುತ್ತದೆ. ವಂಶಿ (ಕೊಳಲು)ಯ ನಾದವನ್ನು ಧ್ಯಾನ ಮಾಡುವ ಯೋಗಿಗೆ ಸಂಪೂರ್ಣ ತತ್ತ್ವಗಳು ಪ್ರಾಪ್ತವಾಗುತ್ತವೆ. ದುಂದುಭಿಯನ್ನು ಚಿಂತಿಸುವ ಸಾಧಕನು ಜರಾ-ಮೃತ್ಯುವಿನ ಕಷ್ಟದಿಂದ ಬಿಡುಗಡೆ ಹೊಂದುವನು. ದೇವೇಶ್ವರೀ ! ಶಂಖನಾದದ ಅನುಸಂಧಾನವಾದಾಗ ಇಚ್ಛಾನುಸಾರ ರೂಪವನ್ನು ಧರಿಸುವ ಶಕ್ತಿಯು ದೊರೆಯುತ್ತದೆ. ಮೇಘನಾದದ ಚಿಂತನೆಯಿಂದ ಯೋಗಿಗೆ ಎಂದೂ ವಿಪತ್ತನ್ನು ಎದುರಿಸಬೇಕಾಗುವುದಿಲ್ಲ. ವರಾನನೇ ! ಪ್ರತಿದಿನವೂ ಏಕಾಗ್ರಚಿತ್ತದಿಂದ ಬ್ರಹ್ಮರೂಪೀ ತುಂಕಾರವನ್ನು ಧ್ಯಾನ ಮಾಡುವವನಿಗೆ ಯಾವುದೂ ಅಸಾಧ್ಯವಿಲ್ಲ. ಅವನಿಗೆ ಮನೋವಾಂಛಿತ ಸಿದ್ಧಿಯು ಪ್ರಾಪ್ತವಾಗುತ್ತದೆ. ಅವನು ಸರ್ವಜ್ಞನೂ, ಸರ್ವದರ್ಶಿಯೂ, ಇಚ್ಛಾನುರೂಪ ಧಾರಿಯಾಗಿ ಎಲ್ಲೆಡೆ ಸಂಚರಿಸುವನು. ಎಂದೂ ವಿಕಾರಗಳಿಗೆ ವಶೀಭೂತನಾಗುವುದಿಲ್ಲ. ಅವನು ಸಾಕ್ಷಾತ್ ಶಿವನೇ ಆಗಿದ್ದಾನೆ; ಇದರಲ್ಲಿ ಸಂಶಯವಿಲ್ಲ. ಪರಮೇಶ್ವರಿಯೇ ! ಹೀಗೆ ನಾನು ನಿನ್ನೆದುರಿಗೆ ಶಬ್ದಬ್ರಹ್ಮನ ನವಧಾ ಸ್ವರೂಪವನ್ನು ಪೂರ್ಣವಾಗಿ ವರ್ಣಿಸಿದೆ, ಇನ್ನು ಏನನ್ನು ಕೇಳಲು ಬಯಸುವೆ?

(ಅಧ್ಯಾಯ ೨೬)

❑ ❑ ❑

ಕಾಲ ಅಥವಾ ಮೃತ್ಯುವನ್ನು ಗೆದ್ದು ಅಮರತ್ವವನ್ನು ಪಡೆಯುವ ನಾಲ್ಕು , ಯೌಗಿಕ ಸಾಧನೆಗಳು - ಪ್ರಾಣಾಯಾಮ, ಭ್ರೂಮಧ್ಯದಲ್ಲಿ ಅಗ್ನಿಯಧ್ಯಾನ, ಬಾಯಿಯಿಂದ ವಾಯುಪಾನ ಹಾಗೂ ಮಡಚಿದ ನಾಲಿಗೆಯಿಂದ ಗಂಟಲಿನ ಗಂಟೆಯನ್ನು ಸ್ಪರ್ಶಿಸುವುದು

ಪಾರ್ವತಿ ಕೇಳಿದಳು – ಸ್ವಾಮಿ! ನೀವು ಪ್ರಸನ್ನರಾಗಿರುವಿರಾದರೆ ಯೋಗಿಯು ಯೋಗಾಕಾಶಜನಿತ ವಾಯುಪದವನ್ನು ಹೇಗೆ ಪಡೆಯುತ್ತಾನೆ? ಇದೆಲ್ಲವನ್ನು ನನಗೆ ತಿಳಿಸಿರಿ.

ಭಗವಾನ್ ಶಿವನು ಹೇಳಿದನು – ಸುಂದರಿ ! ಹಿಂದೆ ನಾನು ಯೋಗಿಗಳ ಹಿತದ ಕಾಮನೆಯಿಂದ ಎಲ್ಲವನ್ನು

ತಿಳಿಸಿದ್ದೆ, ಅದಕ್ಕನುಸಾರವಾಗಿ ಯೋಗಿಗಳು ಕಾಲವನ್ನು ಜಯಿಸಿದ್ದರು. ಯೋಗಿಯು ಹೇಗೆ ವಾಯುವಿನ ಸ್ವರೂಪವನ್ನು ಧರಿಸುವನು ? ಅದನ್ನು ಹೇಳಿ ಬಿಟ್ಟಿದ್ದೆ. ಅದಕ್ಕಾಗಿ ಯೋಗಶಕ್ತಿಯ ಮೂಲಕ ಮೃತ್ಯು ದಿವಸವನ್ನು ತಿಳಿದುಕೊಂಡು ಪ್ರಾಣಾಯಾಮದಲ್ಲಿ ತತ್ಪರರಾಗಬೇಕು. ಹೀಗೆ ಮಾಡಿದಾಗ ಹದಿನೈದು ದಿನಗಳಲ್ಲಿ ಬಂದಿರುವ ಆ ಕಾಲನನ್ನು ಗೆದ್ದುಕೊಳ್ಳುವರು. ಹೃದಯದಲ್ಲಿ ಸ್ಥಿತವಾದ ಪ್ರಾಣ ವಾಯುವು ಸದಾ ಅಗ್ನಿಯನ್ನು ಉದ್ದಿಪ್ತಗೊಳಿಸು ವಂತಹುದಾಗಿದೆ. ಅದನ್ನು ಅಗ್ನಿಯ ಸಹಾಯಕವೆಂದು ಹೇಳಲಾಗಿದೆ. ಈ ವಾಯುವು ಹೊರಗೆ ಮತ್ತು ಒಳಗೆ ಸರ್ವತ್ರ ವ್ಯಾಪ್ತವಾಗಿದ್ದು, ಮಹಾನ್‌ವಾಗಿದೆ, ಜ್ಞಾನ, ವಿಜ್ಞಾನ ಮತ್ತು ಉತ್ಸಾಹ - ಇವೆಲ್ಲದರ ಪ್ರವೃತ್ತಿ ವಾಯುವಿನಿಂದಲೇ ಆಗುತ್ತದೆ. ಇಲ್ಲಿ ವಾಯುವನ್ನು ಜಯಿಸಿದವನು ಈ ಸಮಸ್ತ ಜಗತ್ತಿನ ಮೇಲೆ ವಿಜಯವನ್ನು ಪಡೆದಿರುವನು.

ಸಾಧಕನು ಜರಾ-ಮೃತ್ಯುವನ್ನು ಗೆಲ್ಲುವ ಇಚ್ಛೆಯಿಂದ ಸದಾ ಧಾರಣೆಯಲ್ಲಿ ಸ್ಥಿತನಾಗಬೇಕು. ಏಕೆಂದರೆ, ಯೋಗಪರಾಯಣ ಯೋಗಿಯು ಚೆನ್ನಾಗಿ ಧಾರಣೆ ಮತ್ತು ಧ್ಯಾನದಲ್ಲಿ ತತ್ಪರನಾಗಿರಬೇಕು. ಕಮ್ಮಾರನು ಊದುಕೊಳವೆಯಿಂದ ಊದಿ-ಊದಿ ಆ ಗಾಳಿಯಿಂದ ತನ್ನೆಲ್ಲ ಕೆಲಸವನ್ನು ಮಾಡಿಕೊಳ್ಳುವಂತೆಯೇ ಯೋಗಿಯು ಪ್ರಾಣಾಯಾಮದ ಅಭ್ಯಾಸವನ್ನು ಮಾಡಬೇಕು. ಪ್ರಾಣಾಯಾಮದ ಸಮಯದಲ್ಲಿ ಧ್ಯಾನಿಸುವ ಆರಾಧ್ಯದೇವ ಪರಮೇಶ್ವರನು ಸಾವಿರಾರು ಮಸ್ತಕಗಳಿಂದ, ನೇತ್ರಗಳಿಂದ, ಕಾಲುಗಳಿಂದ, ಕೈಗಳಿಂದ ಯುಕ್ತನಾಗಿದ್ದು, ಸಮಸ್ತ ಗ್ರಂಥಿಗಳನ್ನು ಆವೃತಗೊಳಿಸಿ, ಅದರಿಂದಲೂ ಮುಂದೆ ಹತ್ತು ಅಂಗುಲವಿರುವನು. ಮೊದಲಿಗೆ ವ್ಯಾಹೃತಿ ಮತ್ತು ಕೊನೆಗೆ ಶಿರೋಮಂತ್ರಸಹಿತ ಗಾಯತ್ರಿಯನ್ನು ಮೂರು ಬಾರಿ ಜಪಿಸಿ ಪ್ರಾಣವಾಯುವನ್ನು ತಡೆದು ನಿಲ್ಲಿಸಬೇಕು. ಪ್ರಾಣಗಳ ಈ ಆಯಾಮವನ್ನು ಪ್ರಾಣಾಯಾಮವೆಂದು ಹೇಳುತ್ತಾರೆ. ಚಂದ್ರ-ಸೂರ್ಯಾದಿ ಗ್ರಹಗಳು ಹೋಗಿ ಮರಳುತ್ತಾರೆ. ಆದರೆ ಪ್ರಾಣಾಯಾಮ ಪೂರ್ವಕ ಧ್ಯಾನಪರಾಯಣ ಯೋಗಿಯು ಹೋದಬಳಿಕ ಇಂದಿನವರೆಗೆ ಮರಳಲಿಲ್ಲ. (ಅರ್ಥಾತ್ ಮುಕ್ತರಾಗಿಹೋದರು) ದೇವಿ ! ದ್ವಿಜನು ನೂರು ವರ್ಷಗಳವರೆಗೆ ತಪಸ್ಸು ಮಾಡಿ ಕುಶಾಗ್ರಭಾಗದಿಂದ ಒಂದು ತೊಟ್ಟು ನೀರು ಕುಡಿದು ಪಡೆಯುವ ಫಲವನ್ನೇ ಬ್ರಾಹ್ಮಣರಿಗೆ ಏಕಮಾತ್ರ ಧಾರಣೆ ಅಥವಾ ಪ್ರಾಣಾಯಾಮದ ಮೂಲಕ ದೊರೆಯುತ್ತದೆ. ಬೆಳಗ್ಗೆ ಎದ್ದು ದ್ವಿಜನು ಒಂದು ಪ್ರಾಣಾಯಾಮ ಮಾಡಿದರೆ, ಅವನು ತನ್ನ ಸಂಪೂರ್ಣ ಪಾಪಗಳನ್ನು ಶೀಘ್ರವಾಗಿ ನಾಶಗೊಳಿಸಿಕೊಂಡು ಬ್ರಹ್ಮಲೋಕಕ್ಕೆ ಹೋಗುತ್ತಾನೆ. ಆಲಸ್ಯ ರಹಿತನಾಗಿ ಏಕಾಂತದಲ್ಲಿ ಪ್ರಾಣಾಯಾಮ ಮಾಡುವವನು ಜರಾ ಮೃತ್ಯುವನ್ನು ಗೆದ್ದು ವಾಯುವಿನಂತೆ ಗತಿಶೀಲನಾಗಿ ಆಕಾಶದಲ್ಲಿ ಸಂಚರಿಸುವನು. ಅವನು ಸಿದ್ಧರ ಸ್ವರೂಪ, ಕಾಂತಿ, ಮೇಧಾ, ಪರಾಕ್ರಮ ಮತ್ತು ಶೌರ್ಯವನ್ನು ಪಡೆದುಕೊಳ್ಳುವನು. ಅವನ ಗತಿಯು ವಾಯುವಿನಂತೆ ಆಗಿ ಅವನಿಗೆ ಇಚ್ಛಿಸಿದ ಸುಖ ಹಾಗೂ ಪರಮಸುಖವು ದೊರೆಯುತ್ತದೆ.

ದೇವೇಶ್ವರಿಯೇ ! ಯೋಗಿಯು ವಾಯುವಿನಿಂದ ಸಿದ್ಧಿಯನ್ನು ಹೇಗೆ ಪಡೆಯುವನು. ಎಂಬ ಎಲ್ಲ ವಿಧಾನವನ್ನು ತಿಳಿಸಿದೆ. ಇನ್ನು ತೇಜದಿಂದ ಅವನು ಹೇಗೆ ಸಿದ್ಧಿ-ಲಾಭವನ್ನು ಪಡೆಯುವನು ಎಂಬುದನ್ನು ಹೇಳುವೆನು. ಇತರ ಜನರ ಮಾತು-ಕತೆ, ಗದ್ದಲ ಇಲ್ಲದಿರುವ ಶಾಂತ-ಏಕಾಂತ ಸ್ಥಾನದಲ್ಲಿ ತನ್ನ ಸುಖಮಯ ಆಸನದಲ್ಲಿ ಕುಳಿತುಕೊಂಡು ಚಂದ್ರ ಮತ್ತು ಸೂರ್ಯ (ಎಡ-ಬಲನೇತ್ರ)ರ ಕಾಂತಿಯಿಂದ ಪ್ರಕಾಶಿತ ಮಧ್ಯದ ಭ್ರೂಮಧ್ಯಭಾಗದಲ್ಲಿ ಅವ್ಯಕ್ತರೂಪದಿಂದ ಪ್ರಕಾಶಿತವಾಗುವ ಅಗ್ನಿಯ ತೇಜವನ್ನು ಆಲಸ್ಯರಹಿತ ಯೋಗಿಯು ಕೈಯ ಬೆರಳುಗಳಿಂದ ಪ್ರಯತ್ನಪೂರ್ವಕ ಎರಡೂ ಕಣ್ಣುಗಳನ್ನು ಸ್ವಲ್ಪ ಒತ್ತಿಹಿಡಿಯಬೇಕು ಮತ್ತು ಅವುಗಳ ತಾರೆಗಳನ್ನು ನೋಡುತ್ತಾ ಏಕಾಗ್ರ ಚಿತ್ತದಿಂದ ಅರ್ಧ ಮುಹೂರ್ತದವರೆಗೆ ಅವನ್ನೇ ಚಿಂತಿಸಬೇಕು. ಅನಂತರ ಅಂಧಕಾರದಲ್ಲಿಯೂ ಧ್ಯಾನ ಮಾಡಿದಾಗ ಆ ಈಶ್ವರೀಯ ಜ್ಯೋತಿಯನ್ನು ನೋಡಬಲ್ಲನು. ಆ ಜ್ಯೋತಿಯು ಬಿಳಿ, ಕೆಂಪು, ಹಳದಿ, ಕಪ್ಪು ಹಾಗೂ ಕಾಮನಬಿಲ್ಲಿನಂತೆ ಬಣ್ಣಗಳಿಂದ ಇರುತ್ತದೆ. ಭ್ರೂಮಧ್ಯದಲ್ಲಿ ಲಲಾಟವರ್ತಿ ಬಾಲಸೂರ್ಯನಂತೆ ತೇಜವುಳ್ಳ ಆ ಅಗ್ನಿದೇವರ ಸಾಕ್ಷಾತ್ಕಾರ ಪಡೆದು ಯೋಗಿಯು ಇಚ್ಛಾನುರೂಪವನ್ನು ಧರಿಸುವವನಾಗುವನು. ಹಾಗೂ ಮನೋವಾಂಛಿತ ರೂಪವನ್ನು ಧರಿಸಿ ಕ್ರೀಡಿಸುವನು. ಆ ಯೋಗಿಯು ಕಾರಣ ತತ್ತ್ವವನ್ನು ಶಾಂತಗೊಳಿಸಿ ಅದರಲ್ಲಿ ಪ್ರವಿಷ್ಟನಾಗಿ, ಬೇರೆಯವರ ಶರೀರದಲ್ಲಿ ಪ್ರವೇಶಿಸುವುದು, ಅಣಿಮಾದಿ ಗುಣಗಳನ್ನು ಪಡೆಯುವುದು, ಮನಸ್ಸಿನಿಂದಲೇ ಎಲ್ಲವನ್ನು ನೋಡುವುದು, ಇತರರ ಮಾತನ್ನು ಕೇಳುವುದು, ತಿಳಿಯುವುದು, ಅದೃಶ್ಯನಾಗುವುದು, ಅನೇಕರೂಪಗಳನ್ನು ಧರಿಸುವುದು, ಆಕಾಶದಲ್ಲಿ ಸಂಚರಿಸುವುದು ಮುಂತಾದ ಸಿದ್ಧಿಗಳನ್ನು ನಿರಂತರ ಅಭ್ಯಾಸದ ಪ್ರಭಾವದಿಂದ ಪಡೆದುಕೊಳ್ಳುವನು. ಅಂಧಕಾರದಿಂದ ಅತೀತ ಮತ್ತು

ಸೂರ್ಯನಂತೆ ತೇಜಸ್ವೀ ಆ ಮಹಾನ್ ಜ್ಯೋತಿರ್ಮಯ ಪುರುಷ (ಪರಮಾತ್ಮಾ)ನನ್ನು ನಾನು ಬಲ್ಲೆನು. ಅವನನ್ನು ತಿಳಿದ ಮನುಷ್ಯನು ಕಾಲ ಅಥವಾ ಮೃತ್ಯುವನ್ನು ದಾಟಿ ಹೋಗುತ್ತಾನೆ. ಮೋಕ್ಷಕ್ಕಾಗಿ ಇದಲ್ಲದೆ ಬೇರೆ ಯಾವುದೇ ಮಾರ್ಗವಿಲ್ಲ.* ದೇವಿ ! ಈ ಪ್ರಕಾರ ನಾನು ನಿನಗೆ ತೇಜ ತತ್ತ್ವದ ಚಿಂತನೆಯ ಉತ್ತಮ ವಿಧಿಯನ್ನು ವರ್ಣಿಸಿರುವೆನು. ಇದರಿಂದ ಯೋಗಿಯು ಕಾಲನ ಮೇಲೆ ವಿಜಯ ಪಡೆದು ಅಮರತ್ವವನ್ನು ಹೊಂದುವನು.

ದೇವಿ ! ಈಗ ಪುನಃ ಇನ್ನೊಂದು ಶ್ರೇಷ್ಠ ಉಪಾಯವನ್ನು ಹೇಳುವೆನು. ಅದರಿಂದ ಮನುಷ್ಯನು ಸಾಯುವುದಿಲ್ಲ.

ದೇವಿ ! ಧ್ಯಾನ ಮಾಡುವ ಯೋಗಿಗಳ ನಾಲ್ಕನೆಯ ಗತಿ (ಸಾಧನೆ)ಯನ್ನು ಹೇಳಲಾಗುತ್ತದೆ. ಯೋಗಿಯು ತನ್ನ ಚಿತ್ತವನ್ನು ವಶದಲ್ಲಿಸಿಕೊಂಡು ಯಥಾಯೋಗ್ಯ ಸುಖಿಮಯ ಆಸನದಲ್ಲಿ ಕುಳಿತುಕೊಳ್ಳಲಿ. ಅವನು ಶರೀರವನ್ನು ಎತ್ತರಿಸಿ ಬೊಸಗೆಯನ್ನು ಮಾಡಿ ಕೊಕ್ಕಿನಂತಿರುವ ಬಾಯಿಯಿಂದ ನಿಧಾನವಾಗಿ ವಾಯುವನ್ನು ಕುಡಿಯಬೇಕು. ಹೀಗೆ ಮಾಡುವುದರಿಂದ ಜೀವನದಾತ ಜಲದ ಬಿಂದುಗಳು ಬೀಳತೊಡಗುವವು. ಆ ಬಿಂದುಗಳನ್ನು ವಾಯುವಿನಿಂದ ಮೂಸಿ ನೋಡಬೇಕು. ಆ ಶೀತಲ ಜಲವು ಅಮೃತ ಸ್ವರೂಪವಾಗಿದೆ. ಅದನ್ನು ಪ್ರತಿದಿನವು ಕುಡಿಯುವ ಯೋಗಿಯು ಎಂದೂ ಮೃತ್ಯುವಿಗೆ ವಶನಾಗಲಾರನು. ಅವನಿಗೆ ಹಸಿವು-ಬಾಯಾರಿಕೆಗಳು ಉಂಟಾಗುವುದಿಲ್ಲ. ಅವನ ಶರೀರ ದಿವ್ಯ ಮತ್ತು ತೇಜವು ಮಹಾನ್‌ವಾಗುತ್ತದೆ. ಅವನು ಬಲದಲ್ಲಿ ಆನೆಯಂತೆ, ವೇಗದಲ್ಲಿ ಕುದುರೆಯಂತೆ ಆಗುತ್ತಾನೆ. ಅವನ ದೃಷ್ಟಿಯು ಗರುಡನಂತೆ ತೀಕ್ಷ್ಣವಾಗುತ್ತದೆ. ಅವನಿಗೆ ದೂರದ ಮಾತುಗಳೂ ಕೇಳತೊಡಗುತ್ತವೆ. ಅವನ ಕೂದಲು ಕಪ್ಪಾಗಿ ಗುಂಗುರು-ಗುಂಗುರಾಗುತ್ತವೆ. ಅಂಗಕಾಂತಿಯು ಗಂಧರ್ವರು ಹಾಗೂ ವಿದ್ಯಾಧರರಂತೆ ಆಗುವುದು. ಆ ಮನುಷ್ಯನು ದೇವತೆಗಳ ವರ್ಷಪ್ರಮಾಣದಿಂದ ನೂರು ವರ್ಷಗಳವರೆಗೆ ಜೀವಿಸಿ ಇರುತ್ತಾನೆ. ತನ್ನ ಉತ್ತಮ ಬುದ್ಧಿಯ ಮೂಲಕ ಬೃಹಸ್ಪತಿಯಂತೆ ಆಗುವನು. ಇವನಲ್ಲಿ ಇಚ್ಛಾನುಸಾರ ಸಂಚರಿಸುವ ಶಕ್ತಿಯುಂಟಾಗುತ್ತದೆ ಮತ್ತು ಅವನು ಸದಾ ಸುಖಿಯಾಗಿದ್ದು ಆಕಾಶದಲ್ಲಿ ಸಂಚರಿಸುವ ಶಕ್ತಿಯನ್ನು ಪಡೆದುಕೊಳ್ಳುವನು.

ವರಾನನೇ ! ಈಗ ಮೃತ್ಯುವಿನ ಮೇಲೆ ವಿಜಯ ಪಡೆಯುವ ಇನ್ನೊಂದು ವಿಧಿಯನ್ನು ಹೇಳುತ್ತಿರುವೆನು. ಅದನ್ನು ದೇವತೆಗಳೂ ಕೂಡ ಪ್ರಯತ್ನಪೂರ್ವಕ ಅಡಗಿಸಿ ಇಟ್ಟಿರುವರು; ಅದನ್ನು ನೀನು ಕೇಳು. ಯೋಗಿ ಪುರುಷನು ತನ್ನ ನಾಲಿಗೆಯನ್ನು ಮಡಚಿ ಕಿರುನಾಲಿಗೆಗೆ ತಗಲಿಸುವ ಪ್ರಯತ್ನ ಮಾಡಬೇಕು. ಕೆಲವು ಸಮಯದವರೆಗೆ ಹೀಗೆ ಮಾಡುವುದರಿಂದ ಅದು ಕ್ರಮಶಃ ಉದ್ದವಾಗಿ ಗಂಟಲಿನ ಗಂಟೆಯವರೆಗೆ ತಲುಪುತ್ತದೆ. ಅನಂತರ ನಾಲಿಗೆಯಿಂದ ಗಂಟಲಿನ ಗಂಟೆಯನ್ನು ಮುಟ್ಟಿದಾಗ ಶೀತಲ ಅಮೃತದ ಸ್ರಾವವಾಗುತ್ತದೆ. ಆ ಅಮೃತವನ್ನು ಸದಾ ಕುಡಿಯುವ ಯೋಗಿಯು ಅಮರತ್ವವನ್ನು ಪಡೆಯುವನು.

(ಅಧ್ಯಾಯ ೨೭)

❐ ❐ ❐

ಭಗವತಿ ಉಮೆಯ ಕಾಲಿಕಾ ಅವತಾರದ ಕಥೆ, ದೇವಿಯ ಕೃಪೆಯಿಂದ ಮಧುಕೈಟಭರ ವಧೆಯ ಪ್ರಸಂಗ

ಇದಾದ ಬಳಿಕ ಛಾಯಾಪುರುಷ, ಸರ್ಗ, ಕಶ್ಯಪವಂಶ, ಮನ್ವಂತರ, ಮನುವಂಶ, ಸತ್ಯವ್ರತಾದಿ ವಂಶ, ಪಿತೃಕಲ್ಪ ಹಾಗೂ ವ್ಯಾಸೋತ್ಪತ್ತಿ ಮುಂತಾದವುಗಳ ವರ್ಣನೆಯನ್ನು ಕೇಳಿದ ಬಳಿಕ ಮುನಿಗಳು ಸೂತಪುರಾಣಿಕರಲ್ಲಿ ಕೇಳಿದರು - ಬ್ರಹ್ಮವೇತ್ತರಲ್ಲಿ ಶ್ರೇಷ್ಠರಾದ ಸೂತಪುರಾಣಿಕರೇ ! ನಾವು ನಿಮ್ಮಿಂದ ಭಗವಾನ್ ಶಿವನ ಅನೇಕ ಇತಿಹಾಸಗಳಿಂದ ಕೂಡಿದ ರಮಣೀಯ ಕಥೆಯನ್ನು ಕೇಳಿದೆವು. ಅದು ಶಿವನ ನಾನಾವತಾರಗಳೊಂದಿಗೆ ಸಂಬಂಧವಿರಿಸಿ, ಮನುಷ್ಯರಿಗೆ ಭೋಗ, ಮೋಕ್ಷವನ್ನು ಕೊಡುವುದು. ಇನ್ನು ನಾವು ನಿಮ್ಮಿಂದ ಜಗಜ್ಜನನೀ ಭಗವತಿ ಉಮೆಯ ಮನೋಹರ ಚರಿತ್ರವನ್ನು ಕೇಳಲು ಬಯಸುವೆವು. ಪರಬ್ರಹ್ಮ ಪರಮಾತ್ಮಾ ಮಹೇಶ್ವರನ ಸನಾತನ ಆದ್ಯಾಶಕ್ತಿಯು ಉಮೆ ಎಂಬ ಹೆಸರಿನಿಂದ ವಿಖ್ಯಾತಳಾಗಿರುವಳು. ಅವಳೇ ಮೂರು ಲೋಕಗಳನ್ನು ಉತ್ಪನ್ನಮಾಡುವ ಪರಾಶಕ್ತಿಯಾಗಿರುವಳು. ಮಹಾಮತೇ !

---

* ವೇದಾಹಮೇತಂ ಪುರುಷಂ ಮಹಾಂತಮಾದಿತ್ಯವರ್ಣಂ ತಮಸಃ ಪರಸ್ತಾತ್ ।
ತಮೇವ ವಿದಿತ್ವಾತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇ ಪ್ರಾಯಣಾಯ ॥

(ಶಿ - ಪು - ಉ - ಸಂ - ೨೭/೨೫)

ದಕ್ಷಕನ್ಯೆ ಸತಿ ಮತ್ತು ಹಿಮವಂತನ ಪುತ್ರಿ ಪಾರ್ವತಿ ಇವೆರಡು ಉಮೆಯ ಅವತಾರಗಳನ್ನು ನಾವು ಕೇಳಿದೆವು. ಸೂತಪುರಾಣಿಕರೇ! ಇನ್ನು ಆಕೆಯ ಇತರ ಅವತಾರಗಳನ್ನು ವರ್ಣಿಸಿರಿ. ಜಗಜ್ಜನನೀ ಜಗದಂಬೆ ಉಮೆಯ ಗುಣ ಗಳನ್ನು ಕೇಳುವುದರಿಂದ ಯಾರು ತಾನೇ ವಿರಕ್ತನಾಗ ಬಲ್ಲನು ? ಜ್ಞಾನೀ ಪುರುಷರೂ ಕೂಡ ಆಕೆಯ ಕಥಾ - ಶ್ರವಣದ ಶುಭ ಅವಸರವನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ.

ಸೂತಪುರಾಣಿಕರು ಹೇಳಿದರು - ಮಹಾತ್ಮರೇ ! ನೀವೆಲ್ಲರೂ ಧನ್ಯರಾಗಿರುವಿರಿ. ಸದಾ ಕೃತಕೃತ್ಯರಾಗಿರುವಿರಿ. ಏಕೆಂದರೆ, ಪರಾಂಬಾ ಉಮೆಯ ಮಹಾನ್ ಚರಿತ್ರದ ವಿಷಯದಲ್ಲಿ ಕೇಳುತ್ತಿರುವಿರಿ. ಈ ಕಥೆಯನ್ನು ಕೇಳುವವ, ಓದುವವ, ಚರಣಕಮಲಗಳ ಧೂಳನ್ನೇ ಋಷಿಗಳು ತೀರ್ಥವೆಂದು ತಿಳಿದಿರುವರು. ಯಾರ ಚಿತ್ತವು ಪರಮ ಸಂವಿತ್-ಸ್ವರೂಪಾ ಶ್ರೀಉಮಾದೇವಿಯ ಚಿಂತನೆಯಲ್ಲಿ ತೊಡಗಿರುವುದೋ ಆ ಪುರುಷರು ಧನ್ಯರು, ಕೃತಕೃತ್ಯರು, ಅವರ ತಾಯಿ ಮತ್ತು ಕುಲವು ಧನ್ಯವಾಗಿದೆ. ಯಾರು ಸಮಸ್ತ ಕಾರಣಗಳಿಗೂ ಕಾರಣರೂಪಾ ದೇವೇಶ್ವರೀ ಉಮೆಯನ್ನು ಸ್ತುತಿಸುವುದಿಲ್ಲವೋ, ಅವರು ಮಾಯೆಯ ಗುಣಗಳಿಂದ ಮೋಹಿತರಾಗಿ, ಭಾಗ್ಯಹೀನರಾಗಿದ್ದಾರೆ; ಇದರಲ್ಲಿ ಸಂಶಯವಿಲ್ಲ. ಕರುಣಾರಸದ ಸಿಂಧುಸ್ವರೂಪಾ ಮಹಾದೇವಿಯ ಭಜನೆ ಮಾಡದವರು ಸಂಸಾರರೂಪೀ ಘೋರ ಅಂಧಕಾರಕೂಪದಲ್ಲಿ ಬೀಳುವರು. ಉಮಾದೇವಿಯನ್ನು ಬಿಟ್ಟು ಇತರ ದೇವಿ-ದೇವತೆಗಳಿಗೆ ಶರಣಾಗುವವರು ಗಂಗೆಯನ್ನು ಬಿಟ್ಟು ಬಾಯಾರಿಕೆ ಇಂಗಿಸಲು ಮರುಭೂಮಿಯ ಜಲಾಶಯಕ್ಕೆ ಹೋದಂತೆ. ಆಕೆಯ ಸ್ಮರಣ ಮಾತ್ರದಿಂದ ಧರ್ಮರೂಪೀ ನಾಲ್ಕು ಪುರುಷಾರ್ಥಗಳನ್ನು ಆಯಾಸವಿಲ್ಲದೆ ಪಡೆಯುವರು. ಅಂತಹ ಉಮಾದೇವಿಯ ಆರಾಧನೆಯನ್ನು ಯಾರು ತಾನೇ ಶ್ರೇಷ್ಠ ಪುರುಷರು ಬಿಡಬಲ್ಲರು ?

ಹಿಂದಿನ ಕಾಲದಲ್ಲಿ ಮಹಾಮನಾ ಸುರಥನು ಮೇಧಾ ಋಷಿಗಳಲ್ಲಿ ಇದೇ ಮಾತನ್ನ ಕೇಳಿದ್ದನು. ಆಗ ಮೇಧಾಋಷಿಯು ಕೊಟ್ಟ ಉತ್ತರವನ್ನೇ ನಾನು ತಿಳಿಸುತ್ತಿದ್ದೇನೆ; ನೀವೆಲ್ಲರೂ ಕೇಳಿರಿ. ಮೊದಲು ಸ್ವಾರೋಚಿಷ ಮನ್ವಂತರದಲ್ಲಿ ವಿರಥ ಎಂಬ ಹೆಸರಿನಿಂದ ಪ್ರಸಿದ್ಧನಾದ ಒಬ್ಬ ರಾಜನಾಗಿ ಹೋದನು. ಅವನ ಪುತ್ರ ಸುರಥನಾದನು. ಅವನು ಮಹಾ ಬಲ-ಪರಾಕ್ರಮಗಳಿಂದ ಸಂಪನ್ನನಾಗಿದ್ದನು. ಅವನು ದಾನ ನಿಪುಣ, ಸತ್ಯವಾದೀ, ಸ್ವಧರ್ಮಕುಶಲ, ವಿದ್ವಾಂಸ, ದೇವೀಭಕ್ತ, ದಯಾಸಾಗರ ಹಾಗೂ ಪ್ರಜೆಗಳನ್ನು ಚೆನ್ನಾಗಿ ಪಾಲಿಸುವವನಾಗಿದ್ದನು. ಇಂದ್ರನಂತೆ ತೇಜಸ್ವೀ ಸುರಥರಾಜನು ಪೃಥಿವಿಯನ್ನು ಆಳುತ್ತಿದ್ದಾಗ - ಅವನ ಕೈಯಿಂದ ಭೂಮಂಡಲದ ರಾಜ್ಯವನ್ನು ಕಸಿದುಕೊಳ್ಳುವ ಪ್ರಯತ್ನದಲ್ಲಿ ತೊಡಗಿದ ಒಂಭತ್ತು ಮಂದಿ ರಾಜರಿದ್ದರು. ಅವರು ಸುರಥ ಭೂಪಾಲನ ರಾಜಧಾನಿ ಕೋಲಾಪುರಿಯನ್ನು ನಾಲ್ಕು ಕಡೆಗಳಿಂದಲೂ ಮುತ್ತಿದರು. ಅವರೊಂದಿಗೆ ರಾಜನ ಭಯಾನಕ ಯುದ್ಧವಾಯಿತು. ಅವನ ಶತ್ರುಗಳು ಬಹಳ ಪ್ರಬಲರಾಗಿದ್ದರು. ಆದ್ದರಿಂದ ಸುರಥರಾಜನ ಪರಾಜಯವಾಯಿತು. ಶತ್ರುಗಳು ಇಡೀ ರಾಜ್ಯವನ್ನು ವಶಪಡಿಸಿಕೊಂಡು ಸುರಥನನ್ನು ಕೋಲಾಪುರಿಯಿಂದ ಹೊರಗೆ ಅಟ್ಟಿದರು. ರಾಜನು ತನ್ನ ಇನ್ನೊಂದು ಪುರಕ್ಕೆ ಬಂದು ಅಲ್ಲಿ ಮಂತ್ರಿಗಳೊಂದಿಗೆ ರಾಜ್ಯವನ್ನಾಳತೊಡಗಿದನು. ಆದರೆ ಪ್ರಬಲ ವಿಪಕ್ಷಿಗಳು ಅಲ್ಲಿಯೂ ಆಕ್ರಮಣಮಾಡಿ, ಅವನನ್ನು ಪರಾಜಯಗೊಳಿಸಿದರು. ದೈವಯೋಗದಿಂದ ರಾಜನ ಮಂತ್ರಿಗಳೇ ಅದಿ ಪರಿವಾರದವರು ಶತ್ರುಗಳಾದರು ಮತ್ತು ರಾಜಭಂಡಾರದ ಸಂಚಿತ ಧನವನ್ನೆಲ್ಲ ವಿರೋಧಿ ಮಂತ್ರಿಗಳು ಕೈವಶಪಡಿಸಿಕೊಂಡರು.

ಆಗ ಸುರಥರಾಜನು ಬೇಟೆಯ ನೆಪದಿಂದ ಒಬ್ಬಂಟಿಗನಾಗಿ ಕುದುರೆಯನ್ನೇರಿ ನಗರದಿಂದ ಹೊರಬಿದ್ದು ಗಹನವಾದ ವನಕ್ಕೆ ಹೊರಟುಹೋದನು. ಅಲ್ಲಿ ಅತ್ತ-ಇತ್ತ ಅಲೆಯುತ್ತಾ ರಾಜನು ಓರ್ವ ಶ್ರೇಷ್ಠ ಮುನಿಗಳ ಆಶ್ರಮವನ್ನು ನೋಡಿದನು. ಅದು ಸುತ್ತಲೂ ಹೂದೋಟದಿಂದ ಬಹಳವಾಗಿ ಶೋಭಿಸುತ್ತಿತ್ತು. ಅಲ್ಲಿ ವೇದಮಂತ್ರಗಳ ಧ್ವನಿ ಪ್ರತಿಧ್ವನಿಸುತ್ತಿತ್ತು. ಎಲ್ಲ ಜೀವ-ಜಂತುಗಳು ಶಾಂತಭಾವ ದಿಂದ ಇರುತ್ತಿದ್ದವು. ಮುನಿಯ ಶಿಷ್ಯ ಪ್ರಶಿಷ್ಯರು ಆಶ್ರಮವನ್ನು ಸುತ್ತುವರಿದಿದ್ದರು. ಮಹಾಮತಿಗಳೇ ! ವಿಪ್ರವರ್ಯ ಮೇಧಾಋಷಿಯ ಪ್ರಭಾವದಿಂದ ಆ ಆಶ್ರಮದಲ್ಲಿ ಮಹಾಬಲಿಷ್ಠ ಹುಲಿಯೇ ಮುಂತಾದವುಗಳು, ಅಲ್ಪ ಶಕ್ತಿಯುಳ್ಳ ಗೋವು ಮೊದಲಾದ ಪಶುಗಳನ್ನು ಬೇಡಿಸುತ್ತಿರ ಲಿಲ್ಲ. ಅಲ್ಲಿಗೆ ಹೋದಾಗ ಮುನೀಶ್ವರ ಮೇಧಾರವರು ಮಧುರ ವಚನ, ಆಸನ ಭೋಜನಗಳಿಂದ ಆ ಪರಮ ದಯಾಳು ವಿದ್ವಾನ್ ಸುರಥ ರಾಜನ ಆದರ ಸತ್ಕಾರ ಮಾಡಿದನು.

ಒಂದು ದಿನ ಸುರಥರಾಜನು ಬಹಳ ಚಿಂತಿಸುತ್ತಾ, ಮೋಹಕ್ಕೆ ವಶನಾಗಿ ಅನೇಕ ಪ್ರಕಾರದಿಂದ ಯೋಚಿಸುತ್ತಿ ದ್ದನು. ಅಷ್ಟರಲ್ಲಿ ಅಲ್ಲಿಗೆ ವೈಶ್ಯನೊಬ್ಬನು ಬಂದು ತಲುಪಿದನು. ರಾಜನು ಅವನಲ್ಲಿ ಕೇಳಿದನು - ಅಯ್ಯಾ ! ನೀನು ಯಾರು?

ಯಾತಕ್ಕಾಗಿ ಇಲ್ಲಿಗೆ ಬಂದಿರುವೆ? ನೋಡಿದರೆ ದುಃಖಿಯಂತೆ ಕಾಣುವೆ, ಕಾರಣವೇನು? ನನಗೆ ಹೇಳು. ರಾಜನ ಮುಖದಿಂದ ಇಂತಹ ಮಧುರ ವಚನವನ್ನು ಕೇಳಿ ವೈಶ್ಯಪ್ರವರ ಸಮಾಧಿಯು ಎರಡು ಕಣ್ಣುಗಳಿಂದ ನೀರನ್ನು ಹರಿಸುತ್ತಾ ಪ್ರೇಮ ಮತ್ತು ನಮ್ರತೆಯಿಂದ ಹೀಗೆ ಉತ್ತರವನ್ನು ಕೊಟ್ಟನು.

ವೈಶ್ಯನು ಹೇಳಿದನು-ರಾಜನೇ! ನಾನು ವೈಶ್ಯನಾಗಿದ್ದೇನೆ. ನನ್ನ ಹೆಸರು ಸಮಾಧಿ ಎಂದು. ನಾನು ಧನಿಕರ ವಂಶದಲ್ಲಿ ಹುಟ್ಟಿದವನು. ಆದರೆ ನನ್ನ ಪುತ್ರರು, ಪತ್ನಿಯು, ಬಂಧುಗಳು ಧನಲೋಭದಿಂದ ನನ್ನನ್ನು ಮನೆಯಿಂದ ಹೊರಗೆ ಹಾಕಿದರು. ಆದ್ದರಿಂದ ನನ್ನ ಪ್ರಾರಬ್ಧಕರ್ಮದಿಂದ ದುಃಖಿತನಾಗಿ ನಾನು ವನಕ್ಕೆ ಬಂದಿರುವೆನು. ಕರುಣಾಸಾಗರ ಪ್ರಭುವೇ ! ಇಲ್ಲಿಗೆ ಬಂದು ನಾನು ಪುತ್ರರ, ಪೌತ್ರರ, ಪತ್ನಿಯ, ಸಹೋದರರ ಹಾಗೂ ಇತರ ಸುಹೃದರ ಕ್ಷೇಮ-ಸಮಾಚಾರ ತಿಳಿಯದೇ ಹೋಗಿರುವೆನು.

ರಾಜನು ಹೇಳಿದನು -ಸಮಾಧಿಯೇ ! ದುರಾಚಾರಿ ಹಾಗೂ ಧನಲೋಭಿಗಳಾದ ಪುತ್ರಾದಿಗಳು ನಿನ್ನನ್ನು ಹೊರಗೆ ಹಾಕಿರುವರು. ಅವರ ಕುರಿತು ಮೂರ್ಖ ಜೀವರಂತೆ ನೀನು ಏಕೆ ಪ್ರೇಮವಿರಿಸಿಕೊಂಡಿರುವೆ ?

ವೈಶ್ಯನು ಹೇಳಿದನು - ರಾಜನೇ ! ನೀವು ಒಳ್ಳೆಯ ಮಾತನ್ನೇ ಹೇಳಿದಿರಿ. ನಿಮ್ಮ ವಾಣಿ ಸಾರಗರ್ಭಿತವಾಗಿದೆ. ಆದರೂ ಸ್ನೇಹಪಾಶದಿಂದ ಬಂಧಿತವಾದ ನನ್ನ ಮನಸ್ಸು ಅತ್ಯಂತ ಮೋಹಿತವಾಗಿದೆ.

ಈ ಪ್ರಕಾರ ಮೋಹದಿಂದ ವ್ಯಾಕುಲನಾದ ವೈಶ್ಯ ಮತ್ತು ರಾಜ ಇಬ್ಬರೂ ಮೇಧಾಮುನಿಯ ಬಳಿಗೆ ಹೋದರು. ವೈಶ್ಯಸಹಿತ ರಾಜನು ಕೈ ಮುಗಿದುಕೊಂಡು ಮುನಿಗೆ ನಮಸ್ಕಾರಮಾಡಿ ಇಂತೆಂದನು. ಪೂಜ್ಯರೇ ! ತಾವು ನಮ್ಮಿಬ್ಬರ ಮೋಹಪಾಶವನ್ನು ಕತ್ತರಿಸಿ ಬಿಡಿರಿ. ನನ್ನನ್ನು ರಾಜ್ಯಲಕ್ಷ್ಮಿಯು ತೊರೆದಿರುವಳು. ನಾನು ಗಹನ ವನವನ್ನು ಆಶ್ರಯಿಸಿದೆ. ಆದರೂ ರಾಜ್ಯ ಹೊರಟುಹೋದ ಕಾರಣ ನನಗೆ ಸಂತೋಷವಿಲ್ಲ. ಈ ವೈಶ್ಯನನ್ನು ಪತ್ನೀಪುತ್ರಾದಿ ಸ್ವಜನರು ಮನೆಯಿಂದ ಹೊರಗೆ ಹಾಕಿದರು. ಆದರೂ ಅವರ ಕಡೆಯಿಂದ ಇವನ ಮಮತೆಯು ದೂರವಾಗಲಿಲ್ಲ. ಇದರ ಕಾರಣವೇನು? ಹೇಳಿರಿ. ತಿಳಿವಳಿಕೆಯುಳ್ಳವರಾಗಿದ್ದರೂ ನಮ್ಮಿಬ್ಬರ ಮನಸ್ಸು ಮೋಹದಿಂದ ವ್ಯಾಕುಲವಾಗಿದೆಯಲ್ಲ! ಇದಾದರೋ ದೊಡ್ಡ ಮೂರ್ಖತೆಯಾಗಿದೆ.

ಋಷಿಗಳು ಹೇಳಿದರು - ರಾಜನೇ ! ಸನಾತನ ಶಕ್ತಿಸ್ವರೂಪಾ ಜಗದಂಬೆಯನ್ನು ಮಹಾಮಾಯೆ ಎಂದು ಹೇಳುತ್ತಾರೆ. ಅವಳೇ ಎಲ್ಲರ ಮನಸ್ಸನ್ನು ಸೆಳೆದು ಮೋಹದಲ್ಲಿ ಕೆಡಹುವಳು. ಪ್ರಭೋ ! ಆಕೆಯ ಮಾಯೆಯಿಂದ ಮೋಹಿತರಾದ ಕಾರಣ ಬ್ರಹ್ಮಾದಿ ಸಮಸ್ತ ದೇವತೆಗಳೂ ಕೂಡ ಪರಮ ತತ್ತ್ವವನ್ನು ತಿಳಿಯಲಾರರು. ಹೀಗಿರುವಾಗ ಮನುಷ್ಯರ ಮಾತಾದರೂ ಏನು ? ಆ ಪರಮೇಶ್ವರಿಯೇ ರಜ, ಸತ್ತ್ವ, ತಮ ಈ ಮೂರು ಗುಣಗಳನ್ನು ಆಶ್ರಯಿಸಿ ಸಮಯಕ್ಕೆ ಸರಿಯಾಗಿ ವಿಶ್ವದ ಸೃಷ್ಟಿ ಸ್ಥಿತಿ, ಸಂಹಾರ ಮಾಡುವಳು. ನೃಪಶ್ರೇಷ್ಠನೇ ! ಯಾರ ಮೇಲೆ ಅವಳು ಇಚ್ಛಾನುಸಾರ ರೂಪಗಳನ್ನು ಧರಿಸುವ ವರದಾಯಿನಿ ಜಗದಂಬೆಯು ಪ್ರಸನ್ನಳಾಗುವಳೋ ಅವರೇ ಮೋಹದಿಂದ ಪಾರಾಗುತ್ತಾರೆ.

ರಾಜನು ಕೇಳಿದನು - ಮುನಿಯೇ ! ಎಲ್ಲರನ್ನು ಮೋಹಿತಗೊಳಿಸುವ ಆ ಮಹಾಮಾಯಾ ದೇವಿ ಯಾರು ? ಆಕೆಯ ಪ್ರಾದುರ್ಭಾವ ಹೇಗಾಯಿತು ? ದಯವಿಟ್ಟು ಇದನ್ನು ನಮಗೆ ತಿಳಿಸಿರಿ.

ಋಷಿಯು ಹೇಳಿದರು - ಇಡೀ ಜಗತ್ತು ಏಕಾರ್ಣವ ನೀರಿನಲ್ಲಿ ಮುಳುಗಿದ್ದಾಗ ಯೋಗೇಶ್ವರ ಭಗವಾನ್ ಕೇಶವನು ಶೇಷ ಶಯ್ಯೆಯಲ್ಲಿ ಯೋಗನಿದ್ರೆಯನ್ನು ಆಶ್ರಯಿಸಿ ಮಲಗಿದ್ದನು. ಆ ದಿನಗಳಲ್ಲಿ ಭಗವಾನ್ ವಿಷ್ಣುವಿನ ಕಿವಿಗಳ ಮಲದಿಂದ ಎರಡು ಅಸುರರು ಉತ್ಪನ್ನರಾದರು. ಅವರು ಭೂತಳದಲ್ಲಿ ಮಧು, ಕೈಟಭರೆಂಬ ಹೆಸರಿನಿಂದ ವಿಖ್ಯಾತರಾದರು. ಆ ವಿಶಾಲಕಾಯ ಘೋರ ಅಸುರರಿಬ್ಬರು ಪ್ರಳಯಕಾಲದ ಸೂರ್ಯನಂತೆ ತೇಜಸ್ವಿಗಳಾಗಿದ್ದರು. ಅವರ ತುಟಿಗಳು ಬಹಳ ದೊಡ್ಡದಾಗಿದ್ದು, ಮುಖವು ಕೋರೆದಾಡೆಗಳಿಂದ ಸಂಪೂರ್ಣ ಜಗತ್ತನ್ನೇ ನುಂಗಿಹಾಕಲು ಹವಣಿಸುತ್ತಿದೆಯೋ ಎಂಬಂತೆ ವಿಕರಾಳವಾಗಿತ್ತು. ಅವರಿಬ್ಬರು ಭಗವಾನ್ ವಿಷ್ಣುವಿನ ನಾಭಿಯಿಂದ ಪ್ರಕಟವಾದ ಕಮಲದ ಮೇಲೆ ವಿರಾಜಿಸುತ್ತಿರುವ ಬ್ರಹ್ಮನನ್ನು ನೋಡಿ - 'ಎಲವೋ ! ನೀನು ಯಾರು?' ಎಂದು ಹೇಳುತ್ತಾ ಅವನನ್ನು ಕೊಲ್ಲಲು ಮುಂದಾದರು. ಈ ದೈತ್ಯರಿಬ್ಬರೂ ಆಕ್ರಮಿಸಲು ಬಯಸುವರು, ಭಗವಾನ್ ಜನಾರ್ದನನು ಸಮುದ್ರ ಜಲದಲ್ಲಿ ಮಲಗಿರುವನು, ಇದನ್ನು ನೋಡಿ ಬ್ರಹ್ಮನು ಪರಮೇಶ್ವರಿಯನ್ನು ಸ್ತುತಿಸುತ್ತಾ, ಆಕೆಯಲ್ಲಿ ಪ್ರಾರ್ಥಿಸಿದರು - ಅಂಬಿಕೇ ! ನೀನು ಈ ದುರ್ಜಯ ದೈತ್ಯರಿಬ್ಬರನ್ನು ಮೋಹಿತಗೊಳಿಸು ಹಾಗೂ ಅಜನ್ಮಾ ನಾರಾಯಣನನ್ನು ಎಚ್ಚರಿಸು.

ಋಷಿಗಳು ಹೇಳುತ್ತಾರೆ - ಈ ಪ್ರಕಾರವಾಗಿ ಮಧು - ಕೈಟಭರ ನಾಶಕ್ಕಾಗಿ ಬ್ರಹ್ಮದೇವರು ಪ್ರಾರ್ಥಿಸಿದಾಗ ಸಮಸ್ತ

ವಿದ್ಯೆಗಳ ಅಧಿದೇವತೆ ಜಗಜ್ಜನನಿ ಮಹಾವಿದ್ಯೆಯು ಫಾಲ್ಗುಣ ಶುಕ್ಲ ದ್ವಾದಶಿಗೆ ತ್ರೈಲೋಕ್ಯ ಮೋಹಿನೀ ಶಕ್ತಿಯ ರೂಪದಿಂದ ಪ್ರಕಟಳಾಗಿ ಮಹಾಕಾಳಿಯ ಹೆಸರಿನಿಂದ ಪ್ರಖ್ಯಾತಳಾದಳು. ಅನಂತರ ಆಕಾಶವಾಣಿ ಇಂತು ನುಡಿಯಿತು - 'ಕಮಲಾಸನನೇ ! ಹೆದರಬೇಡ. ಇಂದು ಯುದ್ಧದಲ್ಲಿ ಮಧು-ಕೈಟಭರನ್ನು ಕೊಂದು ನಾನು ನಿನ್ನ ಕಂಟಕವನ್ನು ನಾಶಗೊಳಿಸುವೆನು' ಹೀಗೆ ಹೇಳಿ ಆ ಮಹಾಮಾಯೆಯು ಶ್ರೀಹರಿಯ ನೇತ್ರ ಮತ್ತು ಮುಖಗಳಿಂದ ಹೊರಟು ಅವ್ಯಕ್ತ ಜನ್ಮಾ ಬ್ರಹ್ಮನ ದೃಷ್ಟಿಗೆ ಗೋಚರಿಸಿದಳು. ಮತ್ತೆ ದೇವಾಧಿದೇವ ಹೃಷಿಕೇಶ ಜನಾರ್ದನನು ಎಚ್ಚರಗೊಂಡನು. ಅವನು ತನ್ನಿದಿರಿಗೆ ಮಧು-ಕೈಟಭರೆಂಬ ದೈತ್ಯರಿಬ್ಬರನ್ನು ನೋಡಿದನು. ಆ ದೈತ್ಯರೊಂದಿಗೆ ಅತುಲ ತೇಜಸ್ವೀ ವಿಷ್ಣುವಿನ ಐದು ಸಾವಿರ ವರ್ಷಗಳವರೆಗೆ ಬಾಹುಯುದ್ಧ ನಡೆಯಿತು. ಆಗ ಮಹಾಮಾಯೆಯ ಪ್ರಭಾವದಿಂದ ಮೋಹಿತರಾದ ಆ ಶ್ರೇಷ್ಠ ದಾನವರು ಲಕ್ಷ್ಮೀಪತಿಯಲ್ಲಿ - 'ನೀನು ನಮ್ಮಿಂದ ಮನೋವಾಂಛಿತ ವರವನ್ನು ಕೇಳು' ಎಂದು ಹೇಳಿದರು.

ನಾರಾಯಣನು ಹೇಳಿದನು - ನೀವು ಪ್ರಸನ್ನರಾಗಿರುವಿರಾದರೆ ನನ್ನ ಕೈಯಿಂದ ಸಾಯಬೇಕು. ಇದೇ ನನ್ನ ವರವಾಗಿದೆ. ಅದನ್ನು ಕೊಟ್ಟುಬಿಡಿ. ನಾನು ನಿಮ್ಮಲ್ಲಿ ಬೇರೆ ವರವನ್ನು ಬೇಡುವುದಿಲ್ಲ.

ಋಷಿಗಳು ಹೇಳುತ್ತಾರೆ - ಆ ಅಸುರರು ನೋಡಿದರು, ಪೃಥಿವಿಯೆಲ್ಲ ಪ್ರಳಯ ಜಲದಲ್ಲಿ ಮುಳುಗಿದೆ; ಇದನ್ನು ನೋಡಿ, ಅವರು ಕೇಶವನಲ್ಲಿ - 'ನೀರಿನಿಂದ ನೆನೆಯದ ಜಾಗದಲ್ಲಿ ನಮ್ಮಿಬ್ಬರನ್ನು ಕೊಲ್ಲು' ಎಂದು ಹೇಳಿದರು. ಸರಿ, ಒಳ್ಳೆಯದು ಎಂದು ಹೇಳಿ ಭಗವಾನ್ ವಿಷ್ಣುವು ತನ್ನ ಪರಮ ತೇಜಸ್ವೀ ಚಕ್ರವನ್ನು ಎತ್ತಿ ತನ್ನ ತೊಡೆಯ ಮೇಲೆ ಅವರ ಮಸ್ತಕಗಳನ್ನಿಟ್ಟು ತುಂಡರಿಸಿಬಿಟ್ಟನು. ರಾಜನೇ ! ಹೀಗೆ ಕಾಲಿಕೆಯ ಉತ್ಪತ್ತಿಯ ಪ್ರಸಂಗವನ್ನು ಹೇಳಲಾಯಿತು. ಮಹಾಮತಿಯೇ ! ಇನ್ನು ಮಹಾಲಕ್ಷ್ಮಿಯ ಪ್ರಾದುರ್ಭಾವದ ಕಥೆಯನ್ನು ಕೇಳಿರಿ. ಉಮಾದೇವಿಯು ನಿರ್ವಿಕಾರ ಮತ್ತು ನಿರಾಕಾರವಾಗಿದ್ದರೂ ದೇವತೆಗಳ ದುಃಖವನ್ನು ದೂರಾಗಿಸಲು ಯುಗ-ಯುಗಗಳಲ್ಲಿ ಸಾಕಾರರೂಪವನ್ನು ಧರಿಸಿ ಪ್ರಕಟವಾಗುತ್ತಾಳೆ. ಆಕೆಯ ಶರೀರ ಗ್ರಹಣವು ಅವಳ ಇಚ್ಛೆಯ ವೈಭವವೆಂದು ಹೇಳಲಾಗಿದೆ. ಭಕ್ತಜನರು ಆಕೆಯ ಗುಣಗಳನ್ನು ಕೊಂಡಾಡುತ್ತಾ ಇರುವಂತೆ ಆಕೆಯು ಲೀಲೆಯಿಂದ ಪ್ರಕಟಳಾಗುತ್ತಾಳೆ.

(ಅಧ್ಯಾಯ ೨೮-೪೫)

❐ ❐ ❐

ಸಮಸ್ತ ದೇವತೆಗಳ ತೇಜದಿಂದ ದೇವಿಯ ಮಹಾಲಕ್ಷ್ಮಿಯ ರೂಪದಲ್ಲಿ ಅವತಾರ ಮತ್ತು ಆಕೆಯಿಂದ ಮಹಿಷಾಸುರನ ವಧೆ

ಋಷಿಯು ಹೇಳುತ್ತಾನೆ - ರಾಜನೇ ! ರಂಭ ಎಂಬ ಪ್ರಸಿದ್ಧ ಅಸುರನೊಬ್ಬನಿದ್ದನು. ಅವನು ದೈತ್ಯವಂಶ ಶ್ರೇಷ್ಠನಾಗಿದ್ದನು. ಅವನಿಂದ ಮಹಾತೇಜಸ್ವೀ ಮಹಿಷನೆಂಬ ದಾನವನು ಹುಟ್ಟಿದನು. ದಾನವರಾಜ ಮಹಿಷನು ಸಮಸ್ತ ದೇವತೆಗಳನ್ನು ಯುದ್ಧದಲ್ಲಿ ಪರಾಜಿತಗೊಳಿಸಿ ಸ್ವರ್ಗದಲ್ಲಿ ದೇವೇಂದ್ರನ ಸಿಂಹಾಸನದಲ್ಲಿ ಕುಳಿತು ಮೂರು ಲೋಕಗಳಿಗೆ ಒಡೆಯನಾದನು. ಪರಾಜಿತರಾದ ದೇವತೆಗಳು ಬ್ರಹ್ಮನಲ್ಲಿ ಶರಣಾದರು. ಬ್ರಹ್ಮದೇವರು ಅವರೆಲ್ಲರನ್ನು ಕರೆದುಕೊಂಡು ಭಗವಾನ್ ಶಿವ ಮತ್ತು ವಿಷ್ಣು ಇರುವಲ್ಲಿಗೆ ಹೋದರು. ಅಲ್ಲಿಗೆ ಹೋಗಿ ದೇವತೆಗಳೆಲ್ಲರೂ ಶಿವ ಮತ್ತು ಕೇಶವರಿಗೆ ನಮಸ್ಕಾರ ಮಾಡಿದರು ಮತ್ತು ತಮ್ಮ ಎಲ್ಲ ವೃತ್ತಾಂತವನ್ನು ಯಥಾರ್ಥರೂಪದಿಂದ ವಿವರವಾಗಿ ತಿಳಿಸಿದರು. ಭಗವಂತನೇ ! ದುರಾತ್ಮಾ ಮಹಿಷಾಸುರನು ನಮ್ಮೆಲ್ಲರನ್ನು ರಣಾಂಗಣದಲ್ಲಿ ಗೆದ್ದು ಸ್ವರ್ಗಲೋಕದಿಂದ ಹೊರಗೆ ಹಾಕಿರುವನು. ಅದರಿಂದ ನಾವು ಈ ಮರ್ತ್ಯಲೋಕದಲ್ಲಿ ಎಲ್ಲಿಯೂ ಶಾಂತಿ ಸಿಗದೆ ಅಲೆಯುತ್ತಿದ್ದೇವೆ. ಆ ಅಸುರನು ಇಂದ್ರಾದಿ ದೇವತೆಗಳ ದುರ್ದಶೆ ಮಾಡಿ, ಸೂರ್ಯ, ಚಂದ್ರ, ವರುಣ, ಕುಬೇರ, ಯಮ, ಇಂದ್ರ, ಅಗ್ನಿ, ವಾಯು, ಗಂಧರ್ವ, ವಿದ್ಯಾಧರ, ಚಾರಣ - ಇವರೆಲ್ಲರ ಕರ್ತವ್ಯವನ್ನು ಆ ಅಸುರನು ತಾನೇ ವಹಿಸಿಕೊಂಡು ನಡೆಸುತ್ತಿದ್ದನು. ಅವನು ದೈತ್ಯ ಪಕ್ಷಕ್ಕೆ ಅಭಯವನ್ನಿತ್ತು, ಎಲ್ಲರನ್ನು ಒಟ್ಟುಗೂಡಿಸಿದ್ದನು. ಆದರಿಂದ ದೇವತೆಗಳಾದ ನಾವೆಲ್ಲರೂ ನಿಮಗೆ ಶರಣು ಬಂದಿರುವೆವು. ನೀವಿಬ್ಬರು ನಮ್ಮನ್ನು ರಕ್ಷಿಸಿರಿ ಆಗೂ ಆ ಅಸುರನ ವಧೆಯ ಉಪಾಯವನ್ನು ಬೇಗನೆ ಮಾಡಿ; ಏಕೆಂದರೆ ನೀವಿಬ್ಬರೂ ಇದನ್ನು ಮಾಡಲು ಸಮರ್ಥರಾಗಿರುವಿರಿ.

ದೇವತೆಗಳ ಈ ಮಾತನ್ನು ಕೇಳಿ ಭಗವಾನ್ ಶಿವ ಮತ್ತು ವಿಷ್ಣು ಅತ್ಯಂತ ಕ್ರೋಧಿತರಾದರು. ರೋಷದಿಂದ ಅವರ

ಕಣ್ಣುಗಳು ತಿರುಗತೊಡಗಿದವು. ಆಗ ಅತ್ಯಂತ ಕ್ರೋಧಗೊಂಡ ಭಗವಾನ್ ಶಿವ ಮತ್ತು ವಿಷ್ಣುವಿನ ಮುಖಗಳಿಂದ ಹಾಗೂ ಇತರ ದೇವತೆಗಳ ಶರೀರದಿಂದ ತೇಜವು ಪ್ರಕಟಗೊಂಡಿತು. ಆ ತೇಜದ ಪುಂಜವು ಅತ್ಯಂತ ಪ್ರಜ್ವಲಿತವಾಗಿ ಹತ್ತು ದಿಕ್ಕುಗಳಲ್ಲಿಯೂ ಪ್ರಕಾಶಿಸಿತು. ದುರ್ಗೆಯ ಧ್ಯಾನದಲ್ಲೇ ತೊಡಗಿರುವ ದೇವತೆಗಳೆಲ್ಲರೂ ಆ ತೇಜವನ್ನು ಪ್ರತ್ಯಕ್ಷವಾಗಿ ನೋಡಿದರು. ಸಮಸ್ತ ದೇವತೆಗಳ ಶರೀರದಿಂದ ಹೊರಟಿರುವ ಆ ಅತ್ಯಂತ ಭೀಷಣ ತೇಜವು ಒಂದಾಗಿ ಒಂದು ನಾರಿಯ ರೂಪವನ್ನು ಪಡೆಯಿತು. ಆ ನಾರಿಯು ಸಾಕ್ಷಾತ್ ಮಹಿಷಾಸುರಮರ್ದಿನಿ ದೇವಿಯಾಗಿದ್ದಳು. ಆಕೆಯ ಪ್ರಕಾಶಮಾನ ಮುಖವು ಭಗವಾನ್ ಶಿವನ ತೇಜದಿಂದ ಪ್ರಕಟವಾಗಿತ್ತು. ಭುಜಗಳು ವಿಷ್ಣುವಿನ ತೇಜದಿಂದ ಉತ್ಪನ್ನವಾಗಿದ್ದವು, ಕೂದಲು ಯಮರಾಜನ ತೇಜದಿಂದ ಆವಿರ್ಭವಿಸಿದ್ದವು. ಆಕೆಯ ಎರಡು ಸ್ತನಗಳು ಚಂದ್ರನ ತೇಜದಿಂದ ಪ್ರಕಟಗೊಂಡಿದ್ದವು. ಕಟಿಭಾಗವು ಇಂದ್ರನ ತೇಜದಿಂದ ಹಾಗೂ ತೊಡೆಗಳು, ಮೊಣಕಾಲುಗಳು ವರುಣನ ತೇಜದಿಂದ ಉಂಟಾಗಿದ್ದವು. ಪೃಥಿವಿಯ ತೇಜದಿಂದ ನಿತಂಬಗಳು, ಬ್ರಹ್ಮನ ತೇಜದಿಂದ ಎರಡು ಚರಣಗಳೂ ಆವಿರ್ಭವಿಸಿದ್ದವು. ಕಾಲಿನ ಬೆರಳುಗಳು ಸೂರ್ಯನ ತೇಜದಿಂದ ಮತ್ತು ಕೈಗಳ ಬೆರಳುಗಳು ವಸುಗಳ ತೇಜದಿಂದ ಉತ್ಪನ್ನವಾಗಿದ್ದವು. ಮೂಗು ಕುಬೇರನ ತೇಜದಿಂದ ಹಲ್ಲುಗಳು ಪ್ರಜಾಪತಿಯ, ಮೂರು ಕಣ್ಣುಗಳು ಅಗ್ನಿಯ ತೇಜದಿಂದ, ಎರಡು ಹುಬ್ಬುಗಳು ಸಾಧ್ಯಗಣರ ತೇಜದಿಂದ, ವಾಯುವಿನ ತೇಜದಿಂದ ಕಿವಿಗಳು, ಇತರ ಅವಯವಗಳು ಉಳಿದ ದೇವತೆಗಳ ತೇಜದಿಂದ ಪ್ರಕಟವಾಗಿದ್ದವು. ಹೀಗೆ ದೇವತೆಗಳ ತೇಜದಿಂದ ಪ್ರಕಟಳಾದ ಕಮಲಾಲಯೆ ಲಕ್ಷ್ಮಿಯೇ ಆ ಪರಮೇಶ್ವರಿಯಾಗಿದ್ದಳು. ಸಮಸ್ತ ದೇವತೆಗಳ ತೇಜೋರಾಶಿಯಿಂದ ಪ್ರಕಟಗೊಂಡ ಆ ದೇವಿಯನ್ನು ನೋಡಿ ದೇವತೆಗಳೆಲ್ಲರಿಗೂ ಬಹಳ ಹರ್ಷವುಂಟಾಯಿತು. ಆದರೆ ಆಕೆಯ ಬಳಿಯಲ್ಲಿ ಯಾವ ಅಸ್ತ್ರ-ಶಸ್ತ್ರಗಳಿರಲಿಲ್ಲ. ಇದನ್ನು ನೋಡಿ ಬ್ರಹ್ಮಾದಿ ದೇವೇಶ್ವರರು ಶಿವಾದೇವಿಗೆ ಅಸ್ತ್ರ-ಶಸ್ತ್ರಗಳನ್ನು ಅರ್ಪಿಸಲು ಯೋಚಿಸಿದರು. ಆಗ ಮಹೇಶ್ವರನು ಮಹೇಶ್ವರಿಗೆ ಶೂಲವನ್ನು ಅರ್ಪಿಸಿದನು. ಭಗವಾನ್ ವಿಷ್ಣುವು ಚಕ್ರವನ್ನು, ವರುಣನು ಪಾಶವನ್ನು, ಅಗ್ನಿಯು ಶಕ್ತಿಯನ್ನು, ವಾಯುವು ಧನುಷ್ಯವನ್ನು ಮತ್ತು ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳನ್ನು, ಶಚೀಪತಿ ಇಂದ್ರನು ವಜ್ರವನ್ನು ಹಾಗೂ ಗಂಟೆಯನ್ನು ಅರ್ಪಿಸಿದನು. ಯಮರಾಜನು ಕಾಲದಂಡವನ್ನು, ಪ್ರಜಾಪತಿಯು ಅಕ್ಷಮಾಲೆಯನ್ನು, ಬ್ರಹ್ಮನು ಕಮಂಡಲುವನ್ನು, ಸೂರ್ಯನು ಸಮಸ್ತ ರೋಮಕೂಪಗಳಲ್ಲಿ ತನ್ನ ಕಿರಣಗಳನ್ನು ಅರ್ಪಿಸಿದನು. ಕಾಲನು ಹೊಳೆಯುವ ಗುರಾಣಿಯನ್ನು ಮತ್ತು ಖಡ್ಗವನ್ನು, ಕ್ಷೀರಸಾಗರನು ಸುಂದರ ಹಾರವನ್ನು ಹಾಗೂ ಎಂದೂ ಮಾಸದ ಎರಡು ದಿವ್ಯ ವಸ್ತ್ರಗಳನ್ನು ನೀಡಿದನು. ಜೊತೆಗೆ ಅವನು ದಿವ್ಯ ಚೂಡಾಮಣಿಯನ್ನು, ಎರಡು ಕುಂಡಲಗಳನ್ನು, ಅನೇಕ ಕಂಕಣಗಳನ್ನು, ಅರ್ಧಚಂದ್ರ, ಕೇಯೂರ, ಮನೋಹರ-ನೂಪುರಗಳು, ಕಂಠಹಾರಗಳು ಮತ್ತು ಎಲ್ಲ ಬೆರಳುಗಳಿಗೆ ತೊಡುವ ರತ್ನಮಯ ಉಂಗುರಗಳನ್ನು ಅರ್ಪಿಸಿದನು. ವಿಶ್ವಕರ್ಮನು ಆಕೆಗೆ ಮನೋಹರ ಪರಶುವನ್ನು ನೀಡಿದನು. ಜೊತೆಗೆ ಅನೇಕ ಪ್ರಕಾರದ ಅಸ್ತ್ರಗಳನ್ನು ಮತ್ತು ಅಭೇದ್ಯ ಕವಚವನ್ನು ಕೊಟ್ಟನು. ಸಮುದ್ರನು ಎಂದೂ ಬಾಡದಿರುವ ಸುರಮ್ಯ ಸರಸವಾಗಿರುವ ಮಾಲೆಯನ್ನು ಹಾಗೂ ಒಂದು ಕಮಲವನ್ನು ಅರ್ಪಿಸಿದನು. ಹಿಮವಂತನು ವಾಹನವಾಗಿ ಸಿಂಹವನ್ನು, ನಾನಾ ಪ್ರಕಾರದ ರತ್ನಗಳನ್ನು ನೀಡಿದನು. ಕುಬೇರನು ಆಕೆಗೆ ಮಧುತುಂಬಿದ ಪಾತ್ರೆಯನ್ನು ಅರ್ಪಿಸಿದನು. ಸರ್ಪರಾಜ ಮಹಾಶೇಷನು ವಿಚಿತ್ರರಚನಾ ಕೌಶಲ್ಯದಿಂದ ನಾನಾ ಪ್ರಕಾರದ ರತ್ನಮಣಿಗಳನ್ನು ಪೋಣಿಸಿದ ಸುಶೋಭಿತ ಒಂದು ನಾಗಹಾರವನ್ನು ಕೊಟ್ಟನು. ಇವರೆಲ್ಲರೂ ಹಾಗೂ ಇತರ ದೇವತೆಗಳು ಕೂಡ ಆಭೂಷಣ, ಅಸ್ತ್ರ-ಶಸ್ತ್ರಗಳನ್ನು ನೀಡಿ ದೇವಿಯನ್ನು ಸಮ್ಮಾನಿಸಿದರು. ಅನಂತರ ಆಕೆಯು ಪದೇ-ಪದೇ ಅಟ್ಟಹಾಸ ಮಾಡುತ್ತಾ ಉಚ್ಚಸ್ವರದಿಂದ ಗರ್ಜಿಸಿದಳು. ಆಕೆಯ ಆ ಭಯಂಕರ ನಾದದಿಂದ ಸಂಪೂರ್ಣ ಆಕಾಶವು ಪ್ರತಿಧ್ವನಿಸಿತು. ಅದರಿಂದ ಭಾರಿ ದೊಡ್ಡ ಪ್ರತಿಧ್ವನಿ ಉಂಟಾಯಿತು. ಅದರಿಂದ ಮೂರು ಲೋಕಗಳಲ್ಲಿಯೂ ಗದ್ದಲವೆದ್ದಿತು. ನಾಲ್ಕು ಸಮುದ್ರಗಳು ಮೇರೆ ಮೀರಿದವು. ಪೃಥಿವಿಯು ನಡುಗಿತು. ಆಗ ಮಹಿಷಾಸುರನಿಂದ ಪೀಡಿತರಾದ ದೇವತೆಗಳು ದೇವಿಯ ಜಯ-ಜಯಕಾರ ಮಾಡಿದರು.

ಅನಂತರ ದೇವತೆಗಳೆಲ್ಲರೂ ಆ ಮಹಾಲಕ್ಷ್ಮೀಸ್ವರೂಪಾ ಪರಾಶಕ್ತಿ ಜಗದಂಬೆಯನ್ನು ಭಕ್ತಿ-ಗದ್ಗದ ವಾಣಿಯಿಂದ ಸ್ತುತಿಸಿದರು. ಸಂಪೂರ್ಣ ತ್ರಿಲೋಕಗಳು ಕ್ಷೋಭೆಗೊಂಡಿರುವುದನ್ನು ನೋಡಿ ದೇವವೈರಿ ದೈತ್ಯನು ತನ್ನ ಸಮಸ್ತ ಸೈನ್ಯವನ್ನು ಕವಚಾದಿಗಳಿಂದ ಸುಸಜ್ಜಿತಗೊಳಿಸಿ, ಕೈಯಲ್ಲಿ ಆಯುಧವನ್ನು ಹಿಡಿದು ಕೂಡಲೇ ಎದ್ದು ನಿಂತನು. ರೋಷತುಂಬಿದ ಮಹಿಷಾಸುರನು ಆ ಶಬ್ದವನ್ನು

ಗುರಿಯಾಗಿಟ್ಟುಕೊಂಡು ಓಡಿದನು ಹಾಗೂ ಮುಂದೆ ಹೋಗಿ ಅವನು ದೇವಿಯನ್ನು ನೋಡಿದನು. ಅವಳು ತನ್ನ ಪ್ರಭೆಯಿಂದ ಮೂರು ಲೋಕಗಳನ್ನು ಬೆಳಗುತ್ತಿದ್ದಳು. ಆಗಲೇ ಮಹಿಷಾಸುರನು ಸಾಕಿದ ಕೋಟಿ – ಕೋಟಿ ಶಸ್ತ್ರಧಾರಿ ಮಹಾವೀರ ರಾಕ್ಷಸರು ಅಲ್ಲಿಗೆ ಬಂದು ಸೇರಿದರು. ಚಿಕ್ಷುರ, ಚಾಮರ, ಉದಗ್ರ, ಕರಾಲ, ಉದ್ಧತ, ಬಾಷ್ಕಲ, ತಾಮ್ರ, ಉಗ್ರಾಸ್ಯ, ಉಗ್ರವೀರ್ಯ, ಬಿಡಾಲ, ಅಂಧಕ, ದುರ್ಧರ, ದುರ್ಮುಖಿ, ತ್ರಿನೇತ್ರ ಮತ್ತು ಮಹಾಹನು – ಇವರು ಹಾಗೂ ಇತರ ಬಹಳಷ್ಟು ಯುದ್ಧಕುಶಲ ಶೂರವೀರರು ಸಮರಾಂಗಣದಲ್ಲಿ ದೇವಿಯೊಡನೆ ಯುದ್ಧಮಾಡ ತೊಡಗಿದರು. ಅವರೆಲ್ಲರೂ ಅಸ್ತ್ರ-ಶಸ್ತ್ರಗಳ ವಿದ್ಯೆಯಲ್ಲಿ ಪಾರಂಗತರಾಗಿದ್ದರು. ಈ ಪ್ರಕಾರ ದೇವೀ ಮತ್ತು ದೈತ್ಯರು ಪರಸ್ಪರ ಕಾದಾಡತೊಡಗಿದರು. ಅವರ ಆ ಭೀಷಣ ಸಮಯ ಹೊಡೆದಾಟ-ಬಡಿದಾಟದಲ್ಲೇ ಕಳೆಯಿತು. ಹೀಗೆ ಭಯಾನಕ ಯುದ್ಧವಾದ ಬಳಿಕ ಮಹಿಷಾಸುರನು ದೇವಿಯೊಡನೆ ಮಾಯಾಯುದ್ಧ ಮಾಡತೊಡಗಿದನು.

ಆಗ ದೇವಿಯು ಹೇಳಿದಳು – ಎಲವೋ ಮೂಢನೇ ! ನಿನ್ನ ಬುದ್ಧಿಯು ಮಸಳಿಸಿದೆ. ನೀನು ವ್ಯರ್ಥವಾಗಿ ಹಟವನ್ನು ಏಕೆ ತೊಟ್ಟಿರುವೆ ? ಮೂರು ಲೋಕಗಳಲ್ಲಿಯೂ ಯಾವನೇ ಅಸುರನು ಯುದ್ಧದಲ್ಲಿ ನನ್ನೆದುರಿಗೆ ನಿಲ್ಲಲಾರನು.

ಹೀಗೆ ಹೇಳಿ ಸರ್ವಕಾಲಮಯೀ ದೇವಿಯು ನೆಗೆದು ಮಹಿಷಾಸುರನ ಮೇಲೆ ಏರಿದಳು. ತನ್ನ ಕಾಲಿನಿಂದ ಅವನನ್ನು ಒತ್ತಿಹಿಡಿದು ಆಕೆಯು ಭಯಂಕರ ತ್ರಿಶೂಲದಿಂದ ಅವನ ಕಂಠಕ್ಕೆ ಆಘಾತಮಾಡಿದಳು. ಆಕೆಯ ಕಾಲಿನಿಂದ ತುಳಿಯಲ್ಪಟ್ಟಿದ್ದರೂ ಮಹಿಷಾಸುರನು ತನ್ನ ಬಾಯಿಯಿಂದ ಇನ್ನೊಂದು ರೂಪದಿಂದ ಹೊರಬರತೊಡಗಿದನು. ಇನ್ನು ಅವನ ಅರ್ಧ ಶರೀರ ಮಾತ್ರ ಹೊರಕ್ಕೆ ಬಂದಾಗ ದೇವಿಯು ತನ್ನ ಪ್ರಭಾವದಿಂದ ಅದನ್ನು ತಡೆದುಬಿಟ್ಟಳು. ಅರ್ಧಮಾತ್ರ ಹೊರಟಿದ್ದರೂ ಆ ಮಹಾ ಅಧಮ ದೈತ್ಯನು ದೇವಿಯೊಂದಿಗೆ ಯುದ್ಧಮಾಡತೊಡಗಿದನು. ಆಗ ದೇವಿಯು ಭಾರೀ ದೊಡ್ಡ ಖಡ್ಗದಿಂದ ಅವನ ತಲೆಯನ್ನು ಕಡಿದು ಅಸುರನನ್ನು ನೆಲಕ್ಕುರುಳಿಸಿದಳು. ಮತ್ತೆ ಅವನ ಸೈನಿಕರು ಅಯ್ಯೋ ! ಅಯ್ಯೋ ! ಎಂದು ಬೊಬ್ಬಿಡುತ್ತಾ ಮುಖತಗ್ಗಿಸಿ, ಭಯಗೊಂಡು ರಣಾಂಗಣದಿಂದ ಓಡುತ್ತಾ, ಕಾಪಾಡಿ, ಕಾಪಾಡಿ ಎಂದು ಕೂಗಿಕೊಂಡರು. ಆ ಸಮಯದಲ್ಲಿ ಇಂದ್ರಾದಿ ದೇವತೆಗಳೆಲ್ಲರೂ ದೇವಿಯನ್ನು ಸ್ತುತಿಸಿದರು. ಗಂಧರ್ವರು ಹಾಡತೊಡಗಿದರು. ಅಪ್ಸರೆಯರು ನೃತ್ಯವಾಡತೊಡಗಿದರು. ರಾಜನೇ ! ಹೀಗೆ ನಾನು ನಿನಗೆ ದೇವಿಯ ಮಹಾಲಕ್ಷ್ಮಿಯ ಅವತಾರದ ಕಥೆಯನ್ನು ಹೇಳಿದೆನು. ಇನ್ನು ನೀನು ಸ್ಥಿರಚಿತ್ತದಿಂದ ಸರಸ್ವತಿಯ ಪ್ರಾದುರ್ಭಾವದ ಪ್ರಸಂಗವನ್ನು ಕೇಳು.

(ಅಧ್ಯಾಯ ೪೬)

❐ ❐ ❐

ದೇವೀ ಉಮೆಯ ಶರೀರದಿಂದ ಸರಸ್ವತಿಯ ಆವಿರ್ಭಾವ, ಆಕೆಯ ರೂಪದ ಪ್ರಶಂಸೆಯನ್ನು ಕೇಳಿ ಶುಂಭನು ಆಕೆಯ ಬಳಿಗೆ ದೂತನನ್ನು ಅಟ್ಟುವುದು, ದೂತನು ನಿರಾಶನಾಗಿ ಮರಳಿದಾಗ ಶುಂಭನು ಕ್ರಮವಾಗಿ ಧೂಮ್ರಲೋಚನ ಚಂಡ-ಮುಂಡ, ರಕ್ತಬೀಜರನ್ನು ಕಳಿಸುವುದು, ದೇವಿಯಿಂದ ಅವರೆಲ್ಲರ ಸಂಹಾರ

ಋಷಿಯು ಹೇಳುತ್ತಾರೆ – ಹಿಂದೆ ಶುಂಭ ಮತ್ತು ನಿಶುಂಭ ಎಂಬ ಸಹೋದರರಿಬ್ಬರು ಪ್ರತಾಪಿ ದೈತ್ಯರಿದ್ದರು. ಅವರಿಬ್ಬರೂ ಚರಾಚರ ಪ್ರಾಣಿಗಳ ಸಹಿತ ಸಮಸ್ತ ಮೂರು ಲೋಕಗಳ ಮೇಲೆ ಬಲಪೂರ್ವಕ ಆಕ್ರಮಣವನ್ನು ಮಾಡಿದರು. ಅದರಿಂದ ಪೀಡಿತರಾದ ದೇವತೆಗಳು ಹಿಮಾಲಯ ಪರ್ವತವನ್ನು ಆಶ್ರಯಿಸಿದರು ಮತ್ತು ಸಮಸ್ತ ಅಭೀಷ್ಟಗಳನ್ನು ಕೊಡುವ ಸರ್ವಭೂತಜನನಿ ಉಮಾದೇವಿಯನ್ನು ಸ್ತುತಿಸಿದರು.

ದೇವತೆಗಳು ಹೇಳಿದರು – ಮಹೇಶ್ವರೀ ದುರ್ಗೆ ! ನಿನಗೆ ಜಯವಾಗಲಿ. ತನ್ನ ಭಕ್ತರಿಗೆ ಪ್ರಿಯವನ್ನುಂಟುಮಾಡುವ ದೇವಿಯೇ ! ನಿನಗೆ ಜಯವಾಗಲಿ. ನೀನು ಮೂರು ಲೋಕಗಳನ್ನು ರಕ್ಷಿಸುವ ದೇವಿಯಾಗಿರುವೆ. ನಿನಗೆ ಪುನಃ-ಪುನಃ ನಮಸ್ಕಾರಗಳು. ನೀನೇ ಮೋಕ್ಷವನ್ನು ಕರುಣಿಸುವ ಪರಾಂಬಿಕೆಯಾಗಿರುವೆ. ನಿನಗೆ ಪದೇ-ಪದೇ ವಂದನೆಗಳು. ನೀನು ಸಮಸ್ತ ಪ್ರಪಂಚದ ಉತ್ಪತ್ತಿ, ಸ್ಥಿತಿ, ಸಂಹಾರ ಮಾಡುವವಳಾಗಿರುವೆ; ನಿನಗೆ ನಮಸ್ಕಾರಗಳು. ಕಾಳಿಕಾ ಮತ್ತು ತಾರಾ ರೂಪಗಳನ್ನು ಧರಿಸುವ ದೇವಿಯೇ ! ನಿನಗೆ ವಂದನೆಗಳು. ಛಿನ್ನಮಸ್ತಾ ನಿನ್ನದೇ ಸ್ವರೂಪವಾಗಿದೆ.

ನೀನೇ ಶ್ರೀವಿದ್ಯೆಯಾಗಿರುವೆ. ನಿನಗೆ ನಮನಗಳು. ಭುವನೇಶ್ವರಿಯೇ! ನಿನಗೆ ನಮಸ್ಕಾರಗಳು. ಭೈರವ ರೂಪಿಣಿಯೇ! ನಿನಗೆ ವಂದನೆ. ನೀನೇ ಬಗಲಾಮುಖಿ ಯಾಗಿರುವೆ. ಧೂಮಾವತಿಯಾಗಿರುವೆ. ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ನೀನೇ ತ್ರಿಪುರಸುಂದರೀ, ಮಾತಂಗಿ ಯಾಗಿರುವೆ, ನಿನಗೆ ಪದೇ-ಪದೇ ವಂದನೆಗಳು. ಅಜಿತಾ, ವಿಜಯಾ, ಜಯಾ, ಮಂಗಲಾ ಮತ್ತು ವಿಲಾಸಿನೀ - ಇವೆಲ್ಲ ನಿನ್ನದೇ ಬೇರೆ-ಬೇರೆ ರೂಪಗಳ ಸಂಜ್ಞೆಯಾಗಿವೆ. ಈ ಎಲ್ಲ ರೂಪಗಳಲ್ಲಿರುವ ನಿನಗೆ ನಮಸ್ಕಾರಗಳು. ದೋಗ್ಧ್ರೀ (ಮಾತಾ ಅಥವಾ ಕಾಮಧೇನು) ರೂಪದಲ್ಲಿರುವ ನಿನಗೆ ನಮಸ್ಕಾರ. ಘೋರ ಆಕಾರವನ್ನು ಧರಿಸುವ ನಿನಗೆ ನಮಸ್ಕಾರ. ಅಪರಾಜಿತಾರೂಪಿಯಾದ ನಿನಗೆ ವಂದನೆ. ನಿತ್ಯಾ ಮಹಾವಿದ್ಯೆಯ ರೂಪದಲ್ಲಿ ನಿನಗೆ ಪುನಃ-ಪುನಃ ನಮಸ್ಕಾರಗಳು. ನೀನೇ ಶರಣಾಗತರನ್ನು ಪಾಲಿಸುವ ರುದ್ರಾಣಿಯಾಗಿರುವೆ. ನಿನಗೆ ಪದೇ-ಪದೇ ವಂದನೆಗಳು. ವೇದಾಂತದ ಮೂಲಕ ನಿನ್ನದೇ ಸ್ವರೂಪದ ಬೋಧ ಉಂಟಾಗುತ್ತದೆ. ನಿನಗೆ ನಮಸ್ಕಾರ. ಪರಮಾತ್ಮನು ನೀನೇ, ನಿನಗೆ ಪ್ರಣಾಮಗಳು. ಅನಂತಕೋಟಿ ಬ್ರಹ್ಮಾಂಡಗಳನ್ನು ಸಂಚಾಲನ ಮಾಡುವ ಜಗದಂಬೆಯಾದ ನಿನಗೆ ಪದೇ-ಪದೇ ನಮಸ್ಕಾರಗಳು.*

ದೇವತೆಗಳು ಈ ಪ್ರಾಕಾರ ಸ್ತುತಿಸಿದಾಗ ವರದಾಯಿನಿ ಹಾಗೂ ಕಲ್ಯಾಣರೂಪಿಣೀ ಗೌರಿದೇವಿಯು ಬಹಳ ಪ್ರಸನ್ನಳಾದಳು. ಆಕೆಯು ಸಮಸ್ತ ದೇವತೆಗಳಲ್ಲಿ ಕೇಳಿದಳು - 'ನೀವು ಇಲ್ಲಿ ಯಾರನ್ನು ಸ್ತುತಿಸುತ್ತಿರುವಿರಿ?' ಆಗ ಆ ಗೌರಿಯ ದೇಹದಿಂದ ಓರ್ವ ಕುಮಾರಿಯು ಪ್ರಕಟಳಾದಳು. ಅವಳು ದೇವತೆಗಳೆಲ್ಲರನ್ನು ನೋಡುತ್ತಾ ಶಿವಶಕ್ತಿಯಲ್ಲಿ ಆದರದಿಂದ ನುಡಿದಳು - 'ತಾಯಿ! ಈ ಸಮಸ್ತ ಸ್ವರ್ಗವಾಸಿ ದೇವತೆಗಳು ನಿಶಂಭ ಮತ್ತು ಶಂಭು ಎಂಬ ಪ್ರಬಲ ದೈತ್ಯರಿಂದ ಅತ್ಯಂತ ಪೀಡಿತರಾಗಿ ತಮ್ಮ ರಕ್ಷಣೆಗಾಗಿ ನಿನ್ನನ್ನು ಸ್ತುತಿಸುತ್ತಿರುವರು.' ಪಾರ್ವತಿಯ ಶರೀರಕೋಶದಿಂದ ಆ ಕುಮಾರಿಯು ಆವಿರ್ಭವಿಸಿದ್ದಳು. ಆದ್ದರಿಂದ ಕೌಶಿಕೀ ಎಂಬ ಹೆಸರಿನಿಂದ ಪ್ರಸಿದ್ಧಳಾದಳು. ಕೌಶಿಕಿಯೇ ಶುಂಭಾಸುರನನ್ನು ನಾಶಮಾಡುವ ಸಾಕ್ಷಾತ್ ಸರಸ್ವತಿಯಾಗಿರುವಳು. ಅಕೆಯನ್ನೇ ಉಗ್ರತಾರಾ ಮತ್ತು ಮಹೋಗ್ರತಾರಾ ಎಂದೂ ಹೇಳಲಾಗಿದೆ. ಮಾತೆಯ ಶರೀರದಿಂದ ಸ್ವತಃ ಪ್ರಕಟಳಾದ ಕಾರಣ ಅವಳು ಈ ಭೂಮಂಡಲದಲ್ಲಿ ಮಾತಂಗಿ ಎಂದೂ ಕರೆಸಲ್ಪಡುವಳು. ಅವಳು ಸಮಸ್ತ ದೇವತೆಗಳಲ್ಲಿ ಹೇಳಿದಳು - 'ನೀವೆಲ್ಲ ನಿರ್ಭಯರಾಗಿರಿ. ನಾನು ಸ್ವತಂತ್ರಳಾಗಿರುವೆನು. ಆದ್ದರಿಂದ ಯಾರ ನೆರವನ್ನೂ ಪಡೆಯದೆಯೇ ನಾನು ನಿಮ್ಮ ಕಾರ್ಯವನ್ನು ಸಿದ್ಧಗೊಳಿಸುವೆನು.' ಹೀಗೆ ಹೇಳಿ ಆ ದೇವಿಯು ತತ್ಕಾಲದಲ್ಲಿ ಅದೃಶ್ಯಳಾದಳು.

ಒಂದು ದಿನ ಶುಂಭ ಮತ್ತು ನಿಶುಂಭರ ಸೇವಕರಾದ ಚಂಡ-ಮುಂಡರು ದೇವಿಯನ್ನು ನೋಡಿದರು. ಆಕೆಯ ಮನೋಹರ ರೂಪವು ಕಣ್ಣುಗಳಿಗೆ ಹಬ್ಬವಾಗಿತ್ತು. ಅವಳನ್ನು ನೋಡುತ್ತಲೇ ಅವರು ಮೋಹಿತರಾಗಿ ಮೈಮರೆತು ನೆಲಕ್ಕುರುಳಿದರು. ಮತ್ತೆ ಎಚ್ಚರಗೊಂಡು ಅವರು ತಮ್ಮ ರಾಜನಬಳಿಗೆ ಹೋಗಿ ಆದ್ಯೋಪಾಂತ ವೃತ್ತಾಂತವನ್ನು ತಿಳಿಸುತ್ತಾ - 'ಮಹಾರಾಜ! ನಾವಿಬ್ಬರು ಒಬ್ಬ ಅಪೂರ್ವ ಸುಂದರ ನಾರಿಯನ್ನು ನೋಡಿದೆವು. ಅವಳು ಹಿಮಾಲಯದ ರಮಣೀಯ ಶಿಖರದಲ್ಲಿದ್ದು, ಸಿಂಹದ ಮೇಲೆ ವಿರಾಜಿಸುತ್ತಿರುವಳು.' ಎಂದು ಹೇಳಿದರು. ಚಂಡ-ಮುಂಡರ ಮಾತನ್ನು ಕೇಳಿದ ಮಹಾಸುರ ಶುಂಭನು ದೇವಿಯ ಬಳಿಗೆ ಸುಗ್ರೀವನೆಂಬ ದೂತನನ್ನು ಕಳಿಸುತ್ತಾ ಹೇಳಿದನು - 'ದೂತನೇ! ಹಿಮಾಲಯದಲ್ಲಿ ಯಾರೋ ಅಪೂರ್ವ ಸುಂದರಿಯು ಇರುವಳಂತೆ. ನೀನು ಅಲ್ಲಿಗೆ ಹೋಗಿ, ಆಕೆಗೆ ನನ್ನ ಸಂದೇಶವನ್ನು ತಿಳಿಸಿ, ಪ್ರಯತ್ನಪೂರ್ವಕ

---

* ದೇವಾ ಊಚುಃ -

ಜಯ ದುರ್ಗೆ ಮಹೇಶಾನಿ ಜಯಾತ್ಮೀಯಜನಪ್ರಿಯೇ। ತ್ರೈಲೋಕತ್ರಾಣಕಾರಿಣ್ಯೈ ಶಿವಯೈ ತೇ ನಮೋ ನಮಃ ॥
ನಮೋಮುಕ್ತಿಪ್ರದಾಯಿನ್ಯೈ ಪರಾಂಬಾಯೈ ನಮೋ ನಮಃ। ನಮಃ ಸಮಸ್ತ ಸಂಸಾರೋತ್ಪತ್ತಿ ಸ್ಥಿತ್ಯಂತಕಾರಿಕೇ ॥
ಕಾಲಿಕಾರೂಪಸಂಪನ್ನೇ ನಮಸ್ತಾರಾಕೃತೇ ನಮಃ। ಛಿನ್ನಮಸ್ತಾಸ್ವರೂಪಾಯೈ ಶ್ರೀವಿದ್ಯಾಯೈ ನಮೋಽಸ್ತು ತೇ ॥
ಭುವನೇಶಿ ನಮಸ್ತುಭ್ಯಂ ನಮಸ್ತೇ ಭೈರವಾಕೃತೇ। ನಮೋಽಸ್ತು ಬಗಲಾಮುಖ್ಯೈ ಧೂಮಾವತ್ಯೈ ನಮೋ ನಮಃ ॥
ನಮಸ್ತ್ರಿಪುರಸುಂದರ್ಯೈ ಮಾತಂಗ್ಯೈ ತೇ ನಮೋನಮಃ। ಅಜಿತಾಯೈ ನಮಸ್ತುಭ್ಯಂ ವಿಜಯಾಯೈ ನಮೋ ನಮಃ ॥
ಜಯಾಯೈ ಮಂಗಲಾಯೈ ತೇ ವಿಲಾಸಿನ್ಯೈ ನಮೋ ನಮಃ।ದೋಗ್ಧ್ರೀರೂಪೆ ನಮಸ್ತುಭ್ಯಂ ನಮೋ ಘೋರಾಕೃತೇಽಸ್ತು ತೇ ॥
ನಮೋಽಪರಾಜಿತಾಕಾರೇ ನಿತ್ಯಾಕಾರೇ ನಮೋ ನಮಃ। ಶರಣಾಗತಪಾಲಿನ್ಯೈ ರುದ್ರಾಣ್ಯೈ ತೇ ನಮೋ ನಮಃ ॥
ನಮೋ ವೇದಾಂತ ವೇದ್ಯಾಯೈ ನಮಸ್ತೇ ಪರಮಾತ್ಮನೇ। ಅನಂತಕೋಟಿ ಬ್ರಹ್ಮಾಂಡ ನಾಯಿಕಾಯೈ ನಮೋ ನಮಃ ॥
(ಶ -ಪು - ಉ - ಸಂ - ೪೭ /೩-೧೦)

ಆಕೆಯನ್ನು ಇಲ್ಲಿಗೆ ಕರೆದುಕೊಂಡು ಬಾ.' ಹೀಗೆ ಆಪ್ತಕಿಂಕರನನ್ನು ಪಡೆದು ದಾನವಶಿರೋಮಣಿ ಸುಗ್ರೀವನು ಹಿಮಾಲಯಕ್ಕೆ ಹೋಗಿ ಜಗದಂಬೆ ಮಹೇಶ್ವರಿಯಲ್ಲಿ ಇಂತೆಂದನು.

ದೂತನು ಹೇಳಿದನು – ದೇವಿ ! ದೈತ್ಯರಾಜ ಶುಂಭಾಸುರನು ತನ್ನ ಮಹಾ ಬಲ-ಪಿಕ್ರಮದಿಂದ ಮೂರು ಲೋಕಗಳಲ್ಲಿ ವಿಖ್ಯಾತನಾಗಿರುವನು. ಅವನ ತಮ್ಮ ನಿಶುಂಭವೂ ಹಾಗೆಯೇ ಇದ್ದಾನೆ. ಶುಂಭನು ನನ್ನನ್ನು ದೂತನನ್ನಾಗಿಸಿ ನಿನ್ನ ಬಳಿಗೆ ಕಳಿಸಿರುವನು. ಅದರಿಂದ ನಾನು ಇಲ್ಲಿಗೆ ಬಂದಿರುವೆನು. ಸುರೇಶ್ವರಿಯೇ ! ಅವನು ತಿಳಿಸಿದ ಸಂದೇಶವನ್ನು ಈಗ ಕೇಳು – 'ನಾನು ಸಮರಾಂಗಣದಲ್ಲಿ ಇಂದ್ರಾದಿ ದೇವತೆಗಳನ್ನು ಗೆದ್ದು ಅವನ ಸಮಸ್ತ ರತ್ನಗಳನ್ನು ಅಪಹರಿಸಿಕೊಂಡಿರುವೆನು. ಯಜ್ಞದಲ್ಲಿ ದೇವತೆಗಳಿಗೆ ಕೊಡುವ ಹವಿರ್ಭಾಗವನ್ನು ನಾನೇ ಸ್ವತಃ ಉಪಭೋಗಿಸುತ್ತಿರುವೆನು. ನೀನು ಸ್ತ್ರೀಯರಲ್ಲಿ ರತ್ನವಾಗಿರುವೆ, ಎಲ್ಲ ರತ್ನಗಳಿಂದ ಮೀರಿ ಇರುವೆ ಎಂಬುದನ್ನು ನಾನು ಒಪ್ಪುವೆನು. ಅದಕ್ಕಾಗಿ ನೀನು ಕಾಮಜನಿತ ರಸದೊಂದಿಗೆ ನನ್ನನ್ನು ಅಥವಾ ನನ್ನ ತಮ್ಮನನ್ನು ಅಂಗೀಕರಿಸು.'

ದೂತನ ಬಾಯಿಂದ ಶುಂಭನ ಈ ಸಂದೇಶವನ್ನು ಕೇಳಿ ಭೂತನಾಥ ಭಗವಾನ್ ಶಿವನ ಪ್ರಾಣವಲ್ಲಭೆ ಮಹಾಮಾಯೆಯು ಇಂತೆಂದಳು.

ದೇವಿಯು ಹೇಳಿದಳು–ದೂತನೇ ! ನೀನು ಹೇಳುವುದು ನಿಜವಾಗಿದೆ. ನಿನ್ನ ಮಾತಿನಲ್ಲಿ ಸ್ವಲ್ಪವೂ ಸುಳ್ಳು ಇಲ್ಲ. ಆದರೆ ನಾನು ಮೊದಲೇ ಒಂದು ಪ್ರತಿಜ್ಞೆ ಮಾಡಿರುವೆನು. ಅದನ್ನು ಕೇಳು. ನನ್ನ ಗರ್ವವನ್ನು ಚೂರಾಗಿಸುವವನನ್ನೂ, ನನ್ನನ್ನು ಯುದ್ಧದಲ್ಲಿ ಗೆಲ್ಲುವವನನ್ನು ನಾನು ಪತಿಯಾಗಿಸಿ ಕೊಳ್ಳಬಲ್ಲೆನು; ಬೇರೆಯವರನ್ನು ಅಲ್ಲ. ಇದು ನನ್ನ ಕದಲಿಸಲಾರದ ಪ್ರತಿಜ್ಞೆಯಾಗಿದೆ. ಅದಕ್ಕಾಗಿ ನೀನು ಶುಂಭ-ನಿಶುಂಭರಲ್ಲಿ ನನ್ನ ಈ ಪ್ರತಿಜ್ಞೆಯನ್ನು ತಿಳಿಸು. ಮತ್ತೆ ಈ ವಿಷಯದಲ್ಲಿ ಉಚಿತವೆನಿಸಿದಂತೆ ಮಾಡಲಿ.

ದೇವಿಯ ಈ ಮಾತನ್ನು ಕೇಳಿ ದಾನವ ಸುಗ್ರೀವನು ಮರಳಿದನು. ಅಲ್ಲಿಗೆ ಹೋಗಿ ರಾಜನಲ್ಲಿ ವಿಸ್ತಾರವಾಗಿ ಎಲ್ಲ ಮಾತನ್ನು ತಿಳಿಸಿದನು. ದೂತನ ಮಾತನ್ನು ಕೇಳಿ ಉಗ್ರ ಶಾಸನ ಮಾಡುವ ಶುಂಭವು ಕುಪಿತನಾಗಿ ಎದ್ದು ಬಲಿಷ್ಠರಲ್ಲಿ ಶ್ರೇಷ್ಠನಾದ ಸೇನಾಪತಿ ಧೂಮ್ರಾಕ್ಷನಲ್ಲಿ – 'ಧೂಮ್ರಾಕ್ಷನೇ ! ಹಿಮಾಲಯದಲ್ಲಿ ಯಾರೋ ಸುಂದರಿಯು ಇರುವಳಂತೆ. ನೀನು ಶೀಘ್ರವಾಗಿ ಅಲ್ಲಿಗೆ ಹೋಗಿ ಹೇಗಾದರೂ ಅವಳು ಇಲ್ಲಿಗೆ ಬರುವಂತೆ ಕರೆದುಕೊಂಡು ಬಾ. ಅಸುರ ಪ್ರವರನೇ ! ಆಕೆಯನ್ನು ತರಲು ನೀನು ಭಯಪಡಬೇಡ. ಅವಳು ಯುದ್ಧಮಾಡಲು ಬಯಸಿದರೆ ನೀನು ಪ್ರಯತ್ನಪೂರ್ವಕ ಆಕೆಯೊಡನೆ ಯುದ್ಧವನ್ನು ಮಾಡು' ಎಂದು ಆದೇಶಿಸಿದನು.

ಶುಂಭನ ಆಪ್ತಕಿಂಕರನನ್ನು ಪಡೆದು ದೈತ್ಯ ಧೂಮ್ರಾಕ್ಷನು ಹಿಮಾಚಲಕ್ಕೆ ಹೋಗಿ ಉಮೆಯ ಅಂಶದಿಂದ ಪ್ರಕಟಳಾದ ಭಗವತಿ ಭುವನೇಶ್ವರಿಯಲ್ಲಿ ಹೇಳಿದನು – 'ಸುಂದರಿ ! ನನ್ನ ಒಡೆಯನ ಬಳಿಗೆ ನಡೆ. ಇಲ್ಲವಾದರೆ ನಿನ್ನನ್ನು ಕೊಂದು ಬಿಡುವೆನು. ನನ್ನೊಂದಿಗೆ ಅರವತ್ತು ಸಾವಿರ ಅಸುರರ ಸೈನ್ಯವಿದೆ.'

ದೇವಿಯು ಹೇಳಿದಳು – ವೀರನೇ ! ನಿನ್ನನ್ನು ದೈತ್ಯರಾಜನು ಕಳಿಸಿರುವನು. ನನ್ನನ್ನು ಕೊಂದುಹಾಕಿದರೆ ಏನು ಮಾಡಲಿ? ಆದರೆ ಯುದ್ಧವಿಲ್ಲದೆ ನಾನು ಅಲ್ಲಿಗೆ ಹೋಗುವುದು ಅಸಂಭವವಾಗಿದೆ. ಎಂದೇ ನನ್ನ ಅಭಿಪ್ರಾಯವಾಗಿದೆ.

ದೇವಿಯು ಹೀಗೆ ಹೇಳಿದಾಗ ದಾನವ ಧೂಮ್ರಲೋಚನನು ಆಕೆಯನ್ನು ಹಿಡಿಯಲು ಓಡಿದನು. ಆದರೆ ಮಹೇಶ್ವರಿಯು 'ಹುಂ'ಕಾರದ ಉಚ್ಚಾರಮಾತ್ರದಿಂದಲೇ ಅವನನ್ನು ಭಸ್ಮವಾಗಿಸಿದಳು. ಅಂದಿನಿಂದ ಆ ದೇವಿಯನ್ನು ಈ ಭೂತಳದಲ್ಲಿ ಧೂಮಾವತಿ ಎಂದು ಕರೆಯುವರು. ಆಕೆಯನ್ನು ಆರಾಧಿಸಿದರೆ ಅವಳು ತನ್ನ ಭಕ್ತರ ಶತ್ರುಗಳನ್ನು ಸಂಹಾರಮಾಡಿ ಬಿಡುತ್ತಾಳೆ. ಧೂಮ್ರಾಕ್ಷನು ಸತ್ತು ಹೋದಾಗ ಅತ್ಯಂತ ಕುಪಿತವಾದ ದೇವಿಯ ವಾಹನ ಸಿಂಹವು ಅವನ ಜೊತೆಗೆ ಬಂದ ಸಮಸ್ತ ಅಸುರರನ್ನು ತಿಂದು ಹಾಕಿತು. ಸಾಯದೇ ಬದುಕಿರುವರು ಓಡಿಹೋದರು. ಈ ಪ್ರಕಾರ ದೇವಿಯು ದೈತ್ಯ ಧೂಮ್ರಾಕ್ಷನನ್ನು ಕೊಂದು ಹಾಕಿದಳು. ಇದನ್ನು ಕೇಳಿದ ಪ್ರತಾಪಿ ಶುಂಭನಿಗೆ ಭಾರೀ ಕ್ರೋಧವುಂಟಾಯಿತು. ತುಟಿಗಳನ್ನು ಕಚ್ಚಿ ಕ್ರಮವಾಗಿ ಚಂಡ, ಮುಂಡ, ರಕ್ತಬೀಜ ಎಂಬ ಅಸುರರನ್ನು ಕಳಿಸಿದನು. ಆಪತ್ತಿಗೆಪಡೆದು ಆ ದೈತ್ಯರು ದೇವಿಯು ವಿರಾಜಮಾನಳಿದ್ದಲ್ಲಿಗೆ ಹೋದರು. ಅಣಿಮಾದಿ ಸಿದ್ಧಿಗಳಿಂದ ಸೇವಿತಳಾಗಿ ತನ್ನ ಪ್ರಭೆಯಿಂದ ಎಲ್ಲ ದಿಕ್ಕುಗಳನ್ನು ಪ್ರಕಾಶಿಸುತ್ತಾ ಇರುವ ಭಗವತಿ ಸಿಂಹವಾಹಿನಿಯನ್ನು ನೋಡಿ ಆ ಶ್ರೇಷ್ಠ ವೀರದಾನವರು ಹೇಳಿದರು – 'ದೇವಿ ! ನೀನು ಶೀಘ್ರವೇ ಶುಂಭ ಮತ್ತು ನಿಶುಂಭರ ಬಳಿಗೆ ನಡೆ. ಇಲ್ಲದಿದ್ದರೆ ನಿನ್ನನ್ನು ಗಣ ಮತ್ತು ವಾಹನದೊಂದಿಗೆ ಕೊಂದು ಹಾಕುವೆವು. ಸುಂದರಿಯೇ ! ಶುಂಭನನ್ನು ತನ್ನ ಪತಿಯನ್ನಾಗಿಸಿ ಕೋ. ಲೋಕಪಾಲಾದಿಗಳೂ ಅವನನ್ನು ಸ್ತುತಿಸುತ್ತಾರೆ. ಶುಂಭನನ್ನು

ಪತಿಯನ್ನಾಗಿಸಿದರೆ ದೇವತೆಗಳಿಗೂ ದುರ್ಲಭವಾದ ಮಹದಾನಂದವನ್ನು ಪಡೆಯುವೆ.'

ಅವರ ಇಂತಹ ಮಾತನ್ನು ಕೇಳಿ ಪರಮೇಶ್ವರಿ ಅಂಬೆಯು ಮುಗುಳ್ನಕ್ಕು ಮಧುರವಾಣಿಯಿಂದ ಇಂತೆಂದಳು.

ದೇವಿಯು ಹೇಳಿದಳು - ಸದಾಶಿವನೆಂದು ಕರೆಸಿಕೊಳ್ಳುವ ಅದ್ವಿತೀಯ ಮಹೇಶ್ವರ ಪರಬ್ರಹ್ಮ ಪರಮಾತ್ಮನು ಸರ್ವತ್ರ ವಿರಾಜಮಾನನಾಗಿದ್ದಾನೆ. ವೇದಗಳೂ ಕೂಡ ಅವನ ತತ್ತ್ವವನ್ನು ತಿಳಿಯಲಾರವು, ಅಂತಿರುವಾಗ ವಿಷ್ಣುವೇ ಮೊದಲಾದವರ ಮಾತಾದರೂ ಏನು ? ಆ ಸದಾಶಿವನ ಸೂಕ್ಷ್ಮ ಪ್ರಕೃತಿಯೇ ನಾನಾಗಿರುವೆನು. ಹಾಗಿರುವಾಗ ಇತರರನ್ನು ಪತಿಯನ್ನಾಗಿ ಹೇಗೆ ಮಾಡಿಕೊಳ್ಳಬಲ್ಲೆ ? ಸಿಂಹಿಣಿಯು ಎಷ್ಟೇ ಕಾಮಾತುರವಾದರೂ ಅದು ನರಿಯನ್ನು ಸೇರಿತೇ ? ಹೆಣ್ಣಾನೆಯು ಕತ್ತೆಯನ್ನು ಮತ್ತು ಹೆಣ್ಣುಹುಲಿ ಮೊಲವನ್ನು ವರಿಸಿತೇ ? ನೀವೆಲ್ಲರೂ ಸುಳ್ಳು ಹೇಳುತ್ತಿರುವಿರಿ. ಏಕೆಂದರೆ, ಕಾಲರೂಪೀ ಸರ್ಪದ ಹಿಡಿತದಲ್ಲಿ ಸಿಕ್ಕಿಹಾಕಿಕೊಂಡಿರುವಿರಿ. ನೀವು ಒಂದೋ ಪಾತಾಳಕ್ಕೆ ಹೊರಟುಹೋಗಿರಿ, ಇಲ್ಲವೇ ಯುದ್ಧಮಾಡಿರಿ.

ಸಿಟ್ಟುಬರಿಸುವ ದೇವಿಯ ಆ ಮಾತನ್ನು ಕೇಳಿ ಆ ದೈತ್ಯರು ಹೇಳಿದರು - 'ನಾವು ನಿನ್ನನ್ನು ಅಬಲೆಯೆಂದು ತಿಳಿದು ಕೊಲ್ಲುತ್ತಿರಲಿಲ್ಲ. ಆದರೆ ನಿನ್ನ ಮನಸ್ಸಿನಲ್ಲಿ ಯುದ್ಧದ ಇಚ್ಛೆಯೇ ಇದ್ದರೆ ಸಿಂಹದ ಮೇಲೆ ಸುಸ್ಥಿರವಾಗಿ ಕುಳಿತು ಯುದ್ಧಕ್ಕಾಗಿ ಸಿದ್ಧಳಾಗು.' ಹೀಗೆ ವಾದ-ವಿವಾದ ಮಾಡುತ್ತಾ ಅವರಲ್ಲಿ ಕಲಹ ಹೆಚ್ಚಿ ಸಮರಾಂಗಣದಲ್ಲಿ ಎರಡೂ ಪಕ್ಷಗಳಲ್ಲಿ ಬಾಣಗಳ ಮಳೆಯೇ ಸುರಿಯತೊಡಗಿತು. ಹೀಗೆ ಅವರೊಂದಿಗೆ ಲೀಲೆಯಿಂದ ಯುದ್ಧ ಮಾಡುತ್ತಾ ಪರಮೇಶ್ವರಿಯು ಚಂಡ-ಮುಂಡ ಸಹಿತ ಮಹಾನ್ ಅಸುರ ರಕ್ತಬೀಜನನ್ನು ಕೊಂದು ಹಾಕಿದಳು. ಆ ದೇವವೈರೀ ಅಸುರರು ದ್ವೇಷಬುದ್ಧಿಯಿಂದ ಬಂದಿದ್ದರೂ ಕೊನೆಗೆ ಅವರಿಗೆ - ದೇವಿಯ ಭಕ್ತರು ಹೊಂದುವ ಉತ್ತಮ ಲೋಕದ ಪ್ರಾಪ್ತಿಯಾಯಿತು.

(ಅಧ್ಯಾಯ ೪೭)

❐ ❐ ❐

ದೇವಿಯಿಂದ ಸೈನ್ಯ ಮತ್ತು ಸೇನಾಪತಿಗಳಸಹಿತ ನಿಶುಂಭ ಹಾಗೂ ಶುಂಭನ ಸಂಹಾರ

ಋಷಿಗಳು ಹೇಳುತ್ತಾರೆ - ರಾಜನೇ ! ಪ್ರಶಂಸನೀಯ ಪರಾಕ್ರಮಶಾಲಿ ಮಹಾಸುರ ಶುಂಭನು ಈ ಶ್ರೇಷ್ಠ ದೈತ್ಯರು ಸತ್ತುಹೋಗಿರುವುದನ್ನು ಕೇಳಿ ಸಂಗ್ರಾಮದ ಹೆಸರೆತ್ತಿದರೆ ಹರ್ಷಗೊಳ್ಳುವ ತನ್ನ ದುರ್ಜಯ ಗಣಗಳನ್ನು ಯುದ್ಧಕ್ಕಾಗಿ ಹೋಗಲು ಅಪ್ಪಣೆ ಮಾಡಿದನು. 'ಇಂದು ನನ್ನ ಆಜ್ಞೆಯಂತೆ ಕಾಲಕಾ, ಕಾಲಕೇಯ, ಮೌರ್ಯ, ದೌರ್ಹ್ರದ, ಹಾಗೂ ಇತರ ಅಸುರರು ಭಾರೀ ದೊಡ್ಡ ಸೈನ್ಯದೊಂದಿಗೆ ಸಂಘಟಿತರಾಗಿ ವಿಜಯದ ಆಕೆಯನ್ನಿರಿಸಿ ಯುದ್ಧಕ್ಕಾಗಿ ಶೀಘ್ರವಾಗಿ ಹೊರಡಲಿ.' ನಿಶುಂಭ ಮತ್ತು ಶುಂಭ ಇಬ್ಬರೂ ಸಹೋದರರು ಆ ದೈತ್ಯರಿಗೆ ಆದೇಶವನ್ನಿತ್ತು ರಥಾರೂಢರಾಗಿ ಯುದ್ಧಕ್ಕಾಗಿ ಹೊರಟರು. ಆ ಮಹಾಬಲಿ ವೀರರ ಅಪ್ಪಣೆಯಂತೆ ಮರಣೋನ್ಮುಖ ಪತಂಗಗಳು ಬೆಂಕಿಯಲ್ಲಿ ನೆಗೆಯಲು ಸಿದ್ಧರಾಗುವಂತೆ ಅವರ ಸೇನೆಯು ಮುಂದುವರಿಯಿತು. ಆಗ ಅಸುರರಾಜನು ಯುದ್ಧಸ್ಥಳದಲ್ಲಿ ಡೋಲು, ಮದ್ದಳೆ, ಮೃದಂಗ, ಭೇರಿ, ಡಿಂಡಿಮ, ಅಬ್ಬರತಾಳ, ಮೊದಲಾದ ರಣವಾದ್ಯಗಳನ್ನು ಮೊಳಗಿಸಿದನು. ಆ ರಣೋತ್ಸಾಹ ಹೆಚ್ಚಿಸುವ ವಾದ್ಯಗಳ ಧ್ವನಿಯನ್ನು ಕೇಳಿ ಯುದ್ಧಪ್ರೇಮಿ ವೀರರು ಹರ್ಷೋತ್ಸಾಹದಿಂದ ತುಂಬಿ ಹೋದರು. ಆದರೆ ತಮ್ಮ ಪ್ರಾಣಗಳೇ ಹೆಚ್ಚು ಪ್ರಿಯವಾಗಿರುವವರು ಆ ರಣಭೂಮಿಯಿಂದ ಓಡಿ ಹೋದರು. ಯುದ್ಧಸಂಬಂಧಿ ಕವಚಾದಿಗಳನ್ನು ಧರಿಸಿ ಆ ಯೋಧರು ವಿಜಯದ ಅಭಿಲಾಷೆಯಿಂದ ಅಸ್ತ್ರ-ಶಸ್ತ್ರಗಳನ್ನು ಧರಿಸಿಕೊಂಡು ಯುದ್ಧಸ್ಥಳದಲ್ಲಿ ಬಂದು ಸೇರಿದರು. ಎಷ್ಟೋ ಸೈನಿಕರು ಆನೆಯನ್ನೇರಿ, ಬಹಳಷ್ಟು ದೈತ್ಯರು ಕುದುರೆಯನ್ನು ಏರಿ, ಇತರ ಅಸುರರು ರಥಾರೂಢರಾಗಿ ಬಂದು ತಲುಪಿದರು. ಆಗ ಅವರಿಗೆ ತನ್ನವರು-ಪರರು ಎಂಬ ಪರಿಚಯವೇ ಇರಲಿಲ್ಲ. ಅವರು ಅಸುರ ರಾಜನೊಂದಿಗೆ ಸಮರಾಂಗಣದಲ್ಲಿ ತಲುಪಿ ಎಲ್ಲ ಕಡೆಯಿಂದ ಯುದ್ಧವನ್ನು ಪ್ರಾರಂಭಿಸಿದರು. ಪದೇ-ಪದೇ ಶತಘ್ನಿ (ತೋಪು)ಗಳ ಶಬ್ದಗಳು ಕೇಳಿ ಬರುತ್ತಿದ್ದವು. ಅದನ್ನು ಕೇಳಿ ದೇವತೆಗಳು ನಡುಗಿಹೋದರು. ಧೂಳು-ಹೊಗೆಯಿಂದ ಆಕಾಶದಲ್ಲಿ ಅಂಧಕಾರವೇ ಆವರಿಸಿತು. ಸೂರ್ಯರಥವೂ ಕಂಡು ಬರುತ್ತಿರಲಿಲ್ಲ. ಅತ್ಯಂತ ದುರಭಿಮಾನಿಗಳಾದ ಕೋಟಿ-ಕೋಟಿ ಕಾಲಾಳುಗಳು ಯುದ್ಧದ ವಿಜಯಾಭಿಲಾಷಿಗಳಾಗಿ ಯುದ್ಧಸ್ಥಳದಲ್ಲಿ ಬಂದು ನೆರೆದರು. ಕುದುರೆ ಸವಾರರು, ಆನೆ ಸವಾರರು, ಇತರ ರಥಾರೂಢ ಅಸುರರು ಕೋಟಿ-ಕೋಟಿ

ಸಂಖ್ಯೆಯಲ್ಲಿ ಅಲ್ಲಿಗೆ ಬಂದು ಸೇರಿದರು. ಆ ಮಹಾ ಸಮರದಲ್ಲಿ ಕಪ್ಪಾದ ಪರ್ವತದಂತೆ ವಿಶಾಲಕಾಯ ಮದಮತ್ತ ಆನೆಗಳು ಜೋರು-ಜೋರಾಗಿ ಘೀಳಿಡುತ್ತಿದ್ದವು. ಸಣ್ಣ-ಸಣ್ಣ ಶೈಲ ಶಿಖಿರದಂತಿರುವ ಒಂಟೆಗಳೂ ತಮ್ಮ ಗಂಟಲಿನಿಂದ ಗಲ್-ಗಲ್ ಧ್ವನಿಯನ್ನು ಹೊರಡಿಸುತ್ತಿದ್ದವು. ಒಳ್ಳೆಯ ಸೀಮೆಯಲ್ಲಿ ಹುಟ್ಟಿದ ಕುದುರೆಗಳು ಕತ್ತಿನಲ್ಲಿ ಕಂಠಹಾರಗಳನ್ನು ಧರಿಸಿ ಜೋರಾಗಿ ಕೆನೆಯತೊಡಗಿದವು. ಅವು ಅನೇಕ ರೀತಿಯ ನಡೆಯಿಂದ ಆನೆಗಳ ತಲೆಗಳನ್ನು ಮೆಟ್ಟುತ್ತಾ ಆಕಾಶದಲ್ಲಿ ಹಾರಾಡುವ ಹಕ್ಕಿಗಳಂತೆ ಸಾಗುತ್ತಿದ್ದವು. ಶತ್ರುವಿನ ಸೈನ್ಯವು ಹೀಗೆ ಆಕ್ರಮಿಸಿದನ್ನು ನೋಡಿದ ಜಗದಂಬೆಯು ತನ್ನ ಧನುಸ್ಸಿಗೆ ಹೆದೆಯೇರಿಸಿದಳು. ಜೊತೆಗೆ ಶತ್ರುಗಳನ್ನು ಹತೋತ್ಸಾಹಗೊಳಿಸುವ ಗಂಟೆಯನ್ನು ನುಡಿಸಿದಳು. ಇದನ್ನು ನೋಡಿದ ಸಿಂಹವೂ ತನ್ನ ತಲೆಯ ಮತ್ತು ಕತ್ತಿನ ಕೇಸರಗಳನ್ನು ಕೆದರಿಸುತ್ತಾ ಜೋರಾಗಿ ಗರ್ಜಿಸತೊಡಗಿತು.

ಆಗ ಹಿಮಾಲಯದಲ್ಲಿ ನಿಂತಿರುವ ರಮಣೀಯ ಆಭೂಷಣಗಳಿಂದ, ಅಸ್ತ್ರಗಳಿಂದ ಸುಶೋಭಿತಳಾದ ಶಿವಾದೇವಿಯ ಕಡೆಗೆ ನೋಡಿ ವಿಲಾಸಿನೀ ರಮಣೀಯರ ಮನೋಭಾವವನ್ನು ತಿಳಿಯಲು ನಿಪುಣನಾದ ನಿಶುಂಭನು ಸರಸವಾಣಿಯಿಂದ ನುಡಿದನು - 'ಮಹೇಶ್ವರಿಯೇ ! ನಿನ್ನಂತಹ ಸುಂದರಿಯರ ರಮಣೀಯ ಶರೀರದ ಮೇಲೆ ಮಲ್ಲಿಗೆಯ ಎಸಳನ್ನು ಹಾಕಿದರೂ ಅದು ನೋವು ಉಂಟುಮಾಡುವುದು. ಇಂತಹ ಮನೋಹರ ಶರೀರದಿಂದ ನೀನು ಏಕರಾಳ ಯುದ್ಧವನ್ನು ಹೇಗೆ ವಿಸ್ತರಿಸುತ್ತಿರುವೆ ?' ಹೀಗೆ ಹೇಳಿ ಆ ಮಹಾಸುರನು ಸುಮ್ಮನಾದನು. ಆಗ ಚಂಡಿಕಾ ದೇವಿಯು ಹೇಳಿದಳು - ಎಲವೋ ಮೂಢ ಅಸುರನೇ ! ವ್ಯರ್ಥವಾದ ಮಾತನ್ನು ಏಕೆಗಳಹುತ್ತಿರುವೆ ? ಯುದ್ಧ ಮಾಡು ಇಲ್ಲವೇ ಪಾತಾಳಕ್ಕೆ ಹೊರಟುಹೋಗು. ಇದನ್ನು ಕೇಳಿ ಆ ಮಹಾರಥಿ ವೀರನು ಅತ್ಯಂತ ರುಷ್ಟನಾಗಿ ಸಮರಭೂಮಿಯಲ್ಲಿ ಬಾಣಗಳನ್ನು ಅದ್ಭುತವಾಗಿ ಮಳೆಗರೆದನು. ಆಗ ಆ ರಣಕ್ಷೇತ್ರದಲ್ಲಿ ವರ್ಷಾಋತುವಿನ ಆಗಮನವಾದಂತೆ ಕಂಡು ಬರುತ್ತಿತ್ತು. ಮದೋನ್ಮತ್ತನಾದ ಆ ಅಸುರನು ತೀಕ್ಷ್ಣಬಾಣಗಳಿಂದ, ಶೂಲ, ಪರಶು, ಭಿಂದಿಪಾಲ, ಪರಿಘ, ಧನುಷ್ಯ, ಭುಶಂಡೀ, ಪ್ರಾಸ, ಕ್ಷುರಪ್ರ ಹಾಗೂ ದೊಡ್ಡ-ದೊಡ್ಡ ಖಡ್ಗಗಳಿಂದ ಯುದ್ಧಮಾಡತೊಡಗಿದನು. ಕಪ್ಪು ಪರ್ವತದಂತಿರುವ ದೊಡ್ಡ-ದೊಡ್ಡ ಗಜಗಳು ಕುಂಭಸ್ಥಳವು ವಿದೀರ್ಣವಾದ ಕಾರಣ ಸಮರಾಂಗಣದಲ್ಲಿ ಕಂಡ-ಕಂಡ ಕಡೆಗೆ ಓಡತೊಡಗಿದವು. ಅವುಗಳ ಬೆನ್ನ ಮೇಲೆ ಬೆಳ್ಳಕ್ಕಿಗಳ ಸಾಲಿನಂತೆ ಕಂಡುಬರುವ ಶುಂಭ-ನಿಶುಂಭರ ಬಿಳಿಯ ಪತಾಕೆಗಳು ಹಾರಾಡುತ್ತಿದ್ದುವು. ಅವು ಮುರಿದು-ಮುರಿದು ಕೆಳಕ್ಕೆ ಉರುಳಿದವು. ಕ್ಷತ-ವಿಕ್ಷತ (ಗಾಯಗೊಂಡ) ಶರೀರಗಳಿಂದ ದೈತ್ಯರು ನೆಲಕ್ಕುರುಳಿ ನೀರಿನಿಂದ ಮೇಲಕ್ಕೆಸೆದ ಮೀನುಗಳಂತೆ ಚಡಪಡಿಸುತ್ತಿದ್ದರು. ರುಂಡಗಳು ತುಂಡಾಗಿ ಮುಂಡಗಳ ಸಮೂಹ ಬಹಳ ಭಯಂಕರವಾಗಿ ಕಂಡು ಬರುತ್ತಿತ್ತು. ಕಾಳಿಕೆಯು ಎಷ್ಟೋ ದೈತ್ಯರನ್ನು ಯಮಸದನಕ್ಕೆ ಅಟ್ಟಿದಳು. ದೇವಿಯ ವಾಹನ ಸಿಂಹವು ಇತರ ಬಹಳಷ್ಟು ಅಸುರರನ್ನು ತುತ್ತಾಗಿಸಿತು. ಆ ಸಮಯದಲ್ಲಿ ಆ ರಣಭೂಮಿಯಲ್ಲಿ ಸತ್ತ ದೈತ್ಯರ ರಕ್ತದ ಅನೇಕ ಹೊಳೆಗಳೇ ಹರಿದವು. ಸೈನಿಕರ ಕೂದಲುಗಳು ಸರೋವರದ ಪಾಚಿಯಂತೆ ಕಂಡುಬರುತ್ತಿದ್ದವು. ಅವರ ವಸ್ತ್ರಗಳು ಬಿಳಿಯ ನೊರೆಯಂತೆ ಭ್ರಮೆ ಉಂಟು ಮಾಡುತ್ತಿತ್ತು.

ಈ ಪ್ರಕಾರ ಘೋರಯುದ್ಧ ನಡೆದು, ರಾಕ್ಷಸರ ಮಹಾಸಂಹಾರವಾದ ಬಳಿಕ ಅಂಬಿಕಾದೇವಿಯು ವಿಷದಲ್ಲಿ ಅದ್ದಿದ ಹರಿತವಾದ ಬಾಣಗಳಿಂದ ನಿಶುಂಭನನ್ನು ಕೊಂದು ಧರಾಶಾಯಿಯಾಗಿಸಿದಳು. ಅಸೀಮ ಶಕ್ತಿಶಾಲಿ ತನ್ನ ತಮ್ಮನು ಸತ್ತುಹೋದಾಗ ಶುಂಭನು ಅತ್ಯಂತ ರೋಷಗೊಂಡು ರಥಾರೂಢನಾಗಿ ಎಂಟು ಭುಜಗಳಿಂದ ಕೂಡಿದವನಾಗಿ ಮಹೇಶ್ವರ ಪ್ರಿಯೆ ಅಂಬಿಕೆಯ ಬಳಿಗೆ ಬಂದನು. ಅವನು ಜೋರಾಗಿ ಶಂಖವನ್ನೂದಿ, ಶತ್ರುಗಳನ್ನು ದಮನ ಮಾಡುವ ಧನುಸ್ಸಿನ ದುಸ್ಸಹ ಟಂಕಾರ ಧ್ವನಿಯನ್ನು ಮಾಡಿದನು. ದೇವಿಯ ಸಿಂಹವೂ ತನ್ನ ಕೇಸರಗಳನ್ನು ಅಲುಗಾಡಿಸುತ್ತಾ ಜೋರಾಗಿ ಗರ್ಜಿಸಿತು. ಈ ಮೂರು ರೀತಿಯ ಧ್ವನಿಗಳಿಂದ ಆಕಾಶಮಂಡಲವು ಪ್ರತಿಧ್ವನಿಸಿತು.

ಅನಂತರ ಜಗದಂಬೆಯು ಅಟ್ಟಹಾಸ ಮಾಡಿದಳು, ಅದರಿಂದ ಸಮಸ್ತ ಅಸುರರು ಸಂತ್ರಸ್ತರಾದರು. ದೇವಿಯು ಶುಂಭನಲ್ಲಿ - 'ನೀನು ಯುದ್ಧದಲ್ಲಿ ಸ್ಥಿರವಾಗಿ ನಿಂತು ಕೋ' ಎಂದು ಹೇಳಿದಾಗ ದೇವತೆಗಳು - ಜಗದಂಬೆಯ ಜಯವಾಗಲೀ, ಜಯವಾಗಲಿ ! ಎಂದು ಉದ್ಗರಿಸಿದರು. ಆಗ ದೈತ್ಯರಾಜ ಶುಂಭನು ಬೆಂಕಿಯ ಜ್ವಾಲೆಗಳು ಹೊರಸೂಸುತ್ತಿರುವ ಭಾರೀ ದೊಡ್ಡ ಶಕ್ತಿಯನ್ನು ದೇವಿಯ ಮೇಲೆ ಪ್ರಯೋಗಿಸಿದರು. ಆದರೆ ದೇವಿಯು ಒಂದು ಉಲ್ಕೆಯಿಂದ ಅದನ್ನು ತುಂಡರಿಸಿದಳು. ಶುಂಭನು ಬಿಟ್ಟ ಬಾಣಗಳನ್ನು ದೇವಿಯು, ದೇವಿಯು ಪ್ರಯೋಗಿಸಿದ ಬಾಣಗಳನ್ನು ಶುಂಭನು ನುಚ್ಚುನೂರಾಗಿಸುತ್ತಿದ್ದರು. ಅನಂತರ ಚಂಡಿಕೆಯು ತ್ರಿಶೂಲವನ್ನೆತ್ತಿ ಆ ಮಹಾಸುರನ

ಮೇಲೆ ಆಘಾತ ಮಾಡಿದಳು. ತ್ರಿಶೂಲದ ಏಟಿನಿಂದ ಮೂರ್ಛಿತನಾದ ಅಸುರನು ಇಂದ್ರನು ರೆಕ್ಕೆಗಳನ್ನು ತುಂಡರಿಸಿದ ಪರ್ವತಗಳು ಬೀಳುವಂತೆ, ಆಕಾಶ, ಪೃಥಿವಿ, ಸಮುದ್ರ ಇವುಗಳನ್ನು ನಡುಗಿಸುತ್ತಾ ನೆಲಕ್ಕೊರಗಿದನು. ಅನಂತರ ಶೂಲದ ಆಘಾತದಿಂದ ಉಂಟಾದ ನೋವನ್ನು ಸಹಿಸಿಕೊಂಡು ಆ ಮಹಾಬಲಿ ಅಸುರನು ಹತ್ತು ಸಾವಿರ ಭುಜಗಳನ್ನು ಧರಿಸಿ, ದೇವತೆಗಳನ್ನು ನಾಶಗೊಳಿಸಲು ಸಮರ್ಥವಾದ ಹತ್ತುಸಾವಿರ ಚಕ್ರಗಳಿಂದ ಸಿಂಹಸಹಿತ ಮಹೇಶ್ವರೀ ಶಿವೆಯ ಮೇಲೆ ಆಘಾತ ಮಾಡತೊಡಗಿದನು. ಅವನು ಪ್ರಯೋಗಿಸಿದ ಚಕ್ರಗಳನ್ನು ಲೀಲಾಜಾಲವಾಗಿ ಕತ್ತರಿಸಿ ಹಾಕಿ ದೇವಿಯು ತ್ರಿಶೂಲವನ್ನೆತ್ತಿ ಆ ಅಸುರನ ಮೇಲೆ ಪ್ರಹರಿಸಿದಳು. ಶಿವೆಯ ಕರಕಮಲದಿಂದ ಮೃತ್ಯುವಿಗೆ ತುತ್ತಾಗಿ ಆ ಇಬ್ಬರೂ ಅಸುರರು ಪರಮ ಪದವನ್ನು ಹೊಂದಿದರು.

ಆ ಮಹಾಪರಾಕ್ರಮಿ ನಿಶುಂಭ ಮತ್ತು ಭಯಾನಕ ಬಲಶಾಲಿ ಶುಂಭನು ಸತ್ತುಹೋದಾಗ ಸಮಸ್ತ ದೈತ್ಯರು ಪಾತಾಳವನ್ನು ಸೇರಿದರು. ಇತರ ಬಹಳಷ್ಟು ಅಸುರರನ್ನು ಕಾಳಿ ಮತ್ತು ಸಿಂಹವು ತಿಂದು ಹಾಕಿದರು, ಉಳಿದ ದೈತ್ಯರು ಭಯದಿಂದ ವ್ಯಾಕುಲರಾಗಿ ದಶದಿಕ್ಕುಗಳಿಗೆ ಓಡಿ ಹೋದರು. ನದಿಗಳ ನೀರು ಸ್ವಚ್ಛವಾಯಿತು. ಅವು ಸರಿಯಾದ ದಾರಿಯಲ್ಲಿ ಹರಿಯತೊಡಗಿದವು. ಅವುಗಳ ಸ್ಪರ್ಶ ಸುಖಿಮಯವಾಯಿತು. ಆಕಾಶವು ನಿರ್ಮಲವಾಯಿತು. ದೇವತೆಗಳು ಮತ್ತು ಬ್ರಹ್ಮರ್ಷಿಗಳು ಪುನಃ ಯಜ್ಞಗಳನ್ನು ಪ್ರಾರಂಭಿಸಿದರು. ಇಂದ್ರಾದಿ ದೇವತೆಗಳೆಲ್ಲರೂ ಸುಖಿಯಾದರು. ದೈತ್ಯರಾಜನ ವಧೆಯ ಪ್ರಸಂಗದಿಂದ ಕೂಡಿದ ಈ ಪರಮ ಪವಿತ್ರ ಉಮಾಚರಿತ್ರವನ್ನು ಶ್ರದ್ಧೆಯಿಂದ ಪದೇ-ಪದೇ ಶ್ರವಣ ಅಥವಾ ಪಾರಾಯಣ ಮಾಡುವವರು ಇಹಲೋಕದಲ್ಲಿ ದೇವ ದುರ್ಲಭ ಭೋಗಗಳನ್ನು ಅನುಭವಿಸಿ ಪರಲೋಕದಲ್ಲಿ ಮಹಾಮಾಯೆಯ ಪ್ರಸಾದದಿಂದ ಉಮಾ ಧಾಮವನ್ನು ಹೊಂದುವರು. ರಾಜನೇ ! ಈ ಪ್ರಕಾರ ಶುಂಭಾಸುರನನ್ನು ಸಂಹರಿಸುವ ಸಾಕ್ಷಾತ್ ಉಮೆಯ ಅಂಶದಿಂದ ಪ್ರಕಟಗೊಂಡ ಸರಸ್ವತೀ ದೇವಿಯ ಚರಿತ್ರವನ್ನು ವರ್ಣಿಸಲಾಯಿತು.

(ಅಧ್ಯಾಯ ೪೮)

❑ ❑ ❑

ದೇವತೆಗಳ ಗರ್ವವನ್ನು ದೂರಾಗಿಸಲು ತೇಜಃ ಪುಂಜರೂಪಿಣಿ ಉಮೆಯ ಪ್ರಾದುರ್ಭಾವ

ಮುನಿಗಳು ಕೇಳಿದರು – ಸಂಪೂರ್ಣ ಪದಾರ್ಥಗಳ ಪೂರ್ಣ ಜ್ಞಾನೀ ಸೂತರೇ ! ಸರಸ್ವತಿಯು ಪ್ರಕಟಗೊಂಡ ಭುವನೇಶ್ವರೀ ಉಮೆಯ ಅವತಾರವನ್ನು ಪುನಃ ವರ್ಣಿಸಿರಿ. ಆ ದೇವಿಯು ಪರಬ್ರಹ್ಮ ಮೂಲ ಪ್ರಕೃತಿ, ಈಶ್ವರೀ, ನಿರಾಕಾರವಾಗಿದ್ದರೂ ಸಾಕಾರ ಹಾಗೂ ನಿತ್ಯಾನಂದಮಯಿ ಎಂದು ಹೇಳಲಾಗುತ್ತದೆ.

ಸೂತಪುರಾಣಿಕರು ಹೇಳುತ್ತಾರೆ–ತಪಸ್ವೀ ಮುನಿಗಳೇ ! ನೀವೆಲ್ಲರೂ ದೇವಿಯ ಉತ್ತಮ ಹಾಗೂ ಮಹಾನ್ ಚರಿತ್ರವನ್ನು ಪ್ರೇಮಪೂರ್ವಕ ಕೇಳಿರಿ. ಅದನ್ನು ತಿಳಿದ ಮಾತ್ರದಿಂದ ಮನುಷ್ಯನು ಪರಮ ಗತಿಯನ್ನು ಪಡೆಯುವನು. ಒಮ್ಮೆ ದೇವತೆಗಳಿಗೂ, ದಾನವರಿಗೂ ಪರಸ್ಪರ ಯುದ್ಧವಾಯಿತು. ಅದರಲ್ಲಿ ಮಹಾಮಾಯೆಯ ಪ್ರಭಾವದಿಂದ ದೇವತೆಗಳ ವಿಜಯವಾಯಿತು. ಇದರಿಂದ ದೇವತೆಗಳಿಗೆ ತಮ್ಮ ಪರಾಕ್ರಮದ ಕುರಿತು ಬಹಳ ಗರ್ವ ಉಂಟಾಯಿತು. ಅವರು ಆತ್ಮ ಪ್ರಶಂಸೆ ಮಾಡುತ್ತಾ 'ನಾವು ಧನ್ಯರು, ಧನ್ಯವಾದಕ್ಕೆ ಯೋಗ್ಯರಾಗಿದ್ದೇವೆ. ಅಸುರರು ನಮಗೇನು ಮಾಡಬಲ್ಲರು? ಅವರು ನಮ್ಮ ಅತ್ಯಂತ ದುಸ್ಸಹ ಪ್ರಭಾವವನ್ನು ನೋಡಿ ಭಯಭೀತರಾಗಿ 'ಓಡಿರಿ ! ಓಡಿರಿ !' ಎಂದು ಹೇಳುತ್ತಾ ಪಾತಾಳದಲ್ಲಿ ಅಡಗಿಕೊಂಡರು. ನಮ್ಮ ಬಲವು ಅದ್ಭುತವಾಗಿದೆ. ನಮ್ಮಲ್ಲಿ ಆಶ್ಚರ್ಯಜನಕ ತೇಜವಿದೆ. ನಮ್ಮ ಬಲ ಮತ್ತು ತೇಜ ದೈತ್ಯ ಕುಲವನ್ನು ವಿನಾಶಗೊಳಿಸಲು ಸಮರ್ಥವಾಗಿದೆ. ಆಹಾ ! ದೇವತೆಗಳ ಎಂತಹ ಸೌಭಾಗ್ಯವಿದು !' ಎಂದು ಕಂಡ ಕಂಡಲ್ಲಿ ಹಿರಿಮೆಯನ್ನು ಕೊಚ್ಚಿಕೊಳ್ಳುತ್ತಿದ್ದರು.

ಅನಂತರ ಅದೇ ಸಮಯದಲ್ಲಿ ಅವರ ಮುಂದೆ ತೇಜದ ಒಂದು ಮಹಾ ಪುಂಜವು ಪ್ರಕಟವಾಯಿತು. ಅದು ಮೊದಲೂ ಎಂದೂ ಕಂಡು ಬರಲಿಲ್ಲ. ಅದನ್ನು ನೋಡಿ ದೇವತೆಗಳೆಲ್ಲರೂ ವಿಸ್ಮಯಗೊಂಡರು. ಅವರ ಗಂಟಲು ಬಿಗಿದು ಹೋಗಿ 'ಇದು ಏನು ? ಇದು ಏನು ?' ಎಂದು ಪರಸ್ಪರ ಕೇಳುತ್ತಿದ್ದರು. ಇದು ದೇವತೆಗಳ ಅಭಿಮಾನವನ್ನು ನುಚ್ಚುನೂರಾಗಿಸುವ ಶ್ಯಾಮಾ (ಭಗವತಿ ಉಮಾ)ಳ ಉತ್ಕೃಷ್ಟ ಪ್ರಭಾವವಾಗಿದೆ ಎಂದು ಅವರಿಗೆ ತಿಳಿದಿರಲಿಲ್ಲ.

ಆಗ ದೇವೇಂದ್ರನು ದೇವತೆಗಳಿಗೆ – 'ನೀವು ಹೋಗಿ, ಇದು ಏನು ? ಯಾರು ? ಎಂಬುದನ್ನು ಯಥಾರ್ಥವಾಗಿ

ಪರೀಕ್ಷಿಸಿ ಬನ್ನಿರಿ' ಎಂದು ಆಜ್ಞೆ ಮಾಡಿದನು. ದೇವೇಂದ್ರನು ಕಳಿಸಿದ ವಾಯುವು ಆ ತೇಜಃಪುಂಜದ ಬಳಿಗೆ ಹೋದನು. ಆಗ ಆ ತೇಜೋರಾಶಿಯು ಅವನನ್ನು ಸಂಬೋಧಿಸಿ - ಅಯ್ಯಾ! ನೀನು ಯಾರು?' ಎಂದು ಕೇಳಿತು. ಆ ಮಹಾತೇಜವೂ ಹೀಗೆ ಕೇಳಿದಾಗ ವಾಯುದೇವರು ಅಭಿಮಾನದಿಂದ - 'ನಾನು ವಾಯು ಸಂಪೂರ್ಣ ಜಗತ್ತಿನ ಪ್ರಾಣನು. ಸರ್ವಾಧಾರ ಪರಮೇಶ್ವರನಾದ ನನ್ನಲ್ಲೇ ಈ ಸ್ಥಾವರ - ಜಂಗಮ ವಿಶ್ವವೆಲ್ಲವೂ ಓತಪ್ರೋತವಾಗಿದೆ. ನಾನೇ ಸಮಸ್ತ ವಿಶ್ವದ ಸಂಚಾಲನೆ ಮಾಡುವವನು;' ಎಂದು ಹೇಳಿದನು. ಆಗ ಆ ಮಹಾತೇಜವು - ವಾಯುವೇ! ನೀನು ಜಗತ್ತಿನ ಸಂಚಾಲನೆಯಲ್ಲಿ ಸಮರ್ಥನಾಗಿದ್ದರೆ ಈ ತೃಣವೊಂದು ಇಲ್ಲಿ ಇಟ್ಟಿದೆ. ಇದನ್ನು ತನ್ನ ಇಚ್ಛೆಗನುಸಾರವಾಗಿ ಹಾರಿಸಿ ಬಿಡು ನೋಡುವಾ ಎಂದು ಹೇಳಿತು. ಆಗ ವಾಯುದೇವರು ಎಲ್ಲ ಉಪಾಯವನ್ನು ಮಾಡಿ ತನ್ನ ಎಲ್ಲ ಶಕ್ತಿಯನ್ನು ತೊಡಗಿಸಿದನು. ಆದರೆ ಆ ಹುಲ್ಲುಕಡ್ಡಿ ತನ್ನ ಜಾಗದಿಂದ ತಿಲಮಾತ್ರ ಕದಲಲಿಲ್ಲ. ಇದರಿಂದ ವಾಯುದೇವನು ಲಜ್ಜಿತನಾದನು. ಅವನು ಸುಮ್ಮನಾಗಿ ಇಂದ್ರನ ಸಭೆಗೆ ಮರಳಿದನು ಮತ್ತು ಪರಾಜಯದೊಂದಿಗೆ ಅಲ್ಲಿಯ ಎಲ್ಲ ವೃತ್ತಾಂತವನ್ನು ತಿಳಿಸಿದನು. ಅವನು ಹೇಳಿದನು - ದೇವೇಂದ್ರನೇ! ನಾವೆಲ್ಲ ಜನರು ಸುಳ್ಳೆ ನಮ್ಮಲ್ಲಿ ಸರ್ವೇಶ್ವರನಾಗಿರುವ ಅಭಿಮಾನ ಪಡುತ್ತೇವೆ. ಏಕೆಂದರೆ, ಯಾವುದೋ ಸಣ್ಣದಾದ ವಸ್ತುವನ್ನೂ ನಮ್ಮಿಂದ ಏನೂ ಮಾಡಲಾಗಲಿಲ್ಲ. ಆಗ ಇಂದ್ರನು ಒಬ್ಬರಾದ ಮೇಲೆ ಒಬ್ಬರನ್ನು ಎಲ್ಲ ದೇವತೆಗಳನ್ನು ಕಳಿಸಿದನು. ಅವರೆಲ್ಲರೂ ಅದನ್ನು ತಿಳಿಯಲು ಅಸಮರ್ಥರಾದಾಗ ಇಂದ್ರನು ಸ್ವತಃ ಹೋದನು. ಇಂದ್ರನು ಬಂದಿರುವುದನ್ನು ನೋಡಿ ಆ ಅತ್ಯಂತ ದುಸ್ಸಹ ತೇಜವು ತತ್ಕಾಲದಲ್ಲಿ ಅದೃಶ್ಯವಾಯಿತು. ಇದರಿಂದ ಇಂದ್ರನು ವಿಸ್ಮಿತನಾದನು. ಮನಸ್ಸಿನಲ್ಲೇ 'ಇಂತಹ ಚರಿತ್ರವುಳ್ಳ ಆ ಸರ್ವೇಶ್ವರಿಯನ್ನು ನಾನು ಶರಣು ಹೋಗುತ್ತೇನೆ' ಎಂದು ಅಂದು ಕೊಂಡನು. ಸಹಸ್ರಾಕ್ಷನಾದ ಇಂದ್ರನು ಪದೇ-ಪದೇ ಇದೇ ಭಾವವನ್ನು ಚಿಂತಿಸತೊಡಗಿದನು. ಇದೇ ಸಮಯದಲ್ಲಿ ನಿಶ್ಚಲ ಕರುಣಾಮಯ ಶರೀರವನ್ನು ಧರಿಸುವ ಸಚ್ಚಿದಾನಂದಸ್ವರೂಪಿಣಿ ಶಿವಪ್ರಿಯೆ ಉಮೆಯು ಆ ದೇವತೆಗಳ ಮೇಲೆ ಕರುಣೆಯನ್ನು ತೋರಲು ಮತ್ತು ಅವರ ಗರ್ವವನ್ನು ಹರಿಸಲು ಚೈತ್ರ ಶುಕ್ಲ ನವಮಿಯಂದು ಮಧ್ಯಾಹ್ನದಲ್ಲಿ ಅಲ್ಲಿ ಪ್ರಕಟಳಾದಳು. ಅವಳು ಆ ತೇಜಃ ಪುಂಜದ ಮಧ್ಯದಲ್ಲಿ ವಿರಾಜಮಾನಳಾಗಿದ್ದಳು. ತನ್ನ ಕಾಂತಿಯಿಂದ ದಶ ದಿಕ್ಕುಗಳನ್ನು ಪ್ರಕಾಶಿಸುತ್ತಿದ್ದಳು ಮತ್ತು ಸಮಸ್ತ ದೇವತೆಗಳಿಗೆ ಸ್ಪಷ್ಟವಾಗಿ - 'ನಾನು ಸಾಕ್ಷಾತ್ ಪರಬ್ರಹ್ಮ ಪರಮಾತ್ಮನೇ ಆಗಿರುವೆನು' ಎಂದು ತಿಳಿಸುತ್ತಿದ್ದಳು. ಅವಳು ನಾಲ್ಕು ಕೈಗಳಲ್ಲಿಯೂ ಕ್ರಮವಾಗಿ ವರ, ಪಾಶ, ಅಂಕುಶ ಮತ್ತು ಅಭಯವನ್ನು ಧರಿಸಿದ್ದಳು. ಶ್ರುತಿಗಳು ಸಾಕಾರವಾಗಿ ಅಕೆಯ ಸೇವೆ ಮಾಡುತ್ತಿದ್ದರು. ಅವಳು ಬಹಳ ರಮಣೀಯಳಾಗಿದ್ದು, ತನ್ನ ನೂತನ ಯೌವನಕ್ಕಾಗಿ ಅಕೆಗೆ ಗರ್ವವಿತ್ತು. ಅವಳು ಕೆಂಪುಬಣ್ಣದ ಸೀರೆಯನ್ನು ಉಟ್ಟಿದ್ದಳು. ಕೆಂಪು ಹೂವುಗಳ ಮಾಲೆಯನ್ನು ಧರಿಸಿಕೊಂಡು, ರಕ್ತ ಚಂದನದಿಂದ ಅಕೆಯು ಶೃಂಗಾರಗೊಂಡಿದ್ದಳು. ಅವಳು ಕೋಟಿ-ಕೋಟಿ ಮನ್ಮಥರಂತೆ ಮನೋಹಾರಿಣಿಯಾಗಿದ್ದು, ಕೋಟಿ-ಕೋಟಿ ಚಂದ್ರರಂತೆ ಥಳಥಳಿಸುತ್ತಿದ್ದಳು. ಎಲ್ಲರ ಅಂತರ್ಯಾಮಿಯೂ, ಸಮಸ್ತ ಪ್ರಾಣಿಗಳ ಸಾಕ್ಷಿಯೂ, ಪರಬ್ರಹ್ಮ ಸ್ವರೂಪಿಣಿಯೂ ಆದ ಆ ಮಹಾಮಾಯೆಯು ಇಂತೆಂದಳು.

ಉಮೆಯು ಹೇಳಿದಳು - ನಾನೇ ಪರಬ್ರಹ್ಮ, ಪರಮಜ್ಯೋತಿ, ಪ್ರಣವರೂಪಿಣೀ ಹಾಗೂ ಯುಗಲರೂಪಧಾರಿಣಿಯಾಗಿರುವೆನು. ಎಲ್ಲವೂ ನಾನೇ ಆಗಿದ್ದೇನೆ. ನನ್ನಿಂದ ಭಿನ್ನವಾದ ಯಾವ ವಸ್ತುವೂ ಇಲ್ಲ. ನಾನು ನಿರಾಕಾರನಾಗಿದ್ದರೂ ಸಾಕಾರಳಾಗಿದ್ದೇನೆ, ಸರ್ವತತ್ತ್ವ ಸ್ವರೂಪಿಣಿಯಾಗಿರುವೆ. ನನ್ನ ಗುಣಗಳು ಅತರ್ಕ್ಯವಾಗಿವೆ. ನಾನು ನಿತ್ಯಸ್ವರೂಪಳೂ, ಕಾರ್ಯಕಾರಣರೂಪಿಣಿಯೂ ಆಗಿದ್ದೇನೆ. ನಾನೇ ಎಂದಾದರು ಪ್ರಾಣವಲ್ಲಭೆಯ ಆಕಾರವನ್ನು ಧರಿಸುವೆನು. ಎಂದಾದರೂ ಪ್ರಾಣವಲ್ಲಭ ಪುರುಷನ ಆಕಾರಗಳಾಗುವೆನು. ಕೆಲವೊಮ್ಮೆ ಸ್ತ್ರೀ-ಪುರುಷ ಎರಡೂ ರೂಪಗಳಲ್ಲಿ ಒಟ್ಟಿಗೆ ಪ್ರಕಟಳಾಗುತ್ತೇನೆ. (ಇದೇ ನನ್ನ ಅರ್ಧನಾರೀಶ್ವರ ರೂಪವಾಗಿದೆ.)ನಾನು ಸರ್ವರೂಪಿಣಿ ಈಶ್ವರಿಯಾಗಿರುವೆನು. ನಾನೇ ಸೃಷ್ಟಿಕರ್ತಾ ಬ್ರಹ್ಮಾ ಆಗಿದ್ದೇನೆ. ನಾನೇ ಜಗತ್ಪಾಲಕ ವಿಷ್ಣು ಆಗಿದ್ದೇನೆ. ನಾನೇ ಸಂಹಾರ ಕರ್ತಾ ರುದ್ರನಾಗಿದ್ದೇನೆ. ಸಂಪೂರ್ಣ ವಿಶ್ವವನ್ನು ಮೋಹದಲ್ಲಿ ಕೆಡಹುವ ಮಹಾಮಾಯೆ ನಾನೇ ಆಗಿದ್ದೇನೆ. ಕಾಳಿ, ಲಕ್ಷ್ಮೀ, ಸರಸ್ವತಿ ಮೊದಲಾದ ಸಂಪೂರ್ಣ ಶಕ್ತಿಗಳು ಹಾಗೂ ಈ ಸಕಲ ಕಲೆಗಳು ನನ್ನ ಅಂಶದಿಂದಲೇ ಪ್ರಕಟವಾಗಿರುವವು. ನನ್ನ ಪ್ರಭಾವದಿಂದಲೇ ನೀವು ದೈತ್ಯರನ್ನು ಗೆದ್ದುಕೊಂಡಿರುವಿರಿ. ಸರ್ವವಿಜಯಿಯಾದ ನನ್ನನ್ನು ತಿಳಿಯದೆ ನೀವು ವ್ಯರ್ಥವಾಗಿಯೇ ತಮ್ಮನ್ನು ಸರ್ವೇಶ್ವರರೆಂದು ತಿಳಿದಿರುವಿರಿ. ಇಂದ್ರಜಾಲಿಕನು ಸೂತ್ರದ ಗೊಂಬೆಗಳನ್ನು ಕುಣಿಸುವಂತೆಯೇ, ಈಶ್ವರಿಯಾದ ನಾನು ಸಮಸ್ತ ಪ್ರಾಣಿಗಳನ್ನು ಕುಣಿಸುತ್ತಿದ್ದೇನೆ. ನನ್ನ ಭಯದಿಂದಲೇ ಗಾಳಿಯು ಬೀಸುತ್ತಿದೆ.

ನನ್ನ ಭಯದಿಂದಲೇ ಅಗ್ನಿಯು ಎಲ್ಲವನ್ನು ಸುಡುವನು. ನನ್ನ ಭಯದಿಂದಲೇ ಲೋಕಪಾಲರು ನಿರಂತರ ತಮ್ಮ-ತಮ್ಮ ಕರ್ಮಗಳಲ್ಲಿ ತೊಡಗಿರುವರು. ನಾನು ಸರ್ವಥಾ ಸ್ವತಂತ್ರಳಾಗಿರುವೆನು. ನಾನು ಲೀಲೆಯಿಂದಲೇ ಕೆಲವೊಮ್ಮೆ ದೇವ ಸಮುದಾಯವನ್ನು ವಿಜಯಿಯಾಗಿಸುತ್ತೇನೆ, ಕೆಲವೊಮ್ಮೆ ದೈತ್ಯರನ್ನು. ಶ್ರುತಿಗಳು ವರ್ಣಿಸುವ ಮಾಯಾತೀತವಾದ ಅವಿನಾಶಿ ಪರಾತ್ಪರ ಧಾಮವೂ ನನ್ನದೇ ರೂಪವಾಗಿದೆ. ಸಗುಣ ಮತ್ತು ನಿರ್ಗುಣ ಇವೆರಡು ಪ್ರಕಾರದ ರೂಪಗಳೂ ನನ್ನದೆಂದೇ ತಿಳಿಯಲಾಗಿದೆ. ಇವುಗಳಲ್ಲಿ ಮೊದಲನೆಯದು ಮಾಯಾಯುಕ್ತನಾಗಿದೆ, ಇನ್ನೊಂದು ಮಾಯಾರಹಿತವಾಗಿದೆ. ದೇವತೆಗಳಿರಾ ! ಹೀಗೆ ತಿಳಿದು ಗರ್ವವನ್ನು ಬಿಡಿರಿ. ಸನಾತನ ಪ್ರಕೃತಿಯಾದ ನನ್ನ ಆರಾಧನೆಯನ್ನು ಮಾಡಿರಿ.*

ದೇವಿಯ ಈ ಕರುಣಾಯುಕ್ತ ಮಾತನ್ನು ಕೇಳಿ ಭಕ್ತಿಯಿಂದ ತಲೆಬಾಗಿ ಆ ಪರಮೇಶ್ವರಿಯನ್ನು ಸ್ತುತಿಸ ತೊಡಗಿದರು. ಜಗದೀಶ್ವರೀ ! ಕ್ಷಮಿಸು. ಪರಮೇಶ್ವರೀ ! ಪ್ರಸನ್ನಳಾಗು. ತಾಯೇ ! ಪುನಃ ಎಂದೂ ನಮಗೆ ಗರ್ವ ಬರದಂತೆ ಕೃಪೆಮಾಡು.

ಅಂದಿನಿಂದ ದೇವತೆಗಳೆಲ್ಲರೂ ಗರ್ವವನ್ನು ಬಿಟ್ಟು ಏಕಾಗ್ರಚಿತ್ತರಾಗಿ ಹಿಂದಿನಂತೆ ವಿಧಿವತ್ತಾಗಿ ಉಮಾದೇವಿಯ ಆರಾಧನೆಯಲ್ಲಿ ತೊಡಗಿದರು. ಬ್ರಾಹ್ಮಣರೇ ! ಹೀಗೆ ನಾನು ನಿಮಗೆ ಉಮೆಯ ಪ್ರಾದುರ್ಭಾವವನ್ನು ವರ್ಣಿಸಿದೆ. ಇದರ ಶ್ರವಣಮಾತ್ರದಿಂದ ಪರಮ ಪದದ ಪ್ರಾಪ್ತಿಯಾಗುವುದು.

(ಅಧ್ಯಾಯ ೪೯)

❑ ❑ ❑

ದೇವಿಯಿಂದ ದುರ್ಗಮಾಸುರನವಧೆ, ಆಕೆಗೆ ದುರ್ಗಾ, ಶತಾಕ್ಷಿ, ಶಾಕಂಭರೀ ಮತ್ತು ಭ್ರಾಮರಿ ಮುಂತಾದ ಹೆಸರುಗಳು ಉಂಟಾಗಲು ಕಾರಣ

ಮುನಿಗಳು ಹೇಳಿದರು - ಮಹಾಪ್ರಾಜ್ಞ ಸೂತಪುರಾಣಿಕರೇ ! ನಾವೆಲ್ಲರೂ ಪ್ರತಿದಿನವೂ ದುರ್ಗೆಯ ಚರಿತ್ರವನ್ನು ಕೇಳಲು ಬಯಸುವೆವು. ಆದ್ದರಿಂದ ತಾವು ಇನ್ನು ಯಾವುದಾದರೂ ಅದ್ಭುತ ಲೀಲಾತತ್ತ್ವವನ್ನು ನಮಗೆ ವರ್ಣಿಸಿರಿ. ಸರ್ವಜ್ಞಶಿರೋಮಣಿ ಸೂತರೇ ! ತಮ್ಮ ಮುಖಾರವಿಂದದಿಂದ ನಾನಾ ಪ್ರಕಾರದ ಅಮೃತದಂತಿರುವ ಮಧುರ ಕಥೆಗಳನ್ನು ಕೇಳಿದಷ್ಟು ನಮ್ಮ ಮನಸ್ಸು ತೃಪ್ತಿಗೊಳ್ಳುವುದಿಲ್ಲ.

ಸೂತಪುರಾಣಿಕರು ಹೇಳಿದರು - ಮುನಿಗಳೇ ! ದುರ್ಗಮನೆಂಬ ವಿಖ್ಯಾತ ಒಬ್ಬ ಅಸುರನಿದ್ದನು. ಅವನು ರುರುವಿನ ಮಹಾಬಲಿಷ್ಠ ಪುತ್ರನಾಗಿದ್ದನು. ಅವನು ಬ್ರಹ್ಮದೇವರ ವರದಿಂದ ನಾಲ್ಕು ವೇದಗಳನ್ನು

---

* ಉಮೋವಾಚ -

ಪರಂಬ್ರಹ್ಮ ಪರಂಜ್ಯೋತಿಃ ಪ್ರಣವ ದ್ವಂದ್ವರೂಪಿಣೀ । ಅಹಮೇವಾಸ್ಮಿ ಸಕಲಂ ಮದನ್ಯೋ ನಾಸ್ತಿ ಕಶ್ಚನ ॥
ನಿರಾಕಾರಾಪಿ ಸಾಕಾರಾ ಸರ್ವತತ್ತ್ವಸ್ವರೂಪಿಣೀ । ಅಪ್ರತರ್ಕ್ಯಗುಣಾ ನಿತ್ಯಾ ಕಾರ್ಯಕಾರಣರೂಪಿಣೀ ॥
ಕದಾಚಿದ್ದಯಿತಾಕಾರಾ ಕದಾಚಿತ್ ಪುರುಷಾಕೃತಿಃ । ಕದಾಚಿದುಭಯಾಕಾರಾ ಸರ್ವಾಕಾರಾಹಮೀಶ್ವರಿ ॥
ವಿರಂಚಿಃ ಸೃಷ್ಟಿಕರ್ತಾಹಂ ಜಗನ್ಮಾತಾಹಮಚ್ಯುತಃ । ರುದ್ರಃ ಸಂಹಾರಕರ್ತಾಹಂ ಸರ್ವವಿಶ್ವವಿಮೋಹಿನೀ ॥
ಕಾಲಿಕಾಕಮಲಾವಾಣೀಮುಖಾಃ ಸರ್ವಾ ಹಿ ಶಕ್ತಯಃ । ಮದಂಶಾದೇವ ಸಂಜಾತಾಸ್ತಥೇಮಾಃ ಸಕಲಾಃ ಕಲಾಃ ॥
ಮತ್ಪ್ರಭಾವಾಜ್ಜಿತಾಃ ಸರ್ವೇ ಯುಷ್ಮಾಭಿರ್ದಿತಿನಂದನಾಃ । ತಾಮವಿಜ್ಞಾಯ ಮಾಂ ಯೂಯಂ ವೃಥಾ ಸರ್ವೇಶಮಾನಿನಃ ॥
ಯಥಾ ದಾರುಮಯೀಂ ಯೋಷಾಂ ನರ್ತಯತ್ಯೈಂದ್ರಜಾಲಿಕಃ । ತಥೈವ ಸರ್ವಭೂತಾನಿ ನರ್ತಯಾಮ್ಯಹಮೀಶ್ವರೀ ॥
ಮದ್ಭಯಾದ್ ವಾತಿ ಪವನಃ ಸರ್ವಂ ದಹತಿ ಹವ್ಯಭುಕ್ । ಲೋಕಪಾಲಾಃ ಪ್ರಕುರ್ವಂತಿ ಸ್ವಸ್ವಕರ್ಮಾಣ್ಯನಾರತಮ್ ॥
ಕದಾಚಿದ್ದೇವವರ್ಗಾಣಾಂ ಕದಾಚಿದ್ದಿತಿಜನ್ಮನಾಮ್ । ಕರೋಮಿ ವಿಜಯಂ ಸಮ್ಯಕ್ ಸ್ವತಂತ್ರಾ ನಿಜಲೀಲಯಾ ॥
ಅವಿನಾಶಿಪರಂ ಧಾಮ ಮಾಯಾತೀತಂ ಪರಾತ್ಪರಮ್ । ಶ್ರುತಯೋ ವರ್ಣಯಂತೇ ಯತ್ತದ್ರೂಪಂ ತು ಮಮೈವ ಹಿ ॥
ಸಗುಣಂ ನಿರ್ಗುಣಂ ಚೇತಿ ಮದ್ರೂಪಂ ದ್ವಿವಿಧಂ ಮತಮ್ । ಮಾಯಾಶಬಲಿತಂ ಚೈಕಂ ದ್ವಿತೀಯಂ ತದನಾಶ್ರಿತಮ್ ॥
ಏವಂ ವಿಜ್ಞಾಯ ಮಾಂ ದೇವಾಃ ಸ್ವಂ ಸ್ವಂ ಗರ್ವಂ ವಿಹಾಯ ಚ ।ಭಜತ ಪ್ರಣಯೋಪೇತಾಃ ಪ್ರಕೃತಿಂ ಮಾಂ ಸನಾತನೀಮ್ ॥

(ಶಿ - ಪು - ಉ - ಸಂ - ೪೯/೨೭-೩೮)

ಕೈವಶಪಡಿಸಿಕೊಂಡಿದ್ದನು. ಅಜೆಯ ಬಲವನ್ನು ಪಡೆದು ಅವನು ಭೂತಳದಲ್ಲಿ ಮಾಡಿದ ಅನೇಕ ಉತ್ಪಾತಗಳನ್ನು ಕೇಳಿ ದೇವತೆಗಳೂ ನಡುಗಿಹೋದರು. ವೇದಗಳು ಅದೃಶ್ಯವಾದಾಗ ಎಲ್ಲ ವೈದಿಕ ಕ್ರಿಯೆಗಳು ನಾಶವಾದವು. ಆಗ ಬ್ರಾಹ್ಮಣರು ಮತ್ತು ದೇವತೆಗಳೂ ದುರಾಚಾರಿಗಳಾದರು. ಎಲ್ಲಿಯೂ ದಾನವಾಗಲಿ, ಅತ್ಯಂತ ಉಗ್ರತಪಸ್ಸಾಗಲೀ, ಯಜ್ಞವಾಗಲೀ, ಹೋಮವಾಗಲಿ ನಡೆಯುತ್ತಿರಲಿಲ್ಲ. ಇದರ ಪರಿಣಾಮದಿಂದ ಭೂಮಿಯಲ್ಲಿ ನೂರು ವರ್ಷಗಳ ಕಾಲ ಮಳೆಯುನಿಂತು ಹೋಯಿತು. ಮೂರು ಲೋಕಗಳಲ್ಲಿಯೂ ಹಾಹಾಕಾರವೆದ್ದಿತು. ಎಲ್ಲ ಜನರು ದುಃಖಿತರಾದರು. ಎಲ್ಲರಿಗೂ ಹಸಿವು-ಬಾಯಾರಿಕೆ ಕಾಡತೊಡಗಿತು. ಕೆರೆ, ಬಾವಿಗಳು, ಸರೋವರ, ನದಿಗಳು ಮತ್ತು ಸಮುದ್ರವೂ ಒಣಗಿ ಹೋಯಿತು. ಸಮಸ್ತ ವೃಕ್ಷ-ಲತೆಗಳು ಒಣಗಿಹೋದುವು. ಇದರಿಂದ ಸಮಸ್ತ ಪ್ರಜೆಗಳ ಚಿತ್ತದಲ್ಲಿ ಬಹಳ ದೀನತೆ ಆವರಿತು. ಅವರ ಮಹಾ ದುಃಖವನ್ನು ನೋಡಿ ದೇವತೆಗಳೆಲ್ಲರೂ ಮಹೇಶ್ವರೀ ಯೋಗಮಾಯೆಗೆ ಶರಣಾದರು.

ದೇವತೆಗಳು ಹೇಳಿದರು – ಮಹಾಮಾಯೆಯೇ ! ನಿನ್ನ ಎಲ್ಲ ಪ್ರಜೆಗಳನ್ನು ರಕ್ಷಿಸು, ರಕ್ಷಿಸು, ನಿನ್ನ ಕ್ರೋಧವನ್ನು ತಡೆಹಿಡಿ, ಇಲ್ಲದಿದ್ದರೆ ಎಲ್ಲ ಜನರು ನಿಶ್ಚಯವಾಗಿ ನಾಶವಾಗುವರು. ಕೃಪಾಸಿಂಧುವೇ ! ದೀನಬಂಧುವೇ ! ಶುಂಭನೆಂಬ ದೈತ್ಯ, ಮಹಾಬಲಿ ನಿಶಂಭ, ಧೂಮ್ರಾಕ್ಷ, ಚಂಡ-ಮುಂಡ, ಮಹಾಶಕ್ತಿಶಾಲಿ ರಕ್ತಬೀಜ, ಮಧುಕೈಟಭ, ಮಹಿಷಾಸುರ ಮುಂತಾದವರನ್ನು ನೀನು ವಧಿಸಿದಂತೆಯೇ ದುರ್ಗಮಾಸುರನನ್ನೂ ಶೀಘ್ರವಾಗಿ ಸಂಹರಿಸು. ಬಾಲಕರಿಂದ ಹೆಜ್ಜೆ - ಹೆಜ್ಜೆಗೆ ಅಪರಾಧಗಳು ಆಗುತ್ತಾ ಇರುತ್ತವೆ. ಕೇವಲ ತಾಯಿಯಲ್ಲದೆ ಬೇರೆ ಯಾರು ಜಗತ್ತಿನಲ್ಲಿ ಅವರ ಅಪರಾಧಗಳನ್ನು ಸಹಿಸಬಲ್ಲರು? ದೇವತೆಗಳ ಮೇಲೆ, ಬ್ರಾಹ್ಮಣರ ಮೇಲೆ ಸಂಕಟ ಉಂಟಾದಾಗಲೆಲ್ಲ ನೀನು ಅವತರಿಸಿ ಎಲ್ಲ ಜನರನ್ನು ಸುಖಿಯಾಗಿಸುವೆ.

ದೇವತೆಗಳ ಈ ವ್ಯಾಕುಲ ಪ್ರಾರ್ಥನೆಯನ್ನು ಕೇಳಿ ಕೃಪಾಮಯಿ ದೇವಿಯು ಆಗ ತನ್ನ ಅನಂತ ನೇತ್ರಗಳಿಂದ ಕೂಡಿದ ರೂಪವನ್ನು ತೋರಿದಳು. ಆಕೆಯ ಮುಖಾರವಿಂದವು ಪ್ರಸನ್ನತೆಯಿಂದ ಅರಳಿತ್ತು. ಅವಳು ನಾಲ್ಕು, ಕೈಗಳಲ್ಲಿಯೂ ಕ್ರಮವಾಗಿ ಧನುಷ್ಯ, ಬಾಣ, ಕಮಲ ಹಾಗೂ ನಾನಾ ವಿಧದ ಫಲ-ಮೂಲಗಳನ್ನು ಧರಿಸಿದ್ದಳು. ಆ ಸಮಯದಲ್ಲಿ ಪ್ರಜಾಜನರು ಕಷ್ಟಪಡುತ್ತಿರುವುದನ್ನು ನೋಡಿ ಆಕೆಯ ಎಲ್ಲ ಕಣ್ಣುಗಳಿಂದ ಕರುಣೆಯ ಕಣ್ಣೀರು ಚಿಮ್ಮಿತು. ಅವಳು ವ್ಯಾಕುಲಳಾಗಿ ಒಂದೇಸಮನೆ ಒಂಭತ್ತುದಿನ ಹಗಲು-ರಾತ್ರಿ ಅಳುತ್ತಲೇ ಇದ್ದಳು. ಆಕೆಯು ತನ್ನ ಸಾವಿರಾರು ನೇತ್ರಗಳಿಂದ ಅಶ್ರುಜಲವನ್ನು ಪ್ರವಹಿಸಿದಳು. ಆ ಜಲಧಾರೆಗಳಿಂದ ಎಲ್ಲ ಜನರು ತೃಪ್ತರಾದರು ಹಾಗೂ ಎಲ್ಲ ಔಷಧಿಗಳು ನೆನೆಯಲ್ಪಟ್ಟವು. ನದಿ, ಸಮುದ್ರಗಳಲ್ಲಿ ನೀರು ತುಂಬಿಹೋಯಿತು. ಭೂಮಿಯಲ್ಲಿ ಧಾನ್ಯ, ಫಲ, ಮೂಲಗಳು ಅಂಕುರಿಸಿದವು. ದೇವಿಯು ಶುದ್ಧ ಹೃದಯವುಳ್ಳ ಮಹಾತ್ಮರಿಗೆ ಫಲಗಳನ್ನು ತನ್ನ ಕೈಯಿಂದಲೇ ಹಂಚಿದಳು. ಆಕೆಯು ಹಸುಗಳಿಗೆ ಹಸುರಾದ ಹುಲ್ಲನ್ನು ಮತ್ತು ಇತರ ಪ್ರಾಣಿಗಳಿಗೆ ಯಥಾಯೋಗ್ಯ ಭೋಜನವನ್ನು ನೀಡಿದಳು. ದೇವತೆಗಳು, ಬ್ರಾಹ್ಮಣರು ಮತ್ತು ಮನುಷ್ಯರ ಸಹಿತ ಸಂಪೂರ್ಣ ಪ್ರಾಣಿಗಳು ಸಂತುಷ್ಟರಾದರು. ಆಗ ದೇವಿಯು 'ಈಗ ನಿಮ್ಮ ಯಾವ ಕಾರ್ಯವನ್ನು ನೆರವೇರಿಸಬೇಕು' ಎಂದು ಕೇಳಿದಾಗ ದೇವತೆಗಳೆಲ್ಲ ಒಂದಾಗಿ - ದೇವಿಯೇ ! ನೀನು ಎಲ್ಲ ಜನರನ್ನು ಸಂತುಷ್ಟಗೊಳಿಸಿದೆ. ಇನ್ನು ಕೃಪೆದೋರಿ ದುರ್ಗಮಾಸುರನು ಕದ್ದುಕೊಂಡುಹೋದ ವೇದಗಳನ್ನು ತಂದು ನಮಗೆ ಕೊಡು, ಎಂದು ಹೇಳಿದರು. ದೇವಿಯು 'ತಥಾಸ್ತು' ಎಂದು ಹೇಳಿ - 'ದೇವತೆಗಳಿರಾ ! ನೀವೆಲ್ಲರೂ ತಮ್ಮ ಮನೆಗಳಿಗೆ ನಡೆಯಿರಿ. ನಾನು ಶೀಘ್ರವಾಗಿ ಸಮಸ್ತ ವೇದಗಳನ್ನು ತಂದು ನಿಮಗೆ ಕೊಡುವೆನು' ಎಂದು ಆಶ್ವಾಸನೆಯನ್ನಿತ್ತಳು.

ಇದನ್ನು ಕೇಳಿ ದೇವತೆಗಳೆಲ್ಲರೂ ತುಂಬಾ ಸಂತೋಷಗೊಂಡರು. ಅವರು ಅರಳಿದ ನೀಲ ಕಮಲದಂತೆ ನೇತ್ರವುಳ್ಳ ಜಗಜ್ಯೋತಿ ಜಗದಂಬೆಯನ್ನು ಭಕ್ತಿಯಿಂದ ವಂದಿಸಿ ತಮ್ಮ-ತಮ್ಮ ಧಾಮಗಳಿಗೆ ಹೊರಟುಹೋದರು. ಮತ್ತೆ ಸ್ವರ್ಗ, ಅಂತರಿಕ್ಷ, ಪೃಥಿವಿಯಲ್ಲಿ ಭಾರೀ ಗದ್ದಲವೆದ್ದಿತು. ಅದನ್ನು ಕೇಳಿ ಆ ಭಯಾನಕ ದೈತ್ಯನು ನಾಲ್ಕೂ ಕಡೆಗಳಿಂದಲೂ ದೇವಲೋಕವನ್ನು ಮುತ್ತಿದನು. ಆಗ ಶಿವೆಯು ದೇವತೆಗಳನ್ನು ರಕ್ಷಿಸಲಿಕ್ಕಾಗಿ ಸುತ್ತಲೂ ತೇಜೋಮಯ ಮಂಡಲವನ್ನು ರಚಿಸಿ ಸ್ವತಃ ತಾನು ಆ ಮರ್ತ್ಯಲದಿಂದ ಹೊರಗೆ ಬಂದಳು. ಮತ್ತೆ ದೇವೀ ಹಾಗೂ ದೈತ್ಯರಲ್ಲಿ ಘೋರಯುದ್ಧ ಪ್ರಾರಂಭವಾಯಿತು. ಸಮರಾಂಗಣದಲ್ಲಿ ಎರಡೂ ಕಡೆಗಳಿಂದ ಕವಚಗಳನ್ನು ಪುಡಿ-ಪುಡಿ ಮಾಡುವಂತಹ ತೀಕ್ಷ್ಣವಾದ ಬಾಣಗಳ ಮಳೆ ಸುರಿಯಿತು. ಇಷ್ಟರಲ್ಲಿ ದೇವಿಯ ಶರೀರದಿಂದ ಸುಂದರ ರೂಪವುಳ್ಳ - **ಕಾಲಿ, ತಾರಾ, ಛಿನ್ನಮಸ್ತಾ, ಶ್ರೀವಿದ್ಯಾ, ಭುವನೇಶ್ವರೀ, ಭೈರವೀ, ಬಗಲಾ, ಧೂಮ್ರಾ, ಶ್ರೀಮತಿ, ತ್ರಿಪುರಸುಂದರೀ ಮತ್ತು ಮಾತಂಗಿ** - ಹೀಗೆ ದಶವಿದ್ಯೆಗಳು